₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಬುಧವಾರ 15.04.2026 ಸಂಪುಟ: 68 ಸಂಚಿಕೆ: 271 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದು ಚಿನ್ನಸ್ವಾಮಿಯಲ್ಲಿ ಆರ್‌ಸಿಬಿ-ಲಖನೌ ಪಂದ್ಯ
ಬುಧವಾರ ಬೆಂಗಳೂರಿನ ಚಿನ್ನಸ್ವಾಮಿ ಮೈದಾನದಲ್ಲಿ ಆರ್‌ಸಿಬಿ-ಲಖನೌ ಜೈಂಟ್ಸ್ ಐಪಿಎಲ್ ಪಂದ್ಯ ನಡೆಯಲಿದೆ. ಇದು ತವರು ನೆಲದಲ್ಲಿ ಆರ್‌ಸಿಬಿಗೆ 3ನೇ ಪಂದ್ಯ. ತನ್ನ ನೆಲದಲ್ಲಿ ಸತತ 3ನೇ ಪಂದ್ಯ ಗೆಲ್ಲುವ ನಿರೀಕ್ಷೆಯಲ್ಲಿ ಆರ್‌ಸಿಬಿಯಿದೆ.

ನಸೀರ್ ಅಹ್ಮದ್ ವಜಾ

ಉಪಚುನಾವಣೆ ಮತ ಎಣಿಕೆಗೆ ಮುನ್ನವೇ ಕಾಂಗ್ರೆಸ್‌ನಲ್ಲಿ 2ನೇ ವಿಕೆಟ್ ಪತನ
ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧವೇ ಕೆಲಸ ಮಾಡಿದ ಆರೋಪ
ಜಮೀರ್‌ಗೂ ತಲೆದಂಡ ಭೀತಿ: ಫಲಿತಾಂಶದ ಮೇಲೆ ಸಚಿವ ಸ್ಥಾನದ ಭವಿಷ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದಾವಣಗೆರೆ ದಕ್ಷಿಣ ಉಪಸಮರದ ಕಿಡಿಗೆ ನಿರೀಕ್ಷೆಯಂತೆ ಮತ್ತೊಬ್ಬ ಮುಸ್ಲಿಂ ನಾಯಕ ನಸೀರ್ ಅಹ್ಮದ್ ತಲೆದಂಡವಾಗಿದೆ. ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡಿರುವ ಆರೋಪ ಕೇಳಿಬಂದ ಬೆನ್ನಲ್ಲೇ, ಅಬ್ದುಲ್ ಜಬ್ಬಾರ್ ಅಲ್ಪಸಂಖ್ಯಾತ ಘಟಕಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಇದಾದ ಬಳಿಕ ಮುಖ್ಯಮಂತ್ರಿ ರಾಜಕೀಯ ಕಾರ್ಯ ದರ್ಶಿ ಹುದ್ದೆಗೆ ನಸೀರ್ ಅಹ್ಮದ್ ರಾಜೀನಾಮೆ ನೀಡಲಿದ್ದಾರೆ ಎಂದೇ ಹೇಳಲಾಗಿತ್ತು. ಆದರೆ ನಸೀರ್ ಅವರು ರಾಜೀನಾಮೆ ನೀಡದೇ ಇರುವುದರಿಂದ, ಸ್ಥಾನದಿಂದ ವಜಾಗೊಳಿಸುವ ಕಠಿಣ ಕ್ರಮಕ್ಕೆ ಕಾಂಗ್ರೆಸ್ ಮುಂದಾಗಿದೆ. ಈ ಮೂಲಕ ದಾವಣಗೆರೆ ದಕ್ಷಿಣ ಕ್ಷೇತ್ರದ ವಿಷಯದಲ್ಲಿ ಎರಡನೇ ತಲೆದಂಡವಾಗಿದೆ.

ಸೋಮವಾರ ರಾತ್ರಿ ವೇಳೆಗೆ ನಸೀರ್ ರಾಜೀನಾಮೆ ನೀಡದಿದ್ದರೆ, ವಜಾಗೊಳಿಸುವಂತೆ ಪಕ್ಷದ ಹೈಕಮಾಂಡ್ ಮುಖ್ಯಮಂತ್ರಿಗಳಿಗೆ ಸೂಚನೆ ನೀಡಿತ್ತು. ಈ ಸ್ಪಷ್ಟ ಎಚ್ಚರಿಕೆಯ ಹೊರತಾಗಿಯೂ ನಸೀರ್ ರಾಜೀನಾಮೆ ನೀಡದೇ ಇದ್ದಿದ್ದರಿಂದ ಹುದ್ದೆಯಿಂದ ಬಿಡುಗ ಡೆಗೊಳಿಸಲಾಗಿದೆ. ಈ ಸಂಬಂಧ ಡಿಪಿಎಆರ್ ಹೊರಡಿಸಿರುವ ಆದೇಶದಲ್ಲಿ, ನಸೀರ್ ಅಹ್ಮದ್ ಅವರನ್ನು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯಾಗಿ ನೇಮಿಸಿರುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆ ಯಲಾಗಿದ್ದು, ಅವರನ್ನು ಬಿಡುಗಡೆ ಮಾಡಲಾ ಗಿದೆ ಎಂದು ಉಲ್ಲೇಖಿಸಲಾಗಿದೆ. 3 ದಿನಗಳ ಹಿಂದೆಯೇ ಹೈಕಮಾಂಡ್ ನಸೀರ್‌ಗೆ ರಾಜೀನಾಮೆ ನೀಡುವಂತೆ ಸೂಚನೆ ನೀಡಿದ್ದರೂ ಅವರು ರಾಜೀನಾಮೆ ನೀಡಿರಲಿಲ್ಲ. ಆದ್ದರಿಂದ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ.

ಏಕೆ ವಜಾ?: ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿ ಸಮರ್ಥ್ ಅವರಿಗೆ ಕೆಲ ಕಾಂಗ್ರೆಸ್ ನಾಯಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

→ 4

ಸಿಎಂ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ನಸೀರ್ ಅಹ್ಮದ್ ಬಿಡುಗಡೆ ಮಾಡಿರುವ ಬಗ್ಗೆ ಮಾಹಿತಿಯಿಲ್ಲ. ನಸೀರ್ ಅವರಿಗೆ ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರಕ್ಕೆ ಹೋಗಿ ಬಂಡಾಯ ಅಭ್ಯರ್ಥಿ ಹಿಂದೆ ಸರಿಯುವಂತೆ ಮಾಡಬೇಕು ಎಂದು ಪಕ್ಷ ಸೂಚಿಸಿತ್ತು. ಅವರು ಆ ಜವಾಬ್ದಾರಿಯನ್ನು ನಿಭಾಯಿಸು ವಲ್ಲಿ ವಿಫಲರಾಗಿದ್ದಾರೆ. ಅಲ್ಲಿ ಏನಾಗಿದೆ ಎಂದು ನನಗೆ ಇನ್ನು ವರದಿ ಬರಬೇಕಿದೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸಮುದಾಯದವರಿಗೆ ಟಿಕೆಟ್ ನೀಡುವಂತೆ ಕೇಳಿಕೊಂಡಿದ್ದು ಸತ್ಯ. ನಾನು ನನ್ನ ಕೆಲಸವನ್ನು ನಿಭಾಯಿಸಿದ್ದೇನೆ. ಉಪ ಚುನಾವಣಾ ಪ್ರಚಾರಕ್ಕಾಗಿ ನಾನು ದಾವಣಗೆರೆ ಹೋಗಿದ್ದೇನೆ. ಏ.7ರವರೆಗೆ ಕೇರಳ ಚುನಾವಣಾ ಪ್ರಚಾರ ಜವಾಬ್ದಾರಿ ನೀಡಿದ್ದರು. ಆದರೆ ಮುಖ್ಯಮಂತ್ರಿಗಳು ಜಮೀರ್ ಏ.5ರಂದು ದಾವಣಗೆರೆಗೆ ಬರುತ್ತಾರೆ ಎಂದಿದ್ದರು. ಹಾಗಾಗಿ ನಾನು ಹೋಗಿದ್ದೆ.
-ಜಮೀರ್ ಅಹ್ಮದ್, ಸಚಿವ

ವಿವಾದವೇನು?
- ದಾವಣಗೆರೆ ಉಪಚುನಾವಣೆ ವೇಳೆ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಕೆಲಸ ಮಾಡಿರುವ ಆರೋಪ ತೀವ್ರ
- ಈಗಾಗಲೇ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ರಾಜೀನಾಮೆ
- ಈಗ ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್‌ಗೂ ಕೊಕ್
- ಎಸ್‌ಡಿಪಿಐ ಅಭ್ಯರ್ಥಿಗೆ ಆರ್ಥಿಕ ನೆರವು ನೀಡಿದ ಆರೋಪದಲ್ಲಿ ಜಮೀರ್ ಮೇಲೂ ತೂಗುಗತ್ತಿ

ಸಿಎಂ ಭೇಟಿಯಾದ ಜಮೀರ್
ಜಮೀರ್ ಅಹ್ಮದ್‌ರನ್ನು ಸಿದ್ದರಾಮಯ್ಯ ಮಂಗಳವಾರ ತಮ್ಮ ನಿವಾಸಕ್ಕೆ ಕರೆಸಿಕೊಂಡು ಮಾತನಾಡಿದ್ದಾರೆ. ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾದರೆ ಕ್ರಮದ ಅನಿವಾರ್ಯತೆಯನ್ನು ಸ್ಪಷ್ಟಪಡಿಸಿದ್ದಾರೆ ಎನ್ನಲಾಗಿದೆ. ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ವಿರುದ್ಧವಾಗಿ ಎಸ್‌ಡಿಪಿಐ ಅಭ್ಯರ್ಥಿಗೆ ಜಮೀರ್ ಅಹ್ಮದ್ ಆರ್ಥಿಕ ನೆರವು ನೀಡಿದ ಆರೋಪವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದ ವರದಿಯನ್ನೂ ಸಿದ್ಧಪಡಿಸಿ ಹೈಕಮಾಂಡ್‌ಗೆ ರವಾನಿಸಿದ್ದಾರೆ. ಈ ಕಾರಣಕ್ಕೆ ಜಮೀರ್‌ರನ್ನು ಸಂಪುಟದಿಂದ ಕೈಬಿಡಬೇಕು ಎನ್ನುವ ಒತ್ತಡ ಹೆಚ್ಚಾಗಿದೆ. ಜಮೀರ್ ತಲೆದಂಡದಿಂದ ತಪ್ಪಿಸಿಕೊಳ್ಳಲು ವೇಣುಗೋಪಾಲ್ ಅವರ ತವರು ರಾಜ್ಯ ಕೇರಳ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಆದರೆ ಅದನ್ನು ಒಪ್ಪದೇ, ಉಪಚುನಾವಣಾ ಕಣದಿಂದ ದೂರ ಉಳಿದಿದ್ದನ್ನೆ ಪ್ರಮುಖವಾಗಿ ಪರಿಗಣಿಸಬೇಕೆಂಬ ಆಗ್ರಹವಿದೆ.

30 ಕೈ ಶಾಸಕರು ದಿಲ್ಲಿಯಲ್ಲೇ ಠಿಕಾಣಿ

ಸಚಿವಾಕಾಂಕ್ಷಿಗಳ ಕೈಗೆ ಸಿಗದ ರಾಹುಲ್ ಗಾಂಧಿ
ಶಿಸ್ತು ಉಲ್ಲಂಘಿಸಿದರೆ ಕ್ರಮ: ಡಿಕೆಶಿ ಎಚ್ಚರಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ಕೇಳಿಕೊಂಡು ದೆಹಲಿಯಲ್ಲಿರುವ 30ಕ್ಕೂ ಹೆಚ್ಚು ಶಾಸಕರು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿಯವರನ್ನು ಭೇಟಿಯಾಗುವ ನಿರೀಕ್ಷೆಯಲ್ಲಿ ಕಾದುಕೂತಿದ್ದಾರೆ. ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಮವಾರ ಭೇಟಿಯಾದ ಶಾಸಕರ ನಿಯೋಗ, ಮಂಗಳವಾರವೂ ಅಲ್ಲಿಯೇ ವಾಸ್ತವ್ಯ ಮುಂದುವರಿಸಿದ್ದಾರೆ. ಆರಂಭದಲ್ಲಿ ಅಂಬೇಡ್ಕರ್ ಜಯಂತಿಯಲ್ಲಿ ಭಾಗವಹಿಸಲು ದೆಹಲಿಯಿಂದ ವಾಪಸಾಗುತ್ತಾರೆ ಎಂದು ಹೇಳಲಾಗಿತ್ತು. ಆದರೆ ರಾಹುಲ್ ಗಾಂಧಿ ಅವರ ಭೇಟಿಗೆ ಅವಕಾಶ ಸಿಗಬಹುದು ಎನ್ನುವ ಕಾರಣಕ್ಕೆ, ಅಲ್ಲಿಯೇ ಉಳಿದುಕೊಂಡಿದ್ದಾರೆ.



ಖರ್ಗೆ ಅವರಿಂದ ಯಾವುದೇ ಸ್ಪಷ್ಟ ಭರವಸೆ ಬಾರದೇ ಇರುವುದರಿಂದ ಶಾಸಕರು ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಚರ್ಚೆ ನಡೆಸಲು ಮುಂದಾಗಿದ್ದರು. ಮಂಗಳವಾರ ಯಾವ ನಾಯಕರೂ ಭೇಟಿಗೆ ಸಿಕ್ಕಿಲ್ಲ. ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸುವುದಕ್ಕೆ ವಿವಿಧ ಮಾರ್ಗ ದಲ್ಲಿ ಪ್ರಯತ್ನ ಮುಂದುವರಿಸಿದ್ದಾರೆ. ಮೂಲಗಳ ಪ್ರಕಾರ, ಈವರೆಗೆ ರಾಹುಲ್ ಸಮಯ ನಿಗದಿ ಯಾಗಿಲ್ಲ. ತಡರಾತ್ರಿ ವೇಣು ಗೋಪಾಲ್ ಸಿಕ್ಕರೆ ಅವರೊಂದಿಗೆ ಚರ್ಚಿಸಿ, ವಾಪಸಾಗುವ ಲೆಕ್ಕಾಚಾರದಲ್ಲಿ ಶಾಸಕರಿದ್ದಾರೆ ಎನ್ನ ಲಾಗಿದೆ.

→ 4

ಶಾಸಕರು ದೆಹಲಿಗೆ ಹೋಗಿರುವುದು, ಮಂತ್ರಿ ಸ್ಥಾನ ಕೇಳುವುದರಲ್ಲಿ ತಪ್ಪಿಲ್ಲ. ಅವರು ತಮ್ಮ ಬೇಡಿಕೆ ಕೇಳಲಿ. ಆದರೆ ಪಕ್ಷಕ್ಕೆ ಶಿಸ್ತಿನಿಂದ ಇರಬೇಕು ಅಷ್ಟೇ. ಅವರೆಲ್ಲರೂ ನಮ್ಮ ಸಹೋದ್ಯೋಗಿಗಳು. ಹೀಗಾಗಿ ಅವರಿಗೆ ಶಿಸ್ತು ಕಾಪಾಡುವಂತೆ ಮನವಿ ಮಾಡಿದ್ದೇನೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಐದು ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶಗಳು ಹಾಗೂ ದಾವಣಗೆರೆ ದಕ್ಷಿಣ-ಬಾಗಲಕೋಟೆ ಉಪಚುನಾವಣೆ ಫಲಿತಾಂಶಗಳು ಮೇ 4ರಂದು ಹೊರಬಂದ ನಂತರ ಸಚಿವ ಸಂಪುಟ ಪುನಾರಚನೆಯ ಸಾಧ್ಯತೆಯಿದೆ.
- ಅಶೋಕ್ ಪಟ್ಟಣ್, ಶಾಸಕ

ತಂತ್ರ-ಅತಂತ್ರ
- ಸಂಪುಟದಲ್ಲಿ ಸ್ಥಾನ ನೀಡುವ ಬಗ್ಗೆ ಖರ್ಗೆಯಿಂದ ಸ್ಪಷ್ಟ ಭರವಸೆಯಿಲ್ಲ
- ಚುನಾವಣೆ ಫಲಿತಾಂಶ ಬರಲಿ, ಮತ್ತೆ ನೋಡೋಣ ಎಂದ ಕಾಂಗ್ರೆಸ್ ಅಧ್ಯಕ್ಷ
- ರಾಹುಲ್ ಗಾಂಧಿಯನ್ನು ಭೇಟಿ ಮಾಡಲು ಕಾಯುತ್ತ ದೆಹಲಿಯಲ್ಲಿ ಉಳಿದ ರಾಜ್ಯ ಕಾಂಗ್ರೆಸ್ ಶಾಸಕರು

ಸೊಂಪಾದ ಪುಟಗಳು

ನ್ಯಾ. ವರ್ಮಾ ರಾಜೀನಾಮೆ: ಆರೋಪಗಳೂ ಸಮಾಧಿ ಸೇರುವವೇ?
ಜನಪಥ
ರಾಘವಶರ್ಮ ನಿಡ್ಲೆ 6

ಬಂಗಾಳಿಗರ ಮೌನದೊಳಗೊಂದು ಸಂದೇಶವಿದೆಯೇ?
ಗ್ರೌಂಡ್ ರಿಪೋರ್ಟ್ 10

ಸಂತಾನ ಶಕ್ತಿ ಹರಣ: ಖಂಡ್ರೆ ಮಾತು ಚಿಂತನಾರ್ಹ !
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ದಾರಿಯಲ್ಲಿ ನಡೆಯುವಾಗ ಕಲ್ಲು-ಮುಳ್ಳುಗಳು, ಅಡೆತಡೆಗಳು ಸಿಗಬಹುದು ಅಂತಾರೆ. ಆದರೆ ದಾರಿಗಳೆಂದರೇ ಕಲ್ಲು-ಮುಳ್ಳುಗಳು, ಅಡೆತಡೆ ಅಂತ ಭಾವಿಸಿದರೆ, ನಡಿಗೆಯ ಬಗ್ಗೆ ನಮ್ಮ ಧೋರಣೆಯೇ ಬದಲಾಗುತ್ತದೆ.

ವಕ್ರತುಂಡೋಕ್ತಿ

ಬಾಸ್ ಅಂದ್ರೆ ಆಕಾಶವಿದ್ದಂತೆ, ಆತ ನಮಗೆ ಅದೆಷ್ಟು ಎತ್ತರದಲ್ಲಿದ್ದಾರೆ ಅಂತ ಗೊತ್ತಿರುತ್ತದೆ, ಯಾವಾಗ ಗುಡುಗುತ್ತಾರೆ ಅಂತ ಗೊತ್ತಾಗೋದಿಲ್ಲ.

ಇನ್ನೊಂದು ವಾರ ಬಿರುಬಿಸಿಲು, ಮಳೆ?
ಬೆಂಗಳೂರು: ರಾಜ್ಯದಲ್ಲಿ ಗರಿಷ್ಠ ತಾಪಮಾನದಲ್ಲಿ ಏರಿಕೆಯಾಗುತ್ತಿದ್ದು, ಎಲ್ಲ ಕಡೆ ಉಷ್ಣ ಅಲೆಯ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. 'ಕರಾವಳಿ ಸೇರಿದಂತೆ ಕೆಲವು ಜಿಲ್ಲೆಗಳಿಗೆ ಉಷ್ಣ ಅಲೆಯ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಇಂದು ಸಿಬಿಎಸ್‌ಇ ಫಲಿತಾಂಶ ಪ್ರಕಟ?
ದೆಹಲಿ: ಕೇಂದ್ರ ಪ್ರೌಢಶಿಕ್ಷಣ ಪಠ್ಯಕ್ರಮ ಮಂಡಳಿಯು (ಸಿಬಿಎಸ್‌ಇ) ಇತ್ತೀಚೆಗೆ ನಡೆಸಿರುವ 10ನೇ ಹಾಗೂ 12ನೇ ತರಗತಿಯ ಫಲಿತಾಂಶ ಏ.15ರಂದು ಬಿಡುಗಡೆಯಾಗುವ ನಿರೀಕ್ಷೆಯಿದೆ. ಮಂಡಳಿಯ ಖಾಸಗಿ ವೆಬ್‌ಸೈಟ್ ಮಾತ್ರವಲ್ಲದೆ, ಡಿಜಿಲಾಕರ್, ಉಮಂಗ್ ಆ್ಯಪ್, ಎಸ್ ಎಂಎಸ್, ಐವಿಆರ್‌ಎಸ್ ಮೂಲಕವೂ ಫಲಿತಾಂಶ ಲಭ್ಯ.

ಐಪ್ಯಾಕ್ ನಾಯಕನಿಗೆ ಇಡಿ ದಾಳಿ ಶಾಕ್
ದೆಹಲಿ: ಚುನಾವಣೆಗಳ ವಿಶ್ಲೇಷಣಾ ಸಂಸ್ಥೆಯಾದ ಐ-ಪ್ಯಾಕ್‌ನ ಸಹಸಂಸ್ಥಾಪಕರಾದ ವಿನೇಶ್ ಚಾಂಡೇಲ್ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ.) ಏ. 15ರಂದು ದಾಳಿ ನಡೆಸಿದೆ. ಪಶ್ಚಿಮ ಬಂಗಾಳದ ಕಲ್ಲಿದ್ದಲು ಹಗರಣದ ತನಿಖೆಗೆ ಸಂಬಂಧಿಸಿದಂತೆ ಈ ದಾಳಿ ನಡೆಸಲಾಗಿದ್ದು ಚಾಂಡೇಲ್ ಅವರನ್ನು ಇ.ಡಿ. ಅಧಿಕಾರಿಗಳ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಚಿಕ್ಕಬಳ್ಳಾಪುರ ದೇಗುಲಗಳಲ್ಲಿ ತಾರತಮ್ಯವಿಲ್ಲದೇ ಪ್ರವೇಶ

ಭೇದ ತೊಲಗಿಸಲು ಶಾಸಕ ಪ್ರದೀಪ್ ಈಶ್ವರ್ ಆಗ್ರಹಕ್ಕೆ ಜಯ
ಚಿಕ್ಕಬಳ್ಳಾಪುರದ ಕೆಲವೆಡೆ 'ನಿರಾಕರಣೆ' ಆರೋಪ ಬೆನ್ನಲ್ಲೇ ಕ್ರಮ

ಬೆಂಗಳೂರು: ದೇವಾಲಯಗಳಲ್ಲಿ ಜಾತಿ, ಧರ್ಮ, ಲಿಂಗ ಭೇದವಿಲ್ಲದೆ ಸರ್ವರಿಗೂ ದೇವರ ದರ್ಶನಕ್ಕೆ ಮುಕ್ತ ಪ್ರವೇಶ ಕಲ್ಪಿಸುವಂತೆ ಶಾಸಕ ಪ್ರದೀಪ್ ಈಶ್ವರ್ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ, ಮಂಚೇನಹಳ್ಳಿ ಹಾಗೂ ಚಿಕ್ಕಬಳ್ಳಾಪುರ ತಾಲೂಕಿನ ವಿವಿಧ ದೇಗುಲಗಳಿಗೆ ದೇಗುಲ ಪ್ರವೇಶಕ್ಕೆ ಕಲ್ಪಿಸಲು ತಹಶೀಲ್ದಾರ್ ಕಚೇರಿಯಿಂದ ತಾಲೂಕು ಆಡಳಿತಕ್ಕೆ ಕಠಿಣ ಸೂಚನೆ ನೀಡಲಾಗಿದೆ. ಶಾಸಕ ಪ್ರದೀಪ್ ಈಶ್ವರ್ ಅವರ ನಿರ್ದೇಶನದಂತೆ ಹಾಗೂ ಸರಕಾರದ ಹಿಂದಿನ ಸುತ್ತೋಲೆಗಳನ್ನು ಆಧರಿಸಿ ಈ ಆದೇಶ ಹೊರಡಿಸಲಾಗಿದೆ.

→ 4

ಇಂದು ಆದಿಚುಂಚನಗಿರಿಗೆ ಪ್ರಧಾನಿ ಮೋದಿ

ಮೋದಿಯಿಂದ 80 ಕೋಟಿ ರು. ವೆಚ್ಚದ ಭವ್ಯ ಭೈರವೈಕ್ಯ ಮಂದಿರ ಉದ್ಘಾಟನೆ
ವಿಮಾನ ನಿಲ್ದಾಣಕ್ಕೆ ತೆರಳಿ ಪ್ರಧಾನಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಾಗತ

ಬೆಂಗಳೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿ ಬುಧವಾರ ರಾಜ್ಯಕ್ಕೆ ಆಗಮಿಸ ಲಿದ್ದು, ಮಂಡ್ಯ ಜಿಲ್ಲೆಯ ಆದಿ ಚುಂಚನಗಿರಿಯಲ್ಲಿ ನಿರ್ಮಾಣ ವಾಗಿರುವ ಭೈರವೈಕ್ಯ ಮಂದಿರದ ಉದ್ಘಾಟನೆ ಮಾಡಲಿದ್ದಾರೆ. ಆದಿಚುಂಚನ ಗಿರಿಯಲ್ಲಿ ಸುಮಾರು 80 ಕೋಟಿ ರು. ವೆಚ್ಚದಲ್ಲಿ ಭೈರವೈಕ್ಯ ಮಂದಿರ ನಿರ್ಮಾಣವಾಗಿದೆ.

ಚಾಲುಕ್ಯ, ಹೊಯ್ಸಳ, ಚೋಳರು ಮತ್ತು ಗಂಗರ ಕಾಲದ ಶಿಲ್ಪಕಲೆಗಳ ಸಮಾಗಮದೊಂದಿಗೆ ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿರುವ ಮಂದಿರವನ್ನು ಪ್ರಧಾನಿ ನರೇಂದ್ರ ಮೋದಿ ಏಪ್ರಿಲ್ 15ರಂದು ಉದ್ಘಾಟಿಸಲಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಠಕ್ಕೆ ಬೆಳಗ್ಗೆ 10.05ಕ್ಕೆ ಬೆಂಗಳೂರಿನ ಎಚ್‌ಎಎಲ್ ಏರ್‌ಪೋರ್ಟ್‌ಗೆ ಆಗಮಿಸಲಿರುವ ಮೋದಿ, ಬಳಿಕ ರಸ್ತೆ ಮಾರ್ಗದ ಮೂಲಕ ಶ್ರೀಕ್ಷೇತ್ರ ಆದಿ ಚುಂಚನಗಿರಿಗೆ ಆಗಮಿಸುತ್ತಾರೆ.

→ 4

ಪ್ರಧಾನಿ ನರೇಂದ್ರ ಮೋದಿಗೆ ಆದಿಚುಂಚನಗಿರಿ ಮಠದ ಬಗ್ಗೆ ಅಪಾರ ಭಕ್ತಿಯಿದೆ. ಈ ಹಿಂದೆಯೂ ಅವರು ಮಠದ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಮಂದಿರವನ್ನು ಬಹಳ ಆಕರ್ಷಕ ವಿನ್ಯಾಸದಲ್ಲಿ ನಿರ್ಮಿಸಲಾಗಿದೆ. ನಾನು ಕೂಡ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೇನೆ. ಮೋದಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುತ್ತಾರೆ.
-ಆರ್.ಅಶೋಕ, ಬಿಜೆಪಿ ನಾಯಕ

ನೋಯ್ಡಾ ಪ್ರತಿಭಟನೆ: ಪರಿಷ್ಕೃತ ವೇತನ ಫಿಕ್ಸ್

ನೋಯ್ಡಾ: ಉತ್ತರಪ್ರದೇಶದ ನೋಯ್ಡಾ ದಲ್ಲಿ ಹಿಂಸಾಚಾರ, ಪ್ರತಿಭಟನೆ ನಡೆಸುತ್ತಿರುವ ನೋಯ್ಡಾದ ವಿವಿಧ ಕಾರ್ಖಾನೆಗಳ ಸುಮಾರು 40 ಸಾವಿರ ಕಾರ್ಮಿಕರ ಶೇ.35ರಷ್ಟು ವೇತನ ಹೆಚ್ಚಳ ಬೇಡಿಕೆಯನ್ನು ಈಡೇರಿಸಲು ಉತ್ತರ ಪ್ರದೇಶ ಸರಕಾರ ನಿರಾಕರಿಸಿದೆ. ಕಾರ್ಮಿಕರ ವೇತನ ಪರಿಷ್ಕರಣೆ ಈಗಾಗಲೇ ಮುಗಿದಿದ್ದು ಏ. 1ರಿಂದಲೇ ಪರಿಷ್ಕೃತ ವೇತನ ನಿಯಮ ಜಾರಿಯಾಗಿದೆ. ಮತ್ತೆ ವೇತನ ಹೆಚ್ಚಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ಆದರೂ, ಕಾರ್ಮಿಕರ ಕುಂದು ಕೊರತೆಗಳನ್ನು ನಿವಾರಿ ಸುವ ಸಲುವಾಗಿ ಕೌಶಲ್ಯವಿರುವ ಕಾರ್ಮಿಕರಿಗೆ 15,059 ರು., ಕೌಶಲ್ಯ ರಹಿತ ಕಾರ್ಮಿಕರಿಗೆ 13,690 ರು., ಅರೆ- ಕೌಶಲ್ಯದಾರರಿಗೆ 16,868 ರು.ಗಳ ಪರಿಷ್ಕೃತ ವೇತನ ನಿಗದಿ ಗೊಳಿಸಲು ಸರ್ಕಾರ ಒಪ್ಪಿದೆ. ಮತ್ತೊಂದೆಡೆ ಪೊಲೀಸರು, ಗಲಭೆ ನಡೆಸಿದ ಆರೋಪದಡಿ 300 ಕಾರ್ಮಿಕರನ್ನು ಬಂಧಿಸಿದ್ದು, 7 ಜನರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಇನ್ನೂ 100 ಮಂದಿಯನ್ನು ವಿಚಾರಣೆಗೊಳ ಪಡಿಸಿದ್ದಾರೆ.

ಮತ್ತೊಂದು ಸುತ್ತಿನ ಸಂಧಾನ ಮಾತುಕತೆ?

ಜಿನೀವಾ ಇಲ್ಲವೇ ಟರ್ಕಿಯಲ್ಲಿ ಅಮೆರಿಕ-ಇರಾನ್ ಶಾಂತಿ ಸಭೆ ಸಾಧ್ಯತೆ
ಹೊರ್ಮುಜ್‌ಗೆ ತ್ರಿಶಂಕು ಬಂಧ: ಸರಕು ಹಡಗುಗಳು ಸಾಗರದಲ್ಲೇ ಬಾಕಿ

ದೆಹಲಿ: ಫೆ.28ರಿಂದ ಶುರುವಾಗಿದ್ದ ಅಮೆರಿಕ-ಇಸ್ರೇಲ್-ಇರಾನ್ ಯುದ್ಧ ಸದ್ಯ ಕದನ ವಿರಾಮ ಕಂಡು, ಇನ್ನೇನು ಎಲ್ಲವೂ ಶಾಂತವಾಗುತ್ತದೆ ಎನ್ನುವ ಭಾವನೆ ಬಂದಿದ್ದಾಗಲೇ, ಮತ್ತೆ ಪ್ರಕ್ಷುಬ್ಧ ಸ್ಥಿತಿ ಉಂಟಾಗಿದೆ. ಇದಕ್ಕೂ ಮುನ್ನ ಇರಾನ್ ಹೊರ್ಮುಜ್‌ಗೆ ದಿಗ್ಬಂಧನ ಹಾಕಿ ಕೂತಿತ್ತು. ಈಗ ಅಮೆರಿಕ, ಹೊರ್ಮುಜ್‌ಗೆ ಯಾವುದೇ ದೇಶದ ನೌಕೆಗಳು ಪ್ರವೇಶಿಸಿದಂತೆ ತಡೆದು ಕೂತಿದೆ. ಇದು ಜಗತ್ತಿನ ಇತರೆ ದೇಶಗಳಿಗೆ ಪೀಕಲಾಟ ತಂದಿದ್ದು, ಚೀನಾ ಮತ್ತು ಸೌದಿ ಅರೇಬಿಯಾ ದೇಶಗಳು ಅಮೆರಿಕಕ್ಕೆ ಎಚ್ಚರಿಕೆಯನ್ನೂ ನೀಡಿವೆ. ಈ ಮಧ್ಯೆ, ಮತ್ತೊಂದು ಸುತ್ತಿನ ಶಾಂತಿ ಮಾತುಕತೆಗೆ ತೆರೆಮರೆಯಲ್ಲಿ ಸಂಧಾನ ನಡೆಯುತ್ತಿದೆ.

ಇರಾನ್ ಷರತ್ತುಗಳಿಗೆ ಒಪ್ಪಲು ಸಿದ್ಧವಿದ್ದರೆ ಮಾತುಕತೆಗೆ ಸಿದ್ಧ ಎಂದು ಅಮೆರಿಕ ಹೇಳಿದೆ ಎಂದು ಮೂಲಗಳು ವರದಿ ಮಾಡಿವೆ.

→ 4



ಭಾರತದ 15 ಹಡಗುಗಳು ಹೊರ್ಮುಜ್‌ನಲ್ಲಿ ಲಾಕ್
ಭಾರತದ ಇನ್ನೂ 15 ಹಡಗುಗಳು ಮತ್ತೆ ಹೊರ್ಮುಜ್‌ನಲ್ಲಿ ಸಿಲುಕಿವೆ. ಈ ಮಧ್ಯೆ ಏ.11ರಂದು ಜಗ್ ವಿಕ್ರಮ್ ನೌಕೆ ಹೊರ್ಮುಜ್ ದಾಟಿದೆ. ಮಂಗಳವಾರ ತಡರಾತ್ರಿ ಹೊತ್ತಿಗೆ ಕಾಂಡ್ಲಾ ಬಂದರನ್ನು ತಲುಪಿರುವ ನಿರೀಕ್ಷೆಯಿದೆ. ಇದರಲ್ಲಿ 20,400 ಮೆಟ್ರಿಕ್ ಟನ್ ಎಲ್‌ಪಿಜಿ ಇದೆ. 24 ಸಿಬ್ಬಂದಿಯೂ ಇದ್ದಾರೆ.

ಅಮೆರಿಕದ ವಿರುದ್ಧ ಸಿಟ್ಟಾದ ಸೌದಿ, ಎಚ್ಚರಿಕೆ ನೀಡಿದ ಚೀನಾ
ಹೊರ್ಮುಜ್ ಜಲಸಂಧಿಯನ್ನು ಯಾವುದೇ ದೇಶಗಳ ಹಡಗುಗಳು ಪ್ರವೇಶಿಸದಂತೆ ಅಮೆರಿಕ ನಿರ್ಬಂಧ ವಿಧಿಸಿದೆ. ಸೋಮವಾರ ರಾತ್ರಿ 7.30ರಿಂದ ಈ ನಿರ್ಬಂಧ ಜಾರಿಯಾಗಿದೆ. ಇದು ನೇರವಾಗಿ ಸೌದಿ ಅರೇಬಿಯಾಕ್ಕೆ ಬಿಸಿ ತಟ್ಟಿಸಿದೆ. ಅಮೆರಿಕ ಕ್ರಮದಿಂದ ಸಿಟ್ಟಾಗಿ ಇರಾನ್ ತನ್ನ ವ್ಯಾಪ್ತಿಯಲ್ಲಿ ಬರುವ ಕೆಂಪು ಸಮುದ್ರದ ಬಾಬ್ ಅಲ್-ಮಂದೇಬ್ ಬಂದರನ್ನು ಮುಚ್ಚಲು ತೀರ್ಮಾನಿಸಿದರೆ, ಸೌದಿ ಅರೇಬಿಯಾ ಇಕ್ಕಟ್ಟಿಗೆ ಸಿಲುಕಲಿದೆ. ಸದ್ಯ ಹೊರ್ಮುಜ್ ಮುಚ್ಚಿರುವುದರಿಂದ ಸೌದಿ ಹಡಗುಗಳು ಇಲ್ಲಿಂದ ಸಾಗುತ್ತಿವೆ. ಈ ಬಗ್ಗೆ ಅಮೆರಿಕಕ್ಕೆ ಅದು ಎಚ್ಚರಿಕೆ ನೀಡಿದೆ. ಇದೇ ವೇಳೆ ಅಮೆರಿಕಕ್ಕೆ ಎಚ್ಚರಿಕೆ ನೀಡಿರುವ ಚೀನಾ ವಿದೇಶಾಂಗ ಸಚಿವಾಲಯ, ಹೊರ್ಮುಜ್ ನಿರ್ಬಂಧ ಅಪಾಯಕಾರಿ, ಅಷ್ಟೇ ಬೇಜವಾಬ್ದಾರಿ ಕ್ರಮ ಎಂದು ಹೇಳಿದೆ.

ಬಿಹಾರಕ್ಕೆ ಇಂದು ಬಿಜೆಪಿ ಸಿಎಂ

ಸಿಎಂ ಆಗಿ 20 ವರ್ಷಗಳ ನಿತೀಶ್ ಆಳ್ವಿಕೆ ಅಂತ್ಯ
ರಾಜ್ಯದ ಮೊದಲ ಬಿಜೆಪಿ ಸಿಎಂ: ಚೌಧರಿ ಪ್ರಮಾಣ

ಪಾಟ್ನಾ: ಬಿಹಾರ ರಾಜಕೀಯದಲ್ಲಿ ಹೊಸ ಬದಲಾವಣೆಗಳು ನಿರೀಕ್ಷೆಯಂತೆ ನಡೆಯುತ್ತಿವೆ. ಮುಖ್ಯಮಂತ್ರಿ ಸ್ಥಾನಕ್ಕೆ ಜೆಡಿಯು ನಾಯಕ ನಿತೀಶ್ ಕುಮಾರ್ ಮಂಗಳವಾರ ಸಂಜೆ (ಏ.14) ರಾಜೀನಾಮೆ ಸಲ್ಲಿಸಿದ್ದಾರೆ. ಇದೇ ಹೊತ್ತಿಗೆ ಮಂಗಳವಾರ ಬಿಹಾರ ಎನ್‌ಡಿಎ ಶಾಸಕರ ಸಭೆ ಪಟನಾದಲ್ಲಿ ನಡೆದಿದ್ದು, ಮೈತ್ರಿಕೂಟದ ಶಾಸಕಾಂಗ ಪಕ್ಷದ ನಾಯಕರಾಗಿ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿಯವನ್ನು ಆಯ್ಕೆ ಮಾಡಲಾಗಿದೆ. ಇಲ್ಲಿಗೆ ಬಿಹಾರ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಅವರ 20 ಆಳ್ವಿಕೆ ಅಂತ್ಯವಾಗಿದೆ. ರಾಜ್ಯಪಾಲರ ಮುಂದೆ ಸರ್ಕಾರ ರಚನೆಗೆ ಸಾಮ್ರಾಟ್ ಚೌಧರಿಯವರು ಹಕ್ಕು ಮಂಡಿಸಿದ್ದಾರೆ. ಅದಕ್ಕೆ ರಾಜ್ಯಪಾಲರ ಒಪ್ಪಿಗೆಯೂ ದೊರೆತಿದೆ. ಏ.15ರಂದು ಪಾಟ್ನಾದಲ್ಲಿ ನಡೆಯಲಿರುವ ಭವ್ಯ ಸಮಾರಂಭದಲ್ಲಿ ಬಿಹಾರ ನೂತನ ಹಾಗೂ ಮೊಟ್ಟಮೊದಲ ಬಿಜೆಪಿ ಸಿಎಂ ಆಗಿ ಸಾಮ್ರಾಟ್ ಚೌಧರಿಯವರು ಅಧಿಕಾರ ಸ್ವೀಕರಿಸಲಿದ್ದಾರೆ. ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ನಿತೀಶ್ ಕುಮಾರ್ ಪಾಲ್ಗೊಳ್ಳಲಿದ್ದಾರೆ.



ಏನೇನಾಯ್ತು?
- ಮುಖ್ಯಮಂತ್ರಿ ಸ್ಥಾನಕ್ಕೆ ಅಧಿಕೃತವಾಗಿ ರಾಜೀನಾಮೆ ಸಲ್ಲಿಸಿದ ನಿತೀಶ್ ಕುಮಾರ್
- ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕರಾಗಿ 57 ವರ್ಷದ ಸಾಮ್ರಾಟ್ ಚೌಧರಿ ಆಯ್ಕೆ
- ರಾಜ್ಯಪಾಲರ ಮುಂದೆ ಸರಕಾರ ರಚನೆಗೆ ಸಾಮ್ರಾಟ್ ಹಕ್ಕು ಮಂಡನೆ, ಅಂಗೀಕಾರ
- ಲೋಕಭವನದಲ್ಲಿ ಬುಧವಾರ ಪ್ರಮಾಣ ವಚನ ಸ್ವೀಕಾರ, ಅಮಿತ್ ಶಾ ಉಪಸ್ಥಿತಿ

ಫನ್‌ತರಂಗ
- ರಘುಪತಿ ಶೃಂಗೇರಿ -

ಅಮೆರಿಕಾ ಇರಾನ್ ಮಾತುಕತೆಗೆ ಆತಿಥ್ಯ ವಹಿಸಿದ್ದ ಹೋಟೆಲ್‌ನ ಬಿಲ್ ಪಾವತಿಸಲು ಪಾಕ್ ಸರ್ಕಾರ ವಿಫಲ
ಸುದ್ದಿ

ಅಂಬೇಡ್ಕರ್ ಪ್ರತಿಮೆಗೆ ಸಿದ್ದು ಮಾಲಾರ್ಪಣೆ

ಸಂವಿಧಾನಶಿಲ್ಪಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಅಂಗವಾಗಿ ಬೆಂಗಳೂರಿನ ವಿಧಾನಸೌಧದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಷ್ಪನಮನ ಸಲ್ಲಿಸಿದರು.

ಸಿಎಂ ಪಟ್ಟದ ಮೇಲೆ ಕಣ್ಣು: ರಾಜ್ಯಕೀಯಕ್ಕೆ ಎಚ್‌ಡಿಕೆ?

ಮುಂದಿನ ಚುನಾವಣೆಗೆ ಈಗಿನಿಂದಲೇ ತಯಾರಿ ಸುಳಿವು ನೀಡಿದ ಕೇಂದ್ರಸಚಿವ ಕುಮಾರಸ್ವಾಮಿ
ಸಿಎಂ ಸ್ಥಾನದ ನಿರೀಕ್ಷೆಯಲ್ಲಿರುವ ರಾಜ್ಯ ಬಿಜೆಪಿ ನಾಯಕರಿಗೆ ದಿಗಿಲು । ದಿಲ್ಲಿಯತ್ತ ಎಲ್ಲರ ಚಿತ್ತ

ವಿಶ್ವವಾಣಿ ವಿಶೇಷ ಬೆಂಗಳೂರು

ರಾಜ್ಯ ರಾಜಕಾರಣದತ್ತ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಚುನಾವಣೆಗೆ ಮುಂಚಿತವಾಗಿಯೇ ಮುಖ ಮಾಡಿರುವುದರಿಂದ ರಾಜ್ಯ ಬಿಜೆಪಿಯಲ್ಲಿ ಅಯೋಮಯ ಪರಿಸ್ಥಿತಿ ಏರ್ಪಟ್ಟಿದೆ. ಅಂಬೇಡ್ಕರ್ ದಿನಾಚರಣೆ ಪ್ರಯುಕ್ತ ಜೆಡಿಎಸ್ ಕಚೇರಿಯಲ್ಲಿ ಮೂರನೇ ಬಾರಿ ಮುಖ್ಯಮಂತ್ರಿ ಕನಸು ಬಿಚ್ಚಿಟ್ಟಿದ್ದಾರೆ ಕುಮಾರಸ್ವಾಮಿ. ಇದೇ ವೇಳೆ ಮುಂದಿನ ಬಾರಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ರಚನೆಯಾಗಲಿದ್ದು, ಮುಖ್ಯಮಂತ್ರಿಯನ್ನು ಪ್ರಧಾನಿ ಮೋದಿ ತೀರ್ಮಾನಿಸಲಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿರುವುದು ಎಚ್‌ಡಿಕೆ ರಾಜ್ಯ ರಾಜಕಾರಣದ ಸಮೀಕರಣಕ್ಕೆ ಒತ್ತು ನೀಡಿದೆ.

ರಾಜ್ಯ ಬಿಜೆಪಿ ನಾಯಕರು ಪಕ್ಷ ಸಂಘಟನೆ ಮಾಡಿ, ಮುಂದಾಳತ್ವ ವಹಿಸಿಕೊಂಡರೂ ರಾಜ್ಯದಲ್ಲಿನ ತೀರ್ಮಾನ ದೆಹಲಿಯ ಫರ್ಮಾನಿನಂತೆ ಇರುತ್ತದೆ. ಹೀಗಾಗಿ ಮುಂದಿನ ಬಾರಿ ಮೈತ್ರಿಯೊಂದಿಗೆ ಚುನಾವಣೆ ಎದುರಿಸಲು ಸಿದ್ಧ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಟ ಮಾಡುವ ಉದ್ದೇಶದಿಂದಲೇ ಇನ್ನು ಮುಂದೆ ವಾರದಲ್ಲಿ ಎರಡು ದಿನ ಕರ್ನಾಟಕದಲ್ಲೇ ಇರುತ್ತೇನೆ. ಪಕ್ಷವನ್ನು ಸಂಘಟನೆ ಮಾಡುತ್ತೇನೆ. ನಾನು ಸುಮ್ಮನೆ ಇರುವ ಹಾಗಿಲ್ಲ. ಜನರ ಪರವಾಗಿ ದನಿ ಎತ್ತಬೇಕಾಗಿದೆ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

→ 4

2 ದಿನ ರಾಜ್ಯ ಪ್ರವಾಸ
ಕೇಂದ್ರ ಸಚಿವರಾದ ಬಳಿಕ ಕುಮಾರಸ್ವಾಮಿ ಅವರು ಬಹುಪಾಲು ಸಮಯವನ್ನು ದೆಹಲಿಯಲ್ಲಿಯೇ ಕಳೆಯುತ್ತಿದ್ದರು. ಆದರೆ ಚುನಾವಣೆಗೆ ಎರಡು ವರ್ಷ ಬಾಕಿಯಿರುವುದರಿಂದ, ಈಗಿನಿಂದಲೇ ತಯಾರಿ ಆರಂಭಿಸುವ ಮುನ್ಸೂಚನೆ ನೀಡಿದ್ದಾರೆ. ಇದರ ಭಾಗವಾಗಿ, ಮೂರನೇ ಬಾರಿಗೆ ಸಿಎಂ ಆಗುವುದು ಜನರ ಕೈಯಲ್ಲಿದೆ ಎನ್ನುವ ಜತೆಜತೆಗೆ ಮುಂದಿನ ದಿನದಲ್ಲಿ ವಾರದಲ್ಲಿ ಎರಡು ದಿನ ಕರ್ನಾಟಕದಲ್ಲಿಯೇ ಇರುವುದಾಗಿ ಹೇಳಿದ್ದಾರೆ.

2028ಕ್ಕೆ ರಾಜ್ಯದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಕೂಟದ ಸರಕಾರ ಅಧಿಕಾರಕ್ಕೆ ಬರುತ್ತದೆ. ಇದರಲ್ಲಿ ಯಾವ ಅನುಮಾನವಿಲ್ಲ. ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ನಿತಿನ್ ನವೀನ್ ಅವರು ನಿರ್ಧರಿಸುತ್ತಾರೆ. ನಮಗೆ ಅಧಿಕಾರಕ್ಕೆ ಬರುವುದೇ ಮುಖ್ಯ. ಜತೆಗೆ ಸಿದ್ದರಾಮಯ್ಯ ನೇತೃತ್ವದ ಭ್ರಷ್ಟ ಸರಕಾರ ತೊಲಗುವುದು ಮುಖ್ಯ.
-ಆರ್.ಅಶೋಕ, ಪ್ರತಿಪಕ್ಷ ನಾಯಕ

ಸಮಾಚಾರ ಸಣ್ಣದಲ್ಲ

ಇಂದು ಶ್ರೀಗಳಿಗೆ ಗುರುವಂದನ

ಕಾರವಾರ: ಶೃಂಗೇರಿ ಶಾರದಾ ಪೀಠಾಧೀಶ್ವರ ಶ್ರೀ ಮಜ್ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ವಿಜಯಯಾತ್ರೆಯ ಸುಸಂದರ್ಭದಲ್ಲಿ ಪುರಾಣ ಪ್ರಸಿದ್ಧ ಶೇಜವಾಡ ಶ್ರೀ ಶೆಜ್ಜೇಶ್ವರ ದೇವಾಲಯದ ಪುನರ್ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ ಶ್ರೀ ವಿಧುಶೇಖರ ಭಾರತೀ ಶ್ರೀಗಳಿಗೆ ಏ.15ರ ಸಂಜೆ 5 ಗಂಟೆಗೆ ಕಾರವಾರದ ಮಾಲಾದೇವಿ ಮೈದಾನದಲ್ಲಿ ಗುರುವಂದನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀಗಳನ್ನು ಮಾಲಾದೇವಿ ಮೈದಾನದ ವೇದಿಕೆಗೆ ಪೂರ್ಣಕುಂಭ ಹಾಗೂ ವೇದಘೋಷಗಳೊಂದಿಗೆ ಸ್ವಾಗತಿಸಲಾಗುವುದು. ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿ ಭಕ್ತರಿಗೆ ದರ್ಶನ, ಆಶೀರ್ವಾದಗಳನ್ನು ದಯಪಾಲಿಸಲಿದ್ದಾರೆ ಹಾಗೂ ಆಶೀರ್ವಚನ ಮಾಡಲಿದ್ದಾರೆ. ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿರುವ ಸಮಾರಂಭದಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಎಂ.ಜಿ.ಉಮಾ ಅವರ ಮುಖ್ಯ ಉಪಸ್ಥಿತಿಯಲ್ಲಿ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಉಡುಪಿ ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಉಪಸ್ಥಿತರಿರಲಿದ್ದಾರೆ. ಸಮಸ್ತ ಭಕ್ತರು, ನಾಗರಿಕರು ಆಗಮಿಸಿ ಶ್ರೀಗಳ ದರ್ಶನ, ಆಶೀರ್ವಾದ ಪಡೆಯುವಂತೆ ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್. ನಾಯ್ಕ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಅಂಬೇಡ್ಕರ್ ಸರ್ವ ಸಮುದಾಯದ ನಾಯಕ

ಶಿರಸಿ: ತಾಲೂಕಿನ ಕರ್ನಾಟಕ ರಾಜ್ಯ ಸರಕಾರಿ ನಿವೃತ್ತ ನೌಕರರರು ಗಾಂಧಿನಗರ ಸಂಘದ ಕಟ್ಟಡದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯನ್ನು ಅವರ ಭಾವ ಚಿತ್ರಕ್ಕೆ ಪೂಜೆಸಲ್ಲಿಸುವ ಮೂಲಕ ಆಚರಿಸಲಾಯಿತು. ಸಭಾ ಕಾರ್ಯಕ್ರಮದಲ್ಲಿ ನಿವೃತ್ತ ಸಂಘದ ಸದಸ್ಯ ದಯಾನಂದ ನಾಯ್ಕ ಅವರು ಡಾ. ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಉಪನ್ಯಾಸ ನೀಡಿದರು. ಸಂಘದ ಅಧ್ಯಕ್ಷ ಬಿ.ಡಿ. ನಾಯ್ಕ ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ಅವರು ಎಲ್ಲ ಸಮುದಾಯದವರ ನಾಯಕರು. ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಸಂವಿಧಾನ ನಮಗೆ ಹಕ್ಕುಗಳನ್ನು ನೀಡುವುದರ ಜತೆಗೆ ಕರ್ತವ್ಯ ಪಾಲನೆ ಮಾಡವ ಜವಾಬ್ದಾರಿ ಬಗ್ಗೆ ತಿಳಿ ಹೇಳಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಜಿ.ಕೆ.ಬೋರಕರ್, ಸಹ ಕಾರ್ಯದರ್ಶಿ ಪ್ರಭಾಕರ ನೇತ್ರೆಕರ, ಪಿ.ಜಿ ಭಟ್ಟ, ಮಾರುತಿ ಲಕ್ಮಾಪೂರ, ತ್ರಿವೇಣಿ ಹೆಗಡೆ ಡಿ.ವಿ. ಪಾವಸ್ಕರ, ಶ್ರೀರಂಗಾ ಗುನಗಾ, ಎಚ್.ಆರ್. ಶಿಗ್ಗಾವಿ, ವಿ.ಜಿ. ಮಾರಿಗೊಳಿ, ಶ್ಯಾಮ ಸಿರ್ಸಿಕರ, ಎಸ್.ಬಿ. ನಾಯ್ಕ, ಲೋಕೇಶ ಬೋರಕರ, ಅನೇಕ ನಿವೃತ್ತ ನೌಕರರು ಹಾಜರಿದ್ದರು.

ಇಂದು ವಿದ್ಯುತ್ ಪೂರೈಕೆ ವ್ಯತ್ಯಯ

ಕಾರವಾರ: ಕಾರವಾರ ಉಪ-ವಿಭಾಗದ ವ್ಯಾಪ್ತಿಯಲ್ಲಿ ಎಚ್.ಟಿ. ವಾಹಕ ಬದಲಾವಣೆ ಮತ್ತು ನಿರ್ವಹಣೆಯ ನಿಮ್ಮಿತ್ತ ಏ.15 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ , ಕಾರವಾರ ಟೌನ್, ಹಬ್ಬುವಾಡ, ಕೆ.ಎಚ್.ಬಿ. ನಂದನಗದ್ದಾ, ಸುಂಕೇರಿ, ತೆಲಂಗರೋಡ್, ಶಿರವಾಡ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಎಂಜಿನೀಯರ್(ವಿ) ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಕ್ಷಕಿ ಸುಚಿತ್ರಾಗೆ ಆತ್ಮೀಯ ಬೀಳ್ಕೊಡುಗೆ

ಸಿದ್ದಾಪುರ: ತಾಲೂಕಿನ ಮುತ್ತಳ್ಳಿ ಸ.ಹಿ.ಪ್ರಾ.ಶಾಲೆಯಲ್ಲಿ 19ವರ್ಷಗಳ ಕಾಲ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ಮುಖ್ಯಶಿಕ್ಷಕಿ ಸುಚಿತ್ರಾ ಬಾಂದೇಕರ್ ಅವರಿಗೆ ಎಸ್‌ಡಿಎಂಸಿಯವರು, ಪಾಲಕ-ಪೋಷಕರು, ಹಳೆಯ ವಿದ್ಯಾರ್ಥಿಗಳು ಹಾಗೂ ಊರವರು ಭಾವನಾತ್ಮಕವಾಗಿ ಗುರು ವಂದನಾ ಕಾರ್ಯಕ್ರಮದ ಮೂಲಕ ಬೀಳ್ಕೊಟ್ಟರು. ಎಸ್‌ಡಿಎಂಸಿ ಅಧ್ಯಕ್ಷ ಅನಂತ ಗೌಡ ಹೊಸ್ಕೊಪ್ಪ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಪದಾಧಿಕಾರಿಗಳು, ಹೇಮಾವತಿ ಗೌಡರ್, ಊರಿನ ಹಿರಿಯರು, ಹಳೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಗುರು ವಂದನೆ ಸ್ವೀಕರಿಸಿ ಮಾತನಾಡಿ, ಸುಚಿತ್ರಾ ಬಾಂದೇಕರ್ ಅವರು ತಮ್ಮ ಇಲ್ಲಿಯ ವರೆಗಿನ ಶಿಕ್ಷಕ ವೃತ್ತಿಯಲ್ಲಿನ ಅನುಭವ, ಶಿಕ್ಷಣ ಇಲಾಖೆಯ ಹಾಗೂ ಊರಿನವರ ಸಹಕಾರವನ್ನು ನೆನಪಿಸಿಕೊಂಡರು. ಸಿದ್ಧಾರ್ಥ ಗೌಡರ್ ಮುತ್ತಳ್ಳಿ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕ ಗಿರೀಶ ಚಂದ್ರಶೇಖರ ನಾಯ್ಕ ಹಾಗೂ ಶಿಕ್ಷಕಿ ತ್ರಿವೇಣಿ ನಾಯ್ಕ ಕಾರ್ಯಕ್ರಮ ನಿರೂಪಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಡಾ. ಜಿ. ಪರಮೇಶ್ವರ್,} ಗೃಹ ಸಚಿವ

ಕೇಂದ್ರ ಸರಕಾರ ಜಾರಿಗೆ ತರುತ್ತಿರುವ ಮಹಿಳಾ ಮೀಸಲು ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಅಂಬೇಡ್ಕರ್ ಅವರು ಮಹಿಳೆಯರ ಹಕ್ಕುಗಳಿಗಾಗಿ ಸಾಕಷ್ಟು ಹೋರಾಟಗಳನ್ನು ಮಾಡಿದ್ದರು. ಹಿಂದೂ ಕೋಡ್ ಬಿಲ್‌ನಲ್ಲಿಯೂ ಕೂಡ ಮಹಿಳೆಯರಿಗೆ ಸಮಾನ ಸ್ಥಾನಮಾನ ಲಭಿಸಬೇಕು ಎಂದು ಹೇಳುತ್ತಲೇ ಇದ್ದಾಗ ಅದಕ್ಕೆ ವಿರೋಧ ಕೂಡ ವ್ಯಕ್ತವಾಗಿತ್ತು.

ಜಿಲ್ಲಾಡಳಿತದಿಂದ ಡಾ.ಬಿ.ಆರ್ ಅಂಬೇಡ್ಕರ್ ಜನ್ಮ ದಿನಾಚರಣೆ | ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯ

ಸಮಾನತೆ ಪಾಲನೆಯೇ ಅಂಬೇಡ್ಕರ್‌ಗೆ ಗೌರವ

ವಿಶ್ವವಾಣಿ ಸುದ್ದಿಮನೆ ಕಾರವಾರ

ಡಾ.ಬಿ.ಆರ್.ಅಂಬೇಡ್ಕರ್ ಅವರು ಇಡೀ ಮಾನವ ಸಮುದಾಯಕ್ಕೆ ನೀಡಿರುವ ಸಮಾನತೆಯ ಸಂದೇಶವನ್ನು ಪ್ರತಿಯೊಬ್ಬರೂ ಅನುಸರಿಸಿ, ಅದರಂತೆ ನಡೆಯುವ ಮೂಲಕ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿ, ಪ್ರತಿದಿನವೂ ಅವರನ್ನು ನೆನೆಯಬೇಕು ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯ ತಿಳಿಸಿದರು.

ಅವರು ಮಂಗಳವಾರ, ಜಿಲ್ಲಾಡಳಿತ ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕಾರವಾರ ಇವರ ಸಂಯುಕ್ತ ಆಶ್ರಯದಲ್ಲಿ ಕಾರವಾರದ ದೋಭಿಘಾಟ್ ರಸ್ತೆಯ ದೈವಜ್ಞ ಕಲ್ಯಾಣ ಮಂಟಪದಲ್ಲಿ ನಡೆದ, ಡಾ.ಬಿ.ಆರ್.ಅಂಬೇಡ್ಕರ್‌ರವರ 135 ನೇ ಜನ್ಮ ದಿನಾಚರಣೆ ಕಾರ್ಯಕ್ರಮವು ಉದ್ಘಾಟಿಸಿ ಮಾತನಾಡಿದರು.

ದೇಶದ ಎಲ್ಲ ಸಮುದಾಯಗಳು, ಎಲ್ಲ ಕ್ಷೇತ್ರಗಳಲ್ಲೂ ಸಮಾನವಾಗಿ ಅಭಿವೃದ್ಧಿ ಹೊಂದಲಿ ಎಂಬ ಉದ್ದೇಶದಿಂದ ಅಂಬೇಡ್ಕರ್‌ಅವರು ಮಹಿಳೆಯರು, ಕಾರ್ಮಿಕರು, ಹಿಂದುಳಿದ ವರ್ಗದ ಜನತೆ ಸೇರಿದಂತೆ ಪ್ರತಿಯೊಬ್ಬರಿಗೂ ಸಂವಿಧಾನದ ಮೂಲಕ ಸಮಾನ ಅವಕಾಶಗಳು ದೊರೆಯುವಂತೆ ಮಾಡಿದ್ದಾರೆ. ಅವರ ಈ ಸಮಾನತೆಯ ಸಂದೇಶವನ್ನು ಪ್ರತಿಯೊಬ್ಬರೂ ದೈನಂದಿನ ಚಟುವಟಿಕೆಗಳ ಎಲ್ಲ ಕ್ಷೇತ್ರಗಳಲ್ಲೂ ಅಳಡಿಸಿಕೊಂಡು, ತಮಗಿಂತ ಹಿಂದುಳಿದವರು ತಮ್ಮ ಜತೆಗೆ ಸಮಾನವಾಗಿ ಅಭಿವೃದ್ಧಿ ಹೊಂದಲು ಅಗತ್ಯವಿರುವ ಅವಕಾಶಗಳನ್ನು ಒದಗಿಸಬೇಕು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ರವರ 135 ನೇ ಜನ್ಮ ದಿನಾಚರಣೆಯನ್ನು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯ ಉದ್ಘಾಟಿಸಿದರು.

ಡಾ.ಬಿ.ಆರ್. ಅಂಬೇಡ್ಕರ್ ಕುರಿತು ವಿಶೇಷ ಉಪನ್ಯಾಸ ನೀಡಿದ ಅಂಕೋಲಾದ ಕೆ.ಎಲ್.ಇ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಮಂಜುನಾಥ ಇಟಗಿ ಮಾತನಾಡಿ, ಅಂಬೇಡ್ಕರ್ ಮತ್ತು ಸಂವಿಧಾನ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ಸಂವಿಧಾನವು ದೇಶಕ್ಕೆ ದಾರಿದೀಪವಾಗಿದ್ದು, ಸಂವಿಧಾನ ರಚನೆಯ ಮೂಲಕ ಭಾರತವು ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಿದ ಕೀರ್ತಿ ಅಂಬೇಡ್ಕರ್‌ಅವರದ್ದು. ಅಪಾರ ಪಾಂಡಿತ್ಯ ಹೊಂದಿದ್ದ ಅವರು, ಶೋಷಿತ ವರ್ಗದ ಆಶಾ ಕಿರಣವಾಗಿದ್ದು, ಸಮಾನತೆಯ ಮೂಲಕ ಪ್ರತೀ ಸಮುದಾಯಕ್ಕೂ ಮೀಸಲಾತಿ ಒದಗಿಸಿದ್ದು, ದೇಶದ ಅರ್ಥ ವ್ಯವಸ್ಥೆಯನ್ನು ಬಲಪಡಿಸಿದ್ದಾರೆ. 32 ಪದವಿಗಳನ್ನು ಪಡೆದಿದ್ದ ಅವರು, 20000 ಹಸ್ತಪ್ರತಿಗಳನ್ನು ಮಾಡಿದ್ದರು. ಅವರ ಬದುಕು ಎಲ್ಲರಿಗೂ ದಾರಿದೀಪವಾಗಿದ್ದು, ವಿದ್ಯಾರ್ಥಿಗಳಿಗೆ ಅವರ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾದ ಜಿಲ್ಲೆಯ ಅಭ್ಯರ್ಥಿಗಳಿಗೆ ಸನ್ಮಾನ ಮತ್ತು ಎಸ್.ಎಸ್.ಎಲ್.ಸಿ., ದ್ವಿತೀಯ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಮುದಾಯದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಜಿ.ಪಂ. ಉಪ ಕಾರ್ಯದರ್ಶಿ ಅಲ್ಲಾ ಭಕ್ಷ, ಮುಖ್ಯ ಯೋಜನಾಧಿಕಾರಿ ಸೋಮಶೇಖರ್‌ಮೇಸ್ತಾ, ನಗರಸಭೆ ಪೌರಾಯುಕ್ತ ಜಗದೀಶ್ ಹುಲಗಜ್ಜಿ, ಕೈಗಾರಿಕೆ ಇಲಾಖೆ ಜಂಟಿ ನಿರ್ದೇಶಕ ನಾಗರಾಜ ನಾಯ್ಕ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ವೈ. ಕೆ.ಉಮೇಶ್, ಪ.ಜಾತಿ ಪಂಗಡದ ಮುಖಂಡ ದೀಪಕ್ ಕುಡಾಲಕರ್, ಎಲಿಷಾ ಪಾಟೀಲ್, ನಾಗರಾಜ ತಳವಾರ, ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತಿತರರು ಭಾಗವಹಿಸಿದ್ದರು.

ವೇದಿಕೆ ಕಾರ್ಯಕ್ರಮದ ಪೂರ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ, ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ ರಾಂ ಅವರ ಭಾವಚಿತ್ರಗಳ ಮೆರವಣಿಗೆಗೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯ ಚಾಲನೆ ನೀಡಿದರು. ವಿವಿಧ ಕಲಾತಂಡಗಳೊಂದಿಗೆ ನಡೆದ ಮೆರವಣಿಗೆಯಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತಿತರರು ಭಾಗವಹಿಸಿದ್ದರು.

ಸಂವಿಧಾನ ಪೀಠಿಕೆಯ ಅಂಶಗಳ ಅನುಸರಿಸಿ

ಅಂಬೇಡ್ಕರ್ ಅವರು ನೀಡಿರುವ, ಶಿಕ್ಷಣ, ಸಂಘಟನೆ, ಹೋರಾಟದ ಸಂದೇಶಗಳ ಮೂಲಕ ಅವಕಾಶ ವಂಚಿತರ ಅಭಿವೃದ್ಧಿಗೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು. ನಮ್ಮ ದೇಶ ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದಲು ಮತ್ತು ಸುಭದ್ರವಾಗಿರಲು ಅಂಬೇಡ್ಕರ್ ಅವರ ರಚನೆಯ ಸಂವಿಧಾನವೇ ಪ್ರಮುಖ ಕಾರಣವಾಗಿದ್ದು, ನಮ್ಮ ಸಂವಿಧಾನ ಪೀಠಿಕೆಯಲ್ಲಿನ ಅಂಶಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಸರಕಾರಿ ಅಧಿಕಾರಿಗಳು ಸಂವಿಧಾನ ನೀಡಿರುವ ಸಮಾನತೆಯ ಸಂದೇಶವನ್ನು ಪಾಲಿಸಿ, ಸಂವಿಧಾನದ ತತ್ವಗಳಡಿಯಲ್ಲಿ ತಮ್ಮ ಜವಾಬ್ದಾರಿಗಳನ್ನು ಅರಿತು ಕರ್ತವ್ಯ ನಿರ್ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ತಿಳಿಸಿದರು.

ಅಂಬೇಡ್ಕರ್ ಸಾಧನೆ ಎಲ್ಲರಿಗೂ ಪ್ರೇರಣೆ

ಅಂಬೇಡ್ಕರ್ ಅವರ ಸಾಧನೆಗಳು ಎಲ್ಲರಿಗೂ ಪ್ರೇರಣೆಯಾಗಬೇಕು. ಪ್ರತಿಯೊಬ್ಬರೂ ಸಮಾಜಕ್ಕೆ ತಮ್ಮಿಂದ ಏನಾದರೂ ಕೊಡುಗೆ ನೀಡಬೇಕು. ಶಿಕ್ಷಣದ ಮೂಲಕ ಜ್ಞಾನವೃದ್ಧಿಯ ಜತೆಗೆ ಅನ್ಯಾಯವನ್ನು ಪ್ರಶ್ನಿಸುವ ಧೈರ್ಯ ಬರಲಿದೆ. ಅಂಬೇಡ್ಕರ್ ಸಂವಿಧಾನದ ಜತೆಗೆ ದೇಶಕ್ಕೆ ಅನೇಕ ಅಮೂಲ್ಯವಾದ ಕಾನೂನುಗಳ ರಚನೆಯನ್ನೂ ಕೂಡ ಮಾಡಿದ್ದು, ಇಂದಿಗೂ ಕುಡಿಯುವ ನೀರು, ವಿದ್ಯುತ್, ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಮಾಡುವ ಸುಧಾರಣೆಗಳಲ್ಲಿ ಅವರ ತತ್ವಗಳನ್ನೇ ಅನುಸರಿಸುತ್ತಿದ್ದು, ಈ ಮೂಲಕ ಅವರು ದೇಶದಲ್ಲಿ ದೈನಂದಿನ ಸ್ಮರಣೆಯಲ್ಲಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯ ಹೇಳಿದರು.

ವೈದಿಕ ಪರಂಪರೆಗೆ ಬಹುದೊಡ್ಡ ಇತಿಹಾಸವಿದೆ

ಯಲ್ಲಾಪುರ: ವೈದಿಕ ಪರಂಪರೆಗೆ ಬಹುದೊಡ್ಡ ಇತಿಹಾಸವಿದೆ. ವೇದ, ಉಪನಿಷತ್ತು, ಜ್ಯೋತಿಷ್ಯ, ಸಂಸ್ಕೃತ ಇವುಗಳ ಪರಿಪೂರ್ಣ ಅಧ್ಯಯನ ಮಾಡಿದವನಿಗೆ ಸಮಾಜದಲ್ಲಿ ಸದಾ ಶ್ರೇಷ್ಠರೆನಿಸಿಕೊಳ್ಳುತ್ತಾರೆ. ಅಲ್ಲದೇ ಒಬ್ಬ ಐಎಎಸ್ ಅಧಿಕಾರಿಗಿಂತಲೂ ಗೌರವ ಪಡೆಯುತ್ತಾನೆ. ಅಂತಹ ಸನಾತನ ಧರ್ಮದಲ್ಲಿ ನಾವು ಬಂದಿದ್ದೇವೆ. ಅದನ್ನು ಉಳಿಸಿಕೊಂಡು ಹೋಗುವಲ್ಲಿ ಇಂದಿನ ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಅವರು, ಮಂಗಳವಾರ ಪಟ್ಟಣದ ನಾಯಕನಕೆರೆಯ ಶ್ರೀ ಶಾರದಾಂಬಾ ವೇದ, ಸಂಸ್ಕೃತ ಪಾಠಶಾಲಾ ಸಭಾಭವನದಲ್ಲಿ ವಸಂತ ವೇದ ಸಂಸ್ಕೃತ ಯೋಗ ಶಿಬಿರ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

ಸ್ವರ್ಣವಲ್ಲಿಯ ಶ್ರೀಗಳು ಇಡೀ ಜಿಲ್ಲೆಯಲ್ಲೇ ಸನಾತನ ಧರ್ಮ, ವೇದ ಇವುಗಳ ಏಳಿಗೆಗಾಗಿ ಸದಾ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಎಲ್ಲೆಡೆ ಇಂತಹ ಶಿಬಿರಗಳು ನಡೆಯುತ್ತಿದ್ದು, ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ನಮ್ಮ ಪರಂಪರೆಯನ್ನು ಉಳಿಸುವ ಕಾರ್ಯದಲ್ಲಿ ಭಾಗಿಯಾಗುತ್ತಿದ್ದಾರೆ. ಪಾಲಕರು ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ನೀಡಬೇಕು. ಅದರಲ್ಲೂ ನಮ್ಮ ತಾಲೂಕಿನವರೇ ಆದ ಶ್ರೀಮದ್ ಆನಂದಬೋಧೇಂದ್ರ ಸರಸ್ವತೀ ಶ್ರೀಗಳ ವರ್ಧಂತಿ ಉತ್ಸವ ಕೂಡ ಆಚರಿಸಲಾಗುತ್ತಿದೆ. ಅಂತಹ ಸುಸಂದರ್ಭದಲ್ಲಿ ಈ ಶಿಬಿರವನ್ನು ಪ್ರಾರಂಭಿಸುತ್ತಿರುವುದು ಸಂತಸ ಎಂದರು.

ಯಲ್ಲಾಪುರ ಪಟ್ಟಣದ ನಾಯಕನಕೆರೆಯ ಶ್ರೀ ಶಾರದಾಂಬಾ ವೇದ, ಸಂಸ್ಕೃತ ಪಾಠಶಾಲಾ ಸಭಾಭವನದಲ್ಲಿ ವಸಂತ ವೇದ ಸಂಸ್ಕೃತ ಯೋಗ ಶಿಬಿರವನ್ನು ಶಾಸಕ ಶಿವರಾಮ ಹೆಬ್ಬಾರ ಉದ್ಘಾಟಿಸಿದರು.

ಡಾ.ವೆಂಕಟ್ರಮಣ ಭಟ್ಟ ಹಲಸ್ಖಂಡ ಶಿಬಿರಕ್ಕೆ ಚಾಲನೆ ನೀಡಿ, ಪರಿಣಾಮಕಾರಿಯಾದ ಒಳ್ಳೆಯದಾಗುವ ಪ್ರಕ್ರಿಯೆಗೆ ಧರ್ಮ ಎನ್ನುತ್ತೇವೆ. ನಮ್ಮ ಸನಾತನ ಸಂಸ್ಕೃತಿ ಒಳ್ಳೆಯ ಬದುಕಿಗೆ ಸನ್ಮಾರ್ಗ ತೋರಿಸುತ್ತದೆ. ಸಂಸ್ಕಾರ, ಸಂಸ್ಕೃತಿ ಪ್ರಾಣಿಗಳಿಗಿಲ್ಲ. ಅದು ಮಾನವನಿಗೆ ಮಾತ್ರ ಧರ್ಮ ನಮಗೆ ಹೇಗೆ ಸಾಗಬೇಕೆನ್ನುವುದನ್ನು ತಿಳಿಸುತ್ತದೆ. ಭಾರತೀಯ ಸಂಸ್ಕೃತಿ ವಿಶ್ವದಲ್ಲೇ ಗೌರವ ಪಡೆದಿದೆ. ಧರ್ಮ, ಅರ್ಥ, ಕಾಮ, ಮೋಕ್ಷ ಇವು ಮನುಷ್ಯನ ಶ್ರೇಷ್ಠತೆಗೆ ಕೊಂಡೊಯ್ಯುತ್ತದೆ. ಕಾಮ ಎಂದರೆ ಆಸೆ, ಸುಖ, ಶಾಂತಿ ಎಂದರ್ಥ. ವೇದದ ಅರಿವು ಮಾಡಿಕೊಂಡಾಗ, ಅದರ ಜ್ಞಾನವನ್ನು ಹೆಚ್ಚಿಸಿಕೊಂಡಾಗ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಇಂತಹ ಶಿಬಿರಗಳ ಮೂಲಕ ಕ್ಷಣವೂ ಸಮಯ ವ್ಯರ್ಥವಾಗಿಸದೇ ವಿದ್ಯೆಯನ್ನು ಸಂಪಾದಿಸಿ ಎಂದರು.

ಶ್ರೀ ಶಾರದಾಂಬಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಉಮೇಶ ಭಾಗ್ವತ ಅಧ್ಯಕ್ಷತೆ ವಹಿಸಿ, ಸಾಂದರ್ಭಿಕ ಮಾತನಾಡಿದರು.

ಶ್ರೀ ಶಾರದಾಂಬಾ ದೇವಸ್ಥಾನದ ಅಧ್ಯಕ್ಷ ಎನ್.ಕೆ.ಭಟ್ಟ ಅಗ್ಗಾಶಿಕುಂಬ್ರಿ, ತಾಲೂಕಾ ಹವ್ಯಕ ಸಂಘದ ಅಧ್ಯಕ್ಷ ಡಿ.ಶಂಕರ ಭಟ್ಟ, ಯಲ್ಲಾಪುರ ಸೀಮಾ ಅಧ್ಯಕ್ಷ ಎನ್.ಎಂ. ಹೆಗಡೆ ಪಣತಗೇರಿ ಮಾತನಾಡಿದರು. ವೇದಿಕೆಯಲ್ಲಿ ಶಾರದಾಂಬಾ ದೇವಸ್ಥಾನದ ಕಾರ್ಯಾಧ್ಯಕ್ಷ ಜಗದೀಶ ದೀಕ್ಷಿತ, ಸಹಕಾರ್ಯದರ್ಶಿ ನರಸಿಂಹ ಗೇರಗದ್ದೆ, ನಿರ್ದೇಶಕರಾದ ಶಂಕರ ಭಟ್ಟ ತಾರೀಮಕ್ಕಿ, ನಾಗೇಂದ್ರ ಕವಾಳೆ ಮತ್ತಿತರರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ವೇದಘೋಷ ಪಠಿಸಿದರು. ಮುಖ್ಯಾಧ್ಯಾಪಕ ಡಾ.ಶಿವರಾಮ ಭಾಗ್ವತ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ವಿದ್ಯಾರ್ಥಿ ಕಾರ್ತಿಕೇಯ ಭಟ್ಟ ನಿರ್ವಹಿಸಿದರು. ಅಧ್ಯಾಪಕ ಡಾ.ನರಸಿಂಹ ಭಟ್ಟ ವಂದಿಸಿದರು.

ಸಂವಿಧಾನ ಉಳಿದರೆ ಸದೃಢ ಭಾರತ ಸಾಧ್ಯ

ನಗರದ ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತದಿಂದ ನಡೆದ ಡಾ.ಬಿ.ಆರ್.ಅಂಬೇಡ್ಕರ್, ಡಾ. ಬಾಬು ಜಗಜೀವನರಾಂ ರವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ರುದ್ರಪ್ಪ ಮಾನಪ್ಪ ಲಮಾಣಿ ಉದ್ಘಾಟಿಸಿದರು.

ಹಾವೇರಿ: ವಿಶ್ವಕ್ಕೆ ಮಾದರಿ ಸಂವಿಧಾನವನ್ನು ನೀಡಿದ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ದೇಶಕ್ಕೆ ಆಹಾರ ಭದ್ರತೆಗೆ ನಾಂದಿ ಹಾಡಿದ ಡಾ. ಬಾಬು ಜಗಜೀವನರಾಂ ಅವರು ಈ ದೇಶದ ಎರಡು ಕಣ್ಣುಗಳಿದ್ದಂತೆ. ಈ ಇಬ್ಬರು ಮಹಾನ್ ಚೇತನರ ತತ್ವಾದರ್ಶ ಅಳವಡಿಸಿಕೊಂಡಾಗ ಮಾತ್ರ ನಾವು ಸಾರ್ಥಕ ಬದುಕು ಕಾಣಲು ಸಾಧ್ಯ ಎಂದು ವಿಧಾನಸಭಾ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಹೇಳಿದರು.

ನಗರದ ಸಿದ್ದಾರೂಢ ಕಾಲೋನಿಯ ಅಂಬೇಡ್ಕರ್ ಭವನದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ಪರಿಶಿಷ್ಟ ಜಾತಿ ಒಕ್ಕೂಟಗಳ ಆಶ್ರಯದಲ್ಲಿ ಡಾ. ಬಾಬು ಜಗಜೀವನರಾಮ್ ರವರ 119ನೇ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ರವರ 135 ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದು ಎಂಟು ದಶಕಗಳಾಗುತ್ತಿದ್ದರೂ ಇಂದಿಗೂ ಸಹ ಹಳ್ಳಿಗಳಲ್ಲಿ ಅಸ್ಪೃಶ್ಯತೆ ಜೀವಂತವಾಗಿದೆ. ಇದು ವಿಷಾದನೀಯ ಅಸ್ಪೃಶ್ಯತೆ ವಿರುದ್ಧ ಜಾಗೃತಿ ಅಗತ್ಯವಾಗಿದೆ. ಬಸವಣ್ಣನ ಕಾಲದಿಂದಲೂ ಜಾತಿ ವಿರೋಧಿ ಹೋರಾಟಗಳು ನಡೆಯುತ್ತ ಬಂದಿವೆ ಇಂದಿನ ಪೀಳಿಗೆಗೆ ಅದು ದಾರಿದೀಪವಾಗಬೇಕಿದೆ. ಇಂದಿನ ಯುವ ಸಮೂಹ ನಾವೆಲ್ಲರೂ ಒಂದು ಎಂಬ ಮನೋಭಾವದೊಂದಿಗೆ ಬದುಕುಬೇಕು ಎಂದರು.

ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ್ ದಾನಮ್ಮನವರ ಮಾತನಾಡಿ, ಅಂಬೇಡ್ಕರ್ ಅವರು ಜ್ಞಾನದ ಶಕ್ತಿ. ಅರ್ಥಶಾಸ್ತ್ರ, ಕಾನೂನು, ಸಮಾಜಶಾಸ್ತ್ರ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಮಾಡಿದ ಸಾಧನೆ ಬೆರಗುಗೊಳಿಸುವಂತದ್ದಾಗಿದೆ. ಪ್ರಜಾಪ್ರಭುತ್ವದ ಹಕ್ಕುಗಳಿಗೆ ಅವರು ಬರೆದ ಸಂವಿಧಾನವೇ ಭದ್ರ ಬುನಾದಿ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಹನುಮಂತಗೌಡ ಪಿ. ಗೊಲ್ಲರ ಅವರು ಡಾ.ಅಂಬೇಡ್ಕರ್ ಕುರಿತು ಹಾಗೂ ಶಿಕ್ಷಕ ಮಹದೇವಪ್ಪ ಎಚ್. ಕರಿಯಣ್ಣನವರ ರವರು ಬಾಬು ಜಗಜೀವನರಾಂ ಕುರಿತು ವಿಶೇಷ ಉಪನ್ಯಾಸ ನೀಡಿದರು. ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನರಾಂ ರವರ ಭಾವಚಿತ್ರಗಳ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ನಡೆಯಿತು. ಈ ವೇಳೆ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್‌ಎಫ್‌ಎನ್ ಗಾಜಿಗೌಡ್ರ, ತಾಲೂಕ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಂ.ಎಂ. ಮೈದೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧ ವಂಟಗೋಡಿ, ಅಪರ ಜಿಲ್ಲಾಧಿಕಾರಿ ಡಾ. ಎಲ್ ನಾಗರಾಜ್, ಉಪ ವಿಭಾಗಧಿಕಾರಿ ಕಲ್ಯಾಣಿ ಕಾಂಬ್ಳೆ, ತಹಶೀಲ್ದಾರ ಶರಣಮ್ಮ ಕೆ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಾದ ಪ್ರಶಾಂತ ಎಂ. ವರಗಪ್ಪನವರ ಉಪಸ್ಥಿತರಿದ್ದರು.

ಜಗತ್ತಿಗೆ ಮಾದರಿ ಸಂವಿಧಾನ ಕೊಡುಗೆ

ಹಾವೇರಿ: ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತಿಯನ್ನು ಹಾವೇರಿಯಲ್ಲಿ ಆಚರಿಸಲಾಯಿತು. ಬಾಬಾ ಸಾಹೇಬ ಡಾ. ಬಿ. ಆರ್.ಅಂಬೇಡ್ಕರ್ ಭಾರತ ರಾಷ್ಟ್ರದ ದೇವರು. ಅವರು ಹಾಕಿಕೊಟ್ಟ ಮಾರ್ಗ ಯಾರಿಂದಲೂ ಅಳಿಸಲು ಸಾಧ್ಯವಿಲ್ಲ ಎಂದು ಅಂಬೇಡ್ಕರ್‌ಸಂವಿಧಾನ ಸಂರಕ್ಷಣಾ ಸಮಿತಿ ಜಿಲ್ಲಾಧ್ಯಕ್ಷ ಹೊನ್ನಪ್ಪ ಮಾಳಗಿ ತಿಳಿಸಿದರು.

ಡಾ.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಹಾವೇರಿ ಜಿಲ್ಲಾ ಅಂಬೇಡ್ಕರ್ ಸಂವಿಧಾನ ಸಂರಕ್ಷಣಾ ಸಮಿತಿಯಿಂದ ಹಾವೇರಿ ತಾಲೂಕಿನ ಕನಕಾಪುರ ಗ್ರಾಮದಲ್ಲಿ ಗ್ರಾಮ ಶಾಖೆ ಉದ್ಘಾಟನೆ ಮಾಡಲಾಯಿತು. ಈ ಸಂದರ್ಭದಲ್ಲಿ ಕಾನೂನು ಸಲಹೆಗಾರರಾದ ಮಲ್ಲಪ್ಪ ಹಂಚಿನಮನಿ, ಜಿಲ್ಲಾ ಉಪಾಧ್ಯಕ್ಷರಾದ ಗುಡಪ್ಪ ಮಾಳಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುಡ್ಡಪ್ಪ ಹರಿಜನ, ಜಿಲ್ಲಾ ಸಹ ಕಾರ್ಯದರ್ಶಿ ಅಜ್ಜಪ್ಪ ಹರಿಜನ್, ಸಂಚಾಲಕರಗಳಾದ ನಾಗಪ್ಪ ಸೋಮಣ್ಣನವರ ಬಸವರಾಜ್ ಮಾಳಗಿ, ಫಕ್ಕಿರಪ್ಪ ಹರಿಜನ ದುರಗಪ್ಪ ಹರಿಜನ, ಮರಿಯಪ್ಪ ಹರಿಜನ, ಸುನಿಲ್ ದೊಡ್ಡಮನಿ,ಸಂಜೀವ ದೊಡ್ಡಮನಿ, ಬಸಪ್ಪ ಮಾದರ, ನಿಂಗಪ್ಪ ಹರಿಜನ ಇದ್ದರು.

ಕನಕಾಪುರ ಗ್ರಾಮದಲ್ಲಿ ಅಂಬೇಡ್ಕರ್ ಸಂವಿಧಾನ ಸಂರಕ್ಷಣಾ ಸಮಿತಿಯ ಗ್ರಾಮ ಶಾಖೆ ಉದ್ಘಾಟಿಸಲಾಯಿತು.

ಹಲಸಿನ ಹಪ್ಪಳ, ಚಿಪ್ಸ್ ಗುಣಮಟ್ಟಕ್ಕೆ ಕಾರ್ಯಾಗಾರ

ಶಿರಸಿ: ಮನೆಯಲ್ಲಿ ತಯಾರಿಸುವ ಹಲಸಿನ ಕಾಯಿ ಹಪ್ಪಳ ಹಾಗೂ ಚಿಪ್ ಗಳಿಗೆ ಬೇಡಿಕೆ ಇದೆ. ನಿರಂತರ ಮಾರುಕಟ್ಟೆ ವ್ಯವಸ್ಥೆಯನ್ನು ಶಿರಸಿಯ ಕದಂಬ ಮಾರ್ಕೆಟಿಂಗ್ ವ್ಯವಸ್ಥೆ ಮಾಡಿದೆ. ಆದರೆ, ಒಂದೇ ಮಾದರಿಯ ಪೂರೈಕೆಗೆ ಹಾಗೂ ಗುಣಮಟ್ಟ ಕಾಯ್ದುಕೊಳ್ಳಲು ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು.

ಶಿರಸಿ ಮಾತ್ರವಲ್ಲದೇ ಅಕ್ಕ ಪಕ್ಕ ತಾಲೂಕಿನಿಂದ, ದೂರದ ತೀರ್ಥಹಳ್ಳಿಯಿಂದಲೂ ಆಗಮಿಸಿದ್ದರು. ವಿಶೇಷ ಎಂದರೆ ಉತ್ಸಾಹಿ ಮಾತೆಯರ ಜತೆಗೆ ಯುವಕರೂ ಹಪ್ಪಳ ಹಾಗೂ ಚಿಪ್ಸ್ ತಯಾರಿಕೆಯ ಸುಲಭ ಹಾಗೂ ಗುಣಮಟ್ಟದ ಕುರಿತು ಕಲಿಯಲು ಆಗಮಿಸಿದ್ದರು.

ತರಬೇತಿಯನ್ನು ಉದ್ಯಮಿ, ಚಿಪ್ಸ ತಜ್ಞೆ ಮಮತಾ ಶಮೆಮನೆ ಹಾಗೂ ಸಹಕಾರದಲ್ಲಿ ಶ್ವೇತಾ ಹೆಗಡೆ ಸಹಕಾರ ನೀಡಿದರು. ಉತ್ತಮ ಗುಣಮಟ್ಟದ ಹಲಸಿನ ಕಾಯಿ ಆಯ್ಕೆ ಮಾಡುವುದರಿಂದ ಆರಂಭಿಸಿ, ಶುದ್ಧೀಕರಣ, ಕತ್ತರಿಸುವ ವಿಧಾನ, ಒಣಗಿಸುವ ಕ್ರಮ, ಹಪ್ಪಳ ತಯಾರಿ ತಂತ್ರಗಳು ಹಾಗೂ ಚಿಪ್ಸ್ ಕರಿಯುವ ತಾಪಮಾನ ನಿಯಂತ್ರಣದಂತಹ ಪ್ರಮುಖ ಅಂಶಗಳನ್ನು ವಿವರಿಸಿದರು. ಉತ್ಪನ್ನದ ರುಚಿ, ಬಣ್ಣ ಹಾಗೂ ದೀರ್ಘಕಾಲದ ಸಂರಕ್ಷಣೆ ಕಾಪಾಡಿಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸಹ ವಿವರ ನೀಡಿದರು.

ಹಲಸು ಹಪ್ಪಳ, ಚಿಪ್ಸ್ ಗುಣಮಟ್ಟ ಕಾಯ್ದುಕೊಳ್ಳಲು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಯಿತು.

ಈ ಸಂದರ್ಭದಲ್ಲಿ ಕದಂಬ ಸಂಸ್ಥೆಯ ವಿಶ್ವೇಶ್ವರ ಭಟ್ಟ ಕೋಟೆಮನೆ ಮಾತನಾಡಿ, ರೈತ ಕುಟುಂಬಗಳಿಗೆ ಮೌಲ್ಯವರ್ಧಿತ ಉತ್ಪನ್ನ ತಯಾರಿಕೆಯ ಕೌಶಲ್ಯಗಳನ್ನು ಕಲಿಸುವುದು ಇಂದಿನ ಅವಶ್ಯಕತೆ ಎಂದರು. ಹಲಸಿನಂತಹ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಆದಾಯ ಹೆಚ್ಚಿಸಿಕೊಳ್ಳುವ ಅವಕಾಶಗಳನ್ನು ಈ ತರಬೇತಿ ಒದಗಿಸುತ್ತದೆ. ಉತ್ಪನ್ನಗಳಿಗೆ ಉತ್ತಮ ಪ್ಯಾಕೇಜಿಂಗ್ ಹಾಗೂ ಬ್ರ್ಯಾಂಡಿಂಗ್ ಮೂಲಕ ಮಾರುಕಟ್ಟೆ ಸಂಪರ್ಕ ಕಲ್ಪಿಸಲು ಕದಂಬದಿಂದ ಸಹಕಾರ ನೀಡಲಾಗುತ್ತದೆ ಎಂದು ಹೇಳಿದರು.

ಈ ವೇಳೆ ಪಶ್ಚಿಮ ಘಟ್ಟ ಕಾರ್ಯಪಡೆ ಮಾಜಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಕಾರ್ಯಾಗಾರದ ಬಗ್ಗೆ ಮೆಚ್ಚುಗೆ ಸೂಚಿಸಿ, ಉತ್ಪಾದನೆ ಜತೆ ಗುಣಮಟ್ಟದ ಅಗತ್ಯತೆ ಪ್ರತಿಪಾದಿಸಿದರು.

ಭಟ್ಕಳದಲ್ಲಿ ಮಕ್ಕಳ ಬೇಸಿಗೆ ಶಿಬಿರಕ್ಕೆ ಚಾಲನೆ

ಭಟ್ಕಳ: ಶಿಬಿರಗಳು ಯಾವುದೋ ದೂರದ ಊರುಗಳಲ್ಲಿ ನಡೆಯುತ್ತಿರುವುದನ್ನು ನಾವು ಕೇಳಿದ್ದೇವೆ. ಚಿಣ್ಣರ ಮೇಳ ಎಂಬ ಹೆಸರಿನಲ್ಲಿ ಮಕ್ಕಳ ಬೇಸಿಗೆ ಶಿಬಿರವನ್ನು ನಮ್ಮ ಊರಿನಲ್ಲಿಯೇ ನಡೆಸುತ್ತಿರುವುದು ನಮಗೆ ಅತ್ಯಂತ ಸಂತೋಷ ತಂದಿರುತ್ತದೆ ಎಂದು ಭಟ್ಕಳ ಅರ್ಬನ್ ಕೋ ಒಪರೇಟಿವ್ ಬ್ಯಾಂಕಿನ ನಿರ್ದೇಶಕ ಹಾಗೂ ನಿವೃತ್ತ ಯೋಧರೂ ಆದ ಶ್ರೀಕಾಂತ ನಾಯ್ಕ ಅವರು ಹೇಳಿದರು.

ಅವರು ಭಟ್ಕಳದ ಶ್ರೀ ಗುರು ವಿದ್ಯಾಧಿರಾಜ ದಿ. ನ್ಯೂ ಇಂಗ್ಲೀಷ ಪಿಯು ಕಾಲೇಜಿನಲ್ಲಿ ಭಟ್ಕಳ ಎಜ್ಯುಕೇಶನ್ ಟ್ರಸ್ಟ್ ಮತ್ತು ಅಖಿಲ ಕರ್ನಾಟಕ ಸಾಂಸ್ಕೃತಿಕ ಪರಿಷತ್ ಭಟ್ಕಳ ಘಟಕದವರು ಆಯೋಜಿಸಿದ್ದ ಚಿಣ್ಣರ ಮೇಳ - 3 ಮಕ್ಕಳ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಗುರು ವಿದ್ಯಾಧಿರಾಜ ದಿ ನ್ಯೂ ಇಂಗ್ಲೀಷ ಪಿಯು ಕಾಲೇಜಿನ ಪ್ರಾಂಶುಪಾಲರು ಮತ್ತು ಅಖಿಲ ಕರ್ನಾಟಕ ಸಾಂಸ್ಕೃತಿಕ ಪರಿಷತ್ ಭಟ್ಕಳ ಘಟಕದ ಅಧ್ಯಕ್ಷ ಡಾ. ವಿರೇಂದ್ರ ವಿ. ಶಾನಭಾಗ ಅವರು ಈ ಚಿಣ್ಣರ ಮೇಳವು ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರ ತರುವುದರ ಜತೆಗೆ ನಿತ್ಯ ಮನೆಯಲ್ಲಿ ನೃತ್ಯ ಮತ್ತು ನಾಟಕದ ಜತೆಗೆ ಭಜನೆ ಮಾಡುವ, ಗುರು ಹಿರಿಯರಿಗೆ ಗೌರವಿಸುವ, ನಿತ್ಯ ತಂದೆ ತಾಯಿಗೆ ನಮಸ್ಕರಿಸುವ, ಸಂಸ್ಕಾರವನ್ನು ಕಲಿಸಿ ಅಳವಡಿಸಿಕೊಡುವ ಒಳ್ಳೆಯ ವೇದಿಕೆಯಾಗಿದೆ ಎಂಬ ಮಾತನ್ನು ಹೇಳಿದರು.

ಭಟ್ಕಳದ ಶ್ರೀ ಗುರು ವಿದ್ಯಾಧಿರಾಜ ದಿ. ನ್ಯೂ ಇಂಗ್ಲೀಷ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ ಚಿಣ್ಣರ ಮೇಳ - 3 ಮಕ್ಕಳ ಬೇಸಿಗೆ ಶಿಬಿರವನ್ನು ಭಟ್ಕಳ ಅರ್ಬನ್ ಕೋ ಒಪರೇಟಿವ್ ಬ್ಯಾಂಕಿನ ನಿರ್ದೇಶಕ ಹಾಗೂ ನಿವೃತ್ತ ಯೋಧರೂ ಆದ ಶ್ರೀಕಾಂತ ನಾಯ್ಕ ಉದ್ಘಾಟಿಸಿದರು.

ಅಖಿಲ ಕರ್ನಾಟಕ ಸಾಂಸ್ಕೃತಿಕ ಪರಿಷತ್ ಭಟ್ಕಳ ಘಟಕದ ಗೌರವಾಧ್ಯಕ್ಷರು ಮತ್ತು ಅಳ್ವೇಕೋಡಿಯ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಧರ್ಮದರ್ಶಿ ನಾರಾಯಣ ದೈಮನೆಯವರು, ಗೌರವ ಮಾರ್ಗದರ್ಶಕ ಮಾನಸುತ ಶಂಭು ಹೆಗಡೆ, ಹಿರಿಯ ಮಾರ್ಗದರ್ಶಕ ವಿಷ್ಣುದಾಸ ಪೈ, ಸಹ ಕಾರ್ಯದರ್ಶಿ ಗೀತಾ ಶಿರೂರು ಮಾತನಾಡಿದರು.

ಅಖಿಲ ಕರ್ನಾಟಕ ಸಾಂಸ್ಕೃತಿಕ ಪರಿಷತ್ ಭಟ್ಕಳ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಶಿರಾಲಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನೇತ್ರಾವತಿ ಪ್ರಾರ್ಥಿಸಿದರು, ಕಾವ್ಯಾ ಗೊಂಡ ವಂದಿಸಿದರು. ಸಂಕಲ್ಪ ನಿರೂಪಿಸಿದರು. ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ವಿಶ್ವನಾಥ ಮಹಾಲೆ, ರಘುರಾಮ ಮಡಿವಾಳ, ಉಪನ್ಯಾಸಕ ಜಗದೀಶ ಹರಿಕಾಂತ ಮತ್ತು ದಾಮೋದರ ಗೊಂಡ ನಾಟಕವನ್ನು, ಈಶ್ವರ ಹಕ್ರೆ, ಭಜನೆಯನ್ನು, ಯೋಗರಾಜ ಮತ್ತು ತೇಜಸ್ವಿನಿ ನೃತ್ಯವನ್ನು ತರಬೇತಿ ನೀಡಲಿದ್ದು, ಉಪನ್ಯಾಸಕಿ ನಿಶ್ಚಿತಾ ಮತ್ತು ಉಪನ್ಯಾಸಕ ಗಣೇಶ ಗೊಂಡ ಶಿಬಿರದ ಉಸ್ತುವಾರಿಯನ್ನು ನಿರ್ವಹಿಸಿದರು.

ಬನವಾಸಿಯಲ್ಲಿ ಅಂಬೇಡ್ಕರ್ ಜಯಂತಿ

ಬನವಾಸಿ: ನಗರದ ಅಂಬೇಡ್ಕರ್ ಭವನದಲ್ಲಿ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಲಾಯಿತು.

ಬನವಾಸಿ ಪಿಎಸ್‌ಐ ಮಹಾಂತೇಶ ಕಂಬಾರ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ಅವರ ಮತ್ತು ಭಗವಾನ್ ಬುದ್ಧರ ಭಾವಚಿತ್ರಗಳಿಗೆ ಪುಷ್ಪವನ್ನು ಸಮರ್ಪಣೆ ಮಾಡುವುದರ ಮೂಲಕ ಚಾಲನೆಯನ್ನು ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಭಾರತದ ಪರಮ ಪವಿತ್ರ ಸಂವಿಧಾನ ಬರೆಯುವ ಮೂಲಕ ದೇಶದ ಹಿತ ಕಾಪಾಡಿದರು ಎಂದರು.

ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಶಿವಾಜಿ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ದೀನ ದಲಿತ ಪರ ಕಾಳಜಿ ಶ್ಲಾಘನೀಯ ಎಂದರು.

ಬನವಾಸಿ ಶಾಂತಕುಮಾರ ಅಜ್ಜಿರಣಿ, ಸದಾನಂದ ತಿಗಣಿ, ಬಸವರಾಜ್ ಎಮ್ಮಿ, ರಾಜು ತಾವ ರೇರ್, ಶ್ರೀಲತಾ ಕಾಲೇರಮನೆ, ಮನೆ ವಿರೂಪಾಕ್ಷಿ ಚನ್ನಯ್ಯ, ಸುರೇಶ್ ಚೆನ್ನಯ್ಯ, ಸೋಮು ಚೆನ್ನಯ್ಯ, ಮಲಿಕೇಶ ಅಜ್ಜರಣಿ, ಬಸವರಾಜ ಅಜ್ಜರಣಿ, ವಸಂತ್ ಚೆನ್ನಯ್ಯ, ಚಂದ್ರು ಚೆನ್ನಯ್ಯ, ಮೋಹನ್ ಚೆನ್ನಯ್ಯ, ಬಸವರಾಜ್ ತಾವರೆ, ಮಂಜಣ್ಣ ಹಂಚಿನ ಮನೆ ಮುಂತಾದ ನೂರಾರು ಜನರು ಉಪಸ್ಥಿತರಿದ್ದರು.



ಬನವಾಸಿ ಅಂಬೇಡ್ಕರ್ ಭವನದಲ್ಲಿ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿಯನ್ನು ಆಚರಿಸಲಾಯಿತು.

ಸಮಾಚಾರ ಸಣ್ಣದಲ್ಲ

ಅರ್ಜುನ ಕಾಲೇಜಿನ ಪ್ರೀತಮ್ 574 ಅಂಕ

ಧಾರವಾಡ: ನಗರದ ಸಾರಸ್ವತಪೂರ ಅರ್ಜುನ ಪಿಯು ಕಾಲೇಜಿನ ವಿದ್ಯಾರ್ಥಿ ಪ್ರೀತಮ್ ಉಮೇಶ ಯಡಹಳ್ಳಿ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಒಟ್ಟು 574 (ಶೇ. 95.67) ಅಂಕ ಸಂಪಾದಿಸಿದ್ದಾನೆ. ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಷಯಗಳಲ್ಲಿ 100ಕ್ಕೆ 99 ಅಂಕ ಗಳಿಸಿದ್ದಾನೆ. ಈತನಿಗೆ ಕಾಲೇಜಿ ಆಡಳಿತ ಮಂಡಳಿ ಅಭಿನಂದಿಸಿದೆ.

ರಾಷ್ಟ್ರೀಯ ಸಮ್ಮೇಳನ ನಾಳೆಯಿಂದ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವತಿಯಿಂದ ಪ್ರೊ. ಎಂ.ಆರ್. ಕುಂಬಾರರ ಜನ್ಮ ಶತಮಾನೋತ್ಸವ ಸವಿ ನೆನಪಿಗಾಗಿ ಏ.16 ಮತ್ತು 17 ರಂದು ಡಿಜಿಟಲ್, ಕೃತಕ ಬುದ್ಧಿಮತ್ತೆ ಜಗತ್ತಿನಲ್ಲಿ ಸಾಂಪ್ರದಾಯಿಕ ವರ್ಗೀಕರಣ, ಕ್ಯಾಟಲಾಗ್ ಪದ್ಧತಿಯಿಂದ ಜ್ಞಾನ ಸಂಘಟನೆಯತ್ತ ಮುನ್ನಡೆಯುವಿಕೆ: ಹಿಂದಿನ ಭವಿಷ್ಯದ ದೃಷ್ಟಿಕೋನಗಳು, ಎಂಬ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರ ಮಟ್ಟದ ಸಮ್ಮೇಳನ ಕವಿವಿಯ ಸುವರ್ಣ ಸಭಾಂಗಣದಲ್ಲಿ ಆಯೋಜಿಸಲಾಗಿದೆ. 16ರಂದು ಬೆಳಗ್ಗೆ 10.30 ಗಂಟೆಗೆ ಕವಿವಿ ಕುಲಪತಿ ಪ್ರೊ. ಎ.ಎಂ. ಖಾನ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ವಿ.ಜಿ. ತಳವಾರ, ಗ್ರಂಥಾಲಯದ ತಜ್ಞ ಪ್ರೊ. ಸಿ.ಆರ್. ಕರಿಸಿದ್ದಪ್ಪ, ಪ್ರೊ. ಎಸ್.ಎಲ್ ಸಂಗಮ ಅತಿಥಿಗಳಾಗಿ ಆಗಮಿಸಲಿದ್ದು, ಪ್ರೊ. ಎಂ.ಎಂ. ಕೂಗನೂರಮಠ ಪ್ರಧಾನ ಭಾಷಣ ಮಾಡಲಿದ್ದಾರೆ. ದಾವಣಗೆರೆ ವಿವಿ ಕುಲಪತಿ ಡಾ. ಬಿ.ಡಿ. ಕುಂಬಾರ ಅಧ್ಯಕ್ಷತೆ ವಹಿಸಲಿದ್ದಾರೆ. ಗ್ರಂಥಾಲಯದ ಪರಿಣಿತ ಪ್ರೊ. ಪಿ. ಸದಾಶಿವ ಮೂರ್ತಿ,ಡಾ. ಎಸ್.ಆರ್. ಗುಂಜಾಳ ಅವರನ್ನು ಸನ್ಮಾನಿಸಲಾಗುವುದು. 250ಕ್ಕೂ ಹೆಚ್ಚಿನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದು, 40ಕ್ಕೂ ಹೆಚ್ಚಿನ ಸಂಶೋಧನಾತ್ಮಕ ಪ್ರಬಂಧಗಳ ಮಂಡನೆಯಾಗಲಿದ್ದು ಮತ್ತು ಸಮ್ಮೇಳನದಲ್ಲಿ ಪ್ರೊ. ಎಂ.ಆರ್. ಕುಂಬಾರ ಕುರಿತು ಎರಡು ಗ್ರಂಥಗಳು ಲೋಕಾರ್ಪಣೆಯಾಗಲಿವೆ. ಸಮಾರೋಪ 17ರಂದು ಮಧ್ಯಾಹ್ನ 3 ಗಂಟೆಗೆ ಜರುಗಲಿದೆ ಎಂದು ಗ್ರಂಥಾಲಯ ವಿಭಾಗದ ಮುಖ್ಯಸ್ಥ ಡಾ. ಸಿ. ಕೃಷ್ಣಮೂರ್ತಿ ತಿಳಿಸಿದ್ದಾರೆ.

ಏ.26ರಂದು ಕೃಷಿಕ ವಿದ್ಯಾರ್ಥಿಗಳಿಗೆ ತರಬೇತಿ

ಹಾವೇರಿ: ಹಾವೇರಿ ಕೃಷಿ ಇಲಾಖೆ, ದೇವಿಹೊಸೂರು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಳಸೂರು ಮತ್ತು ನಾಗನೂರು ಕೃಷಿ ಬಳಗದ ಸಹಯೋಗದಲ್ಲಿ, ಕೃಷಿ ಮತ್ತು ಕೃಷಿ ಸಂಬಂಧಿತ ಪದವಿಗಳಿಗೆ ಪ್ರವೇಶ ಬಯಸುವ ಹಾವೇರಿ ಜಿಲ್ಲೆಯ ಕೃಷಿಕ ವರ್ಗದ ಅರ್ಹ ವಿದ್ಯಾರ್ಥಿಗಳಿಗೆ ಕೃಷಿ ಪ್ರಾಯೋಗಿಕ ಪರೀಕ್ಷೆ ಕುರಿತು ತರಬೇತಿಯನ್ನು ಏ.26ರಂದು ರವಿವಾರ ಬೆಳಿಗ್ಗೆ 10 ಗಂಟೆಗೆ ದೇವಿಹೊಸೂರು ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು, ತಮ್ಮ ಹೆಸರು, ಊರು, ತಾಲ್ಲೂಕು ವಿವರಗಳನ್ನು ಮೊಬೈಲ್ ಸಂಖ್ಯೆ 8494913201, 9449082829 ಅಥವಾ 6360494057ಗಳಿಗೆ ವಾಟ್ಸಾಪ್ ಸಂದೇಶದ ಮೂಲಕ ಏ. 20 ರೊಳಗೆ ನೊಂದಾಯಿಸಿಕೊಳ್ಳಬೇಕು. ತರಬೇತಿ ಶುಲ್ಕವಾಗಿ 100 ರು.ಗಳನ್ನು ಏ. 26 ರಂದು ಸಂದಾಯಮಾಡಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ವಿವಿಧ ತರಬೇತಿಗೆ ಅರ್ಜಿಗಳ ಆಹ್ವಾನ

ಹಾವೇರಿ: ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್.ಸೆಟ್ ತರಬೇತಿ ಸಂಸ್ಥೆಯಲ್ಲಿ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಮೇ ತಿಂಗಳಲ್ಲಿ ಬ್ಯೂಟಿಪಾರ್ಲರ್,ಹಪ್ಪಳ, ಉಪ್ಪಿನಕಾಯಿ ಮತ್ತು ಮಸಾಲಾ ಪೌಡರ್‌ತಯಾರಿಕೆ ಉಚಿತ ತರಬೇತಿ ಆಯೋಜಿಸಿದೆ. ತರಬೇತಿಯು ಊಟ ಮತ್ತು ವಸತಿಯೊಂದಿಗೆ ಉಚಿತವಾಗಿರುತ್ತದೆ. ಅಭ್ಯರ್ಥಿಗಳು 18 ರಿಂದ 50ವರ್ಷದೊಳಗಿರಬೇಕು. ಗ್ರಾಮೀಣ ಭಾಗದ ಯುವಕ ಮತ್ತು ಯುವತಿಯರಿಗೆ ಆದ್ಯತೆ ನೀಡಲಾಗುವುದು. ಆಸಕ್ತ ಅಭ್ಯರ್ಥಿಗಳು ಏ.30ರೊಳಗಾಗಿ ತಮ್ಮ ಹೆಸರು, ವಿಳಾಸ ನೋಂದಾಯಿಸಲು ಕೆಳಕಂಡ ದೂರವಾಣಿ ಸಂಪರ್ಕಿಸಬಹುದು ಅಥವಾ ವೆಬ್ಸೈಟ್ ನಲ್ಲಿ ಸಹ ಅರ್ಜಿ ಸಲ್ಲಿಸಬಹುದು.ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ ಅಥವಾ ಮೊ.8217236973 ಹಾಗೂ 9482188780 ಸಂಪರ್ಕಿಸಲು ಕೋರಲಾಗಿದೆ.

{ಕೆ. ವೆಂಕಟೇಶ್} ರೇಷ್ಮೆ ಸಚಿವ

ಅಂಬೇಡ್ಕರ್ ಅವರು ಬಾಲ್ಯದಲ್ಲಿ ಸಾಕಷ್ಟು ಅಪಮಾನ, ನೋವು, ಸಂಕಷ್ಟ ಅನುಭವಿಸಿದ್ದರೂ ಮಾನವೀಯ ಹೃದಯವಂತಿಕೆ ಅವರಲ್ಲಿತ್ತು. ಅದಕ್ಕಾಗಿಯೇ ಅವರು ದೇಶದಲ್ಲಿದ್ದ ಜಾತಿಪದ್ಧತಿ, ಸಾಮಾಜಿಕ ತಾರತಮ್ಯ, ಆರ್ಥಿಕ, ಕಾನೂನು ಸ್ಥಿತಿಗತಿಗಳನ್ನು ಆಳವಾಗಿ ಅಧ್ಯಯನ ಮಾಡಲು ಸಾಧ್ಯವಾಯಿತು ಸಾಕಷ್ಟು ಕಾನೂನು ತಜ್ಞರೊಂದಿಗೆ ಚರ್ಚಿಸಿ, ಚಿಂತನೆ ನಡೆಸಿ ಅದ್ಭುತ ಸಂವಿಧಾನವನ್ನು ಕೊಡುಗೆ ನೀಡಿದರು.

ಜಿಲ್ಲಾಡಳಿತದಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ | ಸಚಿವ ಸಂತೋಷ ಲಾಡ್ ಅಭಿಮತ

ದೇಶದ ನ್ಯಾಯ ವ್ಯವಸ್ಥೆಗೆ ಬಲವಾದ ಅಡಿಪಾಯ

ವಿಶ್ವವಾಣಿ ಸುದ್ದಿಮನೆ, ಧಾರವಾಡ:

ದೇಶದ ಸಮಾನತೆ ಮತ್ತು ನ್ಯಾಯ ವ್ಯವಸ್ಥೆಗೆ ಬಲವಾದ ಅಡಿಪಾಯ ಹಾಕಿಕೊಟ್ಟವರು ಡಾ. ಅಂಬೇಡ್ಕರ್. ಸಮಾಜದ ಅನ್ಯಾಯ ಮತ್ತು ಅಸಮಾನತೆ ನಡುವೆಯೇ ಅವರು ಉನ್ನತ ಶಿಕ್ಷಣ ಪಡೆದು, ಹಲವು ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ಭಾರತದ ಸಂವಿಧಾನ ರಚಿಸಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಸಂಯುಕ್ತವಾಗಿ ಮಂಗಳವಾರ ಆಯೋಜಿಸಿದ್ದ ಡಾ. ಬಿ.ಆರ್. ಅಂಬೇಡ್ಕರರ 135ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮೀಸಲಾತಿ ವ್ಯವಸ್ಥೆಯು ಸಾಮಾಜಿಕ ನ್ಯಾಯ ಸಾಧಿಸಲು ಅಗತ್ಯವಾಗಿದ್ದು, ಇದು ಭಾರತದಲ್ಲಷ್ಟೇ ಅಲ್ಲದೆ ಅನೇಕ ದೇಶಗಳಲ್ಲಿ ವಿವಿಧ ರೂಪಗಳಲ್ಲಿ ಜಾರಿಯಲ್ಲಿದೆ. ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ ಅವಕಾಶ ಕಲ್ಪಿಸುವುದು ಇದರ ಮುಖ್ಯ ಉದ್ದೇಶ. ಹೆಣ್ಣುಮಕ್ಕಳ ಹಕ್ಕುಗಳ ವಿಷಯದಲ್ಲಿ ಅಂಬೇಡ್ಕರ್‌ಅವರ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ಮಹಿಳೆಯರಿಗೆ ಆಸ್ತಿ ಹಕ್ಕು, ಮರು ವಿವಾಹ ಹಕ್ಕು ಹಾಗೂ ಸಮಾನ

ನಗರದ ವಿದ್ಯಾವರ್ಧಕ ಸಂಘದ ಡಾ. ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಜಿಲ್ಲಾಡಳಿತ ಮಂಗಳವಾರ ಆಯೋಜಿಸಿದ್ದ ಡಾ. ಬಿ.ಆರ್. ಅಂಬೇಡ್ಕರರ 135ನೇ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಉದ್ಘಾಟಿಸಿದರು.

ಅವಕಾಶಗಳನ್ನು ನೀಡುವಲ್ಲಿ ಅವರ ಪಾತ್ರವನ್ನು ಸ್ಮರಿಸಬೇಕಾಗಿದೆ ಎಂದರು. ಇಂದಿನ ಯುವಕರು ಅಂಬೇಡ್ಕರ್‌ಅವರ ವಿಚಾರಗಳನ್ನು ಸರಿಯಾಗಿ ಅರಿತುಕೊಂಡು, ಸಂವಿಧಾನದ ಮೌಲ್ಯಗಳನ್ನು ಸಮಾಜದಲ್ಲಿ ಪ್ರಚಾರ ಮಾಡುವ ಜವಾಬ್ದಾರಿ ಹೊತ್ತುಕೊಳ್ಳಬೇಕು. ಸಮಾನತೆ, ನ್ಯಾಯ ಮತ್ತು ಸಹಬಾಳ್ವೆಯ ಆಶಯಗಳನ್ನು ಅಳವಡಿಸಿಕೊಂಡಾಗ ಮಾತ್ರ ದೇಶದಲ್ಲಿ ಸಾಮರಸ್ಯ, ಅಭಿವೃದ್ಧಿ ಸಾಧ್ಯ ಎಂದರು.

ದೇಶದ ಸಂವಿಧಾನ ಪೂರ್ವದಲ್ಲಿ ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿ ಆಗಲಿ, ಗಂಡನ ಆಸ್ತಿ ಆಗಲಿ, ಹಕ್ಕು ಇರಲಿಲ್ಲ. ಭಾರತ ದೇಶದಲ್ಲಿ ಇರತಕ್ಕಂತಹ ಪ್ರತಿಯೊಬ್ಬ ಹೆಣ್ಣುಮಕ್ಕಳಿಗೆ ಇವತ್ತು ಗಂಡನ ಆಸ್ತಿ ಅಥವಾ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಸಿಗಬೇಕಾಗಿದ್ರೆ, ಬೇರೆ ಯಾರೂ ಮಾಡಿಲ್ಲ, ಮಾಡಿದ್ದರೆ ಅದು ಬಾಬಾಸಾಹೇಬ್ ಅಂಬೇಡ್ಕರ್‌ಮಾಡಿದ್ದಾರೆ ಎಂಬುವುದನ್ನು ಯಾರು ಮರೆಯಬಾರದು. ಇವತ್ತು ಬಾಬಾ ಸಾಹೇಬ್ ಅಂಬೇಡ್ಕರ್‌ಅವರ ವಿಚಾರ, ಸಂವಿಧಾನ ಉಳಿಬೇಕಾಗಿದ್ರೆ ನಾವೆಲ್ಲರೂ ಇದನ್ನ ಅರ್ಥ ಮಾಡ್ಕೋಬೇಕು. ಇದನ್ನ ಉಳಿಸಬೇಕು. ಅದಕ್ಕೆ ನೀವು ಜಾಗೃತರಾಗಬೇಕು. ಸಮಾಜದಲ್ಲಿ ಬದಲಾವಣೆ ತರಬೇಕು. ಅಂಬೇಡ್ಕರ್‌ವಾದಗಳು ಪಾಲಿಸಬೇಕು. ಗಟ್ಟಿಯಾಗಿ ಬೆಳೆಸಬೇಕು ಎಂದರು.

ಜಿಲ್ಲಾಧಿಕಾರಿ ಸ್ನೇಹಲ್ ಆರ್. ಪ್ರಾಸ್ತಾವಿಕವಾಗಿ ಮಾತನಾಡಿ, ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯ ಸ್ಥಾಪನೆಗೆ ಯುವ ಸಮೂಹ ಹಕ್ಕುಗಳ ಜೊತೆಗೆ ಜವಾಬ್ದಾರಿಗಳನ್ನೂ ಅರಿತುಕೊಳ್ಳಬೇಕು. ಯುವಕರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವುದು ಸಾಕಾಗುವುದಿಲ್ಲ, ಆ ಹಕ್ಕುಗಳ ಜತೆ ಜವಾಬ್ದಾರಿಗಳನ್ನು ಸಹ ತಿಳಿದುಕೊಳ್ಳಬೇಕು ಎಂದರು.

ಪ್ರಜಾಸತ್ತಾತ್ಮಕ ವ್ಯವಸ್ಥೆ ಕೇವಲ ಚುನಾವಣೆಗಳಿಗೆ ಸೀಮಿತವಾಗಿಲ್ಲ, ಅದು ಸಮಾಜದ ಪ್ರತಿಯೊಂದು ಸಂಸ್ಥೆಯಲ್ಲಿಯೂ, ವೈವಿಧ್ಯತೆಯ ಗೌರವದಲ್ಲಿಯೂ ಪ್ರತಿಫಲಿಸಬೇಕು. ಶಿಕ್ಷಣವೇ ಅತ್ಯಂತ ದೊಡ್ಡ ಶಕ್ತಿಯಾಗಿದ್ದು, ವಿದ್ಯಾರ್ಥಿಗಳು ಅಡೆತಡೆ ದಾಟಿ ಸಾಧನೆ ಮಾಡುವುದರಿಂದ ಅಂಬೇಡ್ಕರರ ಕನಸು ಸಾಕಾರಗೊಳ್ಳುತ್ತದೆ ಎಂದರು.

ಪೋಲಿಸ್ ಆಯುಕ್ತ ಎನ್. ಶಶಿಕುಮಾರ ಮಾತನಾಡಿ, ಸ್ವಾತಂತ್ರ್ಯದ ಸಮಯದಲ್ಲಿ ಕೆಲವು ವಿಶ್ವನಾಯಕರು ದೇಶ ದೀರ್ಘಕಾಲ ಅಖಂಡವಾಗಿ ಉಳಿಯುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಸುಮಾರು 8 ದಶಕಗಳ ನಂತರವೂ ಭಾರತ ಸಮಗ್ರವಾಗಿ ಉಳಿದಿದೆ ಅಂದರೆ ಅದಕ್ಕೆ ಕಾರಣ ಡಾ. ಅಂಬೇಡ್ಕರ್‌ರಚಿಸಿದ ಸಂವಿಧಾನ ಎಂದರು. ಹುಬ್ಬಳ್ಳಿ ಜೆ.ಜಿ. ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಮಲ್ಲಮ್ಮ ಯಾಟಗಲ್ ಅವರು ಡಾ. ಅಂಬೇಡ್ಕರ ಬಗ್ಗೆ ಉಪನ್ಯಾಸ ನೀಡಿದರು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಜಗದೀಶ ಹೆಬ್ಬಳ್ಳಿ ಸ್ವಾಗತಿಸಿದರು. ಎಡಿಸಿ ಗೀತಾ ಸಿ.ಡಿ ಸಂವಿಧಾನದ ಪೂರ್ವ ಪೀಠಿಕೆಯನ್ನು ಬೋಧಿಸಿದರು. ಪ್ರವೀಣ ಮಸಕಿ ನಿರೂಪಿಸಿದರು. ಎಂ.ಬಿ. ಸನ್ನೇರಿ ವಂದಿಸಿದರು. ಬೌದ್ಧ ಬಿಕ್ಕುಗಳಿಂದ ಬೌದ್ಧ ನಮನ ಮತ್ತು ಪ್ರಾರ್ಥನೆ ಜರುಗಿತು.

ಕರ್ನಾಟಕ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಅಡಿವೇಶ ಇಟಗಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಕೀರ ಸನದಿ, ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎಸ್. ಆರ್. ಪಾಟೀಲ, ಪ್ರಕಾಶ ಹಳಿಯಾಳ, ಮಾಜಿ ಸಂಸದ ಪ್ರೊ. ಐ.ಜಿ. ಸನದಿ, ಜಿಪಂ ಸಿಇಒ ಭುವನೇಶ ಪಾಟೀಲ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ ಆರ್ಯ,ಎಸಿ ಶಾಲಂ ಹುಸೇನ್, ತಹಸಿಲ್ದಾರ ಡಾ. ಡಿ.ಎಚ್. ಹೂಗಾರ, ತಾ.ಪಂ. ಇಒ ಗಂಗಾಧರ ಕಂದಕೂರ ಉಪಸ್ಥಿತರಿದ್ದರು.

ಸಾಮಾಜಿಕ ನ್ಯಾಯದ ರೂವಾರಿ ಅಂಬೇಡ್ಕರ್

ರಟ್ಟಿಹಳ್ಳಿ ಯಲ್ಲಿ ಅರ್ಥಪೂರ್ಣವಾಗಿ ಡಾ.ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು

ರಟ್ಟಿಹಳ್ಳಿ: ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ತಾಲೂಕಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್‌ಅವರ ಜನ್ಮ ದಿನಾಚರಣೆಯನ್ನು ಅತ್ಯಂತ ಗೌರವ, ಮತ್ತು ಉತ್ಸಾಹಭರಿತವಾಗಿ ಆಚರಿಸಲಾಯಿತು.

ತಾಲೂಕು ಮಟ್ಟದಲ್ಲಿ ಕಚೇರಿಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಘಟನೆಗಳು ಒಂದಾಗಿ ಈ ಮಹತ್ವದ ದಿನವನ್ನು ವಿಶೇಷವಾಗಿ ಸ್ಮರಿಸಿವೆ.

ಪಟ್ಟಣ ಪಂಚಾಯಿತಿ ಆವರಣದಲ್ಲಿ ಅಂಬೇಡ್ಕರ್‌ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಅಧಿಕಾರಿಗಳು ಹಾಗೂ ಗಣ್ಯರು ಮಾತನಾಡಿ, ಅಂಬೇಡ್ಕರ್‌ಅವರ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಶಿಕ್ಷಣದ ಮೂಲಕ ಸಮಾಜ ಪರಿವರ್ತನೆ ಮಾಡುವ ಸಂದೇಶಗಳನ್ನು ಹಂಚಿಕೊಂಡರು.

ಪ್ರಿಯದರ್ಶಿನಿ ಕಾಲೇಜು:

ಇಲ್ಲಿನ ಪ್ರಿಯದರ್ಶಿನಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಂದ ಪ್ರೇರಣಾದಾಯಕ ಕಾರ್ಯಕ್ರಮ ನಡೆದವು. ವಿದ್ಯಾರ್ಥಿಗಳು ಅಂಬೇಡ್ಕರ್‌ಅವರ ಜೀವನ ಸಾಧನೆ, ಹೋರಾಟ, ಕೊಡುಗೆಗಳ ಬಗ್ಗೆ ಭಾಷಣ ಮಾಡಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಬಿಜೆಪಿ ಕಚೇರಿ:

ಬಿಜೆಪಿ ಕಚೇರಿಯಲ್ಲಿ ಮಾಜಿ ಸಚಿವ ಬಿಸಿ ಪಾಟೀಲ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂಬೇಡ್ಕರ್‌ಅವರ ಸಂವಿಧಾನ ರಚನೆಗೆ ನೀಡಿದ ಮಹತ್ವದ ಪಾತ್ರವನ್ನು ಸ್ಮರಿಸಲಾಯಿತು. ಈ ವೇಳೆ ಮಾತನಾಡಿ, ಅಂಬೇಡ್ಕರ್ ಅವರ ಚಿಂತನೆಗಳು ಯುವಜನತೆಗೆ ಮಾರ್ಗದರ್ಶಿಯಾಗಬೇಕು ಎಂದು ಕರೆ ನೀಡಿದರು. ಪಕ್ಷದ ಕಾರ್ಯಕರ್ತರು ಮಹಿಳೆಯರು ಭಾಗವಹಿಸಿದ್ದರು

ಭಜರಂಗದಳ :

ವಿಶ್ವ ಹಿಂದೂ ಪರಿಷತ್ ಮತ್ತು ಭಜರಂಗದಳ ವತಿಯಿಂದ ಕೂಡ ಸರಳ ಆದರೆ ಅರ್ಥಪೂರ್ಣ ಕಾರ್ಯಕ್ರಮ ನಡೆಯಿತು. ಸಂಘಟನೆ ಸದಸ್ಯರು ಅಂಬೇಡ್ಕರ್‌ಅವರ ಸಾಮಾಜಿಕ ಸಮಾನತೆಯ ಸಂದೇಶವನ್ನು ಜನರಿಗೆ ತಲುಪಿಸಿದರು.

ಹಿರೇಕಬ್ಬಾರು ಗ್ರಾಪಂ:

ತಾಲೂಕಿನ ಹಿರೇಕಬ್ಬಾರ್‌ಗ್ರಾಮ ಪಂಚಾಯಿತಿಯಲ್ಲಿಯೂ ಗ್ರಾಮಸ್ಥರು ಒಗ್ಗಟ್ಟಿನಿಂದ ಕಾರ್ಯಕ್ರಮ ಆಯೋಜಿಸಿದ್ದರು. ಅಂಬೇಡ್ಕರ್‌ಅವರ ಸ್ಮರಣಾರ್ಥ ವಿಶೇಷ ಭಾಷಣಗಳನ್ನು ಏರ್ಪಡಿಸಿದರು. ಯುವಕರು ಮತ್ತು ಹಿರಿಯರು ಸೇರಿ ಆಚರಣೆ ಅರ್ಥಪೂರ್ಣಗೊಳಿಸಿದರು.

ದೇಶದ ಸಂವಿಧಾನಕ್ಕೆ ಕೊಡುಗೆ ಅಗಾಧ

ಧಾರವಾಡ: ನಗರದ ಎಸ್ ಡಿಎಂ ಕಾಲೇಜ್ ಆಫ್ ಎಂಜಿನಿಯರಿಂಗ್ ಆಂಡ್ ಟೆಕ್ನಾಲಜಿನಲ್ಲಿ ಡಾ. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಗೌರವಪೂರ್ವಕವಾಗಿ ಆಚರಿಸಲಾಯಿತು. ಡಾ. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರಾಂಶುಪಾಲ ಡಾ. ಆರ್.ಎಲ್. ಚಕ್ರಸಾಲಿ ಮಾತನಾಡಿ, ಡಾ. ಅಂಬೇಡ್ಕರ್ ಅವರು ಭಾರತೀಯ ಸಂವಿಧಾನ ಮತ್ತು ಸಂಸ್ಕೃತಿಗೆ ನೀಡಿದ ಕೊಡುಗೆ ಅಗಾಧ. ನಮ್ಮ ಸಂವಿಧಾನ ಕೇವಲ ದಾಖಲೆಯಲ್ಲ, ಆದರೆ ನೈತಿಕ ಮೌಲ್ಯಗಳು, ಸಾಮಾಜಿಕ ನೈತಿಕತೆ ಮತ್ತು ಮಾನವ ಹಕ್ಕುಗಳು ಮತ್ತು ಕರ್ತವ್ಯಗಳ ಕಾಲಾತೀತ ಮೂಲವಾಗಿದೆ ಎಂದರು.

ಪ್ರೊ. ಕೇಶವ್ ಜೋಶಿ, ಡಾ. ಆನಂದ್ ವೈದ್ಯ ಉಪಸ್ಥಿತರಿದ್ದರು. ಪ್ರೊ. ಎಸ್. ಎಸ್. ಕೆರೂರು ಸ್ವಾಗತಿಸಿದರು. ಡಾ. ಎಸ್.ವಿ. ವಿರ್ಕತಮಠ ವಂದಿಸಿದರು.

ಎಸ್ ಡಿಎಂ ಕಾಲೇಜ್ ಆಫ್ ಎಂಜಿನಿಯರಿಂಗ್ ಆಂಡ್ ಟೆಕ್ನಾಲಜಿನಲ್ಲಿ ಡಾ. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಕಾರ್ಮಿಕ ಹಕ್ಕು ರಕ್ಷಣೆಗೆ ಸಹಿ ಸಂಗ್ರಹ ಚಳವಳಿ

ಅಮರಗೋಳ ಎಪಿಎಂಸಿಯಲ್ಲಿ ಸಿಐಟಿಯು ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ ಅವರ ಜಯಂತಿ ಕಾರ್ಯಕ್ರಮ ನಡೆಯಿತು.

ಹುಬ್ಬಳ್ಳಿ: ರಾಜ್ಯದಲ್ಲಿ ಬೃಹತ್ ಸಂಖ್ಯೆಯ ಸಂಘಟಿತ-ಅಸಂಘಟಿತ-ಯೋಜನಾ ಕಾರ್ಮಿಕರ ಬದುಕನ್ನು ರಕ್ಷಿಸುವ ಜವಾಬ್ದಾರಿ ರಾಜ್ಯ ಸರಕಾರದ ಹೊಣೆಯಾಗಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಮಹೇಶ ಪತ್ತಾರ ಹೇಳಿದರು. ಅಮರಗೋಳ ಎಪಿಎಂಸಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರರ 135ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ವೈಜ್ಞಾನಿಕ ಕನಿಷ್ಠ ವೇತನ ಜಾರಿಗಾಗಿ, ಕಾರ್ಮಿಕ ಹಕ್ಕುಗಳನ್ನು ರಕ್ಷಿಸಿಲು ಒತ್ತಾಯಿಸಿ ಮೇ-30 ರವರೆಗೆ ಸಿಐಟಿಯು ಕರೆ ನೀಡಿರುವ ಸಹಿ ಸಂಗ್ರಹ ಚಳುವಳಿಗೆ ಮಂಗಳವಾರ ಚಾಲನೆ ನೀಡಿ ಮಾಡನಾಡಿದರು. ಕಾರ್ಮಿಕರ ಕುರಿತ ವಿಚಾರಗಳು ಸಂವಿಧಾದ ಸಮವರ್ತಿ ಪಟ್ಟಿಯಲ್ಲಿರುವ ಕಾರಣ, ರಾಜ್ಯ ಸರಕಾರ ಅಧಿಕಾರವನ್ನು ಬಳಸಿಕೊಂಡು ವೈಜ್ಞಾನಿಕ ಕನಿಷ್ಠ ವೇತನವನ್ನು ಜಾರಿಗೆ ತರುವುದು ಸಾಧ್ಯವಿದೆ. ಕೇಂದ್ರ ಸರಕಾರ ಅನುಷ್ಠಾನಕ್ಕೆ ತರುತ್ತಿರುವ ನಾಲ್ಕು ಕಾರ್ಮಿಕ ಕಾಯಿದೆಗಳಲ್ಲಿ ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಪ್ರಸ್ತಾಪಗಳಿವೆ. ಅಗತ್ಯವಾದ ತಿದ್ದುಪಡಿ ಮಾಡಿದ ನಂತರ ರಾಜ್ಯದಲ್ಲಿ ನಿಯಮಾವಳಿ ರೂಪಿಸಲು ಅವಕಾಶವಿದೆ ಎಂದರು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನ್ವಯ ರಾಜ್ಯದ ಕಾರ್ಮಿಕರಿಗೆ ನೀಡಬೇಕಾದ ಕನಿಷ್ಠ ಕೂಲಿಯ ಅಂತಿಮ ಪ್ರಕಟಣೆ ಮಾಡಿರುವುದನ್ನು ತೀವ್ರವಾಗಿ ಖಂಡಿಸಿದರು. ಕೂಡಲೇ ಸರಕಾರ ಅಂತಿಮ ಪ್ರಕಟಣೆ ಹೊರಡಿಸಬೇಕು. ಲೋಡಿಂಗ್ ಅನ್ಲೋಡಿಗ್ ಕಾಮರ್ಘಕರಿಗೂ ಕನಿಷ್ಠ ವೇತನ ಪರಿಷ್ಕರಣೆ ಮಾಡಬೇಕು ಎಂದು ಸರಕಾರಕ್ಕೆ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಗುರುಸಿದ್ದಪ್ಪ ಅಂಬಿಗೇರ, ಬಸವಣ್ಣೆಪ್ಪ ನೀರಲಗಿ, ಮಂಜುನಾಥ ಹುಜರಾತಿ, ಹನಮಂತ ಅಂಬಿಗೇರ, ಸೈಯದಸಾಬ ಗಂಗಾವತಿ, ಮುಡಿಯಪ್ಪ ಸಕ್ರಣ್ಣವರ, ಬಸವರಾಜ ಯಲಜಿ ಉಪಸ್ಥಿತರಿದ್ದರು.

ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್‌ಅವರ 135ನೇ ಜಯಂತಿ ಅಂಗವಾಗಿ ಭಾರತೀಯ ಜನತಾ ಪಕ್ಷದ ಧಾರವಾಡ ನಗರ ಘಟಕದ ವತಿಯಿಂದ ವಿಶೇಷ ಪೂರ್ವ ದಿನ ಕಾರ್ಯಕ್ರಮ ನಗರದ ಬಿಜೆಪಿ ಕಚೇರಿಯಲ್ಲಿ ನಡೆಯಿತು. ನಗರದ ಪೌರಕಾರ್ಮಿಕರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ನಗರ ಸ್ವಚ್ಛತೆ ಮತ್ತು ಅಭಿವೃದ್ಧಿಗೆ ಅವರು ಸಲ್ಲಿಸುತ್ತಿರುವ ಸೇವೆಯನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಕೊಂಡಾಡಲಾಯಿತು. ಡಾ. ಅಂಬೇಡ್ಕರ್‌ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಮಾಜಿ ಶಾಸಕಿ ಸೀಮಾ ಮಸೂತಿ, ಪಾಲಿಕೆ ಸಭಾನಾಯಕ ಈರೇಶ ಅಂಚಟಗೇರಿ, ಮಂಡಲ ಅಧ್ಯಕ್ಷ ಶಂಕರ ಶೆಳಕೆ, ವಿಜಯ್ ಗುಂಟ್ರಾಳ ಇದ್ದರು.

ಎಸ್ಸಿಎಸ್ಟಿ ಮಕ್ಕಳಿಗೆ ವಿದೇಶಿ ಶಿಕ್ಷಣ ಸೌಲಭ್ಯ

ಹುಬ್ಬಳ್ಳಿಯ ಬಿಜೆಪಿ ಕಚೇರಿಯಲ್ಲಿ ಡಾ. ಅಂಬೇಡ್ಕರ್ ಅವರ 135ನೇ ಜನ್ಮ ದಿನದ ಕಾರ್ಯಕ್ರಮ ನಡೆಯಿತು.

ಹುಬ್ಬಳ್ಳಿ: ಡಾ. ಬಿ.ಆರ್.ಅಂಬೇಡ್ಕರ್‌ರವರ 135ನೇ ಜನ್ಮ ದಿನದ ಕಾರ್ಯಕ್ರಮ ಮಂಗಳವಾರ ಬಿಜೆಪಿ ಕಚೇರಿಯಲ್ಲಿ ನಡೆಯಿತು.

ಶಾಸಕ ಮಹೇಶ ಟೆಂಗಿನಕಾಯಿ ಪುಷ್ಪಾರ್ಚನೆ ಮಾಡಿ ಮಾತನಾಡಿ, ದೇಶದಲ್ಲಿ ಅಂಬೇಡ್ಕರ್‌ರವರಿಗೆ ಅತೀ ಹೆಚ್ಚು ಗೌರವ ನೀಡಿದ್ದು ನರೇಂದ್ರ ಮೋದಿಯವರ ಸರಕಾರ. ವಾಜಪೇಯಿ ವಾಲ್ಮೀಕಿ ಅಂಬೇಡ್ಕರ್‌ಆವಾಸ ಯೋಜನೆ ವಸತಿ ರಹಿತರಿಗೆ ವಸತಿ ಕಲ್ಪಿಸುವ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲಾಯಿತು ಎಂದರು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ವ್ಯಾಸಂಗ ಮಾಡಲಿಕ್ಕೆ ಅತೀ ಹೆಚ್ಚಿನ ಅನುದಾನವನ್ನು ನೀಡಿದ ಮೋದಿ ಸರಕಾರ 2014 ರಿಂದ ಈ ಯೋಜನೆ ಪ್ರಾರಂಭಿಸಲಾಯಿತು. ಈ ಎಲ್ಲ ಕೊಡುಗೆ ನೀಡಿದ್ದು ಪ್ರಧಾನಿ ಮೋದಿ ಎಂದರು.

ಅಂಬೇಡ್ಕರ್ ರವರು ತೀರಿದ ಬಳಿಕ ಕಾಂಗ್ರೆಸ್ ನವರು ಅವರಿಗೆ ಬಹಳ ಅನ್ಯಾಯ ಮಾಡಿದರು. ಅಂಬೇಡ್ಕರ್ ಸಮಾಧಿಗೂ ಜಾಗ ನೀಡಲಿಲ್ಲವೆಂದರು.

ಹನುಮಂತ ಹರಿವಾಣ, ಅನುಪ ಬಿಜವಾಡ, ಮಂಜುನಾಥ ಬಿಜವಾಡ, ಸುಭಾಸ ಅಂಕಲಕೋಟ, ವಸಂತ ನಾಡಜೋಶಿ, ಶಿವು ಮೆಣಸಿನಕಾಯಿ, ಲಕ್ಷ್ಮಣ ಬಿಳಗಿ, ಮಂಜುನಾಥ ಕಾಟಕರ, ರಾಜು ಜರತಾರಘರ, ರಾಜು ಕೋರ್ಯಾಣಮಠ, ಕಿಟ್ಟು ಬಿಜವಾಡ, ವೆಂಕಟೇಶ ಕಾಟವೆ, ಅರುಣ ಹುದಲಿ, ನಾಗರಾಜ ಟಗರಗುಂಟಿ, ಡಾ. ರವೀಂದ್ರ ಯಲಕಾನ, ರೇಣುಕಪ್ಪ ಕೆಲೂರ, ಪ್ರಮೋದ ಬಿಜವಾಡ, ಜಶವಂತ ಜಾಧವ, ಪ್ರಕಾಶ್ ಸಣ್ಣಕ್ಕಿ, ಹನುಮಂತ ಯರಗುಂಟಿ, ಗುರುನಾಥ ಮೊರಬದ, ವಿನಾಯಕ ಲಕ್ಕುಂಡಿ, ಶಿವುಕುಮಾರ್‌ಹಿರೇಮಠ, ಮಂಜುನಾಥ ಚಿಂತಗಿಂಜಲ್, ಅಮೃತ ಕಲ್ಪವೃಕ್ಷ, ನೀಲಕಂಠ ತಡಸದಮಠ, ಬಸೀರ ಗಿರಣಿ ಉಪಸ್ಥಿತರಿದ್ದರು.

ಜೆಎಸ್‌ಎಸ್ ಸಂಸ್ಥೆಯಲ್ಲಿ ಡಾ. ಅಂಬೇಡ್ಕರ್ ಜಯಂತಿ | ಸಂಸ್ಥೆ ಕಾರ್ಯದರ್ಶಿ ಡಾ. ಅಜಿತ್ ಪ್ರಸಾದ್

ಸ್ವಾತಂತ್ರ್ಯ, ಸಮಾನತೆ, ಶಿಕ್ಷಣ, ನ್ಯಾಯದ ದೀಕ್ಷೆ

ವಿಶ್ವವಾಣಿ ಸುದ್ದಿಮನೆ, ಧಾರವಾಡ:

ಡಾ. ಬಿ.ಆರ್. ಅಂಬೇಡ್ಕರ್‌ಭಾರತೀಯ ಸಂವಿಧಾನ ಶಿಲ್ಪಿ, ಸಮಾಜ ಸುಧಾರಕರೂ, ಅರ್ಥ ಶಾಸ್ತ್ರಜ್ಞರೂ, ದಲಿತ ಸಮುದಾಯದ ನಾಯಕಾರಾಗಿದ್ದರು. ಅಸ್ಪೃಶ್ಯತೆ ಮತ್ತ ಜಾತಿ ಪದ್ಧತಿಯ ವಿರುದ್ಧ ಹೋರಾಡಿದ ಅವರು ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಜೆಎಸ್‌ಎಸ್ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಹೇಳಿದರು.

ಜನತಾ ಶಿಕ್ಷಣ ಸಮಿತಿಯಲ್ಲಿ ಶ್ರೀ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಸಂಸ್ಥೆ, ಐ.ಟಿ.ಐ ಕಾಲೇಜು ಮತ್ತು ಎಂ.ಸಿ.ಎ ಕಾಲೇಜು ಸಂಯುಕ್ತಾಶ್ರಯದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಡಾ. ಭೀಮರಾವ್ ಅಂಬೇಡ್ಕರ್135ನೇ ಜಯಂತಿಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಸಮಾಜದ ಸರ್ವ ಸಮುದಾಯದ ಜನರಿಗೂ ಸಮಾನವಾದ ನ್ಯಾಯ ದೊರಕಿಸಿ ಸಮಾನತೆ, ಸ್ವಾತಂತ್ರ್ಯ ಮತ್ತು ಶಿಕ್ಷಣಕ್ಕಾಗಿ ಹೋರಾಡಿದ ಅಪ್ರತಿಮ ಸಮಾಜ ಸುಧಾರಕ. ದಲಿತರ ದನಿಯಾಗಿ, ಸ್ವಾತಂತ್ರ್ಯ ಪೂರ್ವ ಹಾಗೂ ನಂತರ ದಿನಗಳಲ್ಲಿ ಸತತವಾಗಿ ಹೋರಾಟ ಮಾಡಿ ಸ್ವತಂತ್ರ ಭಾರತಕ್ಕೆ ಸಂವಿಧಾನ ರಚಿಸಿಕೊಟ್ಟ ಅವರ ಕೊಡುಗೆ ಅವಿಸ್ಮರಣಿಯ ಎಂದು ತಿಳಿಸಿದರು.

ಧಾರವಾಡದ ಜನತಾ ಶಿಕ್ಷಣ ಸಮಿತಿಯ ಶ್ರೀ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಸಂಸ್ಥೆಯಲ್ಲಿ ಡಾ. ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ನಡೆಯಿತು.

ಅಂಬೇಡ್ಕರ ಮಹಾಡ್ ಸತ್ಯಾಗ್ರಹ, ಕಲಾರಾಮ್ ದೇವಾಲಯ ಪ್ರವೇಶ ಚಳವಳಿಗಳ ಮೂಲಕ ಅಸ್ಪೃಶ್ಯರ ಹಕ್ಕುಗಳಿಗಾಗಿ ಹೋರಾಡಿದರು. ಬಹಿಷ್ಕೃತ ಭಾರತ, ಹಿತಕಾರಿಣಿ ಸಭಾ ಸ್ಥಾಪನೆ ಮತ್ತು ಮೂಕನಾಯಕ, ಬಹಿಕೃತ ಭಾರತ ಎಂಬ ಪತ್ರಿಕೆಗಳ ಮೂಲಕ ದಲಿತರ ಧ್ವನಿಯಾದರು. ಅಷ್ಟೆ ಅಲ್ಲದೇ ಕಾರ್ಮಿಕರ ಕೆಲಸದ ಅವಧಿ ಕಡಿತ, ಹೆರಿಗೆ ರಜೆ ಮತ್ತು ಮಹಿಳಾ ಸಮಾನ ಹಕ್ಕುಗಳಿಗಾಗಿ ಶ್ರಮಿಸಿದರು. ಅಂದಿನ ಅವರ ದೂರ ದೃಷ್ಠಿಯ ಚಿಂತನೆಗಳು ಇಂದಿಗೂ ನಮಗೆ ದಾರಿದೀಪವಾಗಿವೆ ಎಂದರು. ಡಾ. ಆರ್.ವಿ. ಚಿಟಗುಪ್ಪಿ ಮಾತನಾಡಿ, ಶೋಷಿತರು ಸಮಾಜದಲ್ಲಿ ಒಳ್ಳೆಯ ಜೀವನ ನಡೆಸುತ್ತಿದ್ದಾರೆ ಎಂದರೆ ಅದಕ್ಕೆ ಅಂಬೇಡ್ಕರವರ ಹೋರಾಟವೇ ಕಾರಣ, ಸಮಾಜದಲ್ಲಿ ಸಮಾನತೆ ತರಬೇಕಾದರೆ ಎಲ್ಲರಿಗೂ ಶಿಕ್ಷಣ ದೊರೆಯುವಂತಾಗಬೇಕು. ಇವರು ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಿಂದ ಡಾಕ್ಟರೇಟ್ ಪದವಿ ಪಡೆದ ಮೇಧಾವಿ ಎಂದರು. ಶಿಕ್ಷಿತ ಸಮಾಜ, ದೇಶದ ಅಭಿವೃದ್ಧಿಗೆ ಪೂರಕವಾಗಬಲ್ಲದು. ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ನೀಡಿ ಅವರಿಗೆ ಸಮಾಜದಲ್ಲಿ ಗೌರವದಿಂದ ಜೀವನ ನಡೆಸುವಂತೆ ಮಾಡಿದ ಡಾ. ಬಿ.ಆರ್‌ಅಂಬೇಡ್ಕರರ ಇಂತಹ ಹಲವಾರು ಚಿಂತನೆಗಳು ದೇಶದ ಅಭಿವೃದ್ಧಿಗೆ ಪೂರಕವಾಗಿದ್ದವು. ಸರ್ವರಿಗೂ ಶಿಕ್ಷಣ, ಆರ್ಥಿಕ ಪರಿಸ್ಥಿತಿ ಸುಧಾರಣೆ, ಖಿನ್ನತೆಗೆ ಒಳಗಾದ ವರ್ಗಗಳ ಕುಂದು ಕೊರತೆ ನಿವಾರಣೆ ಇವರ ಮೂಲ ಉದ್ದೇಶವಾಗಿತ್ತು ಎಂದರು. ಇದೇ ಸಂದರ್ಭದಲ್ಲಿ ಐಟಿಐ ಕಾಲೇಜ ಪ್ರಾಚಾರ್ಯ ಮಹಾವೀರ ಉಪಾಧ್ಯೆ ವಂದಿಸಿದರು. ಜ್ಯೋತಿ ಅಕ್ಕಿ, ಶೃತಿ ಶೆಟ್ಟಿ, ರೋನಿಲ್ ಮನೋಹರ್, ಶಿಲ್ಪಾ ನಾಯಕ್, ಮುರಳಿಧರ್ ಹೆಗಡೆ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಗುಂಡು ಹೊಡೆದು ಗ್ರಾಪಂ ಸದಸ್ಯನ ಕೊಲೆ

ವಿಜಯಪುರ: ಜಿಲ್ಲೆಯಲ್ಲಿ ಮತ್ತೆ ಗುಂಡಿನ ಸದ್ದು ಮೊಳಗಿದ್ದು, ಗ್ರಾಪಂ ಸದಸ್ಯನನ್ನು ದುಷ್ಕರ್ಮಿಗಳು ಶೂಟ್ ಮಾಡಿ ಕೊಲೆ ಮಾಡಿದ್ದಾರೆ. ವಿಜಯಪುರ

ನಗರದ ಹೊರ ವಲಯದ ಅಲಿಯಾಬಾದ ಬಳಿ ಗ್ರಾಮ ಪಂಚಾಯತಿ ಸದಸ್ಯ ರಾಜು ಕುರಿ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ, ಕಲ್ಲು ಎತ್ತಿ ಹಾಕಿ ಭೀಕರವಾಗಿ ಹತ್ಯೆ ಮಾಡಿದ್ದಾರೆ. ರಾಜು ಕುರಿ ಥಾರ್ ವಾಹನದಲ್ಲಿ ಬರುವುದನ್ನು ಗಮನಿಸಿದ ದುಷ್ಕರ್ಮಿಗಳು ಮೊದಲು ಥಾರ್ ವಾಹನಕ್ಕೆ ಟಿಪ್ಪರ್ ಮೂಲಕ ಡಿಕ್ಕಿ ಹೊಡೆಸಿದ್ದಾರೆ. ಬಳಿಕ ಕಾರಿನ ಮೇಲೆ ಮನಬಂದಂತೆ ಗುಂಡಿನ ದಾಳಿ ನಡೆಸಿದ್ದಾರೆ. ಕಾರ್ ಡೋರ್ ಓಪನ್ ಆಗದೆ ಇರದ ಹಿನ್ನೆಲೆ ಕಲ್ಲುಗಳ ಎತ್ತಿ ಹಾಕಿ ಕಾರಿನ ಗ್ಲಾಸ್ ಒಡೆದ ಹಂತಕರು ರಾಜು ಎಂಬಾತನನ್ನು ಭೀಕರವಾಗಿ ಹತ್ಯ ಮಾಡಿದ್ದಾರೆ. ಹಳೆಯ ವೈಷಮ್ಯ ಹತ್ಯೆಗೆ ಕಾರಣ ಎಂದು ಶಂಕಿಸಲಾಗಿದೆ. ಸ್ಥಳಕ್ಕೆ ಎಸ್ಪಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದೆ.

ನೀರಾನೆ ಹಂಸಿಣಿ ಸಾವು



ಶಿವಮೊಗ್ಗ: ಇಲ್ಲಿನ ತ್ಯಾವರೆಕೊಪ್ಪ ಹುಲಿ ಸಿಂಹ ಧಾಮದಲ್ಲಿ ತರಬೇತಿ ನಿರತ ಪಶು ವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಅವರ ಸಾವಿಗೆ ಕಾರಣವಾಗಿದ್ದ ನೀರಾನೆ 'ಹಂಸಿಣಿ' ಮಂಗಳವಾರ ಅನಾರೋಗ್ಯದಿಂದ ಮೃತಪಟ್ಟಿದೆ. ಗರ್ಭಾಶಯದ ಸೋಂಕಿನಿಂದ ಬಳಲುತ್ತಿದ್ದ ಹಂಸಿಣಿ ಚಿಕಿತ್ಸೆ ಫಲಕಾರಿಯಾಗದೇ ಸಾವಿಗೀಡಾಗಿದೆ.ಮೃತ ಹಂಸಿಣಿ ಗರ್ಭ ಧರಿಸಿದ್ದು, ಎಂಟು ತಿಂಗಳ ಗರ್ಭಧಾರಣೆಯ ಅವಧಿಯು ಮಾರ್ಚ್ ಮಧ್ಯಭಾಗದಲ್ಲೇ ಪೂರ್ಣಗೊಂಡಿದ್ದರೂ, ಅದರಲ್ಲಿ ಪ್ರಸವದ ಯಾವುದೇ ಲಕ್ಷಣಗಳು ಕಂಡುಬಂದಿರಲಿಲ್ಲ. ಭ್ರೂಣ ಹೊಟ್ಟೆಯಲ್ಲಿಯೇ ಮೃತಪಟ್ಟಿತ್ತು. ಕಳೆದ ಕೆಲವು ದಿನಗಳಿಂದ ಆಹಾರ ಸೇವನೆ ಕಡಿಮೆ ಮಾಡಿ ಮಂದಗತಿಯಲ್ಲಿ ವರ್ತಿಸುತ್ತಿದ್ದ ಕಾರಣ, ಏಪ್ರಿಲ್ 10ರಂದು ಮೈಸೂರಿನ ಕರ್ನಾಟಕ ಮೃಗಾಲಯ ಪ್ರಾಧಿಕಾರದ ವನ್ಯಜೀವಿ ಪಶುವೈದ್ಯರ ತಂಡ ನೀರಾನೆಯ ಆರೋಗ್ಯದ ತಪಾಸಣೆ ನಡೆಸಿತ್ತು. ಈ ವೇಳೆ ಅದರ ಗರ್ಭಾಶಯದಲ್ಲಿ ಗಂಭೀರವಾದ ಸೋಂಕು ಇರುವುದು ಪತ್ತೆಯಾಗಿತ್ತು. ಗರ್ಭಾಶಯದ ಒಳಗಿನ ಭ್ರೂಣದ ಸಾವಿನಿಂದ ಈ ಸೋಂಕು ಉಂಟಾಗಿದ್ದು, ಇದು ಬಹು ಅಂಗಾಂಗಗಳ ವೈಫಲ್ಯಕ್ಕೆ ಕಾರಣವಾಗಿ ನೀರಾನೆ ಮೃತಪಟ್ಟಿದೆ ಎಂದು ಹುಲಿ ಸಿಂಹಧಾಮದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಮರಾಕ್ಷರ ತಿಳಿಸಿದ್ದಾರೆ.

ಏ.30ರಿಂದ ದ್ವಿತೀಯ ಪಿಯುಸಿ ಪರೀಕ್ಷೆ-2



ಬೆಂಗಳೂರು: 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-2 ಏ.30ರಿಂದ ಆರಂಭವಾಗಲಿದ್ದು, ಪರೀಕ್ಷೆಗೆ ಈಗಾಗಲೇ ನೋಂದಣಿ ಆರಂಭವಾಗಿದ್ದು, ಏ.17ರವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ. 2026ರಲ್ಲಿ ರೆಗ್ಯೂಲರ್ ವಿದ್ಯಾರ್ಥಿಗಳಾಗಿ ನೋಂದಾಯಿಸಿಕೊಂಡು ಮತ್ತು ಮೊದಲನೇ ಪರೀಕ್ಷೆಯಲ್ಲಿ ಫಲಿತಾಂಶ ಪೂರ್ಣಗೊಳಿಸದ ವಿದ್ಯಾರ್ಥಿಗಳು ಯಾವುದೇ ಶುಲ್ಕ ಪಾವತಿಸದೆ ಪರೀಕ್ಷೆ-2ಕ್ಕೆ ನೋಂದಾಯಿಸಿಕೊಳ್ಳುವ ಅವಕಾಶ ಕಲ್ಪಿಸಲಾಗಿದೆ. ರಾಜ್ಯದ ಎಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ವಿದ್ಯಾಥಿಗಳಿಗೆ ಮಾರ್ಗದರ್ಶನ ನೀಡಿ ಪರೀಕ್ಷೆ-2ಕ್ಕೆ ನೋಂದಾಯಿಸ 'ಏವುದು. ದ್ವಿತೀಯ ಪಿಯುಸಿ ಪರೀಕ್ಷೆ-2ಕ್ಕೆ ನೋಂದಾಯಿಸಿಕೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರವೇಶಪತ್ರಗಳನ್ನು ನಿಗಧಿತ ಸಮಯದಲ್ಲಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳ ಲಾಗಿನ್ ನಲ್ಲಿ ಲಭ್ಯಗೊಳಿಸಲಾಗುವುದು. ವಿದ್ಯಾರ್ಥಿಗಳು ಆನ್ ಲೈನ್ ನೊಂದಾಯಿಸಿಕೊಳ್ಳಬಹುದು ಅಥವಾ ಅಭ್ಯರ್ಥಿಗಳು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರನ್ನು ಸಂಪರ್ಕಿಸಿ ಪಿಯು ಪರೀಕ್ಷಾ ಪೋರ್ಟಲ್ ನಲ್ಲಿ ಪರೀಕ್ಷೆಗೆ ನೋಂದಾಯಿಸಿಕೊಳ್ಳಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಲಾರಿಗೆ ಬಸ್ ಡಿಕ್ಕಿ: ಇಬ್ಬರು ಸಾವು

ತುಮಕೂರು: ಟೈರ್ ಬ್ಲಾಸ್ ಆಗಿ ನಿಂತ ಲಾರಿಗೆ ಕೆಎಸ್ ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಬಸ್ ಚಾಲಕ ಸೇರಿ ಇಬ್ಬರು ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಶಿರಾ ತಾಲೂಕಿನ ತಾವರೆಕೆರೆಯ ದ್ವಾರಾಳು ಬ್ರಿಡ್ಜ್ ಬಳಿ ಹೆದ್ದಾರಿ 48ರಲ್ಲಿ ನಡೆದಿದೆ. ಶ್ರೀಕಾಂತ್(35), ಹಿರಿಯೂರು ಮೂಲದ ರೇಣುಕಮ್ಮ(59) ಮೃತರು. ಅಪಘಾತ ಸಂಬಂಧ ತಾವರೆಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೆದ್ದಾರಿಯಲ್ಲಿ ವೇಗವಾಗಿ ತೆರಳುತಿದ್ದ ಲಾರಿಯ ಟೈರ್ ಸ್ಫೋಟವಾಗಿ ರಸ್ತೆಯಲ್ಲೇ ನಿಂತಿದೆ. ಈ ವೇಳೆ ಹಿಂದೆಯೇ ಬರುತ್ತಿದ್ದ ಸರಕಾರಿ ಬಸ್, ಲಾರಿಗೆ ಡಿಕ್ಕಿ ಹೊಡೆದಿದೆ. 33 ಪ್ರಯಾಣಿಕರಿಗೆ ಗಾಯಗಳಾಗಿದ್ದು, ತಾಲೂಕು ಮತ್ತು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಮೃತದೇಹಗಳನ್ನು ಮರಣೋತ್ತರ ಪರಿಕ್ಷೆಗೆ ರವಾನಿಸಿದ್ದು, ಮೃತರ ಕುಟುಂಬಕ್ಕೆ ಪೊಲೀಸರು ಮಾಹಿತಿ ನೀಡಿದ್ದಾರೆ.

ದಾವಣಗೆರೆಯಲ್ಲಿ ಮುಸ್ಲಿಮರಿಗೆ ಟಿಕೆಟ್ ಕೇಳಿದ್ದರಲ್ಲಿ ಮುಚ್ಚುಮರೆ ಏನಿಲ್ಲ: ಜಮೀರ್

ನಾನು ಸಮುದಾಯದ ಸುಪ್ರೀಂ ಲೀಡರ್ ಅಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾನು ಮುಸ್ಲಿಂ ಸಮುದಾಯದ ಸುಪ್ರೀಂ ಲೀಡರ್ ಅಲ್ಲ. ದಾವಣಗೆರೆಯಲ್ಲಿ ಮುಸ್ಲಿಮರಿಗೆ ಟಿಕೆಟ್ ಕೇಳಿದ್ದರಲ್ಲಿ ಮುಚ್ಚುಮರೆ ಏನಿಲ್ಲ. ದಾವಣಗೆರೆಯಲ್ಲಿ ನನ್ನ ಕೆಲಸ ನಿಭಾಯಿಸಿದ್ದೇನೆ ಎಂದು ಸಚಿವ ಜಮೀರ್ ಅಹ್ಮದ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಾನು ಲೀಡರ್ ಆಗಲು ಹೊರಟಿಲ್ಲ. ಮುಂದೆಯೂ ಲೀಡರ್ ಆಗೋಕೆ ಹೋಗಲ್ಲ. ನಾನೊಬ್ಬ ಸೇವಕ, ಸೇವೆ ಮಾಡುತ್ತಿದ್ದೇನೆ ಅಷ್ಟೇ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತ. ದಾವಣಗೆರೆಯಲ್ಲಿ ಮುಸ್ಲಿಮರಿಗೆ ಟಿಕೆಟ್ ಕೇಳಿದರಲ್ಲಿ ಮುಚ್ಚುಮರೆ ಏನಿಲ್ಲ. ನಾನು ಯಾವುದೇ ಮುಚ್ಚುಮರೆ ಮಾಡಿಲ್ಲ. ಬಹಿರಂಗವಾಗಿಯೇ, ನಾನು ಕೆಪಿಸಿಸಿ ಸಭೆಯಲ್ಲಿ ಹೇಳಿದ್ದೆ. ನಾನು ಜಬ್ಬಾರ್ ಹೆಸರು ಹೇಳಿಲ್ಲ, ಜಬ್ಬಾರ್ ಬದಲು ಏಳು ಮಂದಿ ಮುಸ್ಲಿಮರಿಗೆ ಯಾರಿಗಾದರೂ ಕೊಡಿ ಅಂದಿದ್ದೆ. ಶಿಗ್ಗಾವಿಯನ್ನು ಕೇಳಿ ಪಡೆದೆವು. ದಾವಣಗೆರೆಯಲ್ಲೂ ಯಾರಿಗಾದರೂ ಕೊಡಿ, ನಾವು ಗೆಲ್ಲಿಸಿಕೊಂಡು ಬರುತ್ತೇವೆ ಎಂದು ಸಭೆಯಲ್ಲಿ ಬಹಿರಂಗವಾಗಿಯೇ ಡಿ.ಕೆ.ಶಿವಕುಮಾರ್ ಮುಂದೆ ಹೇಳಿದ್ದೇನೆ. ಗೆಲ್ಲಿಸಿಕೊಂಡು ಬರಲಿಲ್ಲ ಅಂದರೆ ರಾಜೀನಾಮೆ ಕೊಡುತ್ತೇನೆ ಎಂದೂ ಹೇಳಿದ್ದೆ. ನಾವು ಮುಚ್ಚುಮರೆ ಇಲ್ಲದೇ ಮಾತನಾಡಿದ್ದೇವೆ ಎಂದರು.

ಎಲ್ಲರಿಗೂ ಸಚಿವರಾಗುವ ಆಸೆ ಇರುವುದು ಸಹಜ. ಎಲ್ಲರೂ ಪ್ರಯತ್ನ ಮಾಡುತ್ತಾರೆ. ನನಗೂ ಸಚಿವ ಆಗಬೇಕು ಅಂತ ಆಸೆ ಇತ್ತು. ಈಗ ನಾನು ಸಚಿವನಾಗಿದ್ದೇನೆ. ನನ್ನ ವಿರುದ್ಧ ಷಡ್ಯಂತ್ರ ನಡೆದಿದೆ ಎಂದು ಕೆಲವರು ಹೇಳುತ್ತಿದ್ದಾರೆ. ರಾಜಕೀಯದಲ್ಲಿ ಇದೆಲ್ಲ ಸಹಜ. ಅವರವರ ಪ್ರಯತ್ನ ಅವರು ಮಾಡುತ್ತಾರೆ. ಅವರು ಸಚಿವರಾದರೆ ನನಗೂ ಸಂತೋಷ.

– ಜಮೀರ್ ಅಹ್ಮದ್, ಸಚಿವ

ಸುದ್ದಿಗೋಷ್ಠಿ ಮಾಡಿರುವವರು ಯಾರಾದರೂ ಹೆಸರು ಹೇಳಿದ್ದಾರಾ? ಅಲ್ಲಿ ಮುಸಲ್ಮಾನರ ಅಸಮಾಧಾನ ಇದ್ದಿದ್ದು ನಿಜ. ಮುಸ್ಲಿಮರಿಗೆ ಟಿಕೆಟ್ ಕೇಳಿದ್ದರೂ ಟಿಕೆಟ್ ಕೊಟ್ಟಿಲ್ಲ ಅನ್ನೋ ಅಸಮಾಧಾನವಿತ್ತು. ಅದು ಸರಿ ಹೋಗಿ ಪಕ್ಷದ ಅಭ್ಯರ್ಥಿಯಾಗಿ ಸಮರ್ಥ್ ಅವರಿಗೆ ಅವಕಾಶ ಕೊಟ್ಟರು. ಈಗ ನಾವು ಅಲ್ಲಿ ಗೆದ್ದೇ ಗೆಲ್ತೇವೆ. ನಾನೊಬ್ಬ ಸಾಮಾನ್ಯ ಕಾರ್ಯಕರ್ತ. ಜಬ್ಬಾರ್ ಅವರು ಮೊದಲು ಟಿಕೆಟ್ ಕೇಳಿದ್ದು ಸರಿ. ಆದರೆ, ತೀರ್ಮಾನ ಮಾಡಬೇಕಾಗಿರೋದು ಹೈಕಮಾಂಡ್. ಜಬ್ಬಾರ್‌ಗೆ ಕೊಡೋದಕ್ಕೆ ಆಗಲ್ಲ ಅಂತ ಹೈಕಮಾಂಡ್ ಚಿಂತನೆ ಮಾಡ್ತಾ ಇದೆ ಅಂದಾಗ ಯಾರಿಗಾದರೂ ಕೊಡಿ ಅಂತ ಹೇಳಿದ್ದೇವೆ. ಜಬ್ಬಾರ್ ಅವರು ಎಂಎಲ್‌ಸಿ ಇದ್ದಾರೆ. ಅವರಿಗೆ ಕೇಳೋದು ಸರಿ ಅಲ್ಲ ಅಂತ ಆದ್ಮೇಲೆ ಬೇರೆಯವರಿಗೆ ಅವಕಾಶ ಕೊಡಿ ಅಂತ ಕೇಳಿದ್ದೇವೆ ಎಂದರು.

ಜಬ್ಬಾರ್ ಮನೆಗೆ ಹೋಗಬೇಕಿತ್ತು: ದಾವಣಗೆರೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ವಿಚಾರವಾಗಿ ಪ್ರತಿಕ್ರಿಯಿಸಿ, ಮಲ್ಲಿಕಾರ್ಜುನ್ ಅವರು ನಮ್ಮ ಪಕ್ಕದ ಮನೆಗೆ ಬಂದು ನಮ್ಮ ಮನೆಗೆ ಬಂದಿಲ್ಲ ಅಂತಾ ಜಬ್ಬಾರ್ ಹೇಳಿದ್ದರು. ನಾನು ಸ್ಥಳೀಯ ನಾಯಕರೊಂದಿಗೆ ಇದ್ದವನು. ನಮ್ಮ ಮನೆಗೆ ಕನಿಷ್ಠ ಬರಬೇಕಿತ್ತು ಎಂದು ಜಬ್ಬಾರ್ ಬೇಸರವಾದರು. ಜತೆಗೆ ಅವರ ಆರೋಗ್ಯ ಕೂಡ ಚೆನ್ನಾಗಿರಲಿಲ್ಲ. ನಾನು ಕೂಡ ಜಬ್ಬಾರ್ ಜತೆ ಮಾತನಾಡಿ, ಹೋಗಿ ಕೆಲಸ ಮಾಡಿ ಅಂತ ಹೇಳಿದ್ದೆ ಎಂದು ತಿಳಿಸಿದರು.

ನಜೀರ್ ಅಹ್ಮದ್ ಅವರಿಗೆ ಬಾಗಲಕೋಟೆಯಲ್ಲಿ ಜವಾಬ್ದಾರಿ ಕೊಟ್ಟಿದ್ದರು. ನಾನು ದಾವಣಗೆರೆಗೆ ಬಂದು ಹೋಗುತ್ತೇನೆ ಎಂದು ನಸೀರ್ ಸಿಎಂ ಅವರಿಗೆ ಹೇಳಿದ್ದರು. ಅಲ್ಪಸಂಖ್ಯಾತರ ಎಲ್ಲರೂ ಒಗ್ಗಟ್ಟಾಗಿ ಇದ್ದೇವೆ. ಯಾರು ಷಡ್ಯಂತ್ರ ಮಾಡಿದ್ದಾರೆ, ಯಾರು ಬೆನ್ನಿಗೆ ಚೂರಿ ಹಾಕಿದ್ದಾರೆ ಅನ್ನೋದನ್ನು ಹೆಸರು ಹೇಳಲಿ. ನನಗೆ ಹೈಕಮಾಂಡ್‌ನಿಂದ ಸ್ಟಾರ್ ಕ್ಯಾಂಪೇನರ್ ಆಗಿ ಕೇರಳಕ್ಕೆ ಹಾಕಿದ್ದರು. ಆದರೂ ಮುಖ್ಯಮಂತ್ರಿಗಳು ಕರೆದಿದ್ದಕ್ಕೆ ಒಂದು ದಿನ ದಾವಣಗೆರೆಗೆ ಬಂದಿದ್ದೇನೆ. ಮಲ್ಲಿಕಾರ್ಜುನ್ ಮನೇಲಿ ಊಟ ಮಾಡಿದ್ದೇನೆ. ಪ್ರೆಸ್‌ಮೀಟ್ ಮಾಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಪ್ರಧಾನಿ ಮೋದಿ ಸ್ವಾಗತಕ್ಕೆ ಮೈಸೂರು ಪೇಟ ಸಜ್ಜು

ಮೈಸೂರು: ಮಂಡ್ಯದ ಆದಿಚುಂಚನಗಿರಿ ಮಠದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಲು ಏ.15 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸಲಿದ್ದಾರೆ. ಈ ವೇಳೆ ಮೈಸೂರು ಪೇಟ ತೊಡಿಸಿ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಲು ಸಿದ್ಧತೆ ನಡೆದಿವೆ.

ಮೋದಿ ಅವರ ಸ್ವಾಗತಕ್ಕೆ ಕಲಾವಿದ ನಂದನ್ ಸಿಂಗ್ ತಯಾರು ಮಾಡಿರುವ ಪೇಟ.

ಆದಿಚುಂಚನಗಿರಿ ಮಠದಲ್ಲಿ 80 ಕೋಟಿ ರು. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಬಾಲಗಂಗಾಧರನಾಥ ಸ್ವಾಮೀಜಿ ಅವರ ಭೈರವೈಕ್ಯ ಮಂದಿರನ್ನು ಪ್ರಧಾನಿ ಅವರು ಉದ್ಘಾಟನೆ ಮಾಡಲಿದ್ದಾರೆ.

ನಾಲ್ವಡಿ ಒಡೆಯರ್ ಮಾದರಿಯ ಪೇಟ ಗಿಫ್ಟ್: ಪ್ರಧಾನಿ ನರೇಂದ್ರ ಮೋದಿ ಅವರು ಆದಿಚುಂಚನಗಿರಿ ಶ್ರೀ ಮಠಕ್ಕೆ ಭೇಟಿ ನೀಡುವ ವೇಳೆ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಧರಿಸುತ್ತಿದ್ದ ಮಾದರಿಯ ಪೇಟವನ್ನು ಉಡುಗೊರೆಯಾಗಿ ನೀಡಲು ಸಿದ್ಧತೆ ನಡೆದಿದೆ. ಬನಾರಸ್ ಸೀರೆ, ಮೋಲ್ಡ್ ಬಳಸಿ ಪೇಟ ತಯಾರಿಸಲಾಗಿದೆ. ಕಲಾವಿದ ನಂದನ್ ಸಿಂಗ್ ಅವರು ಈ ಪೇಟವನ್ನು ಸಿದ್ಧಗೊಳಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಧರಿಸುತ್ತಿದ್ದ ಮಾದರಿಯ ಪೇಟ ಇದಾಗಿದ್ದು, ಕೆಂಪು ವರ್ಣದ ಮೈಸೂರು ರೇಷ್ಮೆ, ಬನಾರಸ್ ಸಾಫ್ಟ್ ಸಿಲ್ಕ್ ಅನ್ನು ಬಳಸಲಾಗಿದೆ. ಮಧ್ಯದಲ್ಲಿ ಮೈಸೂರಿನ ರಾಜ ಲಾಂಛನ ಗಂಡುಬೇರುಂಡವನ್ನು ಸೇರಿಸಲಾಗಿದೆ. ಎರಡೂಕಡೆ ಸಣ್ಣ ಸಣ್ಣ ಮುತ್ತುಗಳನ್ನು ಪೋಣಿಸಲಾಗಿದೆ. ಇದಕ್ಕಾಗಿ ಕಲಾವಿದ ನಂದನ್ ಸಿಂಗ್ 5 ದಿನಗಳ ಕಾಲ ಶ್ರಮಿಸಿದ್ದಾರೆ.

ಲವ್ ಜಿಹಾದ್ ಆರೋಪಿಗೆ ಮಟ್ಕಾ ಬುಕ್ಕಿಗಳಿಂದ ಆರ್ಥಿಕ ಸಹಾಯ

ಕೊಪ್ಪಳ: ಜಿಲ್ಲೆಯಲ್ಲಿ ಕೇಳಿಬಂದಿದ್ದ ಲವ್ ಜಿಹಾದ್ ಆರೋಪ ಪ್ರಕರಣ ದಿನಕ್ಕೊಂದು ಟ್ವಿಸ್ಟ್ ಪಡೆದುಕೊಳ್ಳುತ್ತಿದೆ. ಆರೋಪಿ ಮುಸ್ತಾಫಗೆ ಅಂತರಾಜ್ಯದವರ ಜತೆ ಲಿಂಕ್ ಇರುವುದು ಗೊತ್ತಾಗಿದ್ದು, ಆರ್ಥಿಕ ಸಹಾಯ ಪಡೆದಿದ್ದ ಎಂದು ಬೆಳಕಿಗೆ ಬಂದಿದೆ.

ಆರೋಪಿ ಮುಸ್ತಫಾ ಖಾದ್ರಿ, ಗೋವಾ, ಮುಂಬೈನಿಂದ ಆರ್ಥಿಕ ಸಹಾಯ ದೊರೆತಿದೆ ಎನ್ನಲಾಗಿದೆ. ಗೋವಾ ಹಾಗೂ ಮುಂಬೈನ ಇಬ್ಬರು ಮಟ್ಕಾ ಬುಕ್ಕಿಗಳಿಂದ ಹೈಫೈ ಜೀವನ ನಡೆಸಲು ಮುಸ್ತಫಾಗೆ ಆರ್ಥಿಕ ಸಹಾಯ ದೊರೆತಿದೆ. ಇದೇ ಹಣದಿಂದಲೇ ಮುಸ್ತಫಾ ಹುಡುಗಿಯರ ಜತೆ ಎಂಜಾಯ್ ಮಾಡುತ್ತಿದ್ದ ಎನ್ನುವುದು ತನಿಖೆಯ ವೇಳೆ ಬೆಳಕಿಗೆ ಬಂದಿದೆ. ಮುಸ್ತಫಾ ಖಾದ್ರಿ ಮೊಬೈಲ್‌ನಲ್ಲಿ 9,700 ವಿಡಿಯೊಗಳು, 7,000 ಫೋಟೊಗಳು ಪತ್ತೆಯಾಗಿರೋದು ಆತಂಕಕ್ಕೆ ಕಾರಣವಾಗಿದೆ. ವಿಡಿಯೊಗಳನ್ನು ಮುಸ್ತಫಾ ಬೇರೆಯವರಿಗೆ ರವಾನಿಸಿರುವ ಸಾಧ್ಯತೆ ಇದ್ದು, ಹೀಗಾಗಿ ಮುಸ್ತಫಾ ವಿರುದ್ಧ ಐಟಿ ಆಕ್ಟ್ ಅಡಿಯಲ್ಲಿ ದೂರು ದಾಖಲಾಗಿದೆ.

ಈಗಾಗಲೇ ಮುಸ್ತಫಾ ಪ್ರೀತಿಸುತ್ತಿದ್ದ ಯುವತಿಯಿಂದ ಕೂಡ ದೂರು ದಾಖಲಾಗಿದೆ. ಕೊಪ್ಪಳ ನಗರ ಠಾಣೆಗೆ ಆಗಮಿಸಿ ಮುಸ್ತಫಾನನ್ನಿ ಪ್ರೀತಿಸುತ್ತಿದ್ದ ಯುವತಿಯಿಂದ ಮೊಬೈಲ್ ಕಸಿದುಕೊಂಡ ಯುವಕರ ವಿರುದ್ಧ ದೂರು ದಾಖಲಿಸಿದ್ದಾರೆ. ಮೆಡಿಕಲ್ ಕಾಲೇಜ್ ವಾಟರ್ ಟ್ಯಾಂಕ್ ಬಳಿ ಊಟ ಮಾಡುತ್ತಿದ್ದ ವೇಳೆ ಸ್ಥಳಕ್ಕೆ ಬಂದ 8-10 ಜನ ಅಪರಿಚಿತ ಹುಡುಗರು ಮುಸ್ತಫಾಗೆ ಜೀವ ಬೆದರಿಕೆ ಹಾಕಿ ಅತನ ಬಳಿ ಇದ್ದ ಎರಡು ಮೊಬೈಲ್ ನೋಡಿ ಕೊಡುತ್ತೇನೆಂದು ಪಡೆದುಕೊಂಡು ವಾಪಸ್ ಕೊಟ್ಟಿಲ್ಲಾ, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಿಎಂ ಪಟ್ಟದ ಮೇಲೆ ಕಣ್ಣು: ರಾಜ್ಯಕೀಯಕ್ಕೆ ಎಚ್‌ಡಿಕೆ?

← ಮೊದಲಪುಟದಿಂದ

ಕುಮಾರಸ್ವಾಮಿ ಹೇಳಿಕೆಯಿಂದ ರಾಜ್ಯ ಬಿಜೆಪಿಯಲ್ಲಿ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಹಲವರಿಗೆ ಅಪಾಯದ ವಾಸನೆ ಬಡಿದಿದೆ. ಇದು ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ನೊಳಕ್ಕೆ ಆಂತರಿಕ ಸಂಘರ್ಷಕ್ಕೆ ಕಾರಣವಾಗಲೂ ಬಹುದು. ಒಂದು ವೇಳೆ ಬಿಜೆಪಿ-ಜೆಡಿಎಸ್ ಅಧಿಕಾರಕ್ಕೆ ಬಂದು ಕುಮಾರಸ್ವಾಮಿಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕರೆ, ಬಿಜೆಪಿಯ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳು ರೊಚ್ಚಿಗೇಳಬಹುದು. ಅವರನ್ನೆಲ್ಲ ಹೇಗೆ ಸಂಬಾಳಿಸಲಾಗುತ್ತದೆ ಎಂಬ ಕುತೂಹಲವುಂಟಾಗಿದೆ.

ನಾವು ಅಧಿಕಾರಕ್ಕೆ ಬಂದರೆ ರಾಜ್ಯಕ್ಕೆ ಒಳ್ಳೇದು: ಅಲ್ಲದೇ ಕಾಂಗ್ರೆಸ್ ಸರಕಾರದಿಂದ ರಾಜ್ಯಕ್ಕೆ ಒಳ್ಳೆಯದು ಆಗುವುದಿಲ್ಲ. ನಾವು ಅಧಿಕಾರದಲ್ಲಿದ್ದಾಗ ಮಾತ್ರ ಈ ರಾಜ್ಯಕ್ಕೆ ಒಳ್ಳೆಯದಾಗಿದೆ. ಹೀಗಾಗಿ ಮುಂದೆ ನಾವು ಜನರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕಾಗಿದೆ. ಮಹಿಳಾ ಮೀಸಲಾತಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬಂದರೆ ರಾಜಕೀಯ ಚಿತ್ರಣವೇ ಬದಲಾಗುತ್ತದೆ. ಮೋದಿಯವರ ನಾಯಕತ್ವದಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ಕೊಡಲಾಗುತ್ತಿದೆ. ಅಲ್ಲದೆ ಕ್ಷೇತ್ರಗಳ ಮರು ವಿಂಗಡಣೆ ನಂತರ ರಾಜ್ಯದಲ್ಲಿ 42 ಲೋಕಸಭಾ ಕ್ಷೇತ್ರಗಳು ಅಸ್ತಿತ್ವಕ್ಕೆ ಬರಲಿವೆ. ಈ 42 ಲೋಕಸಭೆ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ದೊರೆಯಲಿದ್ದು, ನಮ್ಮ ಪಕ್ಷದಲ್ಲಿ ಮಹಿಳಾ ಕಾರ್ಯಕರ್ತರಿಗೆ ಹೆಚ್ಚಿನ ಉತ್ತೇಜನ ಕೊಡಲಿದ್ದೇವೆ. ಬಿಜೆಪಿಯವರು ಮಹಾ ಸುಳ್ಳುಗಾರರು ಎಂದು ಮುಖ್ಯಮಂತ್ರಿ ಭಾಷಣ ಮಾಡುತ್ತಾರೆ. ಆದರೆ, ಇವರು ಎಷ್ಟು ಸುಳ್ಳುಗಳು ಹೇಳಿದ್ದಾರೆ ಎಂಬುದು ಗೊತ್ತಿದೆ. ಯಾರು ಸುಳ್ಳುಗಾರರು ಎಂದು ಸಿದ್ದರಾಮಯ್ಯ ಅವರು ಆತ್ಮವಿಮರ್ಶೆ ಮಾಡಿಕೊಳ್ಳಲಿ ಎಂದು ಸರಕಾರದ ವಿರುದ್ಧ ಈಗಲೇ ತಿರುಗಿ ಬಿದ್ದಿದ್ದಾರೆ.

ಇನ್ನು ಚುನಾವಣೆಯಲ್ಲಿ ಮೈತ್ರಿ ಎದುರಾದರೆ ಮೈಸೂರು ಪ್ರಾಂತ್ಯದಲ್ಲಿ ಬಿಜೆಪಿಯು ತನ್ನ ನೆಲೆಯನ್ನು ಬಿಟ್ಟುಕೊಡಬೇಕಾಗಬಹುದು. ರಾಜ್ಯ ಬಿಜೆಪಿಯಲ್ಲಿ ಕೆಲ ಗೊಂದಲಗಳಿದ್ದರೂ ಪಕ್ಷ ಸಂಘಟಿಸುವಲ್ಲಿ ಪ್ರಮುಖ ನಾಯಕರು ಕೆಲಸ ಮಾಡುತ್ತಿದ್ದಾರೆ. ಹೀಗಿದ್ದರೂ ಮೈತ್ರಿಯಾದರೆ ಚುನಾವಣಾ ಸಮಯದಲ್ಲಿ ಕೆಲವು ಸಮಸ್ಯೆಗಳಾಗಬಹುದು, ಕ್ಷೇತ್ರ ಮರುವಿಂಗಡಣೆಯಾದರೂ ಕೂಡ ಜೆಡಿಎಸ್‌ಗೆ ಹಲವು ಕ್ಷೇತ್ರಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಹೀಗಾಗಿ ಬಿಜೆಪಿಯ ಬಲ ಕಡಿಮೆಯಾಗಬಹುದು. ಮೈತ್ರಿ ಚುನಾವಣೆಯಲ್ಲಿ ಕೆಲವೇ ಸ್ಥಾನಗಳನ್ನು ಪಡೆದರೂ ಒಟ್ಟಾರೆ ಪ್ರಮುಖ ಹುದ್ದೆಗಳು ಜೆಡಿಎಸ್ ಗೆ ಒಲಿಯಬಹುದು. ಇದರ ಸುಳಿವರಿತೇ ಕುಮಾರಸ್ವಾಮಿ ಇನ್ನು ಮುಂದೆ ಕರ್ನಾಟಕದಲ್ಲಿ ಹೆಚ್ಚಾಗಿ ಕಳೆಯುವ ಮಾತನಾಡಿದ್ದಾರೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ನಸೀರ್ ಅಹ್ಮದ್ ವಜಾ

← ಮೊದಲಪುಟದಿಂದ

ಪ್ರಚಾರದ ವೇಳೆ ಈ ನಾಯಕರು ಪಾಲ್ಗೊಳ್ಳಲಿಲ್ಲ ಎಂಬ ಆರೋಪ ಕೇಳಿಬಂದಿತ್ತು. ಅಬ್ದುಲ್ ಜಬ್ಬಾರ್ ಅವರು ಟಿಕೆಟ್ ಆಕಾಂಕ್ಷಿಯಾಗಿದ್ದರು. ಉಪಸಮರದ ವೇಳೆ ಜಬ್ಬಾರ್ ಹಾಗೂ ನಸೀರ್ ಅಹ್ಮದ್ ಪಕ್ಷ ವಿರೋಧಿ ಚಟುವಟಿಕೆಗಳ ಬಗ್ಗೆ ಹೈಕಮಾಂಡ್‌ಗೆ ವರದಿ ಸಲ್ಲಿಸಲಾಗಿತ್ತು. ಇತ್ತ ಕಾಂಗ್ರೆಸ್‌ನ ಅಲ್ಪಸಂಖ್ಯಾತ ನಾಯಕರಾದ ಸಲೀಂ ಅಹ್ಮದ್, ಶಾಸಕ ರಿಜ್ವಾನ್ ಅರ್ಷದ್ ಅವರು, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ಕೆಲ ನಾಯಕರ ಗುಂಪು ಸಂಚು ರೂಪಿಸುತ್ತಿದೆ ಎಂದು ಆರೋಪಿಸಿದ್ದರು. ಈ ಬಗ್ಗೆ ಉಪಸಮರದ ಹೈಕಮಾಂಡ್ ಉಸ್ತುವಾರಿಗಳು ವರಿಷ್ಠರಿಗೆ ವರದಿ ನೀಡಿದ್ದರು. ಅದರಂತೆ ಸದ್ಯಕ್ಕೆ ಈ ಇಬ್ಬರು ನಾಯಕರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಇದಿಷ್ಟೇ ಅಲ್ಲದೇ, ಸಚಿವ ಜಮೀರ್ ಅಹಮದ್ ಖಾನ್ ವಿರುದ್ಧವೂ ಹೈಕಮಾಂಡ್ ಅಸಮಾಧಾನ ವ್ಯಕ್ತಪಡಿಸಿದೆ. ಪ್ರಚಾರದಲ್ಲಿ ಭಾಗಿಯಾಗದೇ ಅಸಹಕಾರ ತೋರಿರುವ ಬಗ್ಗೆ ಹೈಕಮಾಂಡ್ ಆಕ್ಷೇಪಿಸಿದೆ ಎಂದು ಹೇಳಲಾಗಿದೆ. ಈ ಬಗ್ಗೆಯೂ ಹೈಕಮಾಂಡ್‌ಗೆ ವರದಿ ನೀಡಲಾಗಿದ್ದು, ಜಮೀರ್ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತದೆಯೇ ಎಂಬ ಕುತೂಹಲ ಇದೀಗ ಎಲ್ಲರಲ್ಲಿದೆ.

ಮತ್ತೊಂದು ಸುತ್ತಿನ ಸಂಧಾನ ಮಾತುಕತೆ?

← ಮೊದಲಪುಟದಿಂದ

ಇರಾನ್ ಅಂತೂ ಏ.11, 12ರಂದು ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆ ವಿಫಲವಾದ ಬೆನ್ನಲ್ಲೇ, ಒಂದೇ ಏಟಿಗೆ ಒಪ್ಪಂದವಾಗುತ್ತದೆ ಎಂದು ಯಾರೂ ನಿರೀಕ್ಷಿಸಲು ಸಾಧ್ಯವಿಲ್ಲ ಎಂದಿತ್ತು. ಈ ಮೂಲಕ ಇನ್ನೊಂದು ಸುತ್ತಿನ ಮಾತುಕತೆಗೆ ತಾನು ಸಿದ್ಧ ಎಂಬ ಸಂದೇಶ ನೀಡಿತ್ತು. ಇದೀಗ ಏ.21ರಂದು ಕದನವಿರಾಮದ ಗಡುವು ಮುಗಿಯುವ ಮುನ್ನ 2ನೇ ಸುತ್ತಿನ ಶಾಂತಿಸಂಧಾನ ಮುಗಿಸಲು ಬಲವಾದ ಪ್ರಯತ್ನ ನಡೆದಿದೆ.

ಸದ್ಯದ ಅಂದಾಜುಗಳ ಪ್ರಕಾರ ಮಧ್ಯಸ್ಥಿಕೆ ವಹಿಸಲು ಟರ್ಕಿ ಮುಂದೆ ಬಂದಿದೆ. ಪಾಕಿಸ್ತಾನ 2ನೇ ಸುತ್ತಿಗೂ ತಾನು ಆತಿಥ್ಯ ವಹಿಸಲು ಸಿದ್ಧ ಎಂದಿದೆ. ಬಹುಶಃ ಪಾಕ್‌ಗೆ ಈ ಬಾರಿ ಅವಕಾಶ ಸಿಗಲು ಸಾಧ್ಯವಿಲ್ಲ. ವಿಶ್ವಸಂಸ್ಥೆ ಕಚೇರಿಯಿರುವ ಜಿನೇವಾದಲ್ಲೂ ಮಾತುಕತೆ ನಡೆಯಬಹುದು.

ಇದರ ಮಧ್ಯೆ ಅಮೆರಿಕ-ಇರಾನ್ ನಡುವೆ ಯಾವುದೇ ಕ್ಷಣದಲ್ಲಾದರೂ ಮತ್ತೆ ಯುದ್ಧಾರಂಭವಾಗಬಹುದು ಎಂಬ ವಾತಾವರಣವಿದೆ. ಹೊರ್ಮುಜ್ ಮೇಲೆ ನಿರ್ಬಂಧ ವಿಧಿಸಿರುವ ಅಮೆರಿಕ ಹಡಗುಗಳ ಮೇಲೆ ದಾಳಿ ಮಾಡಲು ಇರಾನ್ ಯೋಚಿಸುತ್ತಿದೆ. ಇನ್ನೊಂದು ಕಡೆ ಅಮೆರಿಕ, ಇರಾನ್‌ನ ಯಾವುದೇ ಹಡಗು ನಿರ್ಬಂಧಿತ ಪ್ರದೇಶದ ಬಳಿ ಬಂದರೆ ನಾಶ ಮಾಡುವುದಾಗಿ ತಿಳಿಸಿದೆ.

ಕಾಂಗ್ರೆಸ್ ಸರಕಾರ ಕಿತ್ತೊಗೆಯುವುದು ಗುರಿ
ಡಿಕೆಶಿಗೆ ಮೂರು ಪೈಸೆ ಬೆಲೆ ಇಲ್ಲ: ಅಶೋಕ

ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ

ಆದಿಚುಂಚನಗಿರಿ (ನಾಗಮಂಗಲ): 2028 ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸಕಾರ ರಚನೆಯಾಗಲಿದೆ. ಯಾರು ಮುಖ್ಯಮಂತ್ರಿಯಾಗಬೇಕೆಂದು ಪ್ರಧಾನಿ ನರೇಂದ್ರ ಮೋದಿ ತೀರ್ಮಾನಿಸಲಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಆದಿಚುಂಚನಗಿರಿ ಮಠದ ಗುರು ಭೈರವೈಕ್ಯ ಮಂದಿರ ಉದ್ಘಾಟನೆಯ ಸಿದ್ಧತೆ ಬಗ್ಗೆ ಮಾಹಿತಿ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2028 ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ನೇತೃತ್ವದ ಸರಕಾರ ರಚನೆಯಾಗಲಿದೆ. ಜೆಡಿಎಸ್ ಕೂಡ ಜೊತೆಗೆ ಇರಲಿದೆ. ಈಗಾಗಲೇ ಸಂಸತ್ತಿನಲ್ಲೂ ಬಿಜೆಪಿ ಜೊತೆಗೆ ಜೆಡಿಎಸ್ ಇದೆ. ಯಾರು ಮುಖ್ಯಮಂತ್ರಿಯಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ, ಸಚಿವ ಅಮಿತ್ ಶಾ ಮೊದಲಾದ ನಾಯಕರು ತೀರ್ಮಾನಿಸಲಿದ್ದಾರೆ. ಬಿಜೆಪಿಯಲ್ಲಿ ಮುಖ್ಯಮಂತ್ರಿ ಆಕಾಂಕ್ಷಿಗಳು ಅನೇಕರಿದ್ದಾರೆ. ಪಕ್ಷದ ಆಶೀರ್ವಾದವಿದ್ದರೆ ನಾನು ಕೂಡ ಸಿಎಂ ಆಗಬಹುದು. ಈಗ ಅವೆಲ್ಲಕ್ಕಿಂತಲೂ ಸಿದ್ದರಾಮಯ್ಯ ನೇತೃತ್ವದ ಭ್ರಷ್ಟ ಕಾಂಗ್ರೆಸ್ ಸರಕಾರ ಕಿತ್ತೊಗೆಯುವುದು ಮುಖ್ಯವಾಗುತ್ತದೆ. ಇದಕ್ಕಾಗಿ ನಾವು ಹೋರಾಟಗಳನ್ನು ಮುಂದುವರಿಸುತ್ತೇವೆ ಎಂದರು.

ಮುಖ್ಯಮಂತ್ರಿ ಬದಲಾವಣೆ ನವೆಂಬರ್ ನಲ್ಲಿ ಆಗಬೇಕಿತ್ತು. ಈಗ ಆ ದಿನಾಂಕ ಮುಗಿದುಹೋಗಿದೆ. ಡಿ.ಕೆ.ಶಿವಕುಮಾರ್ ಅವರು ಮಲ್ಲಿಕಾರ್ಜುನ ಖರ್ಗೆಯವರ ಮನೆಗೆ ಹೋಗಿ ಗಲಾಟೆ ಮಾಡಿದ್ದಾರೆ. ಈ ಜಗಳದಲ್ಲೇ ಸರಕಾರ ಸತ್ತುಹೋಗಿದೆ. ಪಕ್ಷದ ಅಧ್ಯಕ್ಷರಿಗೆ ಗೌರವ ಇದ್ದಿದ್ದರೆ ಶಾಸಕರು ದೆಹಲಿಗೆ ಹೋಗುತ್ತಿರಲಿಲ್ಲ. ಡಿ.ಕೆ. ಶಿವಕುಮಾರ್ ಧ್ವನಿಗೆ ಮೂರು ಪೈಸೆಯ ಬೆಲೆ ಶಾಸಕರು ನೀಡುತ್ತಿಲ್ಲ. ಅವರ ವರ್ಚಸ್ಸು ಕಡಿಮೆಯಾಗುತ್ತಿದೆ ಎಂದು ಇದರಿಂದ ತಿಳಿದುಬರುತ್ತದೆ ಎಂದರು.

ಕಾಂಗ್ರೆಸ್‌ನಲ್ಲಿ ಸಿಎಂ ಆಸೆ ಇಟ್ಟುಕೊಂಡವರು ಜಗಳವಾಡುತ್ತಿದ್ದಾರೆ. ಈ ನಡುವೆ ರಾಜ್ಯದ ಅಭಿವೃದ್ಧಿ ನಡೆಯುತ್ತಿಲ್ಲ. ಹಿಂದೆ ಜನತಾದಳವನ್ನು ಜಗಳಗಳ ಪಾರ್ಟಿ ಎಂದು ಕರೆಯುತ್ತಿದ್ದರು. ಅದೇ ರೀತಿ ಈಗ ಕಾಂಗ್ರೆಸ್ ಜಗಳಗಳ ಪಾರ್ಟಿ ಆಗಿದೆ.

ಆರ್.ಅಶೋಕ್, ಪ್ರತಿಪಕ್ಷದ ನಾಯಕ

ಚಿಕ್ಕಬಳ್ಳಾಪುರ ದೇಗುಲಗಳು ಎಲ್ಲರಿಗೂ ಮುಕ್ತ

← ಮೊದಲಪುಟದಿಂದ

ಮುಜರಾಯಿ ವ್ಯಾಪ್ತಿಗೆ ಒಳಪಡುವ ದೇವಾಲಯಗಳ ಜತೆಗೆ ಖಾಸಗಿ ದೇವಸ್ಥಾನಗಳಲ್ಲಿಯೂ ಭಕ್ತರಿಗೆ ಸಮಾನ ಹಕ್ಕುಗಳನ್ನು ನೀಡಬೇಕು ಎಂದು ಜ್ಞಾಪನಾ ಪತ್ರದಲ್ಲಿ ಸೂಚಿಸಲಾಗಿದ್ದು, ದೇವಾಲಯಗಳು ಭಕ್ತರ ಆರಾಧನಾ ಕೇಂದ್ರವಾಗಿದೆ. ಪ್ರತಿಯೊಬ್ಬ ಭಕ್ತನಿಗೂ ದೇವರ ದರ್ಶನ ಪಡೆಯುವುದು ಮೂಲಭೂತ ಹಕ್ಕಾಗಿದೆ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬುದು ಶಾಶ್ವತ ಸತ್ಯವಾಗಿದ್ದು, ಯಾವುದೇ ರೀತಿಯ ಭೇದಭಾವಕ್ಕೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಅಲ್ಲದೇ ಸಂವಿಧಾನದ ವಿಧಿ-15ರ ಪ್ರಕಾರ ಯಾವುದೇ ಜಾತಿ, ಜನಾಂಗ, ಧರ್ಮ, ಲಿಂಗ, ಜನ್ಮಸ್ಥಳ ಇವುಗಳ ಆಧಾರದ ಮೇಲೆ ಯಾವುದೇ ತಾರತಮ್ಯವನ್ನು ನಿಷೇಧಿಸಿದೆ. ಈ ಹಿನ್ನೆಲೆಯಲ್ಲಿ, ಯಾವುದೇ ದೇವಸ್ಥಾನದಲ್ಲಿ ಕೆಲ ಸಮುದಾಯದವರಿಗೆ ಪ್ರವೇಶ ನಿರಾಕರಿಸುವುದು ಕಾನೂನುಬಾಹಿರವಾಗುತ್ತದೆ ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ. ಇತ್ತೀಚೆಗೆ ಕೆಲವು ದೇವಾಲಯಗಳಲ್ಲಿ ನಿರ್ದಿಷ್ಟ ಸಮುದಾಯದವರಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ ಎಂಬ ದೂರುಗಳು ಬಂದ ಹಿನ್ನೆಲೆಯಲ್ಲಿ ಶಾಸಕ ಪ್ರದೀಪ್ ಈಶ್ವರ್ ಈ ಕುರಿತು ತನಿಖೆ ಮಾಡಬೇಕೆಂಬ ಮನವಿಯನ್ನು ನೀಡಿದ್ದರು. ಜತೆಗೆ ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಇದರ ಭಾಗವಾಗಿ, ಎಲ್ಲಾ ದೇವಾಲಯಗಳ ಮುಖ್ಯ ದ್ವಾರಗಳಲ್ಲಿ ಯಾವುದೇ ಜಾತಿ, ಜನಾಂಗ, ಧರ್ಮ, ಲಿಂಗ ಭೇದವಿಲ್ಲದೆ ದೇವರ ದರ್ಶನಕ್ಕೆ ಸರ್ವರಿಗೂ ಮುಕ್ತ ಪ್ರವೇಶ ಎಂಬ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸಲು ಆದೇಶಿಸಲಾಗಿದೆ. ಈ ನಿಯಮ ಉಲ್ಲಂಘಿಸಿ ಭಕ್ತರಿಗೆ ಪ್ರವೇಶ ತಡೆ ಮಾಡಿದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಸದರಿ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಅಂಬೇಡ್ಕರ್ ಜಯಂತಿಯ ದಿನದಂದು ಈ ರೀತಿಯ ಕ್ರಮ ಕೈಗೊಂಡಿರುವುದು ಶಾಸಕ ಪ್ರದೀಪ್ ಈಶ್ವರ್ ಒತ್ತಾಯಕ್ಕೆ ಜಯ ಸಿಕ್ಕಂತಾಗಿದೆ.

ಇಂದು ಆದಿಚುಂಚನಗಿರಿಗೆ ಪ್ರಧಾನಿ ನರೇಂದ್ರ ಮೋದಿ

← ಮೊದಲಪುಟದಿಂದ

ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ವಿಮಾನ ನಿಲ್ದಾಣಕ್ಕೆ ತೆರಳಿ ಮೋದಿಯನ್ನು ಸ್ವಾಗತಿಸಲಿದ್ದಾರೆ. ಮೋದಿ ಮೊದಲು ಗೋರಕ್ಷಕನಾಥರು ತಪಸ್ಸು ಮಾಡಿದ ಜ್ವಾಲಾಪೀಠ ದರ್ಶನ ಮಾಡಲಿರುವ ಪ್ರಧಾನಿ ಮೋದಿ, ನಂತರ ಕಾಲಭೈರವೇಶ್ವರಸ್ವಾಮಿಗೆ

ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಶ್ರೀಗಿರಿ ತಪೋವನದಿಂದ 1.5 ಕಿ.ಮೀ. ದೂರದಲ್ಲಿರುವ ಶ್ರೀಗುರು ಭೈರವೈಕ್ಯ ಮಂದಿರವನ್ನು ಬೆಳಗ್ಗೆ 11 ಗಂಟೆಗೆ ಉದ್ಘಾಟಿಸಲಿದ್ದಾರೆ. ನಂತರ ಬಿಜಿಎಸ್ ಕ್ರೀಡಾಂಗಣದಲ್ಲಿ ವೇದಿಕೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಭಕ್ತರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಬಳಿಕ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ತೆರಳಿ ಅಲ್ಲಿಂದ ಕೇರಳಕ್ಕೆ ಪ್ರಯಾಣ ಬೆಳೆಸಲಿದ್ದಾರೆ.

2 ಸಾವಿರಕ್ಕೂ ಹೆಚ್ಚು ಪೊಲೀಸರ ನಿಯೋಜನೆ: ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ಆದಿಚುಂಚನಗಿರಿಯಲ್ಲಿ ಹಬ್ಬದ ಸಂಭ್ರಮ ಕಳೆಗಟ್ಟಿದೆ. ಆದಿಚುಂಚನಗಿರಿ ಕ್ಷೇತ್ರದಾದ್ಯಂತ ಫ್ಲೆಕ್ಸ್, ಕಟೌಟ್ ರಾರಾಜಿಸುತ್ತಿವೆ. ಮಠದ ಕ್ರೀಡಾಂಗಣದಲ್ಲಿ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದ್ದು, ಕಾರ್ಯಕ್ರಮದಲ್ಲಿ 1 ಲಕ್ಷಕ್ಕೂ ಅಧಿಕ ಜನ ಭಾಗವಹಿಸುವ ನಿರೀಕ್ಷೆ ಇದೆ. ಹೀಗಾಗಿ ಆದಿಚುಂಚನಗಿರಿಯಲ್ಲಿ 2 ಸಾವಿರಕ್ಕೂ ಹೆಚ್ಚು ಪೊಲೀಸರ ನಿಯೋಜನೆ ಮಾಡಲಾಗಿದೆ. ಇದಲ್ಲದೆ, ಆದಿಚುಂಚನಗಿರಿ ಸುತ್ತಮುತ್ತ ನಾಳೆ ಮದ್ಯ ಮಾರಾಟ ನಿಷೇಧ ಮಾಡಲಾಗಿದೆ. ಬೆಳಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಬೆಳ್ಳೂರು ಪಟ್ಟಣ ಪಂಚಾಯಿತಿಯ 8 ಕಿಮೀ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಿ ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ್ ಆದೇಶ ಹೊರಡಿಸಿದ್ದಾರೆ.

ಜೆಡಿಎಸ್ ಕಚೇರಿಯಲ್ಲಿ ಡಾ.ಅಂಬೇಡ್ಕರ್ ಜಯಂತಿ | ಮುಂದಿನ ಸಿಎಂ ಕುಮಾರಣ್ಣ ಎಂದವರಿಗೆ ಬುದ್ಧಿಮಾತು

ಬಾಬಾಸಾಹೇಬರ ತತ್ವದ ಅಡಿಯಲ್ಲಿ ಪಕ್ಷ ಬಲವರ್ಧನೆ

ಬೆಂಗಳೂರು: ಪ್ರತಿಯೊಬ್ಬರು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯಗಳಲ್ಲಿ ನಂಬಿಕೆ ಇರಿಸಿ ಅವರ ಉದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಜೆಡಿಎಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕರೆ ನೀಡಿದರು.

ಪಕ್ಷದ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಸಂವಿಧಾನ ಶಿಲ್ಪಿಗೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿ, ಕಾರ್ಯಕ್ರಮದಲ್ಲಿ ಜೈಕಾರ ಹಾಕಿದ ಕಾರ್ಯಕರ್ತರಿಗೆ ನಯವಾಗಿ ತರಾಟೆಗೆ ತೆಗೆದುಕೊಂಡ ಅವರು, ಮುಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಎಂದು ಅಥವಾ ಕುಮಾರಣ್ಣ ಮುಖ್ಯಮಂತ್ರಿಯಾಗಲಿ ಎಂದು ನೀವು ಕೂಗುವ ಸಮಯ ಇದಲ್ಲ. ಅಂಬೇಡ್ಕರ್ ಅವರ ಜಯಂತಿ ದಿನ ನನ್ನ ಬಗ್ಗೆ ಘೋಷಣೆಗಳನ್ನು ಕೂಗುವುದು ಬೇಡ. ಹಾಗೆ ಮಾಡುವುದು ಅಂಬೇಡ್ಕರ್ ಅವರಿಗೆ ಅಗೌರವ ಸೂಚಿಸಿದಂತೆ ಆಗುತ್ತದೆ. ನನ್ನ ವೈಭವಿಕರಣ ಬೇಡ ಎಂದರು. ಈಗಷ್ಟೇ ಕೋರ್ ಕಮಿಟಿ ಅಧ್ಯಕ್ಷರಾದ ಎಂ. ಕೃಷ್ಣಾರೆಡ್ಡಿ ಮತ್ತು ಮಾಜಿ ಮಂತ್ರಿಗಳಾದ ವೆಂಕಟರಾವ್ ನಾಡಗೌಡ ಹಾಗೂ ಮಾಜಿ ಶಾಸಕ ಅನ್ನದಾನಿ ಅವರೆಲ್ಲರೂ ಕುಮಾರಣ್ಣನೇ ಮುಖ್ಯಮಂತ್ರಿ ಆಗಬೇಕು ಎಂದು ಹೇಳಿದ್ದಾರೆ. ಎಲ್ಲರ ಭಾಷಣ ನಾನು ಆಲಿಸಿದೆ. ಅಂಬೇಡ್ಕರ್



ಜೆಡಿಎಸ್ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಹಿನ್ನೆಲೆ ಬಾಬಾ ಸಾಹೇಬರ ಭಾವಚಿತ್ರಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಪುಷ್ಪನಮನ ಸಲ್ಲಿಸಿದರು.

ಅವರಿಗೆ ನಮನ ಸಲ್ಲಿಸುವ ಈ ವೇದಿಕೆಯಲ್ಲಿ ಮುಖ್ಯಮಂತ್ರಿ ವಿಷಯದ ಬಗ್ಗೆ ಚರ್ಚಿಸುವುದು ಸರಿಯಲ್ಲ. ನಾವು ಬಾಬಾ ಸಾಹೇಬರ ಆದರ್ಶ ಮತ್ತು ತತ್ವಗಳನ್ನು ಅಳವಡಿಸಿಕೊಂಡು ಪಕ್ಷವನ್ನು ಬಲಿಷ್ಠವಾಗಿ ಕಟ್ಟಬೇಕು ಎಂದರು.

ದೇವರ ದಯೆಯಿಂದ ನಾನು ಎರಡು ಬಾರಿ ಈ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಪೂರ್ಣಪ್ರಮಾಣದ ಬಹುಮತ ಇಲ್ಲದೆ ಸಾಧ್ಯವಾದಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದ್ದೇನೆ. ಸಮಾಜದ ಎಲ್ಲಾ ವರ್ಗದ ಜನರನ್ನು ಸಮಾನ ದೃಷ್ಟಿಯಲ್ಲಿ ನೋಡಿದ್ದೇನೆ. ಹೀಗಾಗಿ ನನ್ನ ಮೇಲೆ ಎಲ್ಲರಿಗೂ ಪ್ರೀತಿ ವಿಶ್ವಾಸ ಇದೆ. ವಿಧಾನಸೌಧಕ್ಕೂ ಭೇಟಿ ಕೊಟ್ಟಿದ್ದೆ. ಆ ಸಂದರ್ಭದಲ್ಲಿಯೂ ಕೆಲ ಮಾಧ್ಯಮ ಸ್ನೇಹಿತರು ನೀವು ಮುಂದಿನ ಮುಖ್ಯಮಂತ್ರಿ ಆಗಬೇಕು ಎಂದು ಶುಭ ಹಾರೈಸಿದರು. ಇದೆಲ್ಲವೂ ಅವರು ನನ್ನ ಮೇಲೆ ಇಟ್ಟಿರುವ ಪ್ರೀತಿ ಮತ್ತು ನಂಬಿಕೆಯನ್ನು ಸೂಚಿಸುತ್ತದೆ. ಇಂತಹ ವೇದಿಕೆಯಲ್ಲಿ ರಾಜಕೀಯ ಮಾತನಾಡುವುದು ಬೇಡ ಎಂದು ಅವರು ಮುಖಂಡರು ಮತ್ತು ಕಾರ್ಯಕರ್ತರಿಗೆ ಸೂಚಿಸಿದರು. ಪಕ್ಷದ ಎಂ. ಕೃಷ್ಣಾರೆಡ್ಡಿ, ಕೆ.ಅನ್ನದಾನಿ, ನಾಡಗೌಡ, ಪರಿಷತ್ ಸದಸ್ಯರಾದ ಟಿ.ಎ.ಶರವಣ, ಟಿ.ಜವರಾಯಿಗೌಡ ಸೇರಿದಂತೆ ಹಲವರು ಇದ್ದರು.

ಎಲ್ಲರನ್ನೂ ಒಗ್ಗೂಡಿಸಿ ಪಕ್ಷ ಕಟ್ಟೋಣ

ಪಕ್ಷವನ್ನು ನಾವು ಎಲ್ಲಾ ಸಮುದಾಯಗಳನ್ನು ಒಳಗೊಂಡಂತೆ ಕಟ್ಟಬೇಕು. ಗ್ರಾಮ ಹೋಬಳಿ ಮತ್ತು ಮತಗಟ್ಟೆಗಳ ಮಟ್ಟದಲ್ಲಿಯೂ ಬಲಿಷ್ಠವಾಗಿ ಕಾರ್ಯಕರ್ತರ ಪಡೆಯಲು ಸೃಷ್ಟಿ ಮಾಡಬೇಕು. ಶೋಷಿತರ ಮತ್ತು ಧನಿ ಇಲ್ಲದವರ ದನಿಯಾಗಿ ನಾವು ಕೆಲಸ ಮಾಡಬೇಕು. ಇದುವೇ ಬಾಬಾ ಸಾಹೇಬ್ ಅವರು ಹೇಳಿದ ಸಂದೇಶ. ಆದರೆ ಕೆಲವರು ಅವರು ಬರೆದ ಸಂವಿಧಾನದ ಪೀಠಿಕೆಯನ್ನು ಪ್ರಚಾರಕಷ್ಟೇ ಓದುತ್ತಾರೆ. ಅವರು ತಪಸ್ಸಿನಂತೆ ರಚಿಸಿದ ಸಂವಿಧಾನವನ್ನು ಕೇವಲ ಪ್ರಚಾರಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಅಭಿಪ್ರಾಯಪಟ್ಟರು.

ಮಹಿಳಾ ಮೀಸಲಾತಿಗೆ ಪಕ್ಷಾತೀತವಾಗಿ ಬೆಂಬಲಿಸಿ

ಬೆಂಗಳೂರು: ಎಲ್ಲರೂ ಒಂದಾಗಿ ಭಾರತದ ಭವಿಷ್ಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಪ್ರಜಾಪ್ರಭುತ್ವದ ಉಳಿವಿಗಾಗಿ ಎಲ್ಲಾ ರಾಜಕೀಯ ಬದಿಗೊತ್ತಿ ಮಹಿಳಾ ಮೀಸಲಾತಿ ವಿಧೇಯಕಕ್ಕೆ ಬೆಂಬಲ ಕೊಡಿ ಎಂದು ಸಂಸದ ಬಸವರಾಜ್ ಬೊಮ್ಮಾಯಿ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಲೋಕಸಭಾ ವಿಶೇಷ ಅಧಿವೇಶನ ನಡೆಯಲಿದ್ದು, ಕ್ರಾಂತಿಕಾರಿಯಾಗಿರುವ ಮಹಿಳಾ ಮೀಸಲಾತಿ ಮತ್ತು ಡಿ ಲಿಮಿಟೇಷನ್ ವಿಚಾರ ಚರ್ಚೆಗೆ ಬರುತ್ತಿದೆ. ಅಂಬೇಡ್ಕರ್ ಅವರು ಹಿಂದು ಕೋಡ್ ಬಿಲ್ ತಂದಾಗ ಎಲ್ಲಾ ಮಹಿಳೆಯರಿಗೆ ಮೀಸಲಾತಿ ನೀಡಿದ್ದರು. ಅಂಬೇಡ್ಕರ್ ಅವರ ಚಿಂತನೆಯಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರ ಚಿಂತನೆಯಾಗಿದೆ. ಕಾಂಗ್ರೆಸ್ ಹಿಂದಿನ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಅಪೇಕ್ಷೇ ಕೂಡ ಇದಾಗಿತ್ತು. ಎಲ್ಲರೂ ಒಂದಾಗಿ ಭಾರತದ ಭವಿಷ್ಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಪ್ರಜಾಪ್ರಭುತ್ವ ಉಳಿವಿಗಾಗಿ ಮಹಿಳೆಯರಿಗೆ ಮೀಸಲಾತಿ ಕೊಡಬೇಕು ಅನ್ನುವುದು ಎಲ್ಲರ ಅಪೇಕ್ಷೆ. ಎಲ್ಲಾ ರಾಜಕೀಯ ಬದಿಗೊತ್ತಿ ಮಹಿಳಾ ಮೀಸಲಾತಿ ವಿಧೆಯಕಕ್ಕೆ ಬೆಂಬಲ ಕೊಡಿ ಎಂದು ವಿಪಕ್ಷಗಳಿಗೆ ಕರೆ ಕೊಡುತ್ತೇನೆ. ಇಂತಹ ಐತಿಹಾಸಿಕ ವಿಧೇಯಕ ಬರುವ ಸಂಧರ್ಭದಲ್ಲಿ ಭಾಗಿಯಾಗುವ ಅದೃಷ್ಟ ನಮ್ಮದು ಎಂದರು. ಕಾಂಗ್ರೆಸ್ ಯಾವ ಸಮುದಾಯಗಳನ್ನು ಓಲೈಸಿ, ಮತ ಬ್ಯಾಂಕಾಗಿ ಪರಿವರ್ತನೆ ಮಾಡಿಕೊಂಡಿದ್ದರು. ಅವೆಲ್ಲಾ ಸಮುದಾಯ ಭ್ರಮನಿರಸವಾಗಿವೆ. ಅಲ್ಪಸಂಖ್ಯಾತರ ನಾಯಕರ ಪ್ರಶ್ನೆ ಅಲ್ಲ, ಸಮುದಾಯದಲ್ಲೇ ಆಕ್ರೋಶ ಭುಗಿಲೆದ್ದಿದೆ. ಬರುವ ದಿನದಲ್ಲಿ ಕಷ್ಟದ ದಿನಗಳು ಕಾಣಲಿದೆ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಹೊಸಬರಿಗೆ ಅವಕಾಶ ಕೊಡಬೇಕು: ರಾಯರಡ್ಡಿ

ಕೊಪ್ಪಳ: ರಾಜ್ಯ ಸರಕಾರದ 25 ಜನ ಸಚಿವರನ್ನು ತೆಗೆದು ಹೊಸಬರಿಗೆ ಅವಕಾಶ ಕೊಡಬೇಕು ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರಡ್ಡಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಹೊಸಬರಿಗೆ ಅವಕಾಶ ಕೊಟ್ಟರೆ ಅವರಿಗೂ ಅನುಭವವಾಗುತ್ತದೆ. ಇರುವವರೇ ಕಾಯಂ ಆಗಿ ಇರಬೇಕು ಎಂದರೆ ಹೇಗೆ ಸಾಧ್ಯವಾಗುತ್ತದೆ? ಹೊಸಬರು ಅವಕಾಶ ಕೇಳುವುದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದರು. ನಾನು ಹೆಚ್ಚು ಬಾರಿ ಶಾಸಕನಾಗಿದ್ದರೂ ಮಂತ್ರಿ ಸ್ಥಾನ ಕೊಟ್ಟಿಲ್ಲ. ಆರ್ಥಿಕ ಸಲಹೆಗಾರ ಎನ್ನುವ ಹುದ್ದೆ ಕೊಟ್ಟಿದ್ದಾರೆ. ಮುಖ್ಯಮಂತ್ರಿ ಜತೆ ಚರ್ಚಿಸಿ ಉತ್ತಮ ಬಜೆಟ್ ಕೊಡಬಹುದೇ ವಿನಃ ಯಾವುದೇ ಅಧಿಕಾರ ಇರುವುದಿಲ್ಲ. ನನ್ನನ್ನು ಸಚಿವನನ್ನಾಗಿ ಮಾಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದರು. ಮೇ 4ರ ಬಳಿಕ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು, ಪಕ್ಷದ ವರಿಷ್ಠರು ಸಂಪುಟ ಪುನರ್‌ರಚನೆ ಚರ್ಚೆ ಮಾಡುತ್ತಾರೆ ಎಂದರು.

ಬಾವಿಯಲ್ಲಿ ಇಬ್ಬರು ಬಾಲಕಿಯರ ಶವ ಪತ್ತೆ

ಕಲಬುರಗಿ: ಇಬ್ಬರು ಬಾಲಕಿಯರ ಶವಗಳು ಬಾವಿಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಪತ್ತೆಯಾಗಿರುವ ಜಿಲ್ಲೆಯ ಯಡ್ರಾಮಿ ತಾಲೂಕಿನ ಇಜೇರಿ ಗ್ರಾಮದಲ್ಲಿ ನಡೆದಿದೆ. ಈ ಘಟನೆ ಗ್ರಾಮದಲ್ಲಿ ಆತಂಕ ಮೂಡಿಸಿದೆ. ನಂದಿನಿ (16), ಸಂಜನಾ (17) ಮೃತ ದುರ್ದೈವಿಗಳು. ಇವರಿಬ್ಬರು ಚಿಕ್ಕಪ್ಪ-ದೊಡ್ಡಪ್ಪನ ಮಕ್ಕಳಾಗಿದ್ದು, ಸಹೋದರಿಯರ ಸಾವಿನಿಂದ ಕುಟುಂಬಸ್ಥರು ದಿಗ್ಭ್ರಾಂತರಾಗಿದ್ದಾರೆ. ಬಾವಿಯಲ್ಲಿ ಪತ್ತೆಯಾದ ಬಾಲಕಿಯರಿಬ್ಬರ ಎರಡೂ ಕೈಗಳನ್ನು ಹಗ್ಗದಿಂದ ಕಟ್ಟಿದ ಸ್ಥಿತಿಯಲ್ಲಿ ಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಮೇಲ್ನೋಟಕ್ಕೆ ಇದೊಂದು ಕೊಲೆ ಎಂಬ ಶಂಕೆ ವ್ಯಕ್ತವಾಗುತ್ತಿದ್ದು, ಸಾವಿನ ಹಿಂದಿರುವ ನಿಖರ ಕಾರಣ ಏನೆಂಬುದು ಇನ್ನೂ ನಿಗೂಢವಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಜೇವರ್ಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಐಹೊಳೆ, ಬಾಗಲಕೋಟೆ

ಸಮಸ್ಯೆಯೇನು..?

- ಐತಿಹಾಸಿಕ ಐಹೊಳೆಯಲ್ಲಿ ಮೂಲಸೌಕರ್ಯ ಕಲ್ಪಿಸುವ ಕುರಿತು.
- **ಪರಿಹಾರ:** ಹೋಗುವ ಮಾರ್ಗದಲ್ಲಿ ಸ್ವಚ್ಛತೆ, ಚರಂಡಿ ಸೌಕರ್ಯ, ಕುಡಿಯುವ ನೀರು ಸೇರಿ ಅಗತ್ಯ ಸೌಕರ್ಯ ಕಲ್ಪಿಸಲು ಸಾರ್ವಜನಿಕರೊಬ್ಬರು ವಿಡಿಯೊ ಮಾಡಿ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದರು. ಈ ಸಂಬಂಧ ಕ್ರಮಕೈಗೊಂಡಿರುವ ಪ್ರವಾಸೋದ್ಯಮ ಇಲಾಖೆ ಅಗತ್ಯ ಮೂಲಸೌಕರ್ಯ ಕಲ್ಪಿಸಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
15.04.2026
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀಮತಿ ಚಂದ್ರಕಲಾ
ವಿಷಯ
ಶಿಕ್ಷಣದ ಸವಾಲುಗಳು 2

vishwavani.news

ದಿನ ವಿಶೇಷ

15 ಏಪ್ರಿಲ್ 2026 ಬುಧವಾರ

» ಸೂರ್ಯೋದಯ	: 6-08
» ಸೂರ್ಯಾಸ್ತ	: 6-46
» ತಿಥಿ	: ತ್ರಯೋದಶಿ
» ನಕ್ಷತ್ರ	: ಪೂರ್ವಭಾದ್ರಪದ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ವಸಂತ
» ಮಾಸ	: ಚೈತ್ರ
» ಪಕ್ಷ	: ಕೃಷ್ಣಪಕ್ಷ

ವಚನಾನಂದ ಸ್ವಾಮೀಜಿ ವಿರುದ್ಧ ವೀರಶೈವ ಪಂಚಮಸಾಲಿ ಪೀಠದ ಟ್ರಸ್ಟ್‌ನ ಸದಸ್ಯರಿಂದ ಗಂಭೀರ ಆರೋಪ

ವಿದ್ಯಾರ್ಥಿಗಳಿಂದ ಸ್ವಾಮೀಜಿಗೆ ಮಸಾಜ್

ದಾವಣಗೆರೆ: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದಿಂದ ಉಚ್ಚಾಟಿತರಾಗಿರುವ ವಚನಾನಂದ ಶ್ರೀಗಳು ವಸತಿ ನಿಲಯದ ವಿದ್ಯಾರ್ಥಿಗಳಿಂದ ಬಲವಂತವಾಗಿ ಮಸಾಜ್ ಮಾಡಿಸಿಕೊಳ್ಳುತ್ತಿದ್ದರು ಎಂದು ವೀರಶೈವ ಪಂಚಮಸಾಲಿ ಪೀಠದ ಟ್ರಸ್ಟ್‌ನ ಸದಸ್ಯ ಚಂದ್ರಶೇಖರ್ ಪೂಜಾರ್ ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗುರುಪೀಠದ ವಸತಿ ಶಾಲೆಯಲ್ಲಿ 60 ವಿದ್ಯಾರ್ಥಿಗಳಿದ್ದರು. ಸ್ವಾಮೀಜಿಯು ವಿಕೃತ ಭಾವದಿಂದ ಮಸಾಜ್ ಮಾಡಿಸಿಕೊಳ್ಳುವುದನ್ನು ಸಹಿಸಿಕೊಳ್ಳಲಾಗದೇ ಬಹಳಷ್ಟು ವಿದ್ಯಾರ್ಥಿಗಳು ವಸತಿ ನಿಲಯವನ್ನು ಬಿಟ್ಟುಹೋಗಿದ್ದಾರೆ. ನೊಂದ ವಿದ್ಯಾರ್ಥಿಗಳು ಹಾಗೂ ಅವರ ಪಾಲಕರು ಪೊಲೀಸ್ ಠಾಣೆಗೆ ದೂರು ನೀಡಲು ಮುಂದಾಗಿದ್ದರು. ದೂರು ನೀಡಿದ್ದರೆ ಪೋಕ್ಸೊ ಪ್ರಕರಣ ದಾಖಲಾಗಿ ವಚನಾನಂದ ಶ್ರೀಗಳು ಬಂಧನವಾಗುತ್ತಿದ್ದರು. ಟ್ರಸ್ಟ್‌ನ ಮುಖಂಡರೇ ದೂರು ನೀಡದಂತೆ ತಡೆದಿದ್ದೇವೆ ಎಂದು ಹೇಳಿದರು.

2 ವರ್ಷದ ಹಿಂದೆ ಪೀಠದಿಂದ ವಿದ್ಯಾರ್ಥಿ ವಸತಿ ನಿಲಯ ಸ್ಥಾಪನೆಯಾಗಿದೆ. 60 ವಿದ್ಯಾರ್ಥಿಗಳಿದ್ದ ಹಾಸ್ಟೆಲ್‌ನಲ್ಲಿ ಇದೀಗ ಐವರು ವಿದ್ಯಾರ್ಥಿಗಳು ಮಾತ್ರ ಇದ್ದಾರೆ. ನಿತ್ಯ 4-5 ವಿದ್ಯಾರ್ಥಿಗಳನ್ನು ಮಸಾಜ್ ಮಾಡಿಸಿಕೊಳ್ಳಲು ಬಳಸಿಕೊಳ್ಳುತ್ತಿದ್ದರು. ಶ್ರೀಗಳು ವಿದ್ಯಾರ್ಥಿಗಳಿಂದ ಮಸಾಜ್ ಮಾಡಿಸಿಕೊಳ್ಳುತ್ತಿರುವುದು ಎರಡು ತಿಂಗಳ ಹಿಂದೆ ಟ್ರಸ್ಟ್‌ನ ಮುಖಂಡರ ಗಮನಕ್ಕೆ ಬಂದಿತ್ತು. ಈ ಬಗ್ಗೆ ಸ್ವಾಮೀಜಿಗೆ ಬುದ್ಧಿ ಹೇಳಿ ಅವರನ್ನು ತಿದ್ದಲು ಮುಂದಾದಾಗ ಅವರು ಟ್ರಸ್ಟ್ ವಿರುದ್ಧವೇ ತಿರುಗಿಬಿದ್ದರು. ಸುಖಾಸುಮ್ಮನೆ ಲೆಕ್ಕ ಕೊಡಿ ಅಭಿಯಾನ ಶುರು ಮಾಡಿದರು ಎಂದು ಹೇಳಿದರು.

ವಚನಾನಂದ ಶ್ರೀ ಅಶ್ಲೀಲ ಪದಗಳಿಂದ ಬೈದಿದ್ದಾರೆ ಎನ್ನಲಾದ ಆಡಿಯೊವನ್ನೂ ಮೊಬೈಲ್‌ನಲ್ಲಿ ಟ್ರಸ್ಟಿ ಚಂದ್ರಶೇಖರ್ ಪೂಜಾರ್ ಬಿತ್ತರಿಸಿದರು. ಶಿವಕುಮಾರ್ ಹರಪನಹಳ್ಳಿ, ಶಶಿಧರ ಗೌಡ ಹರಿಹರ, ನಿರಂಜನ ದೀಟೂರು, ಪ್ರಕಾಶ್ ಅಂಗಡಿ, ಚಂದ್ರು ಇದ್ದರು.

> **ಶ್ರೀಗಳಿಗೆ ನೈತಿಕತೆ ಇದ್ದರೆ ಕೂಡಲೇ ಮಠ ಬಿಟ್ಟು ಹೊರಹೋಗಲಿ. ಹೋಗದಿದ್ದರೆ ಹೇಗೆ ಕಳಿಸಬೇಕು ಎಂಬುದು ನಮಗೆ ಗೊತ್ತಿದೆ. ನಾವು ಫೋರ್ಜರಿ ಸಹಿ ಮಾಡಿ ಪೀಠದ ಹಣ ಪಡೆದ ಬಗ್ಗೆ ಆರೋಪಗಳು ಕೇಳಿ ಬರುತ್ತಿವೆ. ಈ ಬಗ್ಗೆ ಅದನ್ನು ಸಾಬೀತುಪಡಿಸಲು ಒಂದು ವರ್ಷ ಕಾಲಾವಕಾಶ ನೀಡುತ್ತೇವೆ. ಒಂದು ವೇಳೆ ಸಾಬೀತುಪಡಿಸಿದರೆ ಒಂದಕ್ಕೆ ಹತ್ತರಷ್ಟು ಹಣ ಕಟ್ಟಲು ಸಿದ್ಧರಿದ್ದೇವೆ.**
>
> **-ಚಂದ್ರಶೇಖರ್ ಪೂಜಾರ್**, ಟ್ರಸ್ಟ್‌ನ ಸದಸ್ಯ

ಕಾರು ವಾಪಸ್ ಕೊಡಿ: ರಾಣೇಬೆನ್ನೂರಿನ ಮಾಜಿ ಶಾಸಕ ಅರುಣ್ ಕುಮಾರ್ ಪೂಜಾರ್ ಅವರೇ ಪೀಠಕ್ಕೆ ಒಂದೂವರೆ ಕೋಟಿ ಹಣ ನೀಡಿದ್ದಾಗಿ ಹೇಳಿದ್ದೀರಿ, ನಿಮಗೆ ಅಷ್ಟೊಂದು ಹಣ ಎಲ್ಲಿಂದ ಬಂತು? ನನ್ನ ಪೆಟ್ರೋಲ್ ಬಂಕ್ ಹೆಸರಿನಲ್ಲಿ ಸಾಲ ಮಾಡಿ ಪಡೆದಿರುವ ಕಾರು ನಿಮ್ಮ ಬಳಿ ಇದೆ. ಅದರ ವಿಮೆಯನ್ನೂ ಕಟ್ಟಲಾಗದ ನೀವು ಪೀಠಕ್ಕೆ ಒಂದೂವರೆ ಕೋಟಿ ಹಣ ಹೇಗೆ ಕೊಟ್ಟಿದ್ದೀಯಾ? ನಿಮ್ಮ ಚುನಾವಣೆ ವೇಳೆ ಸಾಲ ಮಾಡಿ ನಿಮ್ಮನ್ನು ಗೆಲ್ಲಿಸಿದ್ದೇನೆ. ಆದರೆ, ಅದರ ಋಣ ಇಲ್ಲದಂತಾಗಿದೆ. ನೈತಿಕತೆ ಇದ್ದರೆ ಈಗಲೇ ನನ್ನ ಕಾರನ್ನು ವಾಪಸ್ ಕೊಡಬೇಕು ಎಂದು ತಿಳಿಸಿದರು.

ಮಠ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ: ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಅವರು ಪೀಠದ ಬಗ್ಗೆ ಮಾತನಾಡಿ 'ನಾವು ಗಂಡಸರು ಬಂದಿದ್ದೇವೆ' ಎಂದು ಹೇಳಿದ್ದಾರೆ. ಮಠದ ಟ್ರಸ್ಟಿನಲ್ಲಿ ಇರುವವರೆಲ್ಲರೂ ಗಂಡಸರೇ. ನಾವುಗಳೇ ತಲೆ ಎತ್ತಿ ನೋಡುವಂತಹ ಕಟ್ಟಡಗಳನ್ನು ಕಟ್ಟಿದ್ದೇವೆ. ನಾವು ಯಾವುದೇ ಕಾರಣಕ್ಕೆ ಮಠ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂದು ಕೇಳಿದರು.

ಶ್ರೀಗಳು ಸತ್ಯಹರಿಶ್ಚಂದ್ರರಲ್ಲ

ವಿಜಯಪುರ: ವಚನಾನಂದ ಸ್ವಾಮೀಜಿ ಸತ್ಯಹರಿಶ್ಚಂದ್ರರಲ್ಲ, ಎರಡೂ ಟ್ರಸ್ಟ್‌ಗಳನ್ನು ಖಾಸಗಿ ಆಸ್ತಿ ಮಾಡಿಕೊಂಡಿದ್ದಾರೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಿಡಿಕಾರಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಎರಡೂ ಪೀಠದ ಟ್ರಸ್ಟ್‌ಗಳು ನಂಬಿಕೆ ಕಳೆದುಕೊಂಡಿವೆ. ವಚನಾನಂದ ಸ್ವಾಮೀಜಿ ಸತ್ಯಹರಿಶ್ಚಂದ್ರರಲ್ಲ. ಎರಡು ಕಡೆ ಇದೇ ನಡೆಯುತ್ತಿದೆ. ಇದನ್ನು ಖಾಸಗಿ ಆಸ್ತಿ ಮಾಡಿಕೊಂಡಿದ್ದಾರೆ. ಇವರಿಂದ ಸಮಾಜಕ್ಕೆ ನ್ಯಾಯ ಸಿಗಲ್ಲ. ಪ್ರಾಮಾಣಿಕರು, ಸಮಾಜಕ್ಕಾಗಿ ಕೆಲಸ ಮಾಡುವವರು ಯಾರೂ ಟ್ರಸ್ಟ್‌ನಲ್ಲಿ ಇಲ್ಲ. ಉಚ್ಚಾಟನೆ ಮಾಡಿದವರು, ಮಾಡಿಸಿಕೊಂಡವರು ಎಲ್ಲರೂ ಒಂದೇ ರೀತಿಯಾಗಿದ್ದಾರೆ. ಸಾಮಾಜಿಕ ಕಳಕಳಿಯಿಲ್ಲ, ಸರಕಾರವನ್ನು ಬ್ಲ್ಯಾಕ್‌ಮೇಲ್ ಮಾಡುವುದಕ್ಕೆ ಈ ಟ್ರಸ್ಟ್‌ಗಳು ಇದ್ದಂತೆ ಆಗಿದೆ ಎಂದರು.

ಆಪಾದನೆಯಿಂದ ಮುಕ್ತರಾಗಲಿ

ಜಯಮೃತ್ಯುಂಜಯ ಶ್ರೀಗಳ ವಿರುದ್ಧ ದಾಖಲಾಗಿದ್ದ ದೂರಿನ ಬಗ್ಗೆ ಮಾತನಾಡಿದ ಅವರು, ನಾನು ಸಂತ್ರಸ್ತೆಯ ವಿಡಿಯೊ ನೋಡಿದ್ದೇನೆ. ದೂರೇ ಕೊಟ್ಟಿಲ್ಲ ಅಂದ ಮೇಲೆ ತನಿಖೆ ಆಗಲಿ. ಅದು ಯಾರ ಸಹಿ, ಡುಪ್ಲಿಕೇಟ್ ಇದೆಯಾ? ಇಲ್ಲವಾ? ಎನ್ನೋದು ತನಿಖೆಯಿಂದ ಹೊರಬರಲಿ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲಿ. ನಾನು ಯಾರ ಪರವಾಗಿಯೂ ಮಾತನಾಡಲ್ಲ. ಶ್ರೀಗಳು ಆಪಾದನೆಯಿಂದ ಮುಕ್ತರಾಗಬೇಕು ಎಂದು ಯತ್ನಾಳ್ ಅವರು ತಿಳಿಸಿದರು.

ನೋಡಲು ತನ್ನಂತೆ ಇಲ್ಲವೆಂದು ಮಗನನ್ನು ನದಿಗೆ ದೂಡಿ ಕೊಲೆ

ವಿಜಯಪುರ: ಮಗ ನೋಡಲು ತನ್ನಂತೆ ಇಲ್ಲ ಎಂದು ತಂದೆಯೇ ಹೆತ್ತ ಮಗನನ್ನು ನದಿಗೆ ತಳ್ಳಿ ಕೊಲೆ ಮಾಡಿರುವ ಹೃದಯ ವಿದ್ರಾವಕ ಘಟನೆ ನಡೆದಿದೆ. ವಿಜಯಪುರ ಜಿಲ್ಲೆಯ ನಾಗಠಾಣ ಗ್ರಾಮದ ಮಲ್ಲಿಕಾರ್ಜುನ ಅರಕೇರಿ ಎಂಬುವವ ತನ್ನ ಮಗ ಸಿದ್ಧಾರ್ಥ್ (6) ತನ್ನಂತೆ ಹೋಲಿಕೆ ಇಲ್ಲ ಎಂದು ಸಂಚು ರೂಪಿಸಿ ಹೆತ್ತ ಮಗನನ್ನೇ ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಕರಾಡ್ ಬಳಿ ಕೃಷ್ಣಾ ನದಿಗೆ ತಳ್ಳಿ ಹತ್ಯೆ ಮಾಡಿದ್ದಾನೆ. ಮಲ್ಲಿಕಾರ್ಜುನನಿಗೆ ಕೆಲ ಗೆಳೆಯರು ನಿನ್ನ ಮಗ ನಿನ್ನ ಹಾಗೆ ಇಲ್ಲ ಎಂದು ನಿತ್ಯ ಛೇಡಿಸುತ್ತಿದ್ದರಂತೆ. ಇದರಿಂದ ರೋಸಿಹೋದ ಮಲ್ಲಿಕಾರ್ಜುನ, ಮಾರ್ಚ್ 16ರಂದು ಮಗನನ್ನು ಕೋಚಿಂಗ್ ಸೆಂಟರ್‌ಗೆ ಸೇರಿಸಲು ಸಿಂದಗಿಗೆ ಕರೆದುಕೊಂಡು ಹೋಗುವೆ ಎಂದು ಮನೆಯವರಿಗೆ ಹೇಳಿ, ನೇರವಾಗಿ ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಕರಾಡ್ ಬಳಿ ಕೃಷ್ಣಾ ನದಿಗೆ ಮಗನನ್ನು ತಳ್ಳಿ ವಾಪಸ್ ಬಂದಿದ್ದಾನೆ. ಬಳಿಕ ಮಲ್ಲಿಕಾರ್ಜುನನ ಪತ್ನಿ ಭಾಗ್ಯಶ್ರೀ 'ಮಗನಿಗೆ ಕರೆ ಮಾಡಿ ಮಾತಾಡಿಸಿ' ಎಂದು ಕೇಳಿದಾಗ ಯಾರೋ ಒಬ್ಬರಿಗೆ ಕರೆ ಮಾಡಿದ್ದಾನೆ. ಫೋನ್ ರಿಸೀವ್ ಮಾಡಿದ ವ್ಯಕ್ತಿಯು 'ಇಲ್ಲ, ಮಗ ಮಾತನಾಡಲು ಒಪ್ಪುತ್ತಿಲ್ಲ, ಆತ ಆಟದಲ್ಲಿ ಬ್ಯೂಜಿ ಇದ್ದಾನೆ' ಎಂದು ಹೇಳಿದ್ದಾರೆ. ಬಳಿಕ ಮಗ ಕಾಣೆಯಾದ ಬಗ್ಗೆ ದೂರು ನೀಡಲಾಗಿತ್ತು. ಮಲ್ಲಿಕಾರ್ಜುನನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸಿದ ವೇಳೆ ಕೊಲೆ ವಿಚಾರ ಬೆಳಕಿಗೆ ಬಂದಿದೆ. ವಿಜಯಪುರ ಗ್ರಾಮೀಣ ಠಾಣೆ ಪೊಲೀಸರು ತನಿಖೆ ನಡೆಸಿದ್ದಾರೆ.

ಕಾರಿಗೆ ಟಿಪ್ಪರ್ ಡಿಕ್ಕಿ ಇಬ್ಬರು ಸ್ಥಳದಲ್ಲೇ ಸಾವು

ಚಾಮರಾಜನಗರ: ಕಾರಿಗೆ ಟಿಪ್ಪರ್ ಡಿಕ್ಕಿಯಾದ ಪರಿಣಾಮ ಇಬ್ಬರು ಮೃತಪಟ್ಟ ಘಟನೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಮಲ್ಲಯ್ಯನಪುರ ಗೇಟ್ ಬಳಿ ಮಂಗಳವಾರ ನಡೆದಿದೆ. ಕೇರಳ ಮೂಲದ ಆಯೇಷಾ ನೂರಿ (41), ನುಹಾ (18) ಮೃತರು. ನಹಿಯಾನ್ ಎಂಬ 9 ವರ್ಷದ ಬಾಲಕ ಮತ್ತು ಚಾಲಕ ಮಹಮ್ಮದ್ ಅಜೀರ್ ಎಂಬುವರು ಗಂಭೀರವಾಗಿ ಗಾಯಗೊಂಡಿದ್ದು, ಮೈಸೂರಿನ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಕೇರಳದಿಂದ ಬೆಂಗಳೂರಿಗೆ ತೆರಳುತ್ತಿದ್ದ ಕಾರಿಗೆ ಗುಂಡ್ಲುಪೇಟೆಯಿಂದ ಕೇರಳಗೆ ಎಂ-ಸ್ಯಾಂಡ್ ಹೊತ್ತು ಸಾಗುತ್ತಿದ್ದ ಟಿಪ್ಪರ್ ಡಿಕ್ಕಿ ಹೊಡೆದಿದೆ.

ಮುಂದಿನ ಒಂದು ವಾರಗಳ ಕಾಲ ರಾಜ್ಯದಲ್ಲಿ ಬಿಸಿಲು ಮಳೆ ಮಿಶ್ರಿತ ವಾತಾವರಣ

ಉಷ್ಣಅಲೆ: ಕೆಲವೆಡೆ ಯೆಲ್ಲೋ ಅಲರ್ಟ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಗರಿಷ್ಠ ತಾಪಮಾನದಲ್ಲಿ ಏರಿಕೆಯಾಗುತ್ತಿದ್ದು, ಎಲ್ಲ ಕಡೆಗಳಲ್ಲಿಯೂ ಉಷ್ಣ ಅಲೆಯ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ರಾಜ್ಯದಲ್ಲಿ ಗರಿಷ್ಠ ತಾಪಮಾನದಲ್ಲಿ ಏರಿಕೆಯಾಗುತ್ತಿರುವ ಹಿನ್ನೆಲೆ ಈಗಾಗಲೇ ಕರಾವಳಿ ಸೇರಿದಂತೆ ಕೆಲವು ಜಿಲ್ಲೆಗಳಿಗೆ ಉಷ್ಣ ಅಲೆಯ ನಿರೀಕ್ಷೆ ಇರುವುದರಿಂದ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಮುಂದಿನ ಒಂದು ವಾರಗಳ ಕಾಲ ರಾಜ್ಯದಲ್ಲಿ ಬಿಸಿಲು ಮಳೆ ಮಿಶ್ರಿತ ವಾತಾವರಣ ಕಂಡು ಬರಲಿದ್ದು, ಬೆಂಗಳೂರು ಸೇರಿದಂತೆ ಒಂದೆರಡು ಜಿಲ್ಲೆಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ಭಾಗಗಳಲ್ಲಿ ಅಲ್ಲಲ್ಲಿ ಮಳೆ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಏಪ್ರಿಲ್ 14ರಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಮಳೆ ಮತ್ತೆ ಅಬ್ಬರಿಸಲಿದೆ. ಪ್ರತ್ಯೇಕ ಸ್ಥಳಗಳಲ್ಲಿ ಹಗುರದಿಂದ ಸಾಧಾರಣವಾಗಿ ಸುರಿಯಲಿದ್ದು, ಒಣ ಹವೆ ಮೇಲುಗೈ ಸಾಧಿಸಲಿದೆ. ಉತ್ತರ ಕರ್ನಾಟಕ, ಕರಾವಳಿ ಹಾಗೂ ಕೆಲವು ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ಒಂದು ವಾರ ಮಳೆ ಬರಲಿದೆ. ಮಾತ್ರವಲ್ಲದೇ ಕಳೆದ ಎರಡು ದಿನಗಳಲ್ಲಿ ರಾಜ್ಯ ವಿವಿಧೆಡೆ ಗರಿಷ್ಠ ತಾಪಮಾನದಲ್ಲಿ ಸುಮಾರು 1-3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದ್ದು. ಇದೇ ಸ್ಥಿತಿ ರಾಜ್ಯದಲ್ಲಿ ಮುಂದುವರಿಯಲಿದೆ ಎಂದು ಐಎಂಡಿ ಎಚ್ಚರಿಸಿದೆ.

ಬಿಸಿಲು ಮಳೆ ಮುನ್ಸೂಚನೆ: ಕರಾವಳಿಯ ಉಡುಪಿ, ಉತ್ತರ ಕನ್ನಡದಲ್ಲಿ ಮುಂದಿನ ಏ.15ರವರೆಗೆ ಎರಡು ದಿನ ಅತ್ಯಧಿಕ ಬಿಸಿಲು ಕಂಡು ಬರಲಿದೆ. ಗರಿಷ್ಠ ತಾಪಮಾನ ಏರಿಕೆ ಆಗಲಿದ್ದು, ದಕ್ಷಿಣ ಕನ್ನಡ ಜಿಲ್ಲೆ ಒಳಗೊಂಡಂತೆ ಮೂರು ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಮಳೆಯು ಆಗಲಿದೆ. ನಂತರ ಏಪ್ರಿಲ್ 20ರವರೆಗೆ ಕರಾವಳಿಯಲ್ಲಿ ಮತ್ತೆ ಮಳೆ ತೀವ್ರ ಹೆಚ್ಚಾಗುವ ಸಾಧ್ಯತೆ ಇದ್ದು, ವ್ಯಾಪಕ ಮಳೆ ನಿರೀಕ್ಷೆ ಇದೆ. ಉತ್ತರ ಕರ್ನಾಟಕದ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಭಾಗದಲ್ಲಿ ಮುಂದಿನ ಒಂದು ವಾರ ಹಗುರದಿಂದ ಸಾಧಾರಣವಾಗಿ ಗುಡುಗು ಸಹಿತ ವ್ಯಾಪಕ ಮಳೆ ಆಗಲಿದೆ. ಇದರಲ್ಲಿ ಏಪ್ರಿಲ್ 16ರಿಂದ ಮೂರು ದಿನ ಕಲಬುರಗಿ, ವಿಜಯಪುರ, ಬೆಳಗಾವಿ, ಬೀದರ್ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ 'ಉಷ್ಣಅಲೆ ನಿರ್ಮಾಣವಾಗಲಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಮಂಡ್ಯ, ಶಿವಮೊಗ್ಗ, ರಾಮನಗರ ಜಿಲ್ಲೆಗಳ ಪ್ರತ್ಯೇಕ ಸ್ಥಳಗಳಲ್ಲಿ ಗುಡುಗು ಮಿಂಚು ಸಹಿತ ಹಗುರದಿಂದ ಸಾಧಾರಣೆ ಮಳೆ ಸಂಭವವಿದೆ. ಇನ್ನುಳಿದ ದಕ್ಷಿಣ ಒಳನಾಡಿನ ಜಿಲ್ಲೆಗಳಾದ ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ತುಮಕೂರು ಭಾಗಗಳಲ್ಲಿ ಬಿಸಿಲು ಹೆಚ್ಚಿರಲಿದೆ. ಒಟ್ಟಾರೆ ರಾಜ್ಯದಲ್ಲಿ ಏಳು ದಿನ ಅಲ್ಲಲ್ಲಿ ಮಳೆ ಆಗುವುದರ ಜತೆಗೆ ಅತ್ಯಧಿಕ ಗರಿಷ್ಠ ತಾಪಮಾನ ಕಂಡು ಬರಲಿದೆ.

ಬೆಂಗಳೂರಿನಲ್ಲಿಯೂ ಪರಿಸ್ಥಿತಿ ಭಿನ್ನವಾಗಿಲ್ಲ

ರಾಜಧಾನಿ ಬೆಂಗಳೂರಿನಲ್ಲಿಯೂ ಪರಿಸ್ಥಿತಿ ಭಿನ್ನವಾಗಿಲ್ಲ. ಸಾಮಾನ್ಯವಾಗಿ ತಂಪು ಹವಾಮಾನಕ್ಕೆ ಹೆಸರಾಗಿದ್ದ ಬೆಂಗಳೂರಿನಲ್ಲಿ ಮಂಗಳವಾರ 36 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಹವಾಮಾನ ಇಲಾಖೆಯ ಮುನ್ಸೂಚನೆಯಂತೆ, ಮುಂದಿನ ದಿನಗಳಲ್ಲಿ ಉಷ್ಣಾಂಶ 38 ಡಿಗ್ರಿ ತಲುಪುವ ಸಾಧ್ಯತೆಯಿದೆ. ಉತ್ತರ ಮತ್ತು ಮಧ್ಯ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ 'ಉಷ್ಣ ಅಲೆ' ಏಳುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ಪ್ರಮುಖವಾಗಿ ಬೀದರ್, ಬಳ್ಳಾರಿ, ವಿಜಯನಗರ, ಬಾಗಲಕೋಟೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬಿಸಿಗಾಳಿ ಹೆಚ್ಚಾಗಲಿದ್ದು, ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ಬಿಸಿಲಿನ ತೀವ್ರತೆ ಯಿಂದಾಗಿ ಆರೋಗ್ಯದ ಮೇಲೆ ಹಾನಿಯಾಗದಂತೆ ದ್ರವ ಪದಾರ್ಥಗಳ ಸೇವನೆ ಹೆಚ್ಚಿಸುವಂತೆ ಮತ್ತು ಅನಗತ್ಯವಾಗಿ ಬಿಸಿಲಿಗೆ ಒಡ್ಡಿಕೊಳ್ಳದಂತೆ ವೈದ್ಯರು ಸಲಹೆ ನೀಡಿದ್ದಾರೆ.

ವಿಜಯನಗರ ಜಿಲ್ಲೆಯಲ್ಲಿ ಸುರಿದ ಗಾಳಿ ಸಹಿತ ಮಳೆಗೆ ಪಪ್ಪಾಯ ಬೆಳೆ ನಾಶಗೊಂಡಿರುವುದು.

ವಿಜಯನಗರ: ಮಳೆಗೆ ಬೆಳೆ ನಾಶ

ಹೊಸಪೇಟೆ: ವಿಜಯನಗರ ಜಿಲ್ಲೆಯ ಹಲವೆಡೆ ಸುರಿದ ಗುಡುಗು ಸಹಿತ ಭಾರಿ ಮಳೆಗೆ ಹಲವು ಅವಾಂತರ ಸೃಷ್ಟಿಯಾಗಿವೆ. ಮಳೆಯಿಂದ ಜಿಲ್ಲೆಯ ಕೆಲವೆಡೆ ಪಪ್ಪಾಯ, ಅಡಕೆ ಸೇರಿದಂತೆ ತೋಟಗಾರಿಕೆ ಬೆಳೆಗಳು ಹಾಳಾಗಿವೆ. ಮತ್ತೊಂದೆಡೆ ಸಿಡಿಲಿಗೆ ಜಮೀನನಲ್ಲಿ ಕಟ್ಟಿ ಹಾಕಿದ್ದ ಎತ್ತು ಬಲಿಯಾಗಿದೆ. ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಅಮರದೇವರಗುಡ್ಡ ಗ್ರಾಮದಲ್ಲಿ ಮಳೆಗೆ ಪಪ್ಪಾಯ, ಅಡಕೆ ಸೇರಿ ತೋಟಗಾರಿಕೆ ಬೆಳೆ ಸಂಪೂರ್ಣ ನಾಶವಾಗಿದೆ. ಕಟಾವಿಗೆ ಬಂದಿದ್ದ ಪಪ್ಪಾಯ ಬೆಳೆ ಕಳೆದುಕೊಂಡು ರೈತರು ಕಂಗಾಲಾಗಿದ್ದಾರೆ. ರೈತ ಬೀರಪ್ಪ ತನ್ನ 4 ಎಕರೆ ಜಮೀನಿನಲ್ಲಿ, ಲಕ್ಷಾಂತರ ಹಣ ಖರ್ಚು ಮಾಡಿ ಪಪ್ಪಾಯ ಬೆಳೆದಿದ್ದ. ಇದೀಗ ಲಕ್ಷಾಂತರ ಮೌಲ್ಯದ ಬೆಳೆ ಕಳೆದುಕೊಂಡಿರುವ ರೈತ ದಿಕ್ಕು ತೋಚದಂತಾಗಿದ್ದಾನೆ. ಇನ್ನೊಂದೆಡೆ ಕೂಡ್ಲಿಗಿ ತಾಲೂಕಿನ ಗುಣಸಾಗರ ಗ್ರಾಮದಲ್ಲಿ ರೈತ ಈರಣ್ಣ ಎನ್ನುವವರಿಗೆ ಸೇರಿದ್ದ ಎತ್ತು ಸಿಡಿಲಿಗೆ ಬಲಿಯಾಗಿದೆ. ಜಮೀನಿನಲ್ಲಿ ಎತ್ತುಗಳನ್ನು ಕಟ್ಟಿ ಹಾಕಿದ್ದ ವೇಳೆ ಸಿಡಿಲು ಬಡಿದು ಎತ್ತು ಮೃತಪಟ್ಟಿದೆ. ಕೆಲವು ಅವಾಂತರಗಳ ನಡುವೆಯೂ ಜಿಲ್ಲೆಯಲ್ಲಿ ಸುರಿದ ಉತ್ತಮ ಮಳೆ ರೈತರಲ್ಲಿ ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಕಲಬುರಗಿ: ಬಿಸಿಗಾಳಿ, ಆರೆಂಜ್ ಅಲರ್ಟ್

ಕಲಬುರಗಿ: ಜಿಲ್ಲೆಯಾದ್ಯಂತ ಇದೇ ಏಪ್ರಿಲ್ 15 ರಿಂದ 17ರ ವರೆಗೆ ಬಿಸಿಗಾಳಿ ಪರಿಸ್ಥಿತಿ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಘೋಷಿಸಿದ್ದು, ಅಗತ್ಯ ಕ್ರಮಗಳನ್ನು ಪಾಲಿಸಲು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನಮ್ ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ. ಮಧ್ಯಾಹ್ನ 12 ರಿಂದ ಸಂಜೆ 4 ಗಂಟೆವರೆಗೆ ಬಿಸಿಲಿನ ಪ್ರಖರತೆ ಹೆಚ್ಚಾಗಿರುವುದರಿಂದ ಈ ಸಮಯದಲ್ಲಿ ಸಾರ್ವಜನಿಕರು ವಿನಾ ಕಾರಣ ಓಡಾಟ ನಿಲ್ಲಿಸಬೇಕು. ಮನೆಅಥವಾ ಮರದ ನೆರಳಿನಲ್ಲಿ ಕುಳಿತುಕೊಳ್ಳಬೇಕು. ಬಿಸಿಲಿನಲ್ಲಿ ಹೋಗುವಾಗ ಕನ್ನಡಕಗಳು, ಛತ್ರಿ-ಟೋಪಿ, ಬೂಟುಗಳು ಅಥವಾ ಚಪ್ಪಲ್‌ಗಳನ್ನು ಬಳಸಬೇಕು. ಪ್ರಯಾಣಿಕರು ತಮ್ಮೊಂದಿಗೆ ನೀರು ತೆಗೆದು ಕೊಂಡು ಹೋಗಬೇಕು. ಹಗುರವಾದ ತಿಳಿ ಬಣ್ಣದ ಬಟ್ಟೆ ಧರಿಸಲು ಸಲಹೆ ನೀಡಲಾಗಿದೆ.

ಎನ್‌ಆರ್ ಪುರ ಸೇತುವೆ ಸಜ್ಜಾಗಲು ಶ್ರೀನಿವಾಸ್ ಶ್ರಮ ಅಪಾರ | ಹುಟ್ಟೂರಿನ ಋಣ ತೀರಿಸಬೇಕೆಂದು ಸಿಎಂ ಬಳಿ ಪಟ್ಟು

ಸಿದ್ದು ಸೇತುವೆ ನಿರ್ಮಾಣ ಹಿಂದಿರುವ ಶಕ್ತಿ ಶ್ರೀನಿವಾಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನರಸಿಂಹರಾಜಪುರ ಭಾಗದ ಬಹುದೊಡ್ಡ ಸಮಸ್ಯೆಗೆ ಪರಿಹಾರವಾಗಿ ರಾಜ್ಯ ಸರಕಾರ ಎನ್‌ಆರ್ ಪುರ-ಹೊನ್ನೇಕುಡಿಗೆ ಸೇತುವೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿ, ಸಾವಿರಾರು ಜನರ ಸಂಕಷ್ಟಕ್ಕೆ ಪರಿಹಾರ ಕೊಟ್ಟಿದ್ದಾರೆ. ಆದರೆ ಈ ಸೇತುವೆ ನಿರ್ಮಾಣದ ಹಿಂದಿರುವ ಶಕ್ತಿ ಮಾತ್ರ ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್ ಎನ್ನುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಹಿಡಿದು ಸ್ಥಳೀಯವರಿಗೆ ಪ್ರಶ್ನಾತೀತ ಮಾತಾಗಿದೆ.

ಭದ್ರಾ ಜಲಾಶಯ ನಿರ್ಮಾಣದ ವೇಳೆ ಎನ್‌ಆರ್ ಪುರದಿಂದ ಸಂಪರ್ಕ ಕಡಿದುಕೊಂಡ ಹೊನ್ನೇಕುಡಿಗೆ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಸ್ಥರು ಅನುಭವಿಸುತ್ತಿದ್ದ ಸಮಸ್ಯೆಯನ್ನು ಗಮನಿಸಿ, ತಮ್ಮೂರಿಗೆ ಸೇತುವೆ ನಿರ್ಮಾಣವಾಗಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿ ಪ್ರಸ್ತಾಪ ವಿರಿಸಿದ್ದೇ ಶ್ರೀನಿವಾಸ್ ಅವರು. ಸಿದ್ದರಾಮಯ್ಯ ಅವರೊಂದಿಗಿನ ಆತ್ಮೀಯತೆಯನ್ನು ಬಳಸಿಕೊಂಡು, ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಸೇತುವೆ ನಿರ್ಮಾಣಕ್ಕೆ ಅಡಿಗಲ್ಲನ್ನು ಹಾಕಿಸಿದ್ದರು. ಆದರೆ ಬಳಿಕ ಬಂದ ಸರಕಾರಗಳ ನಿರ್ಲಕ್ಷ್ಯದಿಂದಾಗಿ ಸೇತುವೆ ಕಾಮಗಾರಿ ಪೂರ್ಣಗೊಂಡಿರಲಿಲ್ಲ. ಸಿದ್ದರಾಮಯ್ಯ ಅವರು 2ನೇ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ ಈ ಸೇತುವೆ ಕಾರ್ಯ ಪೂರ್ಣಗೊಳಿಸುವುದರೊಂದಿಗೆ, ರಸ್ತೆ ಅಗಲೀಕರಣಕ್ಕೂ 60 ಕೋಟಿ ರು.ಗಳನ್ನು ತರುವ ಮೂಲಕ ಹುಟ್ಟೂರಿನ ಅಭಿವೃದ್ಧಿಗೆ ನಾಂದಿ ಹಾಡಿದ್ದಾರೆ.

ಎನ್‌ಆರ್ ಪುರ-ಹೊನ್ನೇಕುಡಿಗೆ ಸೇತುವೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಸಚಿವ ಕೆ.ಜೆ.ಜಾರ್ಜ್, ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮತ್ತಿತರರು ಇದ್ದರು.

ಎಂ.ಶ್ರೀನಿವಾಸ್ ಅವರ ಈ ಕಾರ್ಯವನ್ನು ಎನ್‌ಆರ್ ಪುರದ ಜನರು ಮಾತ್ರವಲ್ಲದೇ, ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಕೆ.ಜೆ.ಜಾರ್ಜ್, ಸತೀಶ್ ಜಾರಕಿಹೊಳಿ ಸೇರಿದಂತೆ ಸ್ಥಳೀಯ ಶಾಸಕರಾದ ಟಿ.ಡಿ.ರಾಜೇಗೌಡರು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಕೇವಲ ನಾಯಕರಷ್ಟೇ ಅಲ್ಲದೇ, ಎನ್‌ಆರ್ ಪುರದ ಇಂದಿನ ಈ ಅಭಿವೃದ್ಧಿ ಕಾಮಗಾರಿಗಳಿಗೆ ಶ್ರೀನಿವಾಸ್ ಅವರ ಕೊಡುಗೆ ಅಪಾರವಿದೆ ಎನ್ನುವ ಮಾತುಗಳನ್ನು ಸ್ಥಳೀಯರು ಆಡುತ್ತಾರೆ.

ಸ್ನೇಹಿತ ಹೇಳಿದ್ದಕ್ಕೆ ಮಾಡಿದ್ದೆ: ಇನ್ನು ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ಎಡೇ ಹಳ್ಳಿ ಎಂದು ಹೆಸರಿದ್ದ ಈ ಊರಿಗೆ ಹಿಂದೆ ಮೈಸೂರಿನ ಮಹಾರಾಜರಾದ ನರಸಿಂಹರಾಜ ಒಡೆಯರ್ ಬಂದು ಹೋದ ಮೇಲೆ ನರಸಿಂಹರಾಜಪುರ ಎಂದು ನಾಮಾಂಕಿತವಾಗಿದೆ. ಇಲ್ಲೊಂದು ಪ್ರವಾಸಿ ಮಂದಿರ ಉದ್ಘಾಟನೆಗೆ ಬಂದಿದ್ದೆ, ಆಗ ನನ್ನ ಸ್ನೇಹಿತ ಎಂ.ಶ್ರೀನಿವಾಸ್ ಅವರು ಮೈಸೂರು ಮಹಾರಾಜರು ಬಂದು ಹೋಗಿ ನೂರು ವರ್ಷವಾಗಿದೆ. ನೂರು ವರ್ಷದ ನಂತರ ರಾಜನಂತೆ ನೀವು ನನ್ನೂರಿಗೆ ಬಂದಿದ್ದೀರಾ, ಏನಾದರೂ ಕೊಡುಗೆ ನೀಡಿ ಎಂದು ಬೇಡಿಕೆ ಇಟ್ಟಿದ್ದರು. ಏನು ಕೊಡುಗೆ ಬೇಕು ಎಂದಾಗ, ಹೊನ್ನೇಕುಡಿಗೆ ಗ್ರಾಪಂ ವ್ಯಾಪ್ತಿಯ ಗ್ರಾಮಸ್ಥರ ದಶಕಗಳ ಬೇಡಿಕೆ ಯಾಗಿರುವ ಹೊನ್ನೇಕುಡಿಗೆ ಸಂಪರ್ಕ ಸೇತುವೆ ನೀಡಿ ಎಂದಿದ್ದರು. ವೇದಿಕೆ ಯಲ್ಲಿಯೇ ಕಾಮಗಾರಿ ಘೋಷಣೆ ಮಾಡಿದ್ದೆ. ನಂತರ ಅದರ ಶಂಕುಸ್ಥಾಪನೆ ಯನ್ನೂ ನಾನೇ ಮಾಡಿದ್ದೆ, ಉದ್ಘಾಟನೆಗೂ ನಾನೇ ಬರುತ್ತೇನೆ ಎಂದಿದ್ದೆ. ಆ ಸೇತುವೆ ಉದ್ಘಾಟನೆಯನ್ನು ಸಂತೋಷದಿಂದ ಮಾಡಿದ್ದೇನೆ. ರಸ್ತೆ ಅಗಲೀಕರಣಕ್ಕೂ 60 ಕೋಟಿ ಬೇಕು ಎಂದು ಎಂ.ಶ್ರೀನಿವಾಸ್ ಬೆನ್ನು ಬಿಡದೆ ದುಂಬಾಲು ಬಿದ್ದರು. ಅದಕ್ಕೂ ಅಸ್ತು ಎಂದು ಬಜೆಟ್‌ನಲ್ಲಿ 60 ಕೋಟಿ ಮಂಜೂರು ಮಾಡಿಕೊಟ್ಟಿದ್ದೇನೆ. ಅದರ ಕಾಮಗಾರಿಗೂ ಭೂಮಿಪೂಜೆ ಯನ್ನು ನೆರವೇರಿಸಿದ್ದೇನೆ. ಶ್ರೀನಿವಾಸ್ ಅವರು ತಮ್ಮ ಹುಟ್ಟೂರಿನ ಋಣ ತೀರಿಸಿದ್ದಾರೆ. ಇಷ್ಟೆಲ್ಲಾ ಅಭಿವೃದ್ಧಿ ಕಾರ್ಯವಾಗಿರುವುದು ಎಂ.ಶ್ರೀನಿವಾಸ್ ಅವರಿಂದಲೇ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾವುಕರಾದ ಶ್ರೀನಿವಾಸ್

ಸೇತುವೆ ನಿರ್ಮಾಣದ ಹಿಂದಿನ ಶ್ರಮದ ಬಗ್ಗೆ ಮಾತನಾಡಿದ್ದ ಕೆಎಸ್‌ಟಿಡಿಸಿ ಅಧ್ಯಕ್ಷ ಎಂ.ಶ್ರೀನಿವಾಸ್ ಅವರು, ಸೇತುವೆ ನಿರ್ಮಾಣದ ವೇಳೆ ರಸ್ತೆ ಅಗಲೀಕರಣ, ಭೂಸ್ವಾಧೀನಕ್ಕೆ ಕೆಲವರ ಆಕ್ಷೇಪ ಸೇರಿದಂತೆ ಎದುರಾದ ಸಮಸ್ಯೆಗಳ ನೆನೆದು ಭಾವುಕರಾದರು. ನನ್ನ ಹಾಗೂ ಸಿದ್ದರಾಮಯ್ಯ ಅವರದ್ದು 35 ವರ್ಷದ ಸ್ನೇಹ. ನನ್ನ ಸ್ನೇಹದ ಎಲ್ಲವನ್ನೂ ಹುಟ್ಟೂರಿನ ಋಣ ತೀರಿಸುವುದಕ್ಕೆ ಬಳಸಿಕೊಂಡಿದ್ದೇನೆ. ಇದನ್ನು ಹೊರತುಪಡಿಸಿ, ಇನ್ನ್ಯಾವುದೇ ವೈಯಕ್ತಿಕ ಕೆಲಸಕ್ಕೆ ಬಳಸಿಕೊಂಡಿಲ್ಲ. ಸಿದ್ದರಾಮಯ್ಯ ಅವರು ಪರಿಪೂರ್ಣ ವ್ಯಕ್ತಿಯಾಗಿದ್ದಾರೆ. ಬಡವರಿಗೆ ಹತ್ತಾರು ಭಾಗ್ಯ ಗಳನ್ನು ನೀಡುವ ಮೂಲಕ ಭಾಗ್ಯವಿಧಾತವಾಗಿದ್ದಾರೆ. ಮುಂದೆ ಸಿದ್ದರಾಮಯ್ಯ ಅವರಂತಹ ಇನ್ನೊಬ್ಬ ಮುಖ್ಯ ಮಂತ್ರಿ ರಾಜ್ಯಕ್ಕೆ ಸಿಗುವರೇ ಎನ್ನುವ ಅನು ಮಾನವಿದೆ. ಸಿದ್ದರಾಮಯ್ಯ ನಮ್ಮ ಭಾಗಕ್ಕೆ ನೂರಾರು ಕೋಟಿ ಅನುದಾನ ನೀಡಿದ್ದಾರೆ.

> ಎನ್‌ಆರ್ ಪುರ ಸೇತುವೆಗೆ ಸಿದ್ದರಾಮಯ್ಯ ಸೇತುವೆ ಎಂದು ಹೆಸರಿಡಲಾಗಿದೆ. ಆದರೆ ನಿಜಕ್ಕೂ ಹೇಳಬೇಕೆಂದರೆ ಅದಕ್ಕೆ 'ಸಿದ್ದರಾಮಯ್ಯ-ಶ್ರೀನಿವಾಸ್ ಸ್ನೇಹದ ಸೇತುವೆ' ಎಂದು ಹೆಸರಿಡಬೇಕು. ರಾಜ್ಯದ ಇತಿಹಾಸದಲ್ಲಿ ಒಂದು ಸೇತುವೆ ಇಷ್ಟು ವೇಗವಾಗಿ ನಿರ್ಮಾಣವಾಗಲು ಶ್ರೀನಿವಾಸ್ ಅವರ ಶ್ರಮ ಬಹಳಷ್ಟಿದೆ. ಅವರು ಕಾರ್ಯ ನಿರ್ವಹಿಸುವುದರೊಂದಿಗೆ ನಮ್ಮೆಲ್ಲರನ್ನು ಸೇರಿಸಿಕೊಂಡು, ಹಗಲು-ರಾತ್ರಿ ಕೆಲಸ ಮಾಡಿದ್ದಾರೆ.
>
> **-ರಾಜೇಗೌಡ**, ಶಾಸಕ

ಜಾರ್ಜ್ ಅನಾವರಣ

ನರಸಿಂಹರಾಜಪುರದ ಹಂದೂರು ನೂತನ ಸೇತುವೆ ಬಳಿ ಪ್ರತಿಷ್ಠಾಪಿಸಿರುವ ಸಿದ್ದರಾಮಯ್ಯ ಅವರ ಪುತ್ಥಳಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಿದ್ದಾರೆ ಎಂದು ಸೋಮವಾರದ ಸಂಚಿಕೆಯಲ್ಲಿ ಮುದ್ರಣವಾಗಿದ್ದು, ವಾಸ್ತವವಾಗಿ ಸಿದ್ದರಾಮಯ್ಯ ಅವರ ಪುತ್ಥಳಿಯನ್ನು ಸಚಿವ ಕೆ.ಜೆ.ಜಾರ್ಜ್ ಅವರು ಅನಾವರಣಗೊಳಿಸಿದರು.

-ಸಂ.

ಸಂಪಾದಕೀಯ

ಸನ್ಯಾಸ ಧರ್ಮದ ಪಾಲನೆಯಾಗಬೇಕು

ಜಾತಿ ಕಾರಣಕ್ಕಾಗಿ ಕೆಲವು ಕಾವಿ ಧರಿಸಿದ ಕೆಲವು ಶ್ರೀಗಳು ಪಾದಯಾತ್ರೆ ಮಾಡುವುದು, ರಾಜಕಾರಣಿಗಳನ್ನು ಬೆಂಬಲಿಸಿ ಮಾತನಾಡುವುದು, ಕಡೆಗೆ ತಾವಿರುವ ಪೀಠದಲ್ಲೇ ಏನಾದರೊಂದು ಕಾರಣಕ್ಕೆ ವಿವಾದಕ್ಕೆ ತುತ್ತಾಗುವುದು, ನಾಲಗೆಯ ಮೇಲೆ ಹಿಡಿತವಿಟ್ಟುಕೊಳ್ಳದೇ ಏನೇನೋ ವಿಚಾರಗಳನ್ನು ಪ್ರಲಾಪಿಸುವುದು... ಇವೆಲ್ಲ ಇತ್ತೀಚೆಗೆ ಸನ್ಯಾಸಿಗಳು, ಪೀಠಾಧಿಪತಿಗಳ ಲಕ್ಷಣಗಳಂತೆ ಬದಲಾಗಿದೆ. ಇಂತಹದ್ದೊಂದು ತಪ್ಪು ಬೆಳವಣಿಗೆ ಒಂದಿಡೀ ಸಂಸ್ಕೃತಿಯೇ ತಪ್ಪು ಮಾರ್ಗದಲ್ಲಿ ಹೋಗುವುದಕ್ಕೆ ಪರೋಕ್ಷವಾಗಿ ಪ್ರೇರಣೆಯಾಗುತ್ತಿದೆ ಎನ್ನುವುದನ್ನು ಗಮನಿಸಬೇಕು. ಸನ್ಯಾಸಿಯ ಮೂಲಧರ್ಮ ಎಲ್ಲವನ್ನೂ ತ್ಯಜಿಸಿರುವ ವಿರಕ್ತ ಸ್ಥಿತಿ. ಅರ್ಥಾತ್ ಆತ ಯಾವುದರಲ್ಲೂ ಆಸಕ್ತನಾಗಿರುವುದಿಲ್ಲ, ಹೀಗೆಯೇ ಇರಬೇಕು ಎಂಬ ಹಂಬಲವೂ ಇರುವುದಿಲ್ಲ. ದೈವಿಕೃಪೆಯಿಂದ ಏನು ಬರುತ್ತದೋ ಅದನ್ನು ಸ್ವೀಕರಿಸಿ ಆತ ನಿರ್ಲಿಪ್ತನಾಗಿರುತ್ತಾನೆ. ತನ್ನ ಹುಟ್ಟಿಗೆ ಕಾರಣವಾಗಿರುವ ಅಪ್ಪಅಮ್ಮನ ನಂಟನ್ನೂ ಕಳೆದುಕೊಳ್ಳುವಷ್ಟು ವಿರಕ್ತಿಯಿದ್ದರೆ, ಅಷ್ಟು ನಿರ್ಮೋಹಿಯಾಗಿದ್ದರೆ ಮಾತ್ರ ಒಬ್ಬ ಸನ್ಯಾಸಿಯಾಗಲು ಸಾಧ್ಯ. ಈಗಿನ ಬಹುತೇಕ ಸನ್ಯಾಸಿಗಳು ಪೀಠಕ್ಕೆ, ವೈಭೋಗಕ್ಕೆ, ರಾಜಕಾರಣಿಗಳ ಸಂಪರ್ಕಕ್ಕೆ, ಖ್ಯಾತಿಗೆ, ಜಾತಿಗೆ ಅಂಟಿಕೊಂಡಿದ್ದಾರೆ. ಎಲ್ಲವನ್ನೂ ತೊರೆದವನಿಗೆ ಇಂತಹ ಮಾನಸಿಕ ಬಂಧನಗಳು ಇರುತ್ತವೆ ಎನ್ನುವುದು ಸನ್ಯಾಸ ಧರ್ಮಕ್ಕೇ ಕಳಂಕ. ಅವರ ಈ ನಡೆಗಳನ್ನು ಅವರು ಯಾವಯಾವುದೋ ಕಾರಣಗಳನ್ನು ನೀಡಿ ಸಮರ್ಥನೆ ಮಾಡಿಕೊಳ್ಳುತ್ತಾರೆ. ಕಡೆಗೆ ಯಾವುದೋ ಲೈಂಗಿಕ ಹಗರಣದಲ್ಲಿ, ಜಾತಿಜಗಳದಲ್ಲಿ, ಪೀಠಾಧಿಪತ್ಯದ ಜಗಳದಲ್ಲಿ ಸಿಲುಕಿಕೊಳ್ಳುತ್ತಾರೆ. ಸಾಮಾನ್ಯ ಮನುಷ್ಯರಿಗೆ ಪಡೆದುಕೊಳ್ಳಲು ಅಸಾಧ್ಯವಾದ ದೈವಿಭಾವಕ್ಕೇರಿ, ಅದನ್ನು ಜನಸಾಮಾನ್ಯರಿಗೆ ನೀಡುವುದು ಸನ್ಯಾಸ ಪರಂಪರೆಯಲ್ಲಿ ನಡೆದುಬಂದಿದೆ. ಆ ದೈವಿಕತೆಯನ್ನು ನೀಡದೇ ಸಣ್ಣತನವನ್ನು, ಸ್ವಾರ್ಥ, ಅಸೂಯೆಗಳನ್ನೇ ಈಗಿನ ಹಲವು ಸನ್ಯಾಸಿಗಳು ಸೃಷ್ಟಿಸುತ್ತ ನಿತ್ಯ ಶ್ರದ್ಧಾವಂತರ ಮನಸ್ಸಿನಲ್ಲಿ ಕಳವಳವನ್ನು ಹುಟ್ಟಿಸುತ್ತಿದ್ದಾರೆ. ಸನ್ಯಾಸಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಈ ವ್ಯಕ್ತಿಗಳನ್ನು ಅನುಸರಿಸುವ ದೊಡ್ಡ ಅಂಧರ ಗುಂಪು, ಅದನ್ನೇ ಮಾದರಿಯಾಗಿ ಸ್ವೀಕರಿಸುತ್ತಿದೆ. ಒಟ್ಟಾರೆ ವ್ಯವಸ್ಥೆ ಹದತಪ್ಪಿ ಹೋಗುತ್ತಿದೆ. ಇದು ಕೇವಲ ಒಂದು ಪೀಠದ ಸಮಸ್ಯೆಯಲ್ಲ, ಸಾಮಾಜಿಕ ಸಮಸ್ಯೆ. ಎಲ್ಲಿಂದ ಸಮಾಜಕ್ಕೆ ಸರಿಯಾದ ತಿಳಿವಳಿಕೆ ಸಿಗಬೇಕೋ, ಯಾರು ಹೇಳಿದರೆ ಕೋಟ್ಯಂತರ ಶ್ರದ್ಧಾವಂತರು ಕೇಳುತ್ತಾರೋ ಅಂತಹ ಮೂಲದಲ್ಲೇ ಅವ್ಯವಸ್ಥೆಯಾದರೆ ಅದನ್ನು ಅನಾಹುತವೆನ್ನಬೇಕಾಗುತ್ತದೆ. ಸನ್ಯಾಸಿಗಳು ಕಳಂಕರಹಿತರಾಗಿ ಬದುಕುವಂತಾಗಲಿ.

ಸೊಂಪಾದಕೀಯ

ವೇತನ ಹೆಚ್ಚಳ ಕೇವಲ 9 ರು.!

ಯಾವುದೇ ಕಂಪನಿಯ ನೌಕರನಿರಲಿ ವರ್ಷಕ್ಕೊಮ್ಮೆ ತನಗಾಗುವ ವೇತನ ಪರಿಷ್ಕರಣೆ ಬಗ್ಗೆ ಆಸಕ್ತಿ ಹೊಂದಿರುತ್ತಾನೆ. ಪ್ರತಿ ವರ್ಷ ಸ್ಯಾಲರಿ ಹೈಕ್ ಸಂದರ್ಭ ಬಂದಾಗಲೆಲ್ಲಾ ಆತನ ತಲೆಯಲ್ಲಿ ತನಗೆ ಕಳೆದ ವರ್ಷ ಇಷ್ಟು ಸಂಬಳ ಏರಿಕೆಯಾಗಿತ್ತು, ಈ ಬಾರಿ ಎಷ್ಟಾಗಬಹುದು ಎಂಬಿತ್ಯಾದಿ ವಿಚಾರಗಳು ಗಿರಿಗಿಟ್ಟಲೆ ಹಾಕುತ್ತಿರುತ್ತವೆ. ದೆಹಲಿಯ ಬಹುರಾಷ್ಟ್ರೀಯ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬನಿಗೆ ಆತನ ಕಂಪನಿ ಶಾಕ್ ಕೊಟ್ಟಿದೆ. ಆತನ ಸಂಬಳವನ್ನು ಕೇವಲ 9 ರುಪಾಯಿಗಳಷ್ಟು ಏರಿಕೆ ಮಾಡಲಾಗಿದೆ! ಇದನ್ನು ರೆಡಿಟ್ ಎಂಬ ಆತನೇ ಹೇಳಿಕೊಂಡು ಒಂದೇ ಕಣ್ಣಲ್ಲಿ ಕಣ್ಣೀರು ಹಾಕಿದ್ದಾನೆ! ಕಂಪನಿಯು ಆತನಿಗೆ ನೀಡಿರುವ ಸ್ಯಾಲರಿ ಹೆಚ್ಚುವರಿ ಲೆಕ್ಕಾಚಾರ ಪತ್ರದಲ್ಲಿ ಸಾವಿರಾರು ರೂ.ಗಳ ವೇತನ ಹೆಚ್ಚಿಸಲಾಗಿದೆ ಅಂತ ಉಲ್ಲೇಖಿಸಲಾಗಿದೆ. ಅದನ್ನು ನೋಡಿ ಆ ಟೆಕ್ಕಿ 'ಆಹಾ... ಓಹೋ' ಅಂತ ಖುಷಿಪಟ್ಟನಂತೆ! ಆನಂತರದ ಸಾಲುಗಳಲ್ಲಿ, 'ಆತ ನಿತ್ಯವೂ ಕಂಪನಿ ಬಸ್ಸಿನಲ್ಲಿ ಕಂಪನಿಗೆ ಪ್ರಯಾಣಿಸುತ್ತಿದ್ದ ಶುಲ್ಕವನ್ನು ಆತನ ವೇತನ ಹೆಚ್ಚಳದಿಂದ ಕಟ್ ಮಾಡಿಕೊಂಡು ಉಳಿದ 9 ರೂ.ಗಳನ್ನು ಸ್ಯಾಲರಿಗೆ ಹೆಚ್ಚುವರಿ ಹಾಕಲಾಗುತ್ತದೆ' ಎಂದು ಆ ಲೆಟರ್‌ನಲ್ಲಿ ಉಲ್ಲೇಖಿಸಲಾಗಿದೆಯಂತೆ. ಅಂದ್ರೆ ಹಾಗೆ ಕೊಟ್ಟ ಹಾಗೆ ಮಾಡಿ, ಹೀಗೆ ಕಿತ್ಕೊಂಡಿದೆ ಆ ಕಂಪನಿ! ರೆಡಿಟ್‌ನಲ್ಲಿ ಆತನ ದುಃಖ ನೋಡಿದ ಅನೇಕರು ಅದಕ್ಕೆ ಸ್ಪಂದಿಸಿದ್ದಾರೆ. ಕೆಲವರು, ಇಂಥದ್ದೊಂದು ಮ್ಯಾಟರ್ರೆ ಗೊತ್ತಿರ್ಲಿಲ್ಲವಣ್ಣಾ.... ಅಂತ ಹೇಳಿದ್ದರೆ, ಇನ್ನೂ ಕೆಲವರು ತಮ್ಮಾ.... ನೋಡು... ಎಲ್ಲಾ ಕಡೆ ಲೇ-ಆಫ್‌ಗಳು ಆಗ್ತಾ ಇದ್ದಾವೆ. 9 ರೂಪಾಯಿ ಕೊಟ್ಟದ್ದಕ್ಕೆ ಬೇಸರಪಟ್ಕೋಬೇಡ, ಕೆಲಸದಲ್ಲಿ ಮುಂದುವರಿಸಿದ್ದಾರಲ್ವಾ ಅಂತ ಸಮಾಧಾನಪಟ್ಟುಕೋ ಅಂತ ಸಂತೈಸಿದ್ದಾರೆ.

ಸಂಪಾದಕರ ಸದ್ಯಶೋಧನೆ

ಫ್ರೀಕೋನೊಮಿಕ್ಸ್ ಕುರಿತು

ಅರ್ಥಶಾಸ್ತ್ರ ಎಂದರೆ ಕೇವಲ ಷೇರು ಮಾರುಕಟ್ಟೆ, ಜಿಡಿಪಿ ಅಥವಾ ಹಣದುಬ್ಬರ ಮಾತ್ರವಲ್ಲ, ಅದು ಮನುಷ್ಯನ ನಡವಳಿಕೆಗಳನ್ನು ನಿರ್ಧರಿಸುವ 'ಪ್ರಚೋದನೆ'ಗಳ ಅಭ್ಯಾಸ. ಸ್ಟೀವನ್ ಲೆವಿಟ್ ಮತ್ತು ಸ್ಟೀವನ್ ಡಬ್ನರ್ ತಮ್ಮ 'Freakonomics' ಪುಸ್ತಕದಲ್ಲಿ ಇಸ್ರೇಲ್‌ನ ಶಿಶುವಿಹಾರದ ಉದಾಹರಣೆಯು ಇದಕ್ಕೆ ಒಂದು ಉತ್ತಮ ನಿದರ್ಶನ. ಇದು ಆಧುನಿಕ ಅರ್ಥಶಾಸ್ತ್ರದ ಅತ್ಯಂತ ಪ್ರಸಿದ್ಧ ಮತ್ತು ಕಣ್ಣು ತೆರೆಸುವ ಸಿದ್ಧಾಂತಗಳಲ್ಲಿ ಒಂದು. ಈ ಘಟನೆಯು ಕೇವಲ ಒಂದು ಶಾಲೆಯ ಕಥೆಯಲ್ಲ, ಬದಲಿಗೆ ಮನುಷ್ಯನ ಮನೋವಿಜ್ಞಾನ ಮತ್ತು ಆರ್ಥಿಕ ನಿರ್ಧಾರಗಳು ಹೇಗೆ ಅನಿರೀಕ್ಷಿತವಾಗಿ ಕೆಲಸ ಮಾಡುತ್ತವೆ ಎಂಬುದಕ್ಕೆ ಒಂದು ದೊಡ್ಡ ಪಾಠ. ಯಾವುದೇ ವಿಷಯವನ್ನು ವಿಶ್ಲೇಷಿಸುವ ಮೊದಲು ನಾವು 'ಪ್ರಚೋದನೆ' ಎಂದರೇನು ಎಂದು ಅರ್ಥಮಾಡಿಕೊಳ್ಳಬೇಕು. ಪ್ರಚೋದನೆಯು ಒಂದು ಗುಂಡು ಅಥವಾ ಕಲ್ಲಿದ್ದಲಿನಂತೆ. ಅದು ನಮ್ಮನ್ನು ಒಂದು ಕೆಲಸ ಮಾಡಲು ಪ್ರೇರೇಪಿಸುತ್ತದೆ ಅಥವಾ ತಡೆಯುತ್ತದೆ. ಇದನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು, 'ನೈತಿಕ ಪ್ರಚೋದನೆ.' ನಾನು ಇದನ್ನು ಮಾಡಬಾರದು ಏಕೆಂದರೆ ಅದು 'ತಪ್ಪು' ಎಂಬ ಭಾವನೆ. ಎರಡನೆಯದು, 'ಸಾಮಾಜಿಕ ಪ್ರಚೋದನೆ.' ನಾನು ತಡವಾಗಿ ಹೋದರೆ ಇತರರು ನನ್ನ ಬಗ್ಗೆ ಏನು ಅಂದುಕೊಂಡಾರು? ಎಂಬ ಭಯ ಅಥವಾ ಗೌರವದ ಆಸೆ. ಮೂರನೆಯದು, 'ಆರ್ಥಿಕ ಪ್ರಚೋದನೆ.' ಇದನ್ನು ಮಾಡುವುದರಿಂದ ನನಗೆ ಹಣದ ಲಾಭವಾಗುತ್ತದೆಯೇ ಅಥವಾ ನಷ್ಟವಾಗುತ್ತದೆಯೇ? ಎಂಬ ಲೆಕ್ಕಾಚಾರ. ಇಸ್ರೇಲ್‌ನ ಹೈಫಾದಲ್ಲಿರುವ ಹತ್ತು ಶಿಶುವಿಹಾರಗಳಲ್ಲಿ ಒಂದು ಪ್ರಯೋಗ ನಡೆಸಲಾಯಿತು. ಅಲ್ಲಿ ಪೋಷಕರು ಸಂಜೆ 4 ಗಂಟೆಗೆ ಮಕ್ಕಳನ್ನು ಕರೆದುಕೊಂಡು ಹೋಗಬೇಕಿತ್ತು. ಆದರೆ, ಅನೇಕರು ತಡವಾಗಿ ಬರುತ್ತಿದ್ದರು, ಇದರಿಂದ ಶಿಕ್ಷಕರು ಮಕ್ಕಳೊಂದಿಗೆ ಕಾಯಬೇಕಾಗಿ ಬರುತ್ತಿತ್ತು. ಆಡಳಿತ ಮಂಡಳಿಯು ಒಂದು ಆರ್ಥಿಕ ಪ್ರಚೋದನೆಯನ್ನು ಪರಿಚಯಿಸಿತು. ಅದೇನೆಂದರೆ 10 ನಿಮಿಷಕ್ಕಿಂತ ಹೆಚ್ಚು ತಡವಾಗಿ ಬರುವ ಪೋಷಕರಿಗೆ ಸಣ್ಣ ಮೊತ್ತದ ದಂಡ. ಅರ್ಥಶಾಸ್ತ್ರದ ಸಾಮಾನ್ಯ ತರ್ಕದ ಪ್ರಕಾರ, ಬೆಲೆ ಹೆಚ್ಚಾದಂತೆ ಬೇಡಿಕೆ ಕಡಿಮೆಯಾಗಬೇಕು. ಅಂದರೆ ದಂಡ ವಿಧಿಸಿದ ಮೇಲೆ ತಡವಾಗಿ ಬರುವವರ ಸಂಖ್ಯೆ ಇಳಿಕೆಯಾಗಬೇಕಿತ್ತು. ಆದರೆ, ಫಲಿತಾಂಶ ಉಲ್ಟಾ ಆಯಿತು! ತಡವಾಗಿ ಬರುವ ಪೋಷಕರ ಸಂಖ್ಯೆ ಎರಡು ಪಟ್ಟು ಹೆಚ್ಚಾಯಿತು. ದಂಡ ವಿಧಿಸುವ ಮೊದಲು ಪೋಷಕರಿಗೆ ಒಂದು ರೀತಿಯ 'ಅಪರಾಧಿ ಮನೋಭಾವ' ಇತ್ತು. ಶಿಕ್ಷಕರು ತಮ್ಮ ವೈಯಕ್ತಿಕ ಸಮಯವನ್ನು ನಮಗಾಗಿ ವ್ಯಯಿಸುತ್ತಿದ್ದಾರೆ ಎಂಬ ನೈತಿಕ ಪ್ರಜ್ಞೆ ಪೋಷಕರನ್ನು ಬೇಗ ಬರಲು ಪ್ರೇರೇಪಿಸುತ್ತಿತ್ತು. ಇಲ್ಲಿ 'ನೈತಿಕ ಪ್ರಚೋದನೆ' ಕೆಲಸ ಮಾಡುತ್ತಿತ್ತು. ಆದರೆ, ದಂಡವನ್ನು ಜಾರಿಗೆ ತಂದ ತಕ್ಷಣ, ಈ ಪರಿಸ್ಥಿತಿಯು ನೈತಿಕ ಪ್ರಜ್ಞೆಯಿಂದ ಮಾರುಕಟ್ಟೆ ವ್ಯವಹಾರವಾಗಿ ಬದಲಾಯಿತು. ಪೋಷಕರು ಹೀಗೆ ಯೋಚಿಸಲು ಆರಂಭಿಸಿದರು - ನಾನು ಈಗ ಶಿಕ್ಷಕರಿಗೆ ತೊಂದರೆ ಕೊಡುತ್ತಿಲ್ಲ, ಬದಲಿಗೆ ಅವರ ಹೆಚ್ಚುವರಿ ಸಮಯಕ್ಕಾಗಿ ಹಣವನ್ನು ಪಾವತಿಸುತ್ತಿದ್ದೇನೆ. ಇದು ಈಗ ವ್ಯವಹಾರ. ನಾನು ಮೂರು ಡಾಲರ್ ಕೊಟ್ಟರೆ, ನಾನು ಆರಾಮವಾಗಿ ಶಾಪಿಂಗ್ ಮುಗಿಸಿ ಬರಬಹುದು. ದಂಡವು ಪೋಷಕರ ಮನಸ್ಸಿನಲ್ಲಿದ್ದ 'ತಪ್ಪು ಮಾಡಿದೆ' ಎಂಬ ಭಾವನೆಯನ್ನು ಹೋಗಲಾಡಿಸಿ, ಅದನ್ನು 'ಸೇವೆಯ ಶುಲ್ಕ'ವಾಗಿ ಮಾರ್ಪಡಿಸಿತು. ಇಲ್ಲಿ ಮತ್ತೊಂದು ಸ್ವಾರಸ್ಯಕರ ಅಂಶವೆಂದರೆ ದಂಡದ ಮೊತ್ತ. ದಂಡದ ಮೊತ್ತವು ತೀರಾ ಕಡಿಮೆ ಇತ್ತು (ಸುಮಾರು 3 ಡಾಲರ್). ಒಂದು ವೇಳೆ ಈ ದಂಡವು ನೂರು ಡಾಲರ್ ಆಗಿದ್ದಿದ್ದರೆ, ಪೋಷಕರು ಖಂಡಿತವಾಗಿಯೂ ಬೇಗ ಬರುತ್ತಿದ್ದರು. ಆದರೆ, ಸಣ್ಣ ಮೊತ್ತದ ದಂಡವು ತಡವಾಗಿ ಬರುವುದು ಅಷ್ಟೊಂದು ದುಬಾರಿಯಲ್ಲ ಎಂಬ ಸಂದೇಶವನ್ನು ರವಾನಿಸಿತು. ಅಂದರೆ, ತಪ್ಪಾದ ಪ್ರಚೋದನೆಯು ತಪ್ಪು ಫಲಿತಾಂಶವನ್ನು ನೀಡಿತು. ಹಾಗಾದರೆ ದಂಡವನ್ನು ಹಿಂಪಡೆದಾಗ ಏನಾಯಿತು? ಕೆಲವು ವಾರಗಳ ನಂತರ, ಪ್ರಯೋಗವು ವಿಫಲವಾಗಿದೆ ಎಂದು ತಿಳಿದ ಆಡಳಿತ ಮಂಡಳಿ ದಂಡವನ್ನು ರದ್ದುಗೊಳಿಸಿತು. ಈಗ ಪೋಷಕರು ಮೊದಲಿನಂತೆ ಬೇಗ ಬರಲು ಆರಂಭಿಸುತ್ತಾರೆ ಎಂದು ಭಾವಿಸಿದರೆ ಅದು ತಪ್ಪು! ದಂಡವನ್ನು ರದ್ದುಗೊಳಿಸಿದ ನಂತರವೂ ಪೋಷಕರು ತಡವಾಗಿ ಬರುವುದನ್ನು ಮುಂದುವರಿಸಿದರು. ಯಾಕೆಂದರೆ ಈಗ 'ಆರ್ಥಿಕ ಪ್ರಚೋದನೆ'(ದಂಡ) ಇರಲಿಲ್ಲ. ಹಳೆಯ 'ನೈತಿಕ ಪ್ರಚೋದನೆ' (ಅಪರಾಧಿ ಮನೋಭಾವ) ಈಗಾಗಲೇ ನಾಶವಾಗಿತ್ತು. ಪೋಷಕರಿಗೆ ಈಗ ತಡವಾಗಿ ಬರುವುದು ಒಂದು ರೂಢಿಯಾಗಿ ಹೋಗಿತ್ತು ಮತ್ತು ಅದಕ್ಕಾಗಿ ಯಾವುದೇ ಬೆಲೆ ತೆರುವ ಅವಶ್ಯಕತೆಯೂ ಇರಲಿಲ್ಲ.

ನ್ಯಾ. ವರ್ಮಾ ರಾಜೀನಾಮೆ: ಆರೋಪಗಳೂ ಸಮಾಧಿ ಸೇರುವವೇ?

ಸಂಸತ್ತಿನಿಂದ ಪದಚ್ಯುತರಾಗದ ಕಾರಣ ನ್ಯಾ.ಯಶವಂತ್ ವರ್ಮಾ ಹೈಕೋರ್ಟುಗಳ ಇತರೆ ನಿವೃತ್ತ ನ್ಯಾಯಾಧೀಶರಂತೆ ಪಿಂಚಣಿ ಮತ್ತು ಎಲ್ಲ ನಿವೃತ್ತಿ ಸೌಲಭ್ಯಗಳನ್ನು ಪಡೆಯಲಿದ್ದಾರೆ..! ಎಲ್ಲಿಯವರೆಗೆ ಎಂದರೆ, ಅವರ ರಾಜೀನಾಮೆಯನ್ನು ರಾಷ್ಟ್ರಪತಿ ಔಪಚಾರಿಕವಾಗಿ ಅಂಗೀಕರಿಸಿದರೆ, ಅವರ ಮೇಲೆ ಯಾವುದೇ ಪ್ರಕರಣ ಇರಲೇ ಇಲ್ಲವೇನೋ ಎಂಬಂತೆ ಭಾಸವಾಗಿಬಿಡುತ್ತದೆ.!

ಜನಪಥ

ರಾಘವಶರ್ಮ ನಿಡ್ಲೆ

vveditoped@gmail.com

ದಿಲ್ಲಿಯ ತಮ್ಮ ಅಧಿಕೃತ ಸರಕಾರಿ ಬಂಗಲೆಯ ಸ್ಟೋರ್‌ರೂಮ್‌ನಲ್ಲಿ ಅರ್ಧ ಸುಟ್ಟಿದ್ದ ಕಂತೆ-ಕಂತೆ ನೋಟುಗಳು ಪತ್ತೆಯಾದ ಪ್ರಕರಣದಲ್ಲಿ ಸಂಸತ್ತಿನಿಂದ ಪದಚ್ಯುತ ಪ್ರಕ್ರಿಯೆ (impeachment) ಎದುರಿಸುತ್ತಿದ್ದ ಅಲಹಾಬಾದ್ ಹೈಕೋರ್ಟ್ ನ್ಯಾಯಾಧೀಶ ಯಶವಂತ್ ವರ್ಮಾ ಅವರು ಏಪ್ರಿಲ್ 9ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಈ ಮೂಲಕ ಸಂಸತ್ತಿನಿಂದ ಪದಚ್ಯುತಗೊಳ್ಳುವ ಪ್ರಕ್ರಿಯೆಯಿಂದ ಅವರು ಪಾರಾಗಿದ್ದಾರೆ. ನನ್ನನ್ನು ಪಿತೂರಿಯಲ್ಲಿ ಸಿಲುಕಿಸಲಾಗಿದೆ ಮತ್ತು ಮನೆಯಲ್ಲಿ ಪತ್ತೆಯಾದ ನೋಟಿನ ಕಂತೆಗಳಿಗೂ ನನಗೂ ಸಂಬಂಧವಿಲ್ಲ ಎಂದು ನ್ಯಾ.ಯಶವಂತ್ ವರ್ಮಾ ಪ್ರತಿಪಾದಿಸಿ, ನ್ಯಾಯಾಧೀಶ ಹುದ್ದೆಯಲ್ಲಿ ಮುಂದುವರಿಯುವ ಪ್ರಯತ್ನಗಳು ಫಲ ಕೊಟ್ಟಿಲ್ಲ, ಆದರೆ, ಇಲ್ಲಿ ಎದುರಾಗುವ ಪ್ರಶ್ನೆಗಳೇನೆಂದರೆ - ರಾಜೀನಾಮೆ ಸಲ್ಲಿಕೆಯಿಂದ ಲೋಕಸಭೆ ಸ್ಪೀಕರ್ ರಚಿಸಿದ ಕಾನೂನು ತಜ್ಞರನ್ನೊಳಗೊಂಡ ಸಂಸತ್ತಿನ ತಜ್ಞರ ಸಮಿತಿಯ ತನಿಖಾ ಪ್ರಕ್ರಿಯೆ ಏನಾಗುತ್ತದೆ? ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಈ ನ್ಯಾಯಾಂಗ ಸಮಿತಿಯನ್ನು ಬರ್ಖಾಸ್ತುಗೊಳಿಸುವುದು ಅನಿವಾರ್ಯವೇ? ಅವರ ಮೇಲಿದ್ದ ಆರೋಪಗಳು ಬರೀ ಆರೋಪಗಳಾಗಿಯೇ ಉಳಿದುಕೊಳ್ಳುತ್ತವೆಯೇ? ತನಿಖಾ ಸಮಿತಿ ರದ್ದಾದರೆ, ನ್ಯಾ.ವರ್ಮಾ ಮನೆಯಲ್ಲಿ ಸಿಕ್ಕ ಸುಟ್ಟ ನೋಟುಗಳ ಸತ್ಯಾಂಶ ಪತ್ತೆಯಾಗುವುದು ಹೇಗೆ? ಆ ಹಣ ಯಾರದ್ದೆಂದು ಗೊತ್ತಾಗುವುದು ಹೇಗೆ?

2025ರ ಮಾರ್ಚ್ ತಿಂಗಳಲ್ಲಿ ಪ್ರಕರಣ ಬೆಳಕಿಗೆ ಬಂದ ಸುಟ್ಟ ನೋಟುಗಳ ಪ್ರಕರಣ ನ್ಯಾಯಾಂಗ ವಲಯದಲ್ಲಿ ಭಾರೀ ಸಂಚಲನ ಎಬ್ಬಿಸಿತ್ತು ಮತ್ತು ಅಂದಿನ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ನ್ಯಾಯಾಂಗ ತಜ್ಞರನ್ನೊಳಗೊಂಡ ಆಂತರಿಕ ತನಿಖಾ ಸಮಿತಿಯೊಂದನ್ನು ರಚನೆ ಮಾಡಿ, ನ್ಯಾ.ವರ್ಮಾ ಮೇಲಿನ ಆರೋಪಗಳು ಹಾಗೂ ಸುಟ್ಟ ನೋಟುಗಳ ಬಗ್ಗೆ ತನಿಖೆ ಮಾಡುವಂತೆ ಸೂಚಿಸಿದ್ದರು. ಈ ತನಿಖಾ ವರದಿಯಲ್ಲಿ - ನವದೆಹಲಿಯ ತುಘಲಕ್ ಕ್ರೆಸೆಂಟ್ ರಸ್ತೆಯಲ್ಲಿರುವ ನಿವಾಸದ ಸ್ಟೋರ್ ರೂಮ್ ಕೂಡ ನ್ಯಾ. ವರ್ಮಾರಿಗೆ ಸೇರಿದ್ದು, ನಗದು ಹಣ ಕಂಡುಬಂದಿದೆ. ಈ ಸ್ಟೋರ್ ರೂಮ್ ನ್ಯಾ.ವರ್ಮಾ ಮತ್ತು ಅವರ ಕುಟುಂಬ ಸದಸ್ಯರ ನಿಯಂತ್ರಣದಲ್ಲಿದೆ ಎನ್ನುವುದು ಕೆಲ ಪುರಾವೆಗಳ ಮೂಲಕ ಕಂಡುಬಂದಿದೆ. ಸುಟ್ಟ ನಗದನ್ನು 15-03-2025ರ ಬೆಳಗಿನ ಜಾವ ಹೊರತೆಗೆಯಲಾಗಿದೆ. ಘಟನಾ ಸ್ಥಳದ ಪರಿಶೀಲನೆ ಅಥವಾ ಸಂಬಂಧಪಟ್ಟವರಿಗೆ ವರದಿ ಮಾಡಲು ನ್ಯಾ.ವರ್ಮಾ ಹಿಂದೇಟು ಹಾಕಿರುವುದು ಸಂಶಯಾಸ್ಪದವಾಗಿದೆ ಎಂದು ದಾಖಲು ಮಾಡಲಾಗಿತ್ತು.

ಈ ವರದಿ ಆಧರಿಸಿ, ತಾವು ರಾಜೀನಾಮೆ ನೀಡಬೇಕು ಇಲ್ಲವೇ ಸ್ವಯಂ ನಿವೃತ್ತಿ ಪಡೆದುಕೊಳ್ಳಬೇಕು ಎಂದು ನ್ಯಾ.ಯಶವಂತ್ ವರ್ಮಾಗೆ ಸುಪ್ರೀಂಕೋರ್ಟ್ ಸಿಜೆಐ ಸಂಜೀವ್ ಖನ್ನಾ ಸಲಹೆ ನೀಡಿದ್ದರು. ಆದರೆ, ನ್ಯಾ.ವರ್ಮಾ ಅದಕ್ಕೊಪ್ಪಲಿಲ್ಲ. ಹೀಗಾಗಿ, ಅವರನ್ನು ದೆಹಲಿ ಹೈಕೋರ್ಟ್‌ನಿಂದ ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಯಿತು. ಅಲ್ಲಿ ನ್ಯಾ.ವರ್ಮಾಗೆ ನ್ಯಾಯಾಂಗ ಕಲಾಪ ನಡೆಸುವ ಯಾವುದೇ ಜವಾಬ್ದಾರಿಗಳನ್ನು ಕೊಲಿಜಿಯಂ ನೀಡಲಿಲ್ಲ. ಏತನ್ಮಧ್ಯೆ, ಸಂಸತ್ತಿನಲ್ಲಿ ನ್ಯಾ.ವರ್ಮಾ ಪದಚ್ಯುತಕ್ಕೆ ಪ್ರಕ್ರಿಯೆ ಆರಂಭಗೊಂಡಿದ್ದರಿಂದ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು 2025ರ ಆಗಸ್ಟ್ 12ರಂದು ನ್ಯಾಯಾಧೀಶರ (ವಿಚಾರಣಾ) ಕಾಯ್ದೆ, 1968ರ ಅಡಿಯಲ್ಲಿ ಮೂವರು ಸದಸ್ಯರ ತನಿಖಾ ಸಮಿತಿ ರಚಿಸಿದರು. ಇದರಲ್ಲಿ ನ್ಯಾ.ಅರವಿಂದ್ ಕುಮಾರ್ (ಸುಪ್ರೀಂಕೋರ್ಟ್), ನ್ಯಾ.ಮಣೀಂದ್ರ ಮೋಹನ್ ಶ್ರೀವಾಸ್ತವ (ಮುಖ್ಯ ನ್ಯಾಯಮೂರ್ತಿ, ಮದ್ರಾಸ್ ಹೈಕೋರ್ಟ್) ಮತ್ತು ಬಿ.ವಿ. ಆಚಾರ್ಯ (ಹಿರಿಯ ವಕೀಲ, ಕರ್ನಾಟಕ ಹೈಕೋರ್ಟ್) ಇದ್ದರು. ನ್ಯಾ. ಶ್ರೀವಾಸ್ತವ ನಿವೃತ್ತಿಯಾದ ಹಿನ್ನೆಲೆಯಲ್ಲಿ ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶ್ರೀ ಚಂದ್ರಶೇಖರ್ ಅವರನ್ನು ಸಮಿತಿಗೆ ನೇಮಿಸಲಾಯಿತು. ನ್ಯಾ.ವರ್ಮಾ ವಿರುದ್ಧದ ತನಿಖೆಯನ್ನು ಸಮಿತಿ ಇನ್ನೇನು ಪೂರ್ಣಗೊಳಿಸುವ ಹಂತದಲ್ಲಿತ್ತು. ಆದರೆ, ಅವರು ಏಪ್ರಿಲ್ 9ರಂದು ರಾಜೀನಾಮೆ ಸಲ್ಲಿಸಿದರು. ಇದರಿಂದಾಗಿ, ಸಮಿತಿಯ ಅಸ್ತಿತ್ವವೇ ಬಹುತೇಕ ಅಪ್ರಸ್ತುತ ಎನಿಸಿಕೊಳ್ಳಲಿದೆ. ನ್ಯಾ. ವರ್ಮಾ 2031ಕ್ಕೆ ನಿವೃತ್ತಿಯಾಗಬೇಕಿತ್ತು. ಆದರೆ, ರಾಜೀನಾಮೆಯಿಂದ ನ್ಯಾಯಾಂಗ ವೃತ್ತಿಜೀವನ ಅಕಾಲಿಕವಾಗಿ ಮುಕ್ತಾಯಗೊಂಡಿದೆ. ಹಾಗಂತ, ಸಂಸತ್ತಿನಿಂದ ಪದಚ್ಯುತರಾಗದ ಕಾರಣ ಅವರು ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಂತೆ ಪಿಂಚಣಿ ಮತ್ತು ಎಲ್ಲ ನಿವೃತ್ತಿ ಸೌಲಭ್ಯಗಳನ್ನು ಪಡೆಯಲಿದ್ದಾರೆ..! ಎಲ್ಲಿಯವರೆಗೆ ಎಂದರೆ, ಅವರ ರಾಜೀನಾಮೆಯನ್ನು ರಾಷ್ಟ್ರಪತಿ ಔಪಚಾರಿಕವಾಗಿ ಅಂಗೀಕರಿಸಿದ ನಂತರ, ಅವರ ಮೇಲೆ ಯಾವುದೇ ಪ್ರಕರಣ ಇರಲೇ ಇಲ್ಲವೇನೋ ಎಂಬಂತೆ ಭಾಸವಾಗಿಬಿಡುತ್ತದೆ.!

ಒಂದೊಮ್ಮೆ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಪಿ.ಡಿ. ದಿನಕರನ್ ಕೂಡ 2011ರಲ್ಲಿ ಇದೇ ರೀತಿಯಾಗಿ ಸಂಸತ್ತಿನಿಂದ ಪದಚ್ಯುತ ಪ್ರಕ್ರಿಯೆ ಎದುರಿಸಿದ್ದರು. ಆದರೆ, ಸಂಸತ್ತು ಪದಚ್ಯುತಗೊಳಿಸುವ ಮೊದಲೇ ಸಿಕ್ಕಿಂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ 2011ರಲ್ಲಿ ರಾಜೀನಾಮೆ ಸಲ್ಲಿಸಿದ ಅವರು, ಸಮಿತಿಯ ತನಿಖೆಗಳಿಂದ ಮುಕ್ತವಾದರು. ನ್ಯಾ.ವರ್ಮಾ ಪ್ರಕರಣದ ಹಠಾತ್ ಅಂತ್ಯ 2011ರ ನ್ಯಾ.ಪಿ.ಡಿ. ದಿನಕರನ್ ಪ್ರಕರಣವನ್ನೇ ನೆನಪಿಸುತ್ತಿದೆ. ಪಿ.ಡಿ. ದಿನಕರನ್ ಕರ್ನಾಟಕ ಹೈಕೋರ್ಟ್ ಸಿಜೆಯಾಗಿದ್ದಾಗ ಅವರನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ಶಿಫಾರಸು ಮಾಡಲಾಗಿತ್ತು. ಆದರೆ, ದಿನಕರನ್ ವಿರುದ್ಧ ಅಕ್ರಮಗಳ ಆರೋಪ ಬಲವಾಗಿ ಕೇಳಿದ್ದರಿಂದ ಕೊಲಿಜಿಯಂ ತನ್ನ ಶಿಫಾರಸನ್ನು ಹಿಂಪಡೆದುಕೊಂಡು, ಸಿಕ್ಕಿಂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ವರ್ಗಾವಣೆ ಮಾಡಿತು. ಸಿಕ್ಕಿಂ ಬಾರ್ ಅಸೋಸಿಯೇಷನ್ ಕೂಡ ಅವರ ವರ್ಗಾವಣೆ ವಿರೋಧಿಸಿ ಪ್ರತಿಭಟನೆ ನಡೆಸಿತು. ಆದರೂ, ನ್ಯಾ. ಪಿ.ಡಿ. ದಿನಕರನ್ ರಾಜೀನಾಮೆ ನೀಡಿರಲಿಲ್ಲ.

2009ರಲ್ಲಿ ಅವರ ವಿರುದ್ಧ ಸಂಸತ್ತಿನಲ್ಲಿ ಪದಚ್ಯುತ ಪ್ರಕ್ರಿಯೆ ಆರಂಭಗೊಂಡು, ರಾಜ್ಯಸಭೆ ಸಭಾಪತಿ ಹಮೀದ್ ಅನ್ಸಾರಿ ಅವರು ನ್ಯಾ. ಅಫ್ತಾಬ್ ಆಲಂ ನೇತೃತ್ವದ ತನಿಖಾ ಸಮಿತಿ ರಚನೆ ಮಾಡಿದರು. ಸಮಿತಿಯ ಮೊದಲ ಸಭೆಗೆ 1 ದಿನ ಮುನ್ನ, 2011ರ ಜುಲೈ 29ರಂದು ದಿನಕರನ್ ರಾಜೀನಾಮೆ ಸಲ್ಲಿಸಿದ್ದರು. ತನಿಖಾ ಸಮಿತಿ ವಿಚಾರಣೆ ಸ್ಥಗಿತಗೊಂಡಿತು. ತಜ್ಞರ ತನಿಖಾ ಸಮಿತಿಯಲ್ಲಿದ್ದ ಸದಸ್ಯ, ನ್ಯಾಯಶಾಸ್ತ್ರಜ್ಞ ಮದನ್ ಗೋಪಾಲ್ ಅವರು ಸಮಿತಿಯ ಮತ್ತಿಬ್ಬರು ಸದಸ್ಯರಿಗೆ ಪತ್ರ ಬರೆದು, ದಿನಕರನ್ ರಾಜೀನಾಮೆ ಸಲ್ಲಿಸಿದ ಮಾತ್ರಕ್ಕೆ ಅವರ ವಿರುದ್ಧದ ತನಿಖೆ ನಿಲ್ಲಬಾರದು. ನ್ಯಾಯಾಧೀಶರಿಗೆ ನ್ಯಾಯಾಂಗ ಹೊಣೆಗಾರಿಕೆ ಇರಬೇಕು ಎನ್ನುವುದು ಸಂವಿಧಾನದ ಆಶಯವೂ ಹೌದು ಎಂದರು. ಆಗ, ಸಮಿತಿ ಸದಸ್ಯರಾಗಿದ್ದ ನ್ಯಾ. ಜೆ.ಎಸ್. ಖೇಹರ್ ಅವರು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರಿಂದ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಒಬ್ಬರನ್ನು ನೇಮಕ ಮಾಡಬೇಕೆಂದು ನ್ಯಾ. ಅಫ್ತಾಬ್ ಆಲಂ ಅವರು ರಾಜ್ಯಸಭೆ ಸಭಾಪತಿ ಹಮೀದ್ ಅನ್ಸಾರಿ ಅವರಿಗೆ ಪತ್ರ ಬರೆದರು. ಆದರೆ, ದಿನಕರನ್ ರಾಜೀನಾಮೆ ಸಲ್ಲಿಸಿದ್ದರಿಂದ ಸಮಿತಿಗೆ ಹೊಸ ಸದಸ್ಯರನ್ನು ನೇಮಕ ಮಾಡಿ ಏನು ಮಾಡುವುದು ಎಂದು ಯೋಚಿಸಿದ ಹಮೀದ್ ಅನ್ಸಾರಿ, ಹೊಸ ಸದಸ್ಯರ ನೇಮಕಕ್ಕೆ ಮುಂದಾಗಲಿಲ್ಲ ಮತ್ತು ಸಮಿತಿ ಅಲ್ಲಿಗೇ ರದ್ದುಗೊಂಡಿತ್ತು. ಇದರಿಂದಾಗಿ, ನ್ಯಾ.ಪಿ.ಡಿ. ದಿನಕರನ್ ಮೇಲೆ ಮಾಡಲಾಗಿದ್ದ ಆರೋಪಗಳು, ಅಕ್ರಮ ಆಸ್ತಿ ಸಂಪಾದನೆ ಬಗೆಗಿನ ಅನುಮಾನಗಳು ಹಾಗೇ ಉಳಿದುಕೊಂಡವು..!

ಕಲ್ಕತ್ತಾ ಹೈಕೋರ್ಟ್‌ನ ಸೌಮಿತ್ರ ಸೇನ್ ಅವರು 1993ರಲ್ಲಿ ಸುಪ್ರೀಂಕೋರ್ಟ್‌ನ ಜಸ್ಟಿಸ್-ದಿವಂಗತ ವಿ. ರಾಮಸ್ವಾಮಿ ನಂತರ ಸಂಸತ್ತಿನಿಂದ ಪದಚ್ಯುತಿ ಪ್ರಕ್ರಿಯೆ ಎದುರಿಸಿದ್ದ ಎರಡನೇ ನ್ಯಾಯಾಧೀಶ. ಅವರು 1983ರ ಹಣಕಾಸು ಅವ್ಯವಹಾರದ ಮಾಹಿತಿಯೊಂದನ್ನು ಮರೆಮಾಚಿದ್ದರೆನ್ನುವುದು ಗೊತ್ತಾದ ನಂತರ ರಾಜೀನಾಮೆಗೆ ಒತ್ತಡ ಹೇರಲಾಯಿತು. ಆದರೆ, ಸೇನ್ ರಾಜೀನಾಮೆಗೆ ಹಿಂದೇಟು ಹಾಕಿದ್ದರಿಂದ 2009ರಲ್ಲಿ 58 ರಾಜ್ಯಸಭಾ ಸದಸ್ಯರು ಅವರನ್ನು ಸಂಸತ್ ಮೂಲಕ ಪದಚ್ಯುತಿಗೊಳಿಸುವ ಪ್ರಸ್ತಾವನೆ ಮಂಡಿಸಿದರು. ತನಿಖೆಗಾಗಿ ಸಂಸತ್ತು ನ್ಯಾಯಮೂರ್ತಿ ಬಿ. ಸುದರ್ಶನ್ ರೆಡ್ಡಿ ನೇತೃತ್ವದ ತನಿಖಾ ಸಮಿತಿ ರಚಿಸಿತು. 2011ರ ಆಗಸ್ಟ್‌ನಲ್ಲಿ ಅವರ ಪದಚ್ಯುತಿಗೆ ರಾಜ್ಯಸಭೆ ಅನುಮೋದನೆ ನೀಡಿತು. ಸದನವೊಂದು ನ್ಯಾಯಾಧೀಶರನ್ನು ವಜಾಗೊಳಿಸಲು ಮತ ಚಲಾಯಿಸಿದ್ದು ಇದೇ ಮೊದಲಾಗಿತ್ತು. ಸೆಪ್ಟೆಂಬರ್ 5-6ರಂದು ಲೋಕಸಭೆಯಲ್ಲಿ ಮತದಾನಕ್ಕೆ ಸಮಯ ನಿಗದಿಯಾಗಿತ್ತು. ಆದರೆ, ಸೆ.1ರಂದು ಸೇನ್ ರಾಜೀನಾಮೆ ಸಲ್ಲಿಸಿದರು.



ಇದರಿಂದಾಗಿ ಸಂಸತ್ತಿನಿಂದ ಅವರನ್ನು ಪದಚ್ಯುತಗೊಳಿಸಲು ಸಾಧ್ಯವಾಗಲಿಲ್ಲ, ತನಿಖಾ ಸಮಿತಿಯ ವಿಚಾರಣೆ ಎದುರಿಸಲು ಸೇನ್ ಸಿದ್ಧರಿದ್ದರಾದರೂ, ಸಂಸತ್ತಿನಿಂದ ಪದಚ್ಯುತಗೊಳ್ಳಲು ಬಯಸಿರಲಿಲ್ಲ, ಅದರಿಂದ ತಪ್ಪಿಸಿಕೊಳ್ಳಲು ರಾಜೀನಾಮೆ ನೀಡಿದ್ದರು.

1993ರಲ್ಲಿ ಮೊದಲ ಬಾರಿಗೆ ಪದಚ್ಯುತಿ ಪ್ರಕ್ರಿಯೆ ಎದುರಿಸಿದ್ದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ವಿ. ರಾಮಸ್ವಾಮಿ ಅವರ ನೆರವಿಗೆ ಕಾಂಗ್ರೆಸ್ ಧಾವಿಸಿತ್ತು. ಲೋಕಸಭೆಯಲ್ಲಿ ಹಾಜರಿದ್ದ 401 ಸದಸ್ಯರಲ್ಲಿ 196 ಮಂದಿ ಪದಚ್ಯುತಿ ಪರ ಮತ ಹಾಕಿದ್ದರು. ಪದಚ್ಯುತಿ ವಿರುದ್ಧ ಯಾರೂ ಮತ ಹಾಕಲಿಲ್ಲ. ಆದರೆ, ಆಡಳಿತಾರೂಢ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ 205 ಸಂಸದರು ಗೈರಾದ್ದರಿಂದ ಮತದಾನದ ವೇಳೆ ಹಾಜರಿದ್ದ ಸದಸ್ಯರಲ್ಲಿ ಮೂರನೇ ಎರಡರಷ್ಟು ಬಹುಮತ ಬರಲಿಲ್ಲ, ಹೀಗಾಗಿ, ಪದಚ್ಯುತಿ ನಿರ್ಣಯ ಅಂಗೀಕಾರಗೊಳ್ಳಲು ವಿಫಲವಾಗಿತ್ತು.

ನ್ಯಾ. ವರ್ಮಾ ಮನೆಯಲ್ಲಿ ಸುಟ್ಟ ನೋಟುಗಳ ಕಂತೆ ಪತ್ತೆಯಾಗಿ 400 ದಿನಗಳಾಗುತ್ತಾ ಬಂದಿದೆ. ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿಲ್ಲ. 1991ರ ಜಸ್ಟಿಸ್ ವೀರಸ್ವಾಮಿ ಪ್ರಕರಣದ ತೀರ್ಪಿನ ಪ್ರಕಾರ ಹಾಲಿ ನ್ಯಾಯಾಧೀಶರೊಬ್ಬರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಸಿಜೆಐ ಅನುಮತಿ ಅತ್ಯಗತ್ಯ. ಈಗ ನ್ಯಾ. ಯಶವಂತ್ ವರ್ಮಾ ರಾಜೀನಾಮೆ ನೀಡಿರುವುದರಿಂದ ಕಂತೆ-ಕಂತೆ ನೋಟುಗಳ ಸತ್ಯಾಂಶ ಪತ್ತೆ ಹಚ್ಚಲು ಸರಕಾರ ಅಥವಾ ನ್ಯಾಯಾಂಗ ವ್ಯವಸ್ಥೆ ಮುಂದಾಗುತ್ತದೆಯೇ ಎನ್ನುವುದು ಪ್ರಶ್ನೆ. ನ್ಯಾ.ವರ್ಮಾ ಮನೆಯಲ್ಲಿ ಹಣ ಪತ್ತೆಯಾಗಿ, ಕೆಲ ದಿನಗಳ ಕಾಲ ನ್ಯಾಯಾಂಗ ಭ್ರಷ್ಟಾಚಾರದ ಬಗ್ಗೆ ಅಬ್ಬರಿಸಿ ಬೊಬ್ಬಿರಿದು, ಈಗ ರಾಜೀನಾಮೆ ನಂತರ ಎಲ್ಲವೂ ಮುಗಿದು ಹೋಯಿತು ಎಂದರೆ ಅದನ್ನು ಖಂಡಿತ ಒಪ್ಪಲಾಗದು. ಸಾಮಾನ್ಯ ನಾಗರಿಕನೊಬ್ಬನಿಗೆ ಇಲ್ಲದ ಅವಕಾಶ, ಸೌಲಭ್ಯಗಳು ಉಳ್ಳವರಿಗೆ, ಪ್ರಭಾವಿಗಳಿಗೆ ಏಕಿರಬೇಕು?

ನ್ಯಾ. ವರ್ಮಾ ಸರಕಾರಿ ಬಂಗಲೆಯ ಔಟ್‌ಹೌಸ್‌ನಲ್ಲಿ ಸಿಕ್ಕ ಸುಟ್ಟ ನೋಟುಗಳು ಅವರದ್ದಲ್ಲದಿದ್ದರೆ ಮತ್ಯಾರದ್ದು? ಅವರ ಕುಟುಂಬದವರದ್ದಿರಬಹುದೇ? ಅಥವಾ ಸಿಬ್ಬಂದಿ ವರ್ಗಕ್ಕೆ ಸೇರಿದ್ದಿರಬಹುದೇ? ಸಿಬ್ಬಂದಿಗೆ ಸೇರಿದ್ದರೆ ಈ ಹಣದ ಮೂಲ ಯಾವುದು? ಹಣ ಸ್ಟೋರ್ ರೂಮ್ ಸೇರಿಕೊಂಡಿದ್ದು ಹೇಗೆ? ಇದು ನ್ಯಾ. ವರ್ಮಾ ವಿರೋಧಿಗಳ ಕುಕೃತ್ಯ ಇರಬಹುದೇ..? ಈ ಎಲ್ಲ ಸತ್ಯಾಂಶಗಳು ಸಾರ್ವಜನಿಕರಿಗೆ ಗೊತ್ತಾಗಬೇಡವೇ?

ದೇಶದ ನ್ಯಾಯಾಂಗ ವ್ಯವಸ್ಥೆಯ ಲೋಪಗಳಿಂದ ಜನ ಬೇಸತ್ತಿರುವ ಮಧ್ಯೆ, ತಪ್ಪಿತಸ್ಥರನ್ನು ಹೊಣೆಗಾರರನ್ನಾಗಿ ಮಾಡುವುದನ್ನೇ ನಾಗರಿಕರು ನಿರೀಕ್ಷಿಸುತ್ತಾರೆ. ರಾಜೀನಾಮೆ ಕೊಟ್ಟು ತನಿಖೆ, ಶಿಕ್ಷೆಯಿಂದ ಪಾರಾಗಿ, ನಂತರ ಸದ್ದಿಲ್ಲದೆ ವ್ಯವಸ್ಥೆಯಲ್ಲಿ ಲೀನರಾಗುವುದು ನಮ್ಮಲ್ಲಿ ಹೊಸದೇ ನಲ್ಲ. ಸೌಮಿತ್ರ ಸೇನ್, ಪಿ.ಡಿ. ದಿನಕರನ್ ಅಂತವರು ಹೇಗೆ ಪಾರಾದರು ಎನ್ನುವುದನ್ನು ಈ ದೇಶ ನೋಡಿದೆ. ನ್ಯಾ ಎಸ್. ಎನ್. ಶುಕ್ಲಾ ವಿರುದ್ಧ ನ್ಯಾಯಾಲಯದ ಆಂತರಿಕ ತನಿಖೆಯಲ್ಲಿ ದೋಷಾರೋಪಣೆ ಹೊರಿಸಲಾಯಿತು. ಅವರ ಪದಚ್ಯುತಕ್ಕೆ ಶಿಫಾರಸು ಮಾಡಲಾದರೂ, ನಂತರ ಸೇವೆಯಿಂದ ನಿವೃತ್ತರಾದರು. ರಾಜೀನಾಮೆ ಎನ್ನುವುದು ಪ್ರಕರಣದ ಅಂತ್ಯಕ್ಕೆ ಕಾರಣವಾದರೆ, ಈ ನೆಲದ ಕಾನೂನಿನ ಮೇಲೆ ನಂಬಿಕೆ ಮೂಡುವುದಾದರೂ ಹೇಗೆ? ಸಮಸ್ಯೆ ಇರುವುದು ಆರೋಪಿ ಸ್ಥಾನದಲ್ಲಿರುವ ನ್ಯಾಯಾಧೀಶರದ್ದಲ್ಲ, ಇಂಥದ್ದೊಂದು ಆರೋಪ ಕೇಳಿಬಂದ ಮೇಲೂ ಅವರು ಪಾರಾಗುತ್ತಿರುವ ಮಾದರಿಯ ಬಗ್ಗೆ ಮತ್ತು ಅದಕ್ಕೆ ಪೂರಕವಾಗಿರುವ ವ್ಯವಸ್ಥೆಯ ಬಗ್ಗೆ.

ಸಾಮಾನ್ಯ ನಾಗರಿಕರ ಮೇಲೆ ಆರೋಪ ಬಂದಾಗ ಪೊಲೀಸರಿಂದ ಹಿಡಿದು ಎಲ್ಲ ಹಂತದ ವ್ಯವಸ್ಥೆಗಳು ಬಿಗಿಯಾಗಿಬಿಡುತ್ತವೆ. ಆದರೆ, ಪ್ರಭಾವಿಗಳ ಮೇಲೆ ಆರೋಪ, ಅನುಮಾನಗಳು ಮೂಡಿದಾಗ ವ್ಯವಸ್ಥೆ ಇದ್ದಕ್ಕಿದ್ದಂತೆ ಎಚ್ಚರಿಕೆಯಿಂದ, ವಿಳಂಬ ಕಾರ್ಯವಿಧಾನ ಅಳವಡಿಸಿಕೊಂಡು, ನಂತರ ಪ್ರಕ್ರಿಯೆಗಳೇ ದುರ್ಬಲಗೊಳ್ಳುತ್ತವೆ. ನ್ಯಾಯಾಂಗ ಸುಧಾರಣೆ ಬಗ್ಗೆ ಭಾಷಣ, ಪ್ರಬಂಧ ಮಂಡನೆಗಳನ್ನಷ್ಟೇ ಮಾಡಿದರೆ ಸಾಲದು. ನ್ಯಾಯಾಧೀಶರ ತಪ್ಪುಗಳನ್ನು ರಕ್ಷಿಸುವ ವ್ಯವಸ್ಥೆಗಳನ್ನು ಕೊನೆಗೊಳಿಸಿದರೆ ಮಾತ್ರ ಜನರಲ್ಲಿ ಭರವಸೆ ಮೂಡಬಲ್ಲದು. ಅಲ್ಲಿಯವರೆಗೆ, ಪ್ರತಿ ಹೊಸ ಹಗರಣವೂ ಹಳೆಯ ಹಗರಣಗಳನ್ನು ನೆನಪಿಸುವ ಒಂದು ಘಟನೆ ಯಾಗಬಹುದು ಅಷ್ಟೇ.

ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಪ್ರಥಮ ಭಾಷೆ ಕನ್ನಡ!

ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಕಲಿಯುವ ಮಕ್ಕಳಿಗೆ ತ್ರಿಭಾಷಾ ಸೂತ್ರದ ಉಪಯೋಗದೊಂದಿಗೆ ಇಂದಿನ ಅಗತ್ಯಕ್ಕೆ ತಕ್ಕಂತೆ ಸ್ಕಿಲ್ ಎಜುಕೇಶನ್, ಕೃತಕ ಬುದ್ಧಿಮತ್ತೆ, ತಾರ್ಕಿಕ ಚಿಂತನೆಯ ವಿಷಯಗಳನ್ನು ಹತ್ತನೇ ತರಗತಿಗೆ ಹಂತ ಹಂತವಾಗಿ ಕಡ್ಡಾಯ ವಿಷಯವನ್ನಾಗಿಸುತ್ತಿದೆ. ಈ ಹೊಸ ನಿಯಮದಿಂದ ಲಕ್ಷಾಂತರ ಮಕ್ಕಳು ಕನ್ನಡವನ್ನೇ ಪ್ರಥಮ ಭಾಷೆಯನ್ನಾಗಿ ಓದುವ ಅವಕಾಶ ಸಿಕ್ಕಿದೆ.

ಒಡಲಾಳ

ಸುರೇಂದ್ರ ಪೈ, ಭಟ್ಕಳ

vveditoped@gmail.com

ಕರ್ನಾಟಕ ರಾಜ್ಯ ಶಿಕ್ಷಣ ಇಲಾಖೆಯಲ್ಲಿ ತ್ರಿಭಾಷಾ ಸೂತ್ರದ ಅಳವಡಿಕೆ ಹಾಗೂ ಹಿಂದಿ ಹೇರಿಕೆಯ ಕುರಿತಂತೆ ತೀವ್ರ ವಿರೋಧ ಇರುವುದು ಎಲ್ಲರಿಗೂ ಗೊತ್ತಾ? ಇದರ ನಡುವೆಯೇ ಕೇಂದ್ರ ಪಠ್ಯಕ್ರಮ ಅಳವಡಿಸಿಕೊಂಡಿರುವ ಸಿಬಿಎಸ್‌ಇ ಶಾಲೆಗಳಿಗೆ ಪ್ರಸಕ್ತ ಸಾಲಿನಿಂದಲೇ 6-8 ನೇ ತರಗತಿಯಿಂದಲೇ ತ್ರಿಭಾಷಾ ಸೂತ್ರದ ಅಳವಡಿಸಿಕೊಳ್ಳುವ ಕುರಿತು ಆದೇಶ ಹೊರಡಿಸಲಾಗಿದೆ. ಹಾಗಂತ ಅಯ್ಯೋ ಮತ್ತೆ ಹಿಂದಿ ಹೇರಿಕೆ ಕಡ್ಡಾಯ ಮಾಡುವ ಕೇಂದ್ರ ಸರಕಾರದ ಹುನ್ನಾರಕ್ಕೆ ಜಯ ಸಿಕ್ಕಿತು ಎಂದು ಗಾಬರಿಗೊಳ್ಳುವ ಅಗತ್ಯವಿಲ್ಲ. ಬದಲಾಗಿ ಕರ್ನಾಟಕದ ಕನ್ನಡಪರ ಜನತೆಗೆ ಇಲ್ಲೊಂದು ಸಂತಸದ ಸುದ್ದಿ ಇದೆ. ಆದರೆ, ಕೇಂದ್ರ ಶಿಕ್ಷಣ ಇಲಾಖೆ ಸಿಬಿಎಸ್‌ಇ ಹೊರಡಿಸಿರುವ ತ್ರಿಭಾಷಾ ಸೂತ್ರದ ಹೊಸ ಆದೇಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಸಾಮಾಜಿಕ ಮಾಧ್ಯಮದಲ್ಲಿ ಒಂದಿಷ್ಟು ಜನರು ಸಂಘಟನೆಗಳ ಹೆಸರಿನಲ್ಲಿ ಕನ್ನಡಕ್ಕೆ ಅನ್ಯಾಯವಾಗಿದೆ. ಕೇಂದ್ರ ಸರಕಾರ ತ್ರಿಭಾಷಾ ನೀತಿಯ ಮೂಲಕ ಕನ್ನಡ ಭಾಷೆಯನ್ನು ದ್ವಿತೀಯ ಭಾಷೆಯಿಂದ ತೃತೀಯ ಭಾಷೆಗೆ ತಳ್ಳುವ ಪ್ರಯತ್ನ ಮಾಡುತ್ತಿದೆ ಎಂದೆಲ್ಲಾ ಬೊಬ್ಬಿಡುತ್ತಿದ್ದಾರೆ. ಇದರಿಂದ ಸಾಕಷ್ಟು ಜನರು ಇದನ್ನೇ ನಿಜವೆಂದು ಭಾವಿಸಿ ಸಿಬಿಎಸ್‌ಇ ಶಾಲೆ ಹಾಗೂ ಕೇಂದ್ರ ಸರಕಾರದ ವಿರುದ್ಧ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ವಾಸ್ತವದಲ್ಲಿ ಸಿಬಿಎಸ್‌ಇ ಪಠ್ಯಕ್ರಮ ಅನುಸರಿಸುವ ಶಾಲೆಯ 6 ರಿಂದ 8 ನೇ ತರಗತಿಯ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳು ಎನ್‌ಇಪಿ -2020 (NEP-2020) ಹಾಗೂ ಎನ್‌ಸಿಎಫ್ ಎಸ್‌ಇ-2023 (NCFSE-2023) ಚೌಕಟ್ಟಿನ ಅನ್ವಯ ಕಳೆದ ವರ್ಷವೇ ಬದಲಾವಣೆಗೊಂಡಿರುತ್ತದೆ. ಇದೀಗ ಪ್ರಸಕ್ತ ಸಾಲಿನ 9ನೇ ಪಠ್ಯಕ್ರಮ ಹಾಗೂ ಪಠ್ಯಪುಸ್ತಕದಲ್ಲಿ ಬದಲಾವಣೆಯಾಗಿದೆ. ಈ ಕುರಿತಂತೆ ಕೇಂದ್ರ ಶಿಕ್ಷಣ ಇಲಾಖೆ ಅತ್ಯಂತ ವ್ಯವಸ್ಥಿತವಾಗಿ, ಪೂರ್ವಯೋಜಿತವಾಗಿ ತನ್ನೆಲ್ಲಾ ಸಿಬಿಎಸ್‌ಇ ಶಾಲೆಗಳಿಗೆ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಏಪ್ರಿಲ್ 2 ರಂದು ಅಧಿಕೃತವಾಗಿ ಆದೇಶ ಹೊರಡಿಸಿತ್ತು. ಜತೆಗೆ ಸಿಬಿಎಸ್‌ಇ ಚೇರ್ಮನ್ ಸ್ವತಃ ಎರಡೂವರೆ ಗಂಟೆಗಳ ಅವಧಿಯ ವಿಶೇಷ ವೆಬಿನಾರ್ ಆಯೋಜಿಸುವ ಮೂಲಕ ಹೊಸ ಬದಲಾವಣೆಯ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡಿರುತ್ತಾರೆ. ಜತೆಗೆ ಮುಂದಿನ ವರ್ಷ ಹತ್ತನೇ ತರಗತಿಯ ಪಠ್ಯಕ್ರಮ ಬದಲಾವಣೆ ಬಗ್ಗೆಯೂ ಮಾಹಿತಿ ನೀಡಿದ್ದಾರೆ.

ಇಷ್ಟು ಮಾತ್ರವಲ್ಲದೇ ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCFSE-2023)ಬಹುಭಾಷಾ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. ಮತ್ತು ಕಲಿಯುವವರಲ್ಲಿ ಭಾಷಾ ಪ್ರಾವೀಣ್ಯತೆ, ಸಾಂಸ್ಕೃತಿಕ ತಿಳಿವಳಿಕೆ ಮತ್ತು ರಾಷ್ಟ್ರೀಯ ಏಕೀಕರಣವನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ R1, R2, R3 ಮಾದರಿಯ ಅಡಿಯಲ್ಲಿ ಎರಡು ಸ್ಥಳೀಯ ಭಾರತೀಯ ಭಾಷೆಗಳ ಬೋಧನೆಯನ್ನು ಶಿಫಾರಸು ಮಾಡುತ್ತದೆ. ಹಾಗಾಗಿ ಪ್ರಸಕ್ತ ವರ್ಷದಿಂದಲೇ ಸಿಬಿಎಸ್‌ಇ ಶಾಲೆಗಳಲ್ಲಿ 6ನೇ ತರಗತಿಯಿಂದಲೇ ಮೂರು ಭಾಷೆಗಳ ಕಲಿಕೆಗೆ ಆದ್ಯ ನೀಡಿಲಾಗಿದೆ. ಅಂದರೆ ಮಕ್ಕಳು ಈ ವರ್ಷದಿಂದ R1, R2 ಹಾಗೂ 3 ಮಾದರಿಯ ತ್ರಿಭಾಷೆಯ ಸೂತ್ರ ಕಲಿಯಬೇಕು. ಈ ನಿಯಮವೇ 2029-30ರ ಅವಧಿಯಲ್ಲಿ 9ನೇ ತರಗತಿ ಹಾಗೂ 2030-31ರಲ್ಲಿ ಹತ್ತನೇ ತರಗತಿಗೆ ಅಳವಡಿಕೆ ಆಗಲಿದೆ.

ಈ ಹೊಸ ನಿಯಮದ (NCFSE-2023) ಪ್ರಕಾರ ಸಿಬಿಎಸ್‌ಇ ಶಾಲೆಯಲ್ಲಿ ಕಲಿಯುವ ಮಕ್ಕಳು R1 ಮಾದರಿಯಲ್ಲಿ 'ಹಿಂದಿ, ಇಂಗ್ಲೀಷ್, ಉರ್ದು, ಕನ್ನಡ' ಈ ನಾಲ್ಕು ಭಾಷೆಗಳಲ್ಲಿ ಒಂದನ್ನು ಮೊದಲ ಭಾಷೆಯನ್ನಾಗಿ ಅಧ್ಯಯನ ಮಾಡಬಹುದು. ಉದಾಹರಣೆಗೆ ಮಕ್ಕಳು ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಆಯ್ಕೆ ಮಾಡಿಕೊಂಡರೆ, R2 ಮಾದರಿಯ ದ್ವಿತೀಯ ಭಾಷಾ ವಿಷಯವನ್ನು 'ಹಿಂದಿ, ಇಂಗ್ಲೀಷ್ ಅಥವಾ ಉರ್ದು' ಈ ಮೂರು ಭಾಷಾ ವಿಷಯದಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು.

ಉದಾಹರಣೆಗೆ ವಿದ್ಯಾರ್ಥಿ ಪ್ರಥಮ ಭಾಷೆ ಕನ್ನಡವನ್ನಾಗಿ, ದ್ವಿತೀಯ ಭಾಷೆಯನ್ನು ಇಂಗ್ಲೀಷ್ ಆಯ್ಕೆ ಮಾಡಿಕೊಂಡರೆ, ಇನ್ನೂ R3 ಮಾದರಿಯಲ್ಲಿ ವಿದ್ಯಾರ್ಥಿ ಈಗಾಗಲೇ ಆಯ್ಕೆ ಮಾಡಿಕೊಂಡಿರುವ ಪ್ರಥಮ, ದ್ವಿತೀಯ ಭಾಷೆ ವಿಷಯಗಳನ್ನು ಹೊರತುಪಡಿಸಿ ಭಾರತದ ಇನ್ನುಳಿದ 42 ಪ್ರಾದೇಶಿಕ ಭಾಷೆಯಲ್ಲಿ ಒಂದನ್ನು ತೃತೀಯ ಭಾಷೆಯನ್ನಾಗಿ ಓದಬಹುದು. ಜತೆಗೆ ಅದೇ 42 ಪ್ರಾದೇಶಿಕ ಭಾಷೆಯಲ್ಲಿ ಒಂದನ್ನು R2 ಮಾದರಿಯ ದ್ವಿತೀಯ ಭಾಷೆಯನ್ನಾಗಿಯೂ ಆಯ್ಕೆ ಮಾಡಿಕೊಂಡು ಓದಬಹುದು. ಇದು ಪ್ರಸ್ತುತ 6 ನೇ ತರಗತಿಯಿಂದಲೇ ಅನುಷ್ಠಾನವಾಗಲಿದ್ದು, ವಿದ್ಯಾರ್ಥಿಗಳು ಅವುಗಳನ್ನೇ ಹತ್ತನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲೂ ಅಧ್ಯಯನ ಮಾಡಬೇಕು. ಈ ಹೊಸ ನಿಯಮದಿಂದ ಕರ್ನಾಟಕಕ್ಕೆ ವಿಶೇಷ ಪ್ರಾಧ್ಯಾನತೆ ಸಿಕ್ಕಂತಾಗಿದೆ. ನಮ್ಮ ರಾಜ್ಯದ ಮಕ್ಕಳು ಸೇರಿದಂತೆ ಬೇರೆ ರಾಜ್ಯದ ಆಸಕ್ತ ವಿದ್ಯಾರ್ಥಿಗಳು ಕನ್ನಡವನ್ನು ತಮ್ಮ ಪ್ರಥಮ ಭಾಷೆಯನ್ನಾಗಿ ಇನ್ನೂ ಮುಂದೆ ಅಧ್ಯಯನ ಮಾಡಬಹುದು.

ಈ ಮೊದಲು ಹಿಂದಿ ಅಥವಾ ಇಂಗ್ಲೀಷ್ ಭಾಷೆಯಲ್ಲಿ ಒಂದನ್ನು ಮಾತ್ರ ಕಡ್ಡಾಯವಾಗಿ ಪ್ರಥಮ ಭಾಷೆಯನ್ನಾಗಿ ಅಧ್ಯಯನ ಮಾಡಬೇಕಿತ್ತು. ಆಗ ಕರ್ನಾಟಕದಲ್ಲಿ ಕನ್ನಡವನ್ನು ದ್ವಿತೀಯ ಭಾಷೆಯನ್ನಾಗಿ ಸಿಬಿಎಸ್‌ಇ ಶಾಲೆಯಲ್ಲಿ ಕಲಿಸಲಾಗುತ್ತಿತ್ತು. ಆದರೆ ಈ ವರ್ಷದಿಂದ 6ನೇ ತರಗತಿಯಿಂದಲೇ ಕನ್ನಡವನ್ನು (ಸಿರಿಗನ್ನಡ, ತಿಳಿಗನ್ನಡ) ಪಠ್ಯಪುಸ್ತಕವನ್ನು ಪ್ರಥಮ ಭಾಷೆಯನ್ನಾಗಿ ಓದಬಹುದು. ಈ ಹೊಸ ನಿಯಮದಿಂದ ಮಕ್ಕಳಿಗೆ ಬಹುಭಾಷಾ ಕಲಿಕೆಯ ಉತ್ತೇಜನ ಸಿಗುವುದು ಮಾತ್ರವಲ್ಲದೇ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಓದುವ ಹಾಗೂ ಹಿಂದಿ, ಇಂಗ್ಲೀಷ್ ಭಾಷೆಯನ್ನು ಕಡ್ಡಾಯ ಪ್ರಥಮ ಭಾಷೆಯ ಕಲಿಕೆಯ ಒತ್ತಡದಿಂದ ನಿರಾಳ ಸಿಗಲಿದೆ.

ಕೇಂದ್ರ ಶಿಕ್ಷಣ ಇಲಾಖೆಯ ಈ ಹೊಸ ನಿಯಮದಿಂದ ಲಕ್ಷಾಂತರ ಮಕ್ಕಳು ಕನ್ನಡವನ್ನೇ ಪ್ರಥಮ ಭಾಷೆಯನ್ನಾಗಿ ಓದುವ ಅವಕಾಶ ಸಿಕ್ಕಿದ್ದು ಮಾತ್ರವಲ್ಲ ಬಹುಭಾಷೆಯನ್ನು ಮುಕ್ತವಾಗಿ ಕಲಿಯುವ ಆಯ್ಕೆಯನ್ನು ಒದಗಿಸಿದಂತಾಗಿದೆ. ಇಲ್ಲಿ ಭಾಷಾ ವಿಷಯದ ಆಯ್ಕೆ ಸಂಪೂರ್ಣವಾಗಿ ವಿದ್ಯಾರ್ಥಿಯ ಆಯ್ಕೆಗೆ ಸಂಬಂಧಿಸಿದ್ದು, ಹಾಗೂ ಶಾಲೆಗಳು ಮಕ್ಕಳ ಆಯ್ಕೆಯನ್ನು ಗೌರವಿಸಿ ಅದಕ್ಕೆ ತಕ್ಕಂತೆ ಬೋಧನೆ ಮಾಡುವ ಹೊಣೆಯನ್ನು ಹೊಂದಬೇಕಿದೆ.

ಇದರೊಂದಿಗೆ ಸಿಬಿಎಸ್‌ಇ ಶಾಲೆಗಳ ಪರೀಕ್ಷಾ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿರ್ದಿಷ್ಟ ಅಂಕ ಪಡೆಯುವ ನಿಯಮವನ್ನು ಬದಲಾಯಿಸಿದೆ. ಇಷ್ಟು ದಿನ 80 ವಾರ್ಷಿಕ ಪರೀಕ್ಷೆಯ ಲಿಖಿತ ಅಂಕಗಳು ಹಾಗೂ 20 ಆಂತರಿಕ ಅಂಕಗಳು ಸೇರಿ ಒಟ್ಟು 100 ಕ್ಕೆ 33 ಅಂಕ ಬಂದರೆ ಉತ್ತೀರ್ಣ ಎಂಬ ನಿಯಮವಿತ್ತು. ಇದನ್ನೇ ನಮ್ಮ ರಾಜ್ಯ ಶಿಕ್ಷಣ ಇಲಾಖೆ ಪರೀಕ್ಷಾ ಫಲಿತಾಂಶ ಹೆಚ್ಚಿಸುವ ಉದ್ದೇಶದಿಂದ ಈ ವರ್ಷದಿಂದಲೇ 100 ಕ್ಕೆ 33 ಪಾಸ್ ಅಂಕವೆಂದು ಆದೇಶ ನೀಡಿತ್ತು. ಆದರೆ ಸಿಬಿಎಸ್‌ಇ ಮಾತ್ರ ಮಕ್ಕಳ ಕಲಿಕಾ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಬಯಸದೇ ಇಂದಿನ ಸ್ಪರ್ಧಾತ್ಮಕ ಜಗತ್ತಿಗೆ ತಕ್ಕಂತೆ ಗುಣಮಟ್ಟದ ಶಿಕ್ಷಣ ನೀಡುವುದರೊಂದಿಗೆ ಪರೀಕ್ಷಾ ನೀತಿಯಲ್ಲೂ ಗುಣಮಟ್ಟ ಕಾಯ್ದುಕೊಳ್ಳಲು ಮುಂದಾಗಿದೆ. ಹೊಸ ನಿಯಮದ ಪ್ರಕಾರ ಪ್ರಸಕ್ತ ಸಾಲಿನಿಂದ ಹತ್ತನೇ ತರಗತಿ ವಿದ್ಯಾರ್ಥಿಗಳು ವಿಷಯವಾರು 80 ಲಿಖಿತ ಅಂಕಗಳಿಗೆ ಶೇ.33 ಅಂಕ ಪಡೆಯಬೇಕು. ಹಾಗೂ ಆಂತರಿಕ 20 ಅಂಕಗಳಲ್ಲಿ ಪ್ರತ್ಯೇಕವಾಗಿ ಶೇ.33 ಅಂಕ ಗಳಿಸಬೇಕು. ಅಂದರೆ 80ಕ್ಕೆ ಕನಿಷ್ಠ 26.5 ಅಂಕಗಳನ್ನು ಹಾಗೂ 20 ಆಂತರಿಕ ಅಂಕಗಳಲ್ಲಿ ಕನಿಷ್ಠ 7 ಅಂಕಗಳನ್ನು ಪಡೆಯಲೇ ಬೇಕು. ಒಂದೊಮ್ಮೆ 80 ಅಂಕಗಳಲ್ಲಿ 26.6 ಕ್ಕಿಂತ ಕಡಿಮೆ 25 ಅಂಕ ಪಡೆದು 20 ಆಂತರಿಕ ಅಂಕದಲ್ಲಿ 8 ಅಂಕ ಪಡೆದರೂ ಸಹ ಫೇಲ್ ಆಗುತ್ತಾರೆ. ಈ ನಿಯಮದ ಲಿಖಿತ ಪರೀಕ್ಷೆಯನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸುವಂತೆ ಮಾಡಿದೆ. ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಕಲಿಕೆಯನ್ನು ಹೊಂದಿ, ಪೂರ್ವ ತಯಾರಿ ಹೊಂದುವಂತೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ಅಣಿಯಾಗಲು ಅವಕಾಶ ನೀಡಿದೆ.

ಕೇಂದ್ರೀಯ ಶಿಕ್ಷಣ ಇಲಾಖೆಯು 2026-27 ರಿಂದ 2030-31ರ ತನಕ ಐದು ವರ್ಷಗಳ ಪರೀಕ್ಷಾ ನೀತಿ, ಪಠ್ಯಕ್ರಮ ಅಳವಡಿಕೆ, ಅಂಕಗಳ ಹಂಚಿಕೆ, ಗ್ರೇಡಿಂಗ್ ನಿಯಮ, ಪಠ್ಯಪುಸ್ತಕ ಬದಲಾವಣೆ, ಅದಕ್ಕೆ ಪೂರಕವಾದ ನಿರಂತರ ಶಿಕ್ಷಕರ ತರಬೇತಿ ಕಾರ್ಯಕ್ರಮದ ಯೋಜನೆಯ ಸಂಪೂರ್ಣ ಚಿತ್ರಣದ ರೂಪುರೇಷೆಯನ್ನು ಎಲ್ಲ ಸಿಬಿಎಸ್‌ಇ ಶಾಲೆಗಳಿಗೆ ಅತ್ಯಂತ ಪೂರ್ವಯೋಜಿತವಾಗಿ ನೀಡಿದೆ. ಇದರಿಂದ ಶಾಲೆ, ಆಡಳಿತ ಮಂಡಳಿ, ವಿದ್ಯಾರ್ಥಿಗಳು, ಪಾಲಕರು ಎಲ್ಲರಿಗೂ ಒಂದು ಸ್ಪಷ್ಟವಾದ ಚಿತ್ರಣ ದೊರಕಿದೆ. ಎಲ್ಲರೂ ಬದಲಾವಣೆಗೆ ಬೇಕಾದ ಸೂಕ್ತ ತಯಾರಿ ಮಾಡಿಕೊಳ್ಳಲು ಎರಡು ವರ್ಷಗಳ ಕಾಲಾವಕಾಶ ಸಿಗುವಂತೆ ಮಾಡಿದೆ.

ಆದರೆ, ನಮ್ಮ ರಾಜ್ಯ ಶಿಕ್ಷಣ ಇಲಾಖೆ ಮಾತ್ರ ನಮ್ಮ ಮಕ್ಕಳು ಬಹುಭಾಷೆ ಕಲಿಯಬಾರದು ದ್ವಿಭಾಷಾ ನೀತಿಯೇ ಸರಿ ಎಂದು ಪಟ್ಟು ಹಿಡಿದು ಕುಳಿತಿದೆ. ಇದಕ್ಕೆ ಒಂದಿಷ್ಟು ಸಂಘಟನೆಗಳ ಬೆಂಬಲ ಬೇರೆ. ಹೌದು ಕರ್ನಾಟಕದ ಆಡಳಿತ ಭಾಷೆಯ ದೃಷ್ಟಿಯಿಂದ ಕನ್ನಡ ಕಡ್ಡಾಯವಾಗಬೇಕು. ಹಾಗೂ ಎಲ್ಲೂ ಹಿಂದಿ ಸೇರಿದಂತೆ ಬೇರೆ ಭಾಷೆಗಳ ಹೇರಿಕೆ ಆಗಬಾರದು. ಇನ್ನೂ ಪ್ರಾಥಮಿಕ ,ಪ್ರೌಢ ಶಾಲೆಗಳಲ್ಲೂ ಸಹ ಕನ್ನಡವನ್ನು ಕಡ್ಡಾಯ ಪ್ರಥಮ ಭಾಷೆಯನ್ನಾಗಿಸಬೇಕು ಒಪ್ಪೋಣ. ಹಾಗಂತ ಇತರೆ ಭಾಷೆ ಕಲಿಯಬಾರದು, 100ಕ್ಕೆ 33 ಬಂದರೆ ಪಾಸ್ ಮಾಡುತ್ತೇವೆ ಎಂಬ ಮುಂದಾಲೋಚನೆ ಇಲ್ಲದ ಘೋಷಣೆ, ಆದೇಶ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಅಪಾಯ.

ಇಷ್ಟು ದಿನ ಕೇಂದ್ರ ಸರಕಾರದ ತ್ರಿಭಾಷಾ ನೀತಿಯಿಂದ ಕನ್ನಡಕ್ಕೆ ಅಪಾಯವಾಗಲಿದೆ, ಕನ್ನಡ ತುಳಿತಕ್ಕೆ ಒಳಗಾಗಲಿದೆ ಎಂದೆಲ್ಲಾ ಊಹಾಪೋಹದ ಮಾತುಗಳನ್ನಾಡಿದೆವು.

ಆದರೆ, ಪ್ರಸ್ತುತ ಸಿಬಿಎಸ್‌ಇ ಶಾಲೆಗಳು ಅನುಸರಿಸುತ್ತಿರುವ ನೀತಿಯಿಂದ ಮಕ್ಕಳು ಅವರ ಆಸಕ್ತಿಗೆ ತಕ್ಕಂತೆ ಕನ್ನಡವನ್ನು ಪ್ರಥಮ ಭಾಷೆ, ದ್ವಿತೀಯ ಭಾಷೆ ಅಥವಾ ತೃತೀಯ ಭಾಷೆ ಹೀಗೆ ಮೂರರಲ್ಲೂ ಕಲಿಯುವ ಅವಕಾಶ ಸಿಕ್ಕಿದೆ. ಇದನ್ನೆಲ್ಲಾ ನೋಡಿದಾಗ ನಮ್ಮ ಮಕ್ಕಳಿಗೆ ರಾಜ್ಯ ಪಠ್ಯಕ್ರಮಕ್ಕಿಂತಲೂ ಸಿಬಿಎಸ್‌ಇ ಪಠ್ಯಕ್ರಮ ಶಾಲೆಗಳು ಎಲ್ಲ ವಿಧದಲ್ಲೂ ಒಳ್ಳೆಯದು ಎಂದೆನಿಸದೆ ಇರಲಾರದು. ಇನ್ನಾದರೂ ರಾಜ್ಯ ಶಿಕ್ಷಣ ಇಲಾಖೆ ಶಿಕ್ಷಣ ನೀತಿಯನ್ನು ರೂಪಿಸುವಾಗ ಇಂತಹ ಹತ್ತಾರು ಮುಂದಾಲೋಚನಾ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು.

ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಕಲಿಯುವ ಮಕ್ಕಳಿಗೆ ತ್ರಿಭಾಷಾ ಸೂತ್ರದ ಉಪಯೋಗದೊಂದಿಗೆ ಇಂದಿನ ಅಗತ್ಯಕ್ಕೆ ತಕ್ಕಂತೆ ಸ್ಕಿಲ್ ಎಜುಕೇಶನ್, ಕೃತಕ ಬುದ್ಧಿಮತ್ತೆ, ತಾರ್ಕಿಕ ಚಿಂತನೆಯ ವಿಷಯಗಳನ್ನು ಹತ್ತನೇ ತರಗತಿಗೆ ಹಂತ ಹಂತವಾಗಿ ಕಡ್ಡಾಯ ವಿಷಯವನ್ನಾಗಿಸುತ್ತಿದೆ. ಅದಕ್ಕೆ ಬೇಕಾದ ಪೂರಕ ನೀತಿಗಳನ್ನು, ತರಬೇತಿಗಳನ್ನು ನೀಡಲು ಮುಂದಾಗಿದೆ. ಹೀಗಿರುವಾಗ ನಾವು ಮಾತ್ರ ಕಳಪೆ ಮಟ್ಟದ ಶಿಕ್ಷಣ ನೀಡುತ್ತಾ, ಸರಳ ಪ್ರಶ್ನೆಪತ್ರಿಕೆ, ಕಳಪೆ ಪರೀಕ್ಷಾ ಪದ್ಧತಿ ಅಳವಡಿಕೆಯಿಂದ, ಬೋರ್ಡ್ ಪರೀಕ್ಷೆಯಲ್ಲಿ ನೂರಕ್ಕೆ ನೂರು ಬಂತು ಎಂದು ಹೇಳಿ ಬೀಗುವುದರಿಂದ ಯಾವ ಸುಧಾರಣೆಯೂ ಸಾಧ್ಯವಾಗದು.

ಭಟ್ಟರ್ ಸ್ಕಾಚ್

- **ಕೃಷ್ಣಮೂರ್ತಿ, ಸೋಸಲೆ**
ಭಟ್ರೇ, ನಸುಕಿನಲ್ಲೇ ತೆರೆಯುವ, ರಾತ್ರಿಯಲ್ಲಿ ತಡವಾಗಿ ಬಾಗಿಲು ಮುಚ್ಚುವ ಅಂಗಡಿಗಳು ಯಾವುವು?
- **ಕ್ರಮವಾಗಿ ಹಾಲು ಮತ್ತು ಆಲ್ಕೋಹಾಲ್!**

- **ಶ್ರೀನಿವಾಸ ಕೆ., ಮೈಸೂರು**
ಭಟ್ರೇ, ಮಠಾಧಿಪತಿ ಮತ್ತು ಭಕ್ತೆಯ ಸಂಬಂಧಗಳು ನಿಮ್ಮ ದೃಷ್ಟಿಯಲ್ಲಿ ಯಾವುದಕ್ಕೆ ಸೀಮಿತವಾಗಿರಬೇಕು?
- **ನಮಸ್ಕಾರ ಮಾಡಿಸಿಕೊಳ್ಳಲು ಮತ್ತು ನಮಸ್ಕಾರ ಮಾಡಲು !**

- **ಶ್ಯಾಮ ಭಟ್ಟ, ಸಕ್ರೆಬೈಲು**
ಭಟ್ರೇ, ಮನೆಯಲ್ಲಾಗಲಿ, ಹೊರಗಾಗಲಿ ಅರ್ಥ ಕಳೆದುಕೊಂಡ ಪದ ಯಾವುದು?
- **ಕದನ ವಿರಾಮ!**

- **ಶ್ರೀಧರ ಹೆಣ್ಣೂರು, ಬೆಂಗಳೂರು**
ಭಟ್ರೇ, ಪ್ರಶ್ನೆ ಕೇಳುವುದೇ ನನ್ನ ಧರ್ಮ, ಅದಕ್ಕೆ ನಿಮ್ಮ ಅನಿಸಿಕೆ?
- **ಆ ಪ್ರಕಾಶ ರೈ ಸಹವಾಸ ಬಿಡು ಅಂದ್ರೆ ನೀನು ಕೇಳುವುದಿಲ್ಲ!**

- **ಪಿ.ಜಿ. ನಂಜಯ್ಯನಮಠ, ಗದಗ**
ಭಟ್ರೇ, ಮದುವೆಗೂ, ಮರಣಕ್ಕೂ ಸಾಮ್ಯತೆ ಏನು?
- **ಎರಡರಲ್ಲೂ 'ಮಾಲೆ' ಹಾಕುತ್ತಾರಲ್ಲ!**

- **ಸಿ. ದ್ವಾರಕಾನಾಥ, ಕೋಲಾರ**
ಭಟ್ರೇ, ಡಾಕ್ಟರ್ ಮತ್ತು ಯಮರಾಜನ ನಡುವಿನ ವ್ಯತ್ಯಾಸವೇನು?
- **ಯಮರಾಜ ನೇರವಾಗಿ ಬಂದು ಪ್ರಾಣ ತಗೊಂಡು ಹೋಗ್ತಾನೆ, ಡಾಕ್ಟರ್ ಬಿಲ್ ಕೊಟ್ಟ ನಂತರ ಯಮರಾಜನ ಹತ್ತಿರ ಕಳುಹಿಸ್ತಾನೆ!**

- **ಜಿ. ಮುರಳಿ, (ಇಮೇಲ್ ಮೂಲಕ)**
ಭಟ್ರೇ, ಬುದ್ಧಿವಂತರಿಗೂ ಮತ್ತು ಅತಿ ಬುದ್ಧಿವಂತರಿಗೂ ಏನು ವ್ಯತ್ಯಾಸ?
- **ತಪ್ಪು ಮಾಡಿದಾಗ ತಿದ್ದಿಕೊಳ್ಳುವವನು ಬುದ್ಧಿವಂತ, ಆ ತಪ್ಪನ್ನು ಹೆಂಡತಿಯ ಮೇಲೆ ಹಾಕುವವನು ಅತಿ ಬುದ್ಧಿವಂತ!**

- **ವಿನೋದ ಸಿಂಪಿ, ಧಾರವಾಡ**
ಭಟ್ರೇ, ಪುಸ್ತಕ ಓದುವವರ ಸಂಖ್ಯೆ ಕಡಿಮೆ ಆಗ್ತಿದೆ ಅಂತ ಚಿಂತೆ ಆಗುತ್ತಿದೆಯಲ್ಲ?
- **ವಾಟ್ಸಾಪ್ ಸ್ಟೇಟಸ್ ಓದುವವರ ಸಂಖ್ಯೆ ಕೋಟಿ ದಾಟಿದೆ ಅನ್ನೋದಕ್ಕೆ ಖುಷಿಪಡು!**

- **ಚೈತ್ರಶ್ರೀ, ರಾಜಾಜಿನಗರ**
ಭಟ್ರೇ, ಈಗಿನ ಕಾಲದಲ್ಲಿ ನೆಮ್ಮದಿ ಹುಡುಕಬೇಕಾದ್ರೆ ಹಿಮಾಲಯಕ್ಕೆ ಹೋಗಬೇಕಿಲ್ಲ ಅಂತಾರಲ್ಲ?
- **ಹೂಂ.. ಮೊಬೈಲ್‌ನ 'ಡೇಟಾ' ಆಫ್ ಮಾಡಿದ್ರೆ ಸಾಕು!**

- **ಬಿ. ಸೋಮು, ಹರಿಹರ**
ಭಟ್ರೇ, ರಾಜಕಾರಣಿಗಳು ಹಾಲಿನಂತಿರಬೇಕು ಅಂತ ಇಲ್ಲೊಬ್ಬ ಅಂತನಲ್ಲ?
- **ನಿಜ, ಆದರೆ ಹಾಲಿಗೆ ನೀರು ಹಾಕುವವರೂ ಅವರೇ!**

ಸಂತಾನಶಕ್ತಿ ಹರಣ: ಖಂಡ್ರೆ ಮಾತು ಚಿಂತನಾರ್ಹ

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ರಾಜ್ಯದಲ್ಲಿ ಮಾನವ -ವನ್ಯಜೀವಿ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಆಯ್ದ ವನ್ಯಜೀವಿಗಳ ಸಂತಾನ ಶಕ್ತಿ ಹರಣ ಅಥವಾ ಚುಚ್ಚುಮದ್ದು ನೀಡುವ ಬಗ್ಗೆ ಚಿಂತನೆ ಮಾಡುವ ಅಗತ್ಯವಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಕಳೆದ ವಾರ ಅನಿರೀಕ್ಷಿತ ಹೇಳಿಕೆಯೊಂದನ್ನು ನೀಡಿದ್ದರು. ಈವರೆಗೆ ರಾಜ್ಯದ ಯಾವ ಅರಣ್ಯ ಸಚಿವರೂ ಹೇಳಲು ಧೈರ್ಯ ಮಾಡದ ಪ್ರಸ್ತಾಪ ವಿದು. 'ಪ್ರಾಣಿಪ್ರಿಯರು' ಎಂದು ಹೇಳಿಕೊಳ್ಳುವ ವರ್ಗ ಈ ಹೇಳಿಕೆಯನ್ನು ಖಂಡತುಂಡವಾಗಿ ವಿರೋಧಿಸುದು ನಿರೀಕ್ಷಿತವೇ ಆಗಿತ್ತು. ಆದರೆ ಖಂಡ್ರೆ ಅವರ ಈ ಹೇಳಿಕೆ ಖಂಡಿಸಿ ಚಾಮರಾಜನಗರದಲ್ಲಿ ರೈತಸಂಘದ ಪ್ರತಿನಿಧಿಗಳೇ ಪ್ರತಿಭಟನೆ ನಡೆಸಿರುವುದು ನಿಜಕ್ಕೂ ಅಚ್ಚರಿಯ ಸಂಗತಿ.

ಕೆಲವೊಮ್ಮೆ ಎಲ್ಲವನ್ನೂ ಅತಿ ಭಾವುಕತೆಯಿಂದ ಕಾಣುವ ನಾವು ಖಂಡ್ರೆ ಅವರ ಈ ಹೇಳಿಕೆಯನ್ನೂ ಪ್ರಾಣಿಹಿಂಸೆಯಂತೆ ಕಾಣುವ ಸಾಧ್ಯತೆ ಹೆಚ್ಚು. ರಾಜ್ಯದಲ್ಲಿ ವನ್ಯಜೀವಿ ಸಂಘರ್ಷದಲ್ಲಿ ಅತಿ ಹೆಚ್ಚು ಸಂತ್ರಸ್ತರಾಗಿರುವವರು ನಮ್ಮ ರೈತರು. ಅರಣ್ಯ ಸಚಿವರ ಈ ಹೇಳಿಕೆಯನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ನೋಡುವ ಅವಶ್ಯಕತೆ ಇದೆ ಎಂದು ಹೇಳಬೇಕಾದವರು ಇವರೇ. ರಾಜ್ಯದ ಯಾವುದೇ ಭಾಗದ ರೈತರಿರಲಿ, ವನ್ಯಮೃಗಗಳು ಮತ್ತು ಪಕ್ಷಿಗಳ ಉಪಟಳ ಅನುಭವಿಸದವರು ಕಡಿಮೆ. ಅದರಲ್ಲೂ ಮಲೆನಾಡು, ಕರಾವಳಿ ಮತ್ತು ಹಳೇಮೈಸೂರು ಸೀಮೆಯ ಜನರ ಪಾಲಿಗೆ ಈಗ ವನ್ಯ ಸಂಘರ್ಷ ಎನ್ನುವುದು ಸಾವು-ಬದುಕಿನ ಪ್ರಶ್ನೆ.

ಪ್ರತಿ ವರ್ಷ ರಾಜ್ಯದಲ್ಲಿ ಸರಾಸರಿ 45ರಿಂದ 50 ಮಂದಿ ಕಾಡು ಪ್ರಾಣಿಗಳ ದಾಳಿಗೆ ಬಲಿಯಾಗುತ್ತಿದ್ದಾರೆ. ಅಂದರೆ ಪ್ರತಿ ತಿಂಗಳು ಸರಾಸರಿ ನಾಲ್ವರು ವನ್ಯಜೀವಿಗಳ ದಾಳಿಗೆ ಸಿಲುಕಿ ಸಾಯುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವನ್ಯಮೃಗಗಳು ಮಾನವನೊಂದಿಗಿನ ಮುಖಾಮುಖಿಯಲ್ಲಿ ಸಾವು ಕಾಣುತ್ತಿವೆ. ಕಳೆದ ಐದು ವರ್ಷಗಳಲ್ಲಿ 30 ಸಾವಿರಕ್ಕೂ ಹೆಚ್ಚು ಸಂಘರ್ಷದ ಪ್ರಕರಣಗಳು ವರದಿಯಾಗಿವೆ. ಆದರೆ ಈ ತನಕ ಯಾವುದೇ ರಾಜಕೀಯ ಪಕ್ಷ ಮಾನವ-ವನ್ಯಜೀವಿ ಸಂಘರ್ಷ ಕರ್ನಾಟಕದ ಪ್ರಮುಖ ಸಮಸ್ಯೆ ಎಂದು ಭಾವಿಸಿಲ್ಲ.

ಪಶ್ಚಿಮ ಘಟ್ಟದ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಹೊಂದಿರುವ ರಾಜ್ಯದಲ್ಲಿ ಆನೆ, ಹುಲಿ, ಚಿರತೆ, ಕರಡಿ ಈ ನಾಲ್ಕೂ ಪ್ರಾಣಿಗಳ ಬಾಹುಳ್ಯವಿದೆ. ಜತೆಗೆ ಜಿಂಕೆ, ನವಿಲುಗಳ ಸಂಖ್ಯೆಯೂ ಹೇರಳವಾಗಿದೆ. ಕಳೆದ 5 ವರ್ಷಗಳಲ್ಲಿ ವನ್ಯಮೃಗಗಳ ದಾಳಿಯಿಂದ 300ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ 100ಕ್ಕೂ ಹೆಚ್ಚು ಮಂದಿ ಆನೆ ದಾಳಿಯಿಂದಲೇ ಮೃತಪಟ್ಟಿದ್ದಾರೆ. ಇದರ ಮೂರು ಪಟ್ಟು ಮಂದಿ ತೀವ್ರವಾಗಿ ಗಾಯಗೊಂಡು ಶಾಶ್ವತವಾಗಿ ಅಂಗವೈ ಕಲ್ಯಕ್ಕೊಳಗಾಗಿದ್ದಾರೆ. ರಾಜ್ಯದ ಮಲೆನಾಡು, ಕರಾವಳಿ ಜಿಲ್ಲೆಗಳು, ಹಳೇ ಮೈಸೂರು ಭಾಗದ ಜಿಲ್ಲೆಗಳು, ಬೆಳಗಾವಿ ಸೇರಿದಂತೆ ಸುಮಾರು 14 ಜಿಲ್ಲೆಗಳು ಕಾಡಾನೆ ದಾಳಿಯಿಂದ ತತ್ತರಿಸುತ್ತಿವೆ. ಕೊಡಗು, ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹುಲಿ, ಚಿರತೆಗಳ ದಾಳಿ ಮತ್ತು ಸಾವು ವರ್ಷದಿಂದ ವರ್ಷದಿಂದ ಏರುತ್ತಾ ಸಾಗಿದೆ. ಇದರ ಜತೆ ಕಾಡಂಚಿನ ಭಾಗದಲ್ಲಿ ಕಾಡೆಮ್ಮೆ, ಹಂದಿ,ನರಿ, ಜಿಂಕೆ, ಕೋತಿ ಮತ್ತಿತರ ನಾನಾ ವನ್ಯಮೃಗಗಳ ಉಪಟಳವಿದೆ. ಮಲೆನಾಡು ಮತ್ತು ಬಯಲು ಸೀಮೆ ಎರಡೂ ಕಡೆ ಕರಡಿ ಮತ್ತು ಚಿರತೆ ದಾಳಿ, ನವಿಲುಗಳ ಕಾಟ ಸಾಮಾನ್ಯವಾಗುತ್ತಿವೆ. ನದಿ ತೀರದಲ್ಲಿ ಇರುವವರಿಗೆ ಮೊಸಳೆ ಭಯ ಕಾಡುತ್ತಿದೆ.

ಈ ಸಮಸ್ಯೆಗಳು ಹಿಂದೆ ಇರಲಿಲ್ಲ ಎಂದಲ್ಲ, ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಪ್ರಮಾಣ ಏರುತ್ತಲೇ ಸಾಗಿದೆ. ಅರಣ್ಯ ಮತ್ತು ವನ್ಯ ಸಂರಕ್ಷಣೆಯ ಕಠಿಣ ಕಾನೂನುಗಳು, ಬೇಟೆಗಾರರ ನಿಯಂತ್ರಣ, ಉರುವಲು ಮತ್ತು ಮೇವಿಗಾಗಿ ಅರಣ್ಯಕ್ಕೆ ತೆರಳುವವರ ಸಂಖ್ಯೆಯಲ್ಲಿ ಇಳಿಮುಖ ಇವೇ ಮೊದಲಾದ ಕಾರಣಗಳಿಂದ ನಮ್ಮ ಕಾಡು ವನ್ಯಜೀವಿಗಳಿಗೆ ಹಿಂದೆಂದಿಗಿಂತಲೂ ಈಗ ಸುರಕ್ಷಿತವಾಗಿದೆ. ಆಹಾರ ಮತ್ತು ಸುರಕ್ಷತೆ ಇವೆರಡು ಖಾತರಿಯಾದರೆ ವನ್ಯಜೀವಿಗಳ ಸಂಖ್ಯೆ ತಾನೇ ತಾನಾಗಿ ಏರುತ್ತದೆ. ಮೂರು ದಶಕಗಳ ಹಿಂದೆ ನೀವು ನಾಗರ ಹೊಳೆ, ಬಂಡೀಪುರಕ್ಕೆ ಹೋದರೆ ಜಿಂಕೆಗಳನ್ನು ಕಾಣುವುದೂ ಅಪರೂಪದ ದೃಶ್ಯವಾಗಿತ್ತು. ಈಗ ಜಿಂಕೆ, ಆನೆಗಳ ಹಿಂಡು, ಕಾಡುಕೋಣ, ಕಾಡೆಮ್ಮೆಗಳು ಕಾಡಿನಲ್ಲಿ ಹಾದು ಹೋಗುವ ಹೆದ್ದಾರಿಯ ಬಳಿ ಯಾರ ಭಯವೂ ಇಲ್ಲದೆ ಮೇಯುತ್ತಿರುತ್ತವೆ.

ಹುಲಿ ಸಂರಕ್ಷಿತಾರಣ್ಯಗಳ ಮೂಲಕ ವ್ಯಾಘ್ರ ಸಂತತಿ ರಕ್ಷಣೆಗೆ ವಿಶೇಷ ಒತ್ತು ನೀಡಿದ ಕಾರಣ ಕೊಡಗು, ಹಾಸನ, ಚಿಕ್ಕಮಗಳೂರು, ಮೈಸೂರು, ಚಾಮರಾಜನಗರ, ಉತ್ತರಕನ್ನಡ, ಬೆಳಗಾವಿ ಜಿಲ್ಲೆಗಳಲ್ಲಿ ಹುಲಿಗಳ ಸಂಖ್ಯೆ ಏರುತ್ತಲೇ ಇದೆ. ಹಾಗೆಯೇ ಸಂಘರ್ಷದ ಪ್ರಮಾಣ ಕೂಡ. ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ತುಮಕೂರು, ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಬೆಳಗಾವಿ ಮಾತ್ರವಲ್ಲ ರಾಜಧಾನಿ ಬೆಂಗಳೂರಿನಲ್ಲೂ ಚಿರತೆಗಳ ದಾಳಿ ಆಗಾಗ ಸುದ್ದಿಯಾಗುತ್ತಲೇ ಇದೆ. ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಈ ಮೂರು ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ 50ಕ್ಕೂ ಹೆಚ್ಚು ಚಿರತೆಗಳನ್ನು ಸೆರೆ ಹಿಡಿಯಲಾಗಿದೆ. ಕೊಪ್ಪಳ, ತುಮಕೂರು, ಬಳ್ಳಾರಿ, ಚಿತ್ರದುರ್ಗ, ಬಳ್ಳಾರಿ, ವಿಜಯನಗರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕರಡಿ ಕಾಟ ವಿಪರೀತವಾಗಿವೆ. ಇತ್ತೀಚೆಗೆ ಚಿಕ್ಕಮಗಳೂರು ಭಾಗದಲ್ಲೂ ಕರಡಿ ಕಾಣಿಸಿಕೊಳ್ಳುತ್ತಿದೆ.

ಕಾಡಾನೆ ದಾಳಿಯದ್ದೇ ಚಿಂತೆ

ಕಾಡಾನೆ ದಾಳಿ ಪ್ರಕರಣಗಳು ಪ್ರತೀ ವರ್ಷ ಜಿಲ್ಲೆಯಿಂದ ಜಿಲ್ಲೆಗೆ ವಿಸ್ತಾರಗೊಳ್ಳುತ್ತಿವೆ. ಮಲೆನಾಡಿನ ಜಿಲ್ಲೆಗಳಿಗೆ ಸೀಮಿತವಾಗಿದ್ದ ಸಮಸ್ಯೆ ಈಗ ಪಶ್ಚಿಮಘಟ್ಟದ ನಂಟು ಹೊಂದಿದ ಎಲ್ಲ ಜಿಲ್ಲೆಗಳಿಗೂ ವ್ಯಾಪಿಸಿದೆ. ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ಬೆಂಗಳೂರು, ಶಿವಮೊಗ್ಗ ಸೇರಿದಂತೆ ಹಳೇ ಮೈಸೂರು ಭಾಗದ ಜಿಲ್ಲೆಗಳು, ದಕ್ಷಿಣಕನ್ನಡ, ಉತ್ತರಕನ್ನಡ, ಉಡುಪಿ ಸೇರಿ ಕರಾವಳಿ ಜಿಲ್ಲೆಗಳಲ್ಲೂ ಕಾಡಾನೆ ದಾಳಿಯ ಸುದ್ದಿಗಳು ಆಗಾಗ ವರದಿಯಾಗುತ್ತಿವೆ. ಮಲೆನಾಡಿನ ಮೂರು ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ 50ಕ್ಕೂ ಹೆಚ್ಚು ಜನ ಆನೆ ತುಳಿತಕ್ಕೆ ಬಲಿಯಾಗಿದ್ದಾರೆ.

ಕೊಡಗಿನ ಬಹುತೇಕ ಭಾಗ , ಹಾಸನದ ಸಕಲೇಶಪುರ, ಆಲೂರು, ಬೇಲೂರು ಮತ್ತು ಅರಕಲಗೂಡು, ಚಿಕ್ಕಮಗಳೂರಿನ ಮೂಡಿಗೆರೆ, ಎನ್. ಆರ್.ಪುರ, ಕೊಪ್ಪ, ದಕ್ಷಿಣ ಕನ್ನಡದ ಸುಳ್ಯ, ಕಡಬ, ಪುತ್ತೂರು, ಬೆಳ್ತಂಗಡಿ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಈಗ ಇಳಿ ಸಂಜೆಯಾದರೆ ರಸ್ತೆಗಳು ಬಿಕೋ ಎನ್ನುತ್ತವೆ. ಚತುಷ್ಚಕ್ರ ವಾಹನಗಳನ್ನು ಬಿಟ್ಟರೆ ದ್ವಿಚಕ್ರದಲ್ಲಿ ಸಾಗುವವರು ಕಡಿಮೆ. ಪಾದಚಾರಿಗಳಿಗೆ ಹಗಲಿನಲ್ಲೂ ಯಾವಾಗ, ಎಲ್ಲಿ ಆನೆ ದಾಳಿ ಮಾಡುತ್ತದೋ ಎಂಬ ಭಯ. ರಾತ್ರಿ ವೇಳೆ ಹಿಂಡು ಹಿಂಡಾಗಿ ಬರುವ 10-15ರಷ್ಟು ಸಂಖ್ಯೆಯ ಕಾಡಾನೆಗಳು ಬೆಳೆಗಳನ್ನು ತಿಂದು, ತುಳಿದು ನಾಶ ಮಾಡಿದರೆ, ಹಗಲಿನ ವೇಳೆ ಒಂಟಿ ಆನೆಗಳ ಕಾಟ. ಶಿರಾಡಿ ಹೆದ್ದಾರಿಯಲ್ಲಿ, ಘಟ್ಟದ ಕೆಳಗಿನ ಭಾಗದಲ್ಲೂ ಈಗ ಕಾಡಾನೆಗಳು ಹಗಲಲ್ಲಿ ನಿರ್ಭಿಡೆಯಿಂದ ಕಾಣಿಸಿಕೊಳ್ಳುತ್ತಿವೆ.

ಆನೆ ಹಾವಳಿಯಿಂದ ಆಗುತ್ತಿರುವ ಪ್ರಾಣ ಹಾನಿ, ಬೆಳೆ ಹಾನಿ ಒಂದೆಡೆಯಾದರೆ ಇದರ ಪರೋಕ್ಷ ಪರಿಣಾಮಗಳು ಇನ್ನೂ ಘೋರ. ಆನೆ ಕೊಡಗು, ಹಾಸನ ಜಿಲ್ಲೆಯ ನೂರಾರು ರೈತರು ಈಗ ತಮ್ಮ ಫಲವತ್ತಾದ ಭತ್ತದ ಗದ್ದೆಗಳನ್ನು ಪಾಳು ಬಿಟ್ಟಿದ್ದಾರೆ. ಮುಂಜಾವ ಮೂರೂವರೆ ಗಂಟೆಗೆ ಎದ್ದು ರಬ್ಬರ್ ಟ್ಯಾಪಿಂಗ್‌ಗೆ ತೆರಳುತ್ತಿದ್ದ, ಅಡಕೆ ತೋಟಕ್ಕೆ ನೀರು ಹಾಯಿಸುತ್ತಿದ್ದ ದಕ್ಷಿಣ ಕನ್ನಡದ ರೈತರೂ ಈಗ ತಮ್ಮದೇ ತೋಟದಲ್ಲಿ ಸಂಚರಿಸಲು ಭಯಪಡಯವಂತಾಗಿದೆ. ಇಲ್ಲೂ ಕೇರಳದ ಮಲೆಯಾಳಿಗಳಿಗೆ, ಆಂಧ್ರಪ್ರದೇಶದ ದುಡ್ಡಿನ ಕುಳಗಳಿಗೆ ತೋಟವನ್ನು ಮಾರಿ ಪಟ್ಟಣ ಸೇರುವವರ ಸಂಖ್ಯೆ ಏರುತ್ತಿದೆ.

ಕಿರಿದಾದ ಅರಣ್ಯ, ಹಿರಿದಾದ ಗಜಪಡೆ

ದೇಶದಲ್ಲಿಯೇ ಅತಿ ಹೆಚ್ಚು ಗಜಸಂತತಿ ಹೊಂದಿರುವ ರಾಜ್ಯದಲ್ಲಿ ಇತ್ತೀಚಿನ ಗಣತಿ ಪ್ರಕಾರ 7 ಸಾವಿರಕ್ಕೂ ಹೆಚ್ಚು ಆನೆಗಳಿವೆ. ಇವುಗಳಲ್ಲಿ ಶೇಕಡಾ 60 ರಷ್ಟು ಆನೆಗಳು ಆಹಾರವನ್ನು ಹುಡುಕಿಕೊಂಡು ಕಾಡಿನಿಂದ ಹೊರಬಂದು ಸಂಚರಿಸಿ ಮತ್ತೆ ಕಾಡಿಗೆ ಹೋಗುತ್ತವೆ. ಹಾಸನ ಮತ್ತು ಕೊಡಗಿನಲ್ಲಿ 100ಕ್ಕೂ ಹೆಚ್ಚು ಕಾಡಾನೆಗಳು ಕಾಫಿ ತೋಟಗಳಲ್ಲೇ ಬೀಡುಬಿಟ್ಟಿವೆ. ತಜ್ಞರ ಪ್ರಕಾರ ಆನೆ 700-800 ಚದರ ಕಿಲೋಮೀಟರ್ ಪ್ರದೇಶದಲ್ಲಿ ಸಂಚರಿಸುತ್ತದೆ. ಈ ಓಡಾಟದಲ್ಲಿ ದೊಡ್ಡಪ್ರಮಾಣದಲ್ಲಿ ಕಾಫಿ, ಅಡಕೆ ತೋಟದ ನಾಶ, ಭತ್ತದ ಗದ್ದೆ, ಬಾಳೆ ತೋಟ, ಜೋಳ ಮುಂತಾದ ಬೆಳೆಗಳು ನಾಶವಾಗುವುದರ ಜೊತೆಗೆ ಎದುರಿಗೆ ಸಿಕ್ಕ

ಮನುಷ್ಯ, ಜಾನುವಾರುಗಳು ದಾಳಿಗೆ ಎರವಾಗುತ್ತಾರೆ.

ಹಾಸನ ಜಿಲ್ಲೆಯಲ್ಲಿ ಈವರೆಗೆ 60ಕ್ಕೂ ಹೆಚ್ಚು ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರ ಮಾಡಿದರೂ ಆನೆಗಳು ಹಿಂಡು ಹಿಂಡಾಗಿ ಬರುತ್ತಲೇ ಇವೆ. ಹೇಮಾವತಿ, ವಾಟೆಹೊಳೆ, ಯಗಚಿ ಜಲಾಶಯಗಳು ಮತ್ತು ಇತ್ತೀಚಿನ ಎತ್ತಿನಹೊಳೆ ಯೋಜನೆಗಳು, ರೈಲ್ವೆ ಮಾರ್ಗ, ಹೆದ್ದಾರಿಗಳು ಆನೆಗಳ ಕಾರಿಡಾರ್‌ಗೆ ಧಕ್ಕೆ ತಂದಿವೆ. ತಮ್ಮ ಸಾಂಪ್ರದಾಯಿಕ ಮಾರ್ಗ ಮತ್ತು ನೆಲೆಗಳನ್ನು ಕಳೆದುಕೊಂಡ ಆನೆಗಳು ಆಹಾರವನ್ನು ಅರಸುತ್ತಾ ಘಟ್ಟದ ಕೆಳಗೂ, ಘಟ್ಟದ ಮೇಲಿನ ಭಾಗದಲ್ಲೂ ಸಂಚರಿಸಲಾರಂಭಿಸಿವೆ. ಅರಣ್ಯ, ವನ್ಯ ಜೀವಿಗಳ ರಕ್ಷಣೆ ಮತ್ತು ಪರಿಹಾರದ ನೆಪದಲ್ಲಿ ಪ್ರತೀ ವರ್ಷ ನೂರಾರು ಕೋಟಿ ರು. ವ್ಯಯಿಸುತ್ತಿದ್ದರೂ ಸಂಘರ್ಷದ ಪ್ರಮಾಣ ಏರುಮುಖವಾಗಿಯೇ ಸಾಗಿದೆ.

ಸಂತಾನ ಹರಣ ಪ್ರಸ್ತಾವಣೆಯಷ್ಟೇ

ವನ್ಯಜೀವಿ ಸಂಘರ್ಷದಿಂದ ಮನುಷ್ಯರು ಮತ್ತು ಪ್ರಾಣಿಗಳ ಜೀವಗಳಿಗೆ ಹಾನಿಯಾಗುತ್ತಿದೆ. ಮೃಗಪಕ್ಷಿಗಳ ಜತೆ ಮನುಷ್ಯರ ಪ್ರಾಣಕ್ಕೂ ಸಂಚಕಾರ ಬರದಂತೆ ಕಾಡುಪ್ರಾಣಿಗಳ ಸಂತಾನಹರಣ ಶಸ್ತ್ರ ಚಿಕಿತ್ಸೆ ಅಥವಾ ಸಂತಾನ ನಿಯಂತ್ರಣ ಲಸಿಕೆ ಕೊಡುವ ಪ್ರಸ್ತಾವನೆ ಇದೆ. ಇದು ಕೇವಲ ಪ್ರಸ್ತಾವನೆ ಮಾತ್ರ, ನಿರ್ಧಾರ ಅಲ್ಲ. ಇನ್ನೂ ಪ್ರಾಣಿಗಳ ಪಟ್ಟಿ ಮಾಡಿಲ್ಲ, ಈ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ಸಂತಾನಹರಣ ವಿಚಾರ ಸುಪ್ರೀಂಕೋರ್ಟ್ ಮುಂದೆ ಬಾಕಿ ಇರುವುದರಿಂದ ಸರ್ವೋಚ್ಚ ನ್ಯಾಯಾಲಯಕ್ಕೂ ಪ್ರಸ್ತಾವನೆ ಸಲ್ಲಿಸಬೇಕಿದೆ. ಸಾರ್ವಜನಿಕ ವಲಯದಲ್ಲಿ ಈ ಬಗ್ಗೆ ಚರ್ಚೆ ನಡೆಯಬೇಕು ಎಂದು ಸಚಿವರು ಹೇಳಿದ್ದಾರೆ. ಒಂದು ವೇಳೆ ಇದು ಜಾರಿಯಾದರೂ ತಾತ್ಕಾಲಿಕ ಕ್ರಮ ಎಂದೂ ಸಚಿವರು ಸ್ಪಷ್ಟಪಡಿಸಿದ್ದಾರೆ.

ವಿಶ್ವದ ಹಲವು ದೇಶಗಳಲ್ಲಿ ವನ್ಯಪ್ರಾಣಿಗಳ ಸಂಖ್ಯೆಯನ್ನು ಸಮತೋಲನದಲ್ಲಿಡಲು ಬೇಟೆ ಮತ್ತು ಸಂತಾನಹರಣ ಚಿಕಿತ್ಸೆ ಎರಡನ್ನೂ ಪ್ರಮುಖ ಕ್ರಮಗಳಾಗಿ ಬಳಸಲಾಗುತ್ತದೆ. ಆಫ್ರಿಕಾ ರಾಷ್ಟ್ರಗಳಾದ ದ. ಆಫ್ರಿಕಾ, ನಮೀಬಿಯಾ ಮತ್ತು ಜಿಂಬಾಬ್ವೆಯಲ್ಲಿ ಆನೆಗಳು, ಕಾಡುಕೋಣ, ಕಾಡೆಮ್ಮೆಯಂತಹ ಪ್ರಾಣಿಗಳ ಸಂಖ್ಯೆ ಹೆಚ್ಚಾದಾಗ, ಅವುಗಳ ಕಲ್ಲಿಂಗ್(Culling) ಇಲ್ಲವೇ ನಿಯಂತ್ರಿತ ಟ್ರೋಫಿ ಹಂಟಿಂಗ್‌ಗೆ ಅನುಮತಿ ನೀಡಲಾಗುತ್ತದೆ. ಬೇಟೆಯಿಂದ ಬರುವ ಹಣವನ್ನು ಆ ಪ್ರಾಣಿಗಳ ಉಳಿದ ಸಂತತಿಯ ಸಂರಕ್ಷಣೆಗಾಗಿ ಬಳಸಲಾಗುತ್ತದೆ.

ಅಮೇರಿಕಾ ಮತ್ತು ಯುರೋಪ್‌ನಲ್ಲಿ ಕಾಡು ಕುದುರೆಗಳು ಮತ್ತು ಜಿಂಕೆಗಳ ಸಂತತಿ ನಿಯಂತ್ರಿಸಲು ಗರ್ಭನಿರೋಧಕ ಚುಚ್ಚುಮದ್ದನ್ನು ನೀಡುವ ಪದ್ಧತಿ ಇದೆ. ಜತೆಗೆ ಜಿಂಕೆ ಮತ್ತು ಕರಡಿಗಳ ಸಂಖ್ಯೆ ನಿಯಂತ್ರಣಕ್ಕೆ ಬೇಟೆಯಾಡಲು ಪರವಾನಗಿ ನೀಡಲಾಗುತ್ತದೆ. ನಾರ್ವೆ, ಹಂಗೇರಿಯಲ್ಲೂ ಜಿಂಕೆ ಮತ್ತು ಕಾಡು ಹಂದಿಗಳ ಬೇಟೆಗೆ ನಿರ್ದಿಷ್ಟ ಋತುಮಾನಗಳನ್ನು ನಿಗದಿಪಡಿಸಲಾಗಿದೆ.

ಆಸ್ಟ್ರೇಲಿಯಾ ತನ್ನ ರಾಷ್ಟ್ರ ಪ್ರಾಣಿಯಾದ ಕಾಂಗರೂಗಳನ್ನು ಕೊಲ್ಲಲು ಅಧಿಕೃತವಾಗಿಯೇ ಅನುಮತಿ ನೀಡುತ್ತದೆ. ಕಾಂಗರೂಗಳ ಸಂಖ್ಯೆ ಮಿತಿಮೀರಿದಾಗ ಅವು ಪರಿಸರ ವ್ಯವಸ್ಥೆಗೆ ಹಾನಿ ಮಾಡುತ್ತವೆ, ಹುಲ್ಲುಗಾವಲುಗಳನ್ನು ನಾಶಪಡಿಸುತ್ತವೆ ಎಂಬ ಕಾರಣಕ್ಕೆ ಪ್ರತಿ ವರ್ಷ ಲಕ್ಷಾಂತರ ಕಾಂಗರೂಗಳನ್ನು ವ್ಯವಸ್ಥಿತವಾಗಿ ಕೊಲ್ಲಲಾಗುತ್ತದೆ. ಆಸ್ಟ್ರೇಲಿಯಾದಲ್ಲಿ ಕಾಂಗರೂ ಮಾಂಸ ಮತ್ತು ಚರ್ಮವನ್ನು ಮಾರಾಟ ಮಾಡುವ ದೊಡ್ಡ ಉದ್ಯಮವೇ ಚಾಲ್ತಿಯಲ್ಲಿದೆ. ಇದಲ್ಲದೆ ತನ್ನ ರಾಷ್ಟ್ರೀಯ ಪಕ್ಷಿಯಾದ ಎಮುಗಳ ಸಂಖ್ಯೆಯನ್ನು ನಿಯಂತ್ರಿಸಲು ಇವುಗಳ ಬೇಟೆ ಮತ್ತು ಸಾಕಣೆಗೆ ಇಲ್ಲಿ ಅವಕಾಶವಿದೆ. ಕೆನಡಾದ ರಾಷ್ಟ್ರೀಯ ಪ್ರಾಣಿಗಳಾದ ಬೀವರ್ ಮತ್ತು ಕೆಲವು ಭಾಗಗಳಲ್ಲಿ ಹಿಮ ಕರಡಿಗಳ ಬೇಟೆಗೆ ನಿರ್ದಿಷ್ಟ ನಿಯಮಗಳ ಅಡಿಯಲ್ಲಿ ಅನುಮತಿ ನೀಡಲಾಗುತ್ತದೆ. ಕೆನಡಾ ಪೋಲಾರ್ ಕರಡಿಗಳ ಚರ್ಮದ ರಫ್ತಿಗೆ ಅನುಮತಿ ನೀಡುವ ಏಕೈಕ ದೇಶವೂ ಹೌದು.

ನೆರೆಯ ಪಾಕಿಸ್ತಾನದಲ್ಲೂ ರಾಷ್ಟ್ರ ಪ್ರಾಣಿಯಾದ ಮಾರ್ಖೋರ್ ಹೆಸರಿನ ಕಾಡು ಮೇಕೆಯ ಸಂರಕ್ಷಣೆಗಾಗಿ ಅಲ್ಲಿ ಟ್ರೋಫಿ ಹಂಟಿಂಗ್ ಎಂಬ ವಿಶೇಷ ಪದ್ಧತಿಯಿದೆ. ಇದರಲ್ಲಿ ಅತ್ಯಂತ ಹೆಚ್ಚಿನ ಹಣ ಪಾವತಿಸಿ ವಿದೇಶಿ ಬೇಟೆಗಾರರು ನಿರ್ದಿಷ್ಟ ಸಂಖ್ಯೆಯ ಪ್ರಾಣಿಗಳನ್ನು ಬೇಟೆಯಾಡಬಹುದು. ಈ ಹಣದ ಶೇ. 80ರಷ್ಟು ಭಾಗವನ್ನು ಸ್ಥಳೀಯ ಸಮುದಾಯಗಳ ಅಭಿವೃದ್ಧಿಗೆ ಬಳಸಲಾಗುತ್ತದೆ.

ಭಾರತದಲ್ಲಿ ಬೇಟೆಯಾಡುವುದು ಸಂಪೂರ್ಣ ಕಾನೂನುಬಾಹಿರವಾದರೂ ಕೆಲವು ರಾಜ್ಯಗಳಲ್ಲಿ ಕಾಡುಹಂದಿಯಂತಹ ಪ್ರಾಣಿಗಳ ಉಪಟಳ ನಿಯಂತ್ರಿಸಲು ಬೇಟೆಗೆ ಅನುಮತಿ ನೀಡಿದ ಉದಾಹರಣೆಗಳಿವೆ. ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಚಿರತೆಗಳ ಸಂಖ್ಯೆ ನಿಯಂತ್ರಿಸಲು ಸಂತಾನಹರಣ ಚಿಕಿತ್ಸೆ ನೀಡುವ ಯೋಜನೆಗಳನ್ನು ರೂಪಿಸಲಾಗಿದೆ. ಹಿಮಾಚಲ ಪ್ರದೇಶದಲ್ಲಿ ಕೋತಿಗಳ ಸಂಖ್ಯೆ ನಿಯಂತ್ರಿಸಲು ಸಾಮೂಹಿಕ ಸಂತಾನಹರಣ ಚಿಕಿತ್ಸೆ ನಡೆಸಲಾಗಿದೆ. ಸಂತಾನಹರಣ ಕ್ರಮವು ಪ್ರಾಣಿಗಳ ಹತ್ಯೆಯಲ್ಲ. ಇವು ಅವುಗಳ ಸಂಖ್ಯೆಯನ್ನು ನಿಯಂತ್ರಿಸುವ ಕ್ರಮವಷ್ಟೇ. ಈ ನಿಟ್ಟಿನಲ್ಲಿ ಸಚಿವ ಖಂಡ್ರೆ ಅವರ ಪ್ರಸ್ತಾಪದ ಸಾಧಕ ಬಾಧಕಗಳ ಬಗ್ಗೆ ಇನ್ನಷ್ಟು ಚರ್ಚೆ ನಡೆಯಬೇಕಿದೆ. ವಿರೋಧಿಸುವವರು, ಬೆಂಬಲಿಸುವವರು ಯೋಚಿಸಿ ತೀರ್ಮಾನಕ್ಕೆ ಬರಬೇಕಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜಲಸಿರಿ-ಹನಿ ಹನಿ ನೀರಿಗೂ ಲೆಕ್ಕ

ಕೇಂದ್ರ ಸರಕಾರದ ಸ್ಮಾರ್ಟ್ ಸಿಟಿಯ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ಜಲಸಿರಿ ಯೋಜನೆ ದಾವಣಗೆರೆ ನಗರದಲ್ಲಿ ಬಹುತೇಕ ಕಡೆ ಮುಕ್ತಾಯ ಹಂತಕ್ಕೆ ಈ ಯೋಜನೆ ತುಂಬಾ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎಂದರೆ ನಿಜಕ್ಕೂ ತಪ್ಪಾಗಲಾರದು. ಯಾಕೆಂದರೆ ಈ ಹಿಂದೆ

ಯಾವುದೇ ಮೀಟರ್ ಇಲ್ಲದೆ ಸಾಮಾನ್ಯ ಪೈಪ್ ಮೂಲಕ ಮನೆಗಳಿಗೆ ನೀರು ಪೂರೈಸುತ್ತಿದ್ದು, ನಲ್ಲಿಗಳಿಗೆ ಟ್ಯಾಪ್ ಹಾಕದೆ ನೀರು ಬಂದ್ ಆಗುವವರೆಗೂ ಚರಂಡಿಗೆ ಹರಿಬಿಡುವುದು, ರಸ್ತೆಗೆ ನೀರು ಚೆಲ್ಲುವುದು, ಅನಿಯಮಿತವಾಗಿ ಬಳಸುವುದು ಸಾಮಾನ್ಯ. ನಾನು ಎಷ್ಟೋ ಬಾರಿ ತಿಳಿಹೇಳಿದರು ಕೂಡ ತಲೆಗೆ ಹಾಕಿಕೊಳ್ಳದೆ ಹಾಗೆಯೇ ನೀರು ವ್ಯರ್ಥ ಮಾಡುತ್ತಿದ್ದರು. ಇದರಿಂದ ಮನಸ್ಸಿನಲ್ಲಿ ಸುಮ್ಮನೆ ವ್ಯಥೆ ಪಡುತ್ತಿದ್ದೆ. ಆದರೆ, ಈಗ ಜಲಸಿರಿ ಯೋಜನೆ ಜಾರಿಯಾದ ಬಳಿಕ ಈಗ ಒಂದು ಹನಿಯು ಕೂಡ ಎಲ್ಲೂ ವ್ಯರ್ಥವಾಗುತ್ತಿಲ್ಲ. ಯಾಕೆಂದರೆ ಹನಿಹನಿಗೂ ಲೆಕ್ಕ. ಎಷ್ಟು ನೀರನ್ನು ಬಳಸುತ್ತೀರೋ ಅಷ್ಟು ಹಣವನ್ನು ಕಟ್ಟಬೇಕು. ಅಂದು ಚರಂಡಿಗೆ ವ್ಯರ್ಥವಾಗಿ ನೀರು ಹರಿಸುತ್ತಿದ್ದವರು ಇಂದು ಹನಿಹನಿ ನೀರಿಗೂ ಹಾಕುವಂತ ಪರಿಸ್ಥಿತಿ ಬಂದಿದೆ. ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಕೂಡ ನೀರನ್ನು ವ್ಯರ್ಥವಾಗಿ ಚರಂಡಿಗೆ ಹರಿಸುತ್ತಿದ್ದಾರೆ. ಇಂತಹ ಯೋಜನೆ ಪ್ರತಿಯೊಂದು ಗ್ರಾಮ, ನಗರ, ಮಹಾನಗರಗಳಲ್ಲಿ ಕಡ್ಡಾಯವಾಗಿ ಜಾರಿಯಾಗಬೇಕು. ಅದಕ್ಕೆ ಹೇಳೋದು, ಯಾವುದೇ ಒಬ್ಬ ವ್ಯಕ್ತಿವಾಗಲಿ ಅಥವಾ ವಸ್ತುವಾಗಲಿ, ಸಮಯ ಬಂದಾಗಲೇ ಅದರ ಮಹತ್ವ ತಿಳಿಯುವುದು ಎಂಬುದಕ್ಕೆ ಇದೊಂದು ತಾಜಾ ಉದಾಹರಣೆ.

- ಮುರುಗೇಶ.ಡಿ., ದಾವಣಗೆರೆ.

ಆಸುರೀ ಸಂಪತ್ತು: ಗೀತಾ ವಾಕ್ಯ

ಆ ಶತ್ರುವನ್ನು ಕೊಂದೆನು. ಉಳಿದ ಶತ್ರುಗಳನ್ನೂ ಕೊಲ್ಲುವೆನು. ನಾನು ಭೋಗಿ; ನಾನು ಬಲಿಷ್ಠ; ನನಗೆ ಸಮನಾದವನು ಯಾವನಿದ್ದಾನೆ? ಈ ಪ್ರಕಾರದಲ್ಲಿ ಭ್ರಮೆಯ ಕಲ್ಪನೆಗಳಿಂದ ಮೂಢರಾಗಿರುತ್ತಾರೆ. ತಮ್ಮನ್ನು ತಾವೇ ಹೊಗಳಿಕೊಳ್ಳುತ್ತ ಸೆಟೆದು ಹೋಗಿರುವ ಅವರು ಹಣ, ಮನ್ನಣೆ, ಸೊಕ್ಕುಗಳಿಂದ ಕೂಡಿದವರಾಗಿರುತ್ತಾರೆ. ನಾನೇ ದೇವರು ಎಂದು ಕೂಡ ತೋರಿಸಿಕೊಳ್ಳಲು ಆರಂಭಿಸಿಬಿಡುತ್ತಾರೆ. ಅಮೆರಿಕದ ಅಧ್ಯಕ್ಷ ಡೊನಲ್ಡ್ ಟ್ರಂಪ್ ತಾನೇ ಯೇಸುಕ್ರಿಸ್ತ ಎಂಬಂತೆ ಚಿತ್ರವೊಂದನ್ನು ಹಾಕಿಕೊಂಡಿರುವುದನ್ನು ನೋಡಿದಾಗ ಮೇಲಿನ ಗೀತಾವಾಕ್ಯಗಳ ಸ್ಮರಣೆಯಾಯಿತು. ಈ ಮಾತುಗಳು ಬಂದಿರುವುದು ಭಗವದ್ಗೀತೆಯ 16ನೇಯ ಅಧ್ಯಾಯವಾದ ದೈವಾಸುರಸಂಪದ್ವಿಭಾಗದಲ್ಲಿ ಆಸುರೀ ಸಂಪತ್ತಿನ ಜನ ಹೇಗಿರುತ್ತಾರೆ ಎಂಬುದನ್ನು ವರ್ಣಿಸುತ್ತಾ ಗೀತೆ ಕೊಡುವ ಚಿತ್ರಣ ಅದು. ಟ್ರಂಪ್‌ನ ನಡೆನುಡಿಯೆಲ್ಲ ಮೇಲಿನ ಮಾತುಗಳ ನಿದರ್ಶನದಂತೆ ಇವೆ. ಅಷ್ಟಕ್ಕೇ ಮುಗಿಯದು ವಿಷಯ. ಅಂಥವರ ಗತಿಯೇನಾಗುತ್ತದೆ ಎಂಬುದನ್ನೂ ಕಾಣಿಸುತ್ತಾನೆ ಗೀತಾಚಾರ್ಯ. ಕ್ರೂರರೂ ಅಶುಭಕರ್ಮಗಳನ್ನು ನಡೆಸತಕ್ಕವರೂ ಆದ ಆ ನರಾಧಮರನ್ನು ನಾನು ನರಕಕೂಪದೊಳಕ್ಕೆ ತಳ್ಳಿಬಿಡುತ್ತೇನೆ. ನಿಕೃಷ್ಟವಾದಗತಿಯನ್ನು ಅವರು ಪಡೆಯುತ್ತಾರೆ, ಎಂಬ ಭವಿಷ್ಯವೂ ಅವರಿಗೆ ಕಾದಿದೆ. ವಾಸ್ತವದಲ್ಲಿ ಹಾಗಾಗುತ್ತದೆಯೋ ಎಂಬುದನ್ನು ಕಾದು ನೋಡಬೇಕಾಗಿದೆ.

- ಜಿ.ಎಲ್. ಕೃಷ್ಣ, ಬೆಂಗಳೂರು.

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು
vveditoped@gmail.comಗೆ ಮೇಲ್ ಮಾಡಬಹುದು
ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ನಾರಿ ಶಕ್ತಿ: ನವ ಭಾರತ ನಿರ್ಮಾಣಕ್ಕೆ ಸೇರಿಸಿಕೊಂಡ ಐತಿಹಾಸಿಕ ಶಾಸನ

ಕಳೆದ 75 ವರ್ಷಗಳಲ್ಲಿ ಭಾರತದ ರಾಜಕೀಯವು ಮಹಿಳೆಯರಿಂದ ಸಾಧ್ಯವಿಲ್ಲದ ಹಣಬಲದ ಆಧಾರದಿಂದಲೇ ನಡೆಯುತ್ತಿತ್ತು. ಖ್ಯಾತನಾಮ ಕುಟುಂಬದ ಹಿನ್ನೆಲೆ ಇರುವ ಮಹಿಳೆಯರು ಮಾತ್ರವೇ ರಾಜಕೀಯ ಪ್ರವೇಶ ಮಾಡಬಹುದು ಎಂಬ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗಿತ್ತು. ಶ್ರೀ ನರೇಂದ್ರಮೋದಿಯವರ ಸರಕಾರ 2023ರಲ್ಲಿ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಪರಿಚಯಿಸಿತು.

ಸ್ತ್ರೀಶಕ್ತಿ
ವಿವೇಕ್ ಸುಬ್ಬಾರೆಡ್ಡಿ
vveditoped@gmail.com

ನಾರಿ ಶಕ್ತಿ ವಂದನ ಅಧಿನಿಯಮವು ಭಾರತದ ರಾಜಕೀಯ ಹಾಗೂ ಸಾಂವಿಧಾನಿಕ ವ್ಯವಸ್ಥೆಯ ಪುನರ್‌ನಿರ್ಮಾಣ ಕಾರ್ಯವಾಗಿದೆ. ಇದು ಕೇವಲ ಸಂವಿಧಾನದ ತಿದ್ದುಪಡಿಯಲ್ಲ ಇದೊಂದು ಐತಿಹಾಸಿಕ ಹೆಜ್ಜೆ. ಭಾರತ ಕಳೆದ 75 ವರ್ಷಗಳ ತನ್ನ ಅಸ್ತಿತ್ವದಲ್ಲಿ ತನ್ನ ದೇಶದ ಜನಸಂಖ್ಯೆಯ ಶೇ.50ರಷ್ಟು ಜನರ ರಾಜಕೀಯ ಆಶೋತ್ತರಗಳನ್ನು ನಿರ್ಲಕ್ಷಿಸಿದೆ, ಅವರ ಅವಕಾಶಗಳನ್ನು ಕಿತ್ತುಕೊಂಡು ಅವಕಾಶವಂಚಿತರನ್ನಾಗಿ ಮಾಡಿದೆ ಎಂಬುದು ಆಶ್ಚರ್ಯದ ಸಂಗತಿಯಾದರೂ ಸತ್ಯ. ಭಾರತದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ತಮ್ಮ ರಾಜಕೀಯ ಅವಕಾಶಗಳನ್ನು ಪಡೆಯಲು ಇದುವರೆಗೂ ಸಾಧ್ಯವಾಗಿಲ್ಲ ಎಂಬುದು ವಿಪರ್ಯಾಸ.

ಕಳೆದ 75 ವರ್ಷಗಳಲ್ಲಿ ಭಾರತದ ರಾಜಕೀಯವು ಮಹಿಳೆಯರಿಂದ ಸಾಧ್ಯವಿಲ್ಲದ ಹಣಬಲದ ಆಧಾರದಿಂದಲೇ ನಡೆಯುತ್ತಿತ್ತು ಎಂಬ ಮಾತು ಬಹುತೇಕ ಸತ್ಯವಿರಬಹುದು. ಹೀಗಾಗಿಯೇ ಸಂಸತ್ತಿಗೆ ಕೇವಲ ಶೇ.5 ರಿಂದ 7ರಷ್ಟು ಮಹಿಳಾ ಸದಸ್ಯರು ಮಾತ್ರ ಆಯ್ಕೆಯಾಗುತ್ತಿದ್ದರು. ಅದರಲ್ಲೂ ಕನ್ನಿಮೋಳಿ, ಡಿಂಪಲ್ ಯಾದವ್ ರೀತಿ ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಬಂದ ಮಹಿಳೆಯರೇ ಹೆಚ್ಚಿರುತ್ತಾರೆ. ಖ್ಯಾತನಾಮ ಕುಟುಂಬದ ಹಿನ್ನೆಲೆ ಇರುವ ಮಹಿಳೆಯರು ಮಾತ್ರವೇ ರಾಜಕೀಯ ಪ್ರವೇಶ ಮಾಡಬಹುದು ಎಂಬ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗಿತ್ತು.

ಇದನ್ನು ಮನಗಂಡ ಶ್ರೀ ನರೇಂದ್ರಮೋದಿಯವರ ಸರಕಾರ 2023ರಲ್ಲಿ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಪರಿಚಯಿಸಿತು. ಅದರ ಮೂಲಕ ಭಾರತದ ಸಂಸತ್ತಿನಲ್ಲಿ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಶೇ.33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ಕಳೆದ ಹಲವು ದಶಕಗಳಿಂದ ಈ ಪ್ರಯತ್ನ ನಡೆದಿದ್ದರೂ ಪುರುಷ ಪ್ರಧಾನ ಮನಸ್ಥಿತಿಗಳು ಆ ಪ್ರಯತ್ನವನ್ನು ಹತ್ತಿಕ್ಕುವಲ್ಲಿ ಸಫಲವಾಗಿದ್ದವು.

ಸ್ತ್ರೀ ಸಬಲೀಕರಣ-ರಚನಾತ್ಮಕ ಬದಲಾವಣೆ :

ಈ ಕಾಯಿದೆಯು ಜನಕಲ್ಯಾಣದ ಯೋಜನೆಗಳಿಗಿಂತ ವಿಭಿನ್ನವಾಗಿದೆ. ಇದು ಚುನಾವಣೆಗಾಗಿ ಮಾಡಿದ ಯೋಜನಾ ತಂತ್ರವಲ್ಲ ಬದಲಾಗಿ ಧೀರ್ಘಕಾಲದಲ್ಲಿ ದೇಶದ ಉದ್ದೇಶವನ್ನು ಈಡೇರಿಸಬಲ್ಲ ದೂರದೃಷ್ಟಿ ಯೋಜನೆ. ಚುನಾವಣೆಗಾಗಿ ನೀಡುವ ಉಚಿತ ಯೋಜನೆಗಳು, ಸಬ್ಸಿಡಿಗಳು, ಅಲ್ಪಾವಧಿಯಲ್ಲಿ ಜನಪ್ರಿಯವಾಗಬಹುದು. ಆದರೆ, ಈ ನಿರ್ಧಾರವು ಭವಿಷ್ಯದಲ್ಲಿ ಇಡೀ ರಾಷ್ಟ್ರದ ಮಹಿಳಾ ಸಮುದಾಯದ ಶಕ್ತಿ, ಬುದ್ಧಿವಂತಿಕೆ ಹಾಗೂ ಸಾಮರ್ಥ್ಯವನ್ನು ಸದ್ಬಳಕೆ ಮಾಡಿಕೊಂಡು ದೇಶ ಕಟ್ಟುವ ಕಾರ್ಯವಾಗಿದೆ. ಇದು ರಾಜಕೀಯವನ್ನು ನೇರವಾಗಿ ಪ್ರಜಾತಂತ್ರದ ಹಾದಿಯಲ್ಲಿ ನಡೆಸುತ್ತದೆ. ಇದರಿಂದ ಭವಿಷ್ಯದಲ್ಲಿ ರಾಜಕೀಯ ಅಧಿಕಾರ ಕೇವಲ ಕೆಲವು ಕುಟುಂಬಗಳ ಮುಷ್ಠಿಯಲ್ಲಿರುವುದಿಲ್ಲ. ಈ ದೇಶದ ಸಾಮಾನ್ಯ ಮಹಿಳೆಯೂ ಇನ್ನುಮುಂದೆ ದೇಶದ ಅಭ್ಯುದಯದಲ್ಲಿ ಭಾಗವಹಿಸಬಹುದು, ದೇಶವನ್ನು ಮುನ್ನಡೆಸಬಹುದು, ರಾಷ್ಟ್ರದ ರಾಜಕಾರಣದಲ್ಲಿ ಬದಲಾವಣೆ ತರಬಹುದು.

ಸಮಾನತೆಯ ವಿರೋಧಾಭಾಸ:

ಸ್ವಾತಂತ್ರ್ಯ ಭಾರತದ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯು ಶೇ.10ಕ್ಕಿಂತ ಕಡಿಮೆ ಇತ್ತು. ಜೂನಿಯರ್ ಮಾರ್ಟಿನ್ ಲೂಥರ್ ಕಿಂಗ್ ಅವರು ಹೇಳಿದಂತೆ ಸಮಾನತೆ ಎಂಬುದು ಸಂವಿಧಾನದ ಹಾಳೆಗಳಿಂದ ಕಾರ್ಯಗತ ರೂಪದ ಹಾಳೆಗೆ ವರ್ಗಾವಣೆಯಾಗಬೇಕಿದೆ. ಈ ಶಾಸನವು ಸಂವಿಧಾನದ ಆಶಯಗಳನ್ನು ವಾಸ್ತವದಲ್ಲಿ ಕಾರ್ಯರೂಪಕ್ಕೆ ತರುತ್ತದೆ.

ಮಹಿಳೆಯರು ಹಿಂದುಳಿದದ್ದೇಕೆ?

- ವ್ಯವಸ್ಥೆಯಲ್ಲಿನ ತಡೆಗೋಡೆಗಳು
- ಚುನಾವಣೆಗಳಲ್ಲಿ ಹಣಬಲಕ್ಕೆ ಅತಿಯಾದ ಮಹತ್ವ.
- ಸಮಾಜದ ಪುರುಷ ಪ್ರಧಾನ ಮನಸ್ಥಿತಿ.
- ಪಾರಂಪರಿಕ ಪಾತ್ರಗಳು ಮತ್ತು ಜವಾಬ್ದಾರಿಗಳು.
- ಸಾಂಸ್ಕೃತಿಕ ಹಾಗೂ ರಚನಾತ್ಮಕ ಕಾರಣಗಳು.

ಬೇರೆ ಎಲ್ಲ ಕ್ಷೇತ್ರಗಳಲ್ಲಿಯು ಮಹಿಳೆಯರು ಸಾಧನೆಯ ಹಾದಿಯಲ್ಲಿದ್ದರೂ ಮೇಲಿನ ಕಾರಣಗಳಿಂದಾಗಿ ಮಹಿಳೆಯರು ರಾಜಕೀಯದ ಕನಸು ಕಾಣದಂತಹಾ ಪರಿಸ್ಥಿತಿ ನಿರ್ಮಾಣವಾಗಿದೆ. ಯಾವ ಕ್ಷೇತ್ರಗಳಲ್ಲಿ ಪ್ರತಿಭೆ ಮಾನದಂಡವಾಗಿದೆಯೋ ಅಲ್ಲಿ ಮಹಿಳೆಯರ ಪಾತ್ರವನ್ನು ಗಮನಿಸಿದರೆ ಐಟಿ ಕ್ಷೇತ್ರದಲ್ಲಿ ಮಹಿಳೆಯರು ಗಣನೀಯ ಸಂಖ್ಯೆಯಲ್ಲಿದ್ದಾರೆ, ವಿಚಾರಣಾ ನ್ಯಾಯಾಲಯದಲ್ಲಿ ಶೇ.60ರಷ್ಟು ಮಹಿಳೆಯರು ಆಯ್ಕೆಯಾಗಿದ್ದಾರೆ. ಗ್ರಾಮೀಣ ಭಾಗದಲ್ಲಿ ಮಹಿಳೆಯರೇ ಕುಟುಂಬದ ಆಧಾರಸ್ಥಂಬಗಳಾಗಿದ್ದು, ದುಡಿಮೆಯಲ್ಲೂ ಹೆಚ್ಚಿನ ಪಾತ್ರ ವಹಿಸುತ್ತಿದ್ದಾರೆ. ಹೀಗೆ ಎಲ್ಲಿ ಅವಕಾಶಗಳಿವೆಯೋ ಅಲ್ಲಿ ಮಹಿಳೆಯರು ಸಾಧಿಸಿ ತೋರಿಸಿದ್ದಾರೆ. ರಾಜಕೀಯ ಈ ಸಾಲಿನಲ್ಲಿ ಕೊನೆಯ ಸ್ಥಾನದಲ್ಲಿದೆ.

ಐತಿಹಾಸಿಕ ತಿದ್ದುಪಡಿ:

ಸಂವಿಧಾನದ 128ನೇ ತಿದ್ದುಪಡಿಯು ಈ ಅಸಮಾನತೆಯನ್ನು ಸರಿಪಡಿಸುವ ಬಹುದೊಡ್ಡ ಹೆಜ್ಜೆಯಾಗಿದೆ. ಇದು ಮಹಿಳಾ ಮೀಸಲಾತಿಯನ್ನು ಕಡ್ಡಾಯಗೊಳಿಸುವ ಜತೆಗೆ ಪ್ರತೀ ಜನಗಣತಿಯೊಂದಿಗೆ ಮೀಸಲಾತಿಯನ್ನು ಪುನರ್‌ಪರಿಶೀಲಿಸುವ

ಅವಕಾಶ ನೀಡುತ್ತದೆ. ಮತ್ತೊಂದು ವಿಶೇಷವೆಂದರೆ ಮುಂದಿನ ಜನಗಣತಿಗೆ ಕಾಯದೇ ಸರಕಾರ 2011ರ ಜನಗಣತಿಯ ಅಂಕಿಅಂಶಗಳ ಆಧಾರದಲ್ಲೇ ಮೀಸಲಾತಿಯನ್ನು ಜಾರಿಗೊಳಿಸಲು ತೀರ್ಮಾನಿಸಿದೆ.

ಪ್ರಜಾಪ್ರಭುತ್ವದ ವಿಸ್ತರಣೆ:

- **ಶಕ್ತಿ ಹಾಗೂ ಪ್ರಾತಿನಿಧ್ಯ:** ಈ ನಿರ್ಧಾರವು ಸಂಸತ್ತಿನ ಪ್ರತಿನಿಧಿಗಳ ಸಂಖ್ಯೆಯನ್ನು 816ಕ್ಕೆ ಏರಿಸುತ್ತದೆ. ಅದರಲ್ಲಿ 273 ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿರುತ್ತವೆ.
- **ಮುಖ್ಯಾಂಶಗಳು:** ಮಹಿಳಾ ಮೀಸಲಾತಿಯಡಿಯಲ್ಲಿ ಬರುವ ಸ್ಥಾನಗಳಲ್ಲಿ 1/3 ಸ್ಥಾನಗಳು ಪರಿಶಿಷ್ಟ ಜಾತಿ ಹಾಗೂ ಪಂಗಡದ ಮಹಿಳೆಯರಿಗೆ ಮೀಸಲಾಗಿರುತ್ತದೆ.

ಇದು ಇತಿಹಾಸದಲ್ಲಿ ಮೂಲೆಗುಂಪಾದ ಸಮುದಾಯಗಳಿಗೆ ತಮ್ಮ ಹಕ್ಕುಗಳನ್ನು ನೀಡುವ ದೊಡ್ಡ ಹೆಜ್ಜೆಯಾಗಿದೆ. ತುಳಿತಕ್ಕೊಳಗಾದ ಸಮುದಾಯಗಳ 90ಜನ ಮಹಿಳೆಯರನ್ನು ಸಂಸತ್ ಸದಸ್ಯರನ್ನಾಗಿ ಮಾಡುವುದು ಪ್ರಜಾಪ್ರಭುತ್ವದ ನಿಜವಾದ ಆಶಯಕ್ಕೆ ಪೂರಕವಾಗಿದೆ. ಇದು ಕೇವಲ ಪ್ರಾತಿನಿಧ್ಯದ ಪ್ರಶ್ನೆಯಾಗಿರದೆ ಮಹಿಳಾ ಸಬಲೀಕರಣದ ಸಾಕಾರವಾಗಿದೆ.

ಧ್ವನಿಯಿಲ್ಲದವರ ಧ್ವನಿ:

ದಶಕಗಳಿಂದ ಸಂಸತ್ತಿನಲ್ಲಿ ಹಿಂದುಳಿದ ವರ್ಗಗಳ ಮಹಿಳೆಯರ ಧ್ವನಿಗೆ ಯಾವುದೇ ಸ್ಥಾನವಿಲ್ಲದಂತಿತ್ತು. ಈ ಕೊರತೆಯನ್ನು ಪ್ರಸ್ತುತ ಕಾಯಿದೆ ಸಮರ್ಥವಾಗಿ ತುಂಬಲಿದೆ. ಇನ್ನು ಮುಂದೆ ಮಹಿಳೆಯರು ಕೇವಲ ಧ್ವನಿಯಿಲ್ಲದ ಭಾಗೀದಾರರಂತಿರುವುದಿಲ್ಲ ಬದಲಾಗಿ ಪ್ರತೀ ನಿರ್ಧಾರಗಳಲ್ಲಿಯೂ ಅವರು ಭಾಗವಹಿಸುವ ಜತೆಗೆ ಕಾನೂನು ರಚನೆಯಲ್ಲಿ ಭಾಗಿಯಾಗುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಮಹಿಳೆಯರೂ ಜನನಾಯಕರಾಗುತ್ತಾರೆ.

ನಾರಿ ಶಕ್ತಿಯ ಸಂವರ್ಧನೆ:

ಭಾರತದ ಇತಿಹಾಸದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮರಂತಹಾ ಹಲವು ಹೆಸರುಗಳು ಸುವರ್ಣಾಕ್ಷರದಲ್ಲಿ ಬರೆದಿಡುವ ಹೆಸರುಗಳಾಗಿವೆ. ಅವರ ಧೈರ್ಯ, ಸಾಹಸ, ಸಾಧನೆ ಅಪಾರವಾಗಿವೆ. ಈಗ ಕೊರತೆಯಾಗಿರುವುದು ಕೇವಲ ಅವಕಾಶ ಮಾತ್ರ. ಸ್ವಾಮಿ ವಿವೇಕಾನಂದರು ಹೇಳುವಂತೆ ಮಹಿಳೆಯರ ಸ್ಥಾನಮಾನ ಸುಧಾರಿಸದೇ ವಿಶ್ವದ ಅಭ್ಯುದಯ ಸಾಧ್ಯವೇ ಇಲ್ಲ. ಈ ಕಾಯಿದೆಯು ಮಹಿಳಾ ಸಬಲೀಕರಣವನ್ನು ಕೇವಲ ಸಾಂಕೇತಿಕವಲ್ಲದೇ ರಚನಾತ್ಮಕ ರೂಪದಲ್ಲಿ ಬರುವಂತೆ ಮಾಡುತ್ತದೆ.

ದಶಕಗಳ ಬದಲಾವಣೆ:

ಈ ಕಾಯಿದೆಯ ಪರಿಣಾಮವನ್ನು ಕೆಲವು ವರ್ಷಗಳ ಅವಧಿಯಲ್ಲಿ ಲೆಕ್ಕಹಾಕಲು ಸಾಧ್ಯವಿಲ್ಲ. ಇದು ಭಾರತದ ಪ್ರಜಾಪ್ರಭುತ್ವವನ್ನು ಧೀರ್ಘಕಾಲದಲ್ಲಿ ಅದರ ಮೂಲ ಆಶಯದಂತೆ ಅಭಿವೃದ್ಧಿ ಪಡಿಸುತ್ತದೆ. ಪ್ರಜಾತಂತ್ರದ ರಚನಾತ್ಮಕ ಬದಲಾವಣೆಯನ್ನು ಸುಸ್ಥಿರಗೊಳಿಸುತ್ತದೆ. ಇದು ದೇಶದ 70 ಕೋಟಿ ಮಹಿಳೆಯರನ್ನು ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಇದು ಹಿಂದಿನ ಯಾವ ಕಾಯಿದೆಯೂ ಮಾಡಿರದ ಮಹತ್ವದ ಬದಲಾವಣೆಯಾಗಿದೆ.

ನಾರಿಶಕ್ತಿ ವಂದನಾ ಅಧಿನಿಯಮವು ಕೇವಲ ಒಂದು ಕಾನೂನಾಗಿರದೇ ಒಂದು ಚಳವಳಿಯಾಗಿದೆ. ಇದು ಭಾರತದ ಮಹಿಳೆಯರನ್ನು ಭವಿಷ್ಯದಲ್ಲಿ ಕೇವಲ ಧ್ವನಿಯಿಲ್ಲದ ಭಾಗೀದಾರರಾಗಲು ಬಿಡದೇ ಅವರಿಗೆ ಪ್ರಜಾಪ್ರಭುತ್ವದ ನಿರ್ಧಾರಗಳ ಸಹಭಾಗಿತ್ವ, ನಾಯಕತ್ವ ಹಾಗೂ ರಚನಾತ್ಮಕ ಅಧಿಕಾರ ನೀಡುತ್ತದೆ. ವಿಶ್ವಗುರುವಾಗುವತ್ತ ಸಾಗುತ್ತಿರುವ ಭಾರತದ ಅಭ್ಯುದಯದಲ್ಲಿ ಮಹಿಳೆಯರ ಪಾತ್ರವೂ ಸಮಾನವಾಗಿರುತ್ತದೆ.

ಲೇಖಕರು: ಅಧ್ಯಕ್ಷರು, ಬೆಂಗಳೂರು ವಕೀಲರ ಸಂಘ

ಸ್ಮರಣೆ

ಹರಿರಾಮ್.ಎ ವಕೀಲರು

ಸುಸ್ಥಿರ ಪ್ರಜಾಪ್ರಭುತ್ವಕ್ಕೆ ಅಡಿಪಾಯ

ಬಿ. ಆರ್. ಅಂಬೇಡ್ಕರ್ ಅವರ ಸಹೋದರತೆ (Fraternity) ಕುರಿತಾದ ಚಿಂತನೆಗಳು ಕೇವಲ ಭಾವನಾತ್ಮಕ ಕರೆಯಾಗಿರಲಿಲ್ಲ, ಬದಲಿಗೆ ಅವು ಒಂದು ಸುಸ್ಥಿರ ಪ್ರಜಾಪ್ರಭುತ್ವಕ್ಕೆ ಅಗತ್ಯವಿರುವ ರಾಜಕೀಯ ಮತ್ತು ಸಾಮಾಜಿಕ ಅಡಿಪಾಯ ವಾಗಿದ್ದವು. ಅಂಬೇಡ್ಕರ್ ಅವರ ಪ್ರಕಾರ, ಸಹೋದರತೆಯೇ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬೆಸೆಯುವ ಪ್ರಮುಖ ಕೊಂಡಿಯಾಗಿದೆ.

ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯ ತ್ರಿವಳಿ ತತ್ವಗಳು: ಈ ಮೂರು ತತ್ವಗಳನ್ನು ಬೇರೆ ಬೇರೆಯಾಗಿ ನೋಡಲು ಸಾಧ್ಯವಿಲ್ಲ ಎಂದು ಅಂಬೇಡ್ಕರ್ ವಾದಿಸಿದ್ದರು. ಸಹೋದರತೆ ಇಲ್ಲದಿದ್ದರೆ, ಸ್ವಾತಂತ್ರ್ಯ ಮತ್ತು ಸಮಾನತೆ ಕೃತಕವಾಗುತ್ತವೆ. ಸಮಾನತೆ ಇಲ್ಲದ ಸ್ವಾತಂತ್ರ್ಯವು ಕೆಲವೇ ಜನರ ಆಧಿಪತ್ಯಕ್ಕೆ ದಾರಿ ಮಾಡಿಕೊಡುತ್ತದೆ. ಸ್ವಾತಂತ್ರ್ಯವಿಲ್ಲದ ಸಮಾನತೆಯು ವೈಯಕ್ತಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಸಹೋದರತೆಯು ಇದು ಒಂದು 'ಅಂಟು' ಇದ್ದಂತೆ. ಇದು ಪರಸ್ಪರ ಗೌರವವನ್ನು ಮೂಡಿಸುವ ಮೂಲಕ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಸಂರಕ್ಷಿಸುತ್ತದೆ.

ಸಾಮಾಜಿಕ ಎಂಡೋಸ್ಮೋಸಿಸ್ (Social Endosmosis): ಅಂಬೇಡ್ಕರ್ ಅವರು ಸಹೋದರತೆಯನ್ನು ಸಾಮಾಜಿಕ ಎಂಡೋಸ್ಮೋಸಿಸ್ ಎಂದು ಕರೆದರು. ಅಂದರೆ, ಸಮಾಜದ ವಿವಿಧ ಗುಂಪುಗಳ ನಡುವೆ ವಿಚಾರಗಳು ಮತ್ತು ಅನುಭವಗಳು ಮುಕ್ತವಾಗಿ ಹರಿಯುವುದು. ಸಹೋದರತೆ ಎಂದರೆ ಪ್ರಜಾಪ್ರಭುತ್ವದ ಇನ್ನೊಂದು ಹೆಸರು. ಪ್ರಜಾಪ್ರಭುತ್ವವು ಕೇವಲ ಒಂದು ಸರಕಾರಿ ವ್ಯವಸ್ಥೆಯಲ್ಲ; ಅದು ಮೂಲಭೂತವಾಗಿ ಸಹಬಾಳ್ವೆಯ ಒಂದು ವಿಧಾನವಾಗಿದೆ. ಜಾತಿ ವ್ಯವಸ್ಥೆಯು ಈ ಮುಕ್ತ ಸಂವಹನವನ್ನು ತಡೆಯುವುದರಿಂದ, ಜಾತಿ ಇರುವ ಸಮಾಜದಲ್ಲಿ ನಿಜವಾದ ಸಹೋದರತೆ ಸಾಧ್ಯವಿಲ್ಲ ಎಂಬುದು ಅವರ ನಿಲುವಾಗಿತ್ತು.

ಇಂದಿನ ಪ್ರಸ್ತುತತೆ: 21ನೇ ಶತಮಾನದಲ್ಲಿ ಅಂಬೇಡ್ಕರ್ ಅವರ ಸಹೋದರತೆಯ ಚಿಂತನೆಗಳು ಹಲವು ಕಾರಣಗಳಿಗಾಗಿ ಪ್ರಸ್ತುತವಾಗಿವೆ. ಧ್ರುವೀಕರಣವನ್ನು ತಡೆಯಲು ಸಮಾಜವು ವಿಭಜನೆಯಾಗುತ್ತಿರುವ ಈ ಕಾಲದಲ್ಲಿ, ನಾಗರಿಕರು ಪರಸ್ಪರ ಶತ್ರುಗಳಲ್ಲ, ಬದಲಿಗೆ ಸಹ-ಪ್ರಜೆಗಳು ಎಂಬ ಭಾವನೆಯನ್ನು ಸಹೋದರತೆ ಮೂಡಿಸುತ್ತದೆ.

ಸಂವಿಧಾನಾತ್ಮಕ ನೈತಿಕತೆಯು ಕೇವಲ ಕಾನೂನುಗಳು ನ್ಯಾಯಯುತ ಸಮಾಜವನ್ನು ನಿರ್ಮಿಸಲಾರವು. ಜನರ ಮನಸ್ಸಿನಲ್ಲಿ ಪರಸ್ಪರ ಗೌರವ ನೀಡುವ 'ಸಂವಿಧಾನಾತ್ಮಕ ನೈತಿಕತೆ' ಇರಬೇಕು ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು.

ಮಾನವೀಯತೆ ಮತ್ತು ವೈಚಾರಿಕತೆಯು ಅವರ ಸಹೋದರತೆಯ ಪರಿಕಲ್ಪನೆಯು ವೈಚಾರಿಕತೆ (Rationalism) ಮತ್ತು ಮಾನವತಾವಾದದ ಮೇಲೆ ನಿಂತಿದೆ. ಯಾವುದೇ ಧಾರ್ಮಿಕ ಅಂಧಶ್ರದ್ಧೆಗಿಂತ ಮಾನವೀಯ ಸಂಬಂಧಗಳೇ ರಾಷ್ಟ್ರವನ್ನು ಗಟ್ಟಿಗೊಳಿಸುತ್ತವೆ ಎಂದು ಅವರು ನಂಬಿದ್ದರು.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 271

ಸಮಾಚಾರ ಸಣ್ಣದಲ್ಲ

‘ಕೇಜ್ರಿವಾಲ್ ನೀವೂ ವಕೀಲರಾಗಬಹುದು’

ದೆಹಲಿ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮಗೆ ಸಂಬಂಧಿಸಿದ ಒಂದು ಕೇಸ್‌ನಲ್ಲಿ ಕೋಲ್ಕತ್ತ ಹೈಕೋರ್ಟ್‌ನಲ್ಲಿ ಸ್ವತಃ ವಾದ ಮಂಡಿಸಿದ್ದರು. ಈಗ ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸರದಿ ಬಂದಿದೆ. ದೆಹಲಿಯಲ್ಲಿ ಆಮ್ ಆದ್ಮಿ ಪಾರ್ಟಿ(ಎಎಪಿ) ಸರಕಾರವಿದ್ದಾಗ ಜಾರಿಗೆ ತಂದಿದ್ದ ಅಬಕಾರಿ ನೀತಿ ವಿವಾದವಾಗಿದ್ದು, ಪ್ರಕರಣದ ವಿಚಾರಣೆ ದೆಹಲಿ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಆದರೆ, ವಿಚಾರಣಾ ಪೀಠದಲ್ಲಿರುವ ನ್ಯಾಯಮೂರ್ತಿಗಳಿಗೆ ಆರ್‌ಎಸ್‌ಎಸ್ ಸಂಪರ್ಕ ಇರುವುದರಿಂದ ಅವರನ್ನು ಬದಲಿಸಿ ಬೇರೆ ನ್ಯಾಯಮೂರ್ತಿಗಳಿಂದ ವಿಚಾರಣೆ ನಡೆಸಲು ನಿರ್ದೇಶನ ನೀಡಿ ಎಂದು ಮಾಜಿ ಸಿಎಂ, ಪ್ರಕರಣದ ಆರೋಪಿಗಳಲ್ಲೊಬ್ಬರಾದ ಅರವಿಂದ್ ಕೇಜ್ರಿವಾಲ್ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಅಲ್ಲಿ ಅವರೇ ಸ್ವತಃ 1 ಗಂಟೆಗೂ ಹೆಚ್ಚು ಸಮಯ ಸಮರ್ಥವಾಗಿ ವಾದ ಮಂಡಿಸಿದ್ದಾರೆ. ಅವರ ವಾದದ ವೈಖರಿಗೆ ನ್ಯಾಯಮೂರ್ತಿಗಳೇ ಪ್ರಶಂಸೆ ಮಾಡಿದ್ದಾರೆ. ‘ಮಿ. ಕೇಜ್ರಿವಾಲ್ ನಿಮ್ಮ ವಾದ ಮಂಡನೆ ರೀತಿ ಬಹಳ ಚೆನ್ನಾಗಿದೆ. ನೀವು ಒಬ್ಬ ಸಮರ್ಥ ವಕೀಲರಾಗಬಹುದು’ ಎಂದು ನ್ಯಾಯಮೂರ್ತಿ ಸ್ವರ್ಣಕಾಂತಾ ಶರ್ಮಾ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

2 ಹಡಗಲ್ಲಿ ಇರಾನ್ ಕಚ್ಚಾತೈಲ ಭಾರತಕ್ಕೆ

ಮುಂಬೈ: 7 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಇರಾನ್‌ನಿಂದ ಭಾರತ ಕಚ್ಚಾತೈಲ ಖರೀದಿ ಮಾಡಿದೆ. 20 ಲಕ್ಷ ಬ್ಯಾರಲ್ ಕಚ್ಚಾತೈಲ ತುಂಬಿದ ಇರಾನಿನ 2 ಬೃಹತ್ ಟ್ಯಾಂಕರ್ ನೌಕೆಗಳು ಭಾರತದ ಎರಡು ಪ್ರತ್ಯೇಕ ಬಂದರುಗಳಿಗೆ ಬಂದು ಸೇರಿವೆ. ಇರಾನ್ ದೇಶದ ಧ್ವಜವಿರುವ ‘ಫೆಲಿಸಿಟಿ’ ಹೆಸರಿನ ಕಚ್ಚಾತೈಲ ನೌಕೆಯು ಪಶ್ಚಿಮ ಭಾರತದ ಸಿಕ್ಕಾ ಬಂದರನ್ನು ತಲುಪಿದೆ. ‘ಕುರಾಕಾವೊ’ ಧ್ವಜವಿರುವ ‘ಜಯಾ’ ಹಡಗು ಒಡಿಶಾ ರಾಜ್ಯದ ಪೂರ್ವ ಬಂದರಿಗೆ ಬಂದು ಸೇರಿದೆ. ಇದನ್ನು ಸರಕು ಸಾಗಣೆ ಹಡಗುಗಳ ಟ್ರ್ಯಾಕಿಂಗ್ ದತ್ತಾಂಶ ದೃಢೀಕರಿಸಿದೆ. ವಿಶ್ವದಲ್ಲೇ 3ನೇ ಅತಿದೊಡ್ಡ ತೈಲ ಆಮದುದಾರ ದೇಶವಾಗಿರುವ ಭಾರತ, 7 ವರ್ಷ ಹಿಂದೆ ಇರಾನ್‌ನಿಂದ ತೈಲ ಖರೀದಿಸುತ್ತಿತ್ತು. ಇರಾನ್ ಅಣ್ವಸ್ತ್ರ ಅಭಿವೃದ್ಧಿಪಡಿಸುತ್ತಿದೆ ಎಂಬ ಕಾರಣಕ್ಕೆ ಅಮೆರಿಕ, ಇರಾನ್ ವಿರುದ್ಧ 2019ರಲ್ಲಿ ಆರ್ಥಿಕ ದಿಗ್ಬಂಧನ ವಿಧಿಸಿದ ತರುವಾಯ ಭಾರತ ಸೇರಿದಂತೆ ಹಲವು ದೇಶಗಳು ಇರಾನ್ ತೈಲ ಖರೀದಿ ನಿಲ್ಲಿಸಿದ್ದವು. ಈಗ ಇರಾನ್ ಯುದ್ಧದ ಹಿನ್ನೆಲೆ ಹೊರ್ಮುಜ್ ಜಲಸಂಧಿ ಬಂದ್ ಆಗಿದ್ದರಿಂದ ಇರಾನ್ ವಿರುದ್ಧದ ದಿಗ್ಬಂಧನವನ್ನು ಅಮೆರಿಕ ಏ.19ರವರೆಗೆ ಅಮಾನತಿನಲ್ಲಿರಿಸಿದೆ. ಹಾಗಾಗಿ, ಭಾರತದ ‘ಇಂಡಿಯನ್ ಆಯಿಲ್ ಕಾರ್ಪೊರೇಷನ್’(ಐಒಸಿ) ಜಯಾ ಹಡಗಿನಲ್ಲಿದ್ದ ತೈಲ ಖರೀದಿಸಿದೆ. ರಿಲಯನ್ಸ್ ಸಮೂಹ ಮತ್ತೊಂದು ಹಡಗಿನಲ್ಲಿದ್ದ ತೈಲ ಖರೀದಿಸಿದೆ.

ಸಿರಿಂಜ್ ಮರುಬಳಕೆ: ಪಾಕ್ 331 ಮಕ್ಕಳಿಗೆ ಎಚ್‌ಐವಿ ಸೋಂಕು

ಇಸ್ಲಾಮಾಬಾದ್: ಪಾಕಿಸ್ತಾನ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕಾರಣ ಪಂಜಾಬ್ ಪ್ರಾಂತ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಇಂಜೆಕ್ಷನ್ ಸಿರಿಂಜ್‌ಗಳ ಮರುಬಳಕೆಯಾಗುತ್ತಿದೆ. ಪರಿಣಾಮ 2024ರ ನವೆಂಬರ್‌ನಿಂದ 2025ರ ಅಕ್ಟೋಬರ್‌ವರೆಗೆ ಟೌನ್ಸಾದಲ್ಲಿ 331 ಮಕ್ಕಳು ಎಚ್‌ಐವಿ ಸೋಂಕಿಗೆ ತುತ್ತಾಗಿದ್ದಾರೆ. ಪಂಜಾಬ್ ಪ್ರಾಂತ್ಯದ ಮಕ್ಕಳಲ್ಲಿಯೇ ಎಚ್‌ಐವಿ ಪ್ರಕರಣಗಳು ಹೆಚ್ಚು ಕೇಳಿಬರಲಾರಂಭಿಸಿದ್ದರಿಂದ ಇತ್ತೀಚೆಗೆ ತನಿಖೆ ನಡೆಸಲಾಯಿತು. ಆ ಬಳಿಕ ಈ ಆಘಾತಕಾರಿ ವಿಚಾರ ಬಹಿರಂಗಗೊಂಡಿದೆ. ಟಿಎಚ್‌ಕ್ಯು ಟೌನ್ಸಾ ಆಸ್ಪತ್ರೆಯಲ್ಲಿ ಸೋಂಕು ನಿಯಂತ್ರಣ ವ್ಯವಸ್ಥೆಯಲ್ಲಿನ ವೈಫಲ್ಯಗಳನ್ನು ಈ ಪ್ರಕರಣಗಳು ತೋರಿಸುತ್ತವೆ. ಆಸ್ಪತ್ರೆಯಲ್ಲಿ ಮರುಬಳಕೆ ಮಾಡಲಾದ ಸಿರಿಂಜ್‌ಗಳು ಮತ್ತು ಕಲುಷಿತವಾದ ಬಾಟಲಿಗಳ ರಾಶಿಯೇ ತನಿಖಾ ತಂಡಕ್ಕೆ ಸಿಕ್ಕಿದೆ. ಸಿರಿಂಜ್ ಮರು ಬಳಕೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಮಹಾರಾಷ್ಟ್ರ ಆಟೋ, ಟ್ಯಾಕ್ಸಿ ಚಾಲಕರಿಗೆ ಮರಾಠಿ ಕಡ್ಡಾಯ

ಮುಂಬೈ: ಮಹಾರಾಷ್ಟ್ರದಲ್ಲಿನ ಎಲ್ಲಾ ಆಟೋ ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ಮರಾಠಿ ಭಾಷೆ ಕಲಿಯುವುದನ್ನು ಕಡ್ಡಾಯಗೊಳಿಸಿ ಎನ್‌ಡಿಎ ಸರಕಾರ ಆದೇಶ ಹೊರಡಿಸಿದೆ. ಚಾಲನಾ ಪರವಾನಗಿ ನೀಡಲು ಸ್ಥಳೀಯ ಭಾಷೆಯ ಜ್ಞಾನ ಕಡ್ಡಾಯ ನಿಯಮ ಜಾರಿಯಲ್ಲಿದೆ. ಮರಾಠಿ ಭಾಷೆ ತಿಳಿಯದ ಚಾಲಕರ ಪರವಾನಗಿ ರದ್ದು ಮಾಡಲಾಗುವುದು ಎಂದೂ ಆದೇಶದಲ್ಲಿ ತಿಳಿಸಲಾಗಿದೆ. ಮೇ 1ರಂದು ಮಹಾರಾಷ್ಟ್ರ ದಿನಾಚರಣೆ ಆಯೋಜನೆಯಾಗಿದೆ. ಈ ಆದೇಶ ಮೇ 1ರಿಂದಲೇ ಜಾರಿಗೆ ಬರಲಿದೆ. ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ಭಾಷೆ ಓದಲು ಮತ್ತು ಬರೆಯಲು ಸಾಧ್ಯವೇ? ಎಂಬುದನ್ನು ಪರಿಶೀಲಿಸಲು ಮೋಟಾರ್ ಸಾರಿಗೆ ಇಲಾಖೆಯ 59 ಪ್ರಾದೇಶಿಕ ಮತ್ತು ಉಪ-ಪ್ರಾದೇಶಿಕ ಕಚೇರಿಗಳಲ್ಲಿ ತಪಾಸಣಾ ಅಭಿಯಾನ ನಡೆಸಲಾಗುವುದು. ಸಾರಿಗೆ ಇಲಾಖೆ ಕಚೇರಿಗಳ ಮೂಲಕ ರಾಜ್ಯಾದ್ಯಂತ ಮರಾಠಿ ಭಾಷಾ ಕಲಿಕಾ ಅಭಿಯಾನ ನಡೆಸಲಾಗುವುದು ಎಂದು ಸಾರಿಗೆ ಸಚಿವ ಪ್ರತಾಪ್ ಸರ್ನಾಯಕ್ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೇ ಬೇಸಿಗೆ ಅವಧಿಯಲ್ಲಿ ಸೂಪರ್ ಎಲ್‌ನಿನೊ ಸೃಷ್ಟಿ ನಿರೀಕ್ಷೆ | ಏಷ್ಯಾ-ಆಸ್ಟ್ರೇಲಿಯದಲ್ಲಿ ಮಳೆ ಕಡಿಮೆ, ಅಮೆರಿಕದಲ್ಲಿ ಅಧಿಕ
ಭಾರತದಲ್ಲಿ ಜುಲೈ-ಸೆಪ್ಟೆಂಬರ್ ಅವಧಿ ವಾಡಿಕೆಗಿಂತ ಕಡಿಮೆ ಮಳೆ | ಭಾರತೀಯ ಹವಾಮಾನ ಇಲಾಖೆ ಮುನ್ಸೂಚನಾ ವರದಿ ಪ್ರಕಟ

ಸೂಪರ್ ಎಲ್ ನಿನೊ: ಮುಂಗಾರು ಅವಧಿ ದುರ್ಬಲ



ದೆಹಲಿ: ಪ್ರಸಕ್ತ ಬೇಸಿಗೆ ಅವಧಿಯಲ್ಲಿ ‘ಎಲ್ ನಿನೊ’ ಚಂಡಮಾರುತ ‘ಪೆಸಿಫಿಕ್ ಸಾಗರ’ ಭಾಗದಲ್ಲಿ ಮೇ ತಿಂಗಳಾಂತ್ಯಕ್ಕೂ ಮುನ್ನವೇ ಸೃಷ್ಟಿಯಾಗುವ ಸಾಧ್ಯತೆ ಇದೆ. ಆದರೆ, ಈ ಬಾರಿ ಅದು ‘ಸೂಪರ್ ಎಲ್ ನಿನೊ’ ಆಗಿ ಆಗಸ್ಟ್ ವೇಳೆ ಬದಲಾಗುವ ಸಾಧ್ಯತೆ ಇದ್ದು, ಇದು ಅಪಾಯದ ಮುನ್ಸೂಚನೆಯಾಗಲಿದೆ ಎಂದು ಜಾಗತಿಕ ಹವಾಮಾನ ತಜ್ಞ ಸಂಸ್ಥೆಯಾದ ‘ಯೂರೋಪಿಯನ್ ಸೆಂಟರ್ ಫಾರ್ ಮೀಡಿಯಂ ರೇಂಜ್ ವೆದರ್ ಫೋರ್ ಕ್ಯಾಸ್ಟ್ಸ್’(ಇಸಿಎಂಡಬ್ಲ್ಯುಎಫ್) ಮುನ್ಸೂಚನಾ ವರದಿ ಪ್ರಕಟಿಸಿದೆ.

ಹಾಗೇನಾದರೂ ‘ಸೂಪರ್ ಎಲ್ ನಿನೊ’ ರೂಪುಗೊಂಡರೆ, ಆಫ್ರಿಕಾ, ಏಷ್ಯಾ ಮತ್ತು ಆಸ್ಟ್ರೇಲಿಯ ಖಂಡಗಳಲ್ಲಿ ಪ್ರಸಕ್ತ ಬೇಸಿಗೆ ಅವಧಿಯಲ್ಲಿ ಉಷ್ಣಾಂಶ ಏರಿಕೆಯಾಗಲಿದೆ, ನೈಋತ್ಯ ಮುಂಗಾರು ಅವಧಿಯಲ್ಲಿ ವಾಡಿಕೆಗಿಂತಲೂ ಬಹಳ ಕಡಿಮೆ ಮಳೆಯಾಗಲಿದೆ. ‘ಸೂಪರ್ ಎಲ್ ನಿನೊ’ ಪ್ರಭಾವ ತೀವ್ರಗೊಂಡರೆ ಈ ಭಾಗಗಳಲ್ಲಿ ಬರಗಾಲ ಸೃಷ್ಟಿಯಾದರೂ ಆಶ್ಚರ್ಯವಿಲ್ಲ ಎಂದೂ ‘ಇಸಿಎಂಡಬ್ಲ್ಯುಎಫ್’ ಆತಂಕ ಹೊರಹಾಕಿದೆ.

ಇನ್ನೊಂದೆಡೆ, ಅಮೆರಿಕ ಖಂಡದಲ್ಲಿ ಮಾಮೂಲಿಗಿಂತಲೂ ಅತ್ಯಧಿಕ ಪ್ರಮಾಣದಲ್ಲಿ ಬಿರುಗಾಳಿ ಸಹಿತ ಮಳೆಯಾಗಲಿದೆ, ಭಾರೀ ಅವಾಂತರ ಸೃಷ್ಟಿಯಾಗುವ ಅಪಾಯವೂ ಇರಲಿದೆ ಎಂದು ‘ಇಸಿಎಂಡಬ್ಲ್ಯುಎಫ್’ ಸಂಸ್ಥೆಯ ಹವಾಮಾನ ತಜ್ಞರು ಅಂದಾಜು ಮಾಡಿದ್ದಾರೆ.

ಅಷ್ಟೇ ಅಲ್ಲದೇ, ಜಾಗತಿಕ ಮಟ್ಟದ ತಾಪಮಾನವೂ ದಾಖಲೆ ಪ್ರಮಾಣದಲ್ಲಿ(ವಾಡಿಕೆಗಿಂತ ಶೇ.5-6ರಷ್ಟು) ಏರಿಕೆ ಕಾಣಲಿದೆ. ಈ ಬಾರಿ ಚರ್ಮ ಸುಡುವಷ್ಟು ಗರಿಷ್ಠ ಮಟ್ಟದ ಬಿಸಿಲಿನ ಅನುಭವವಾಗುವ ಸಾಧ್ಯತೆ ಇದೆ ಎಂದೂ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಸಾಗರದ ಮೇಲ್ಮೈ ಉಷ್ಣಾಂಶ ಸಾಮಾನ್ಯ ಮಟ್ಟಕ್ಕಿಂತಲೂ 2.0 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಏರಿಕೆ ಆಗುವುದರಿಂದ ಈ ಬಾರಿ ಎಲ್ ನಿನೊ ಚಂಡಮಾರುತ ‘ಸೂಪರ್ ಎಲ್ ನಿನೊ’ ಆಗುವ ಸಾಧ್ಯತೆ ಶೇ.30ರಷ್ಟು ಹೆಚ್ಚೇ ಇದೆ. ಹಾಗಾಗಿ ಈ ಬಾರಿ ಬಲಿಷ್ಠ ಎಲ್ ನಿನೊ ಅವತಾರ ನಿಶ್ಚಿತ ಎನ್ನಬಹುದಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಐಎಂಡಿ ವರದಿ: ಭಾರತೀಯ ಹವಾಮಾನ ಇಲಾಖೆಯೂ(ಐಎಂಡಿ) ಹವಾಮಾನ ಮತ್ತು ಮುಂಗಾರು ಮುನ್ಸೂಚನಾ ವರದಿಯನ್ನು ಇತ್ತೀಚೆಗೆ ಪ್ರಕಟಿಸಿದ್ದು, ಅದು ದೇಶದ ಪಾಲಿಗೆ ಕಳವಳಕಾರಿಯಾಗಿದೆ. ‘ಎಲ್ ನಿನೊ’ ಆಗಸ್ಟ್ ವೇಳೆಗೆ ಭಾರತದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ‘ಎಲ್ ನಿನೊ’ ಚಂಡಮಾರುತ ಈ ಬಾರಿ ಹಿಂದೆಂದಿಗಿಂತಲೂ ಬಲಗೊಳ್ಳುವ ಸಾಧ್ಯತೆ(ಸೂಪರ್ ಎಲ್ ನಿನೊ) ಇರುವುದರಿಂದ ಈ ವರ್ಷದ ನೈಋತ್ಯ ಮುಂಗಾರು ಬಹಳ ದುರ್ಬಲವಾಗಿರಲಿದೆ. ವಾಡಿಕೆಗಿಂತಲೂ ಬಹಳ ಕಡಿಮೆ ಮಳೆ ಸುರಿದು ದೇಶದ ಕೃಷಿ ಕ್ಷೇತ್ರಕ್ಕೆ ದೊಡ್ಡ ಮಟ್ಟದಲ್ಲಿ ನಷ್ಟವನ್ನುಂಟು ಮಾಡುವ ಸಾಧ್ಯತೆ ಹೆಚ್ಚಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಈಗಾಗಲೇ ಕಳೆದೊಂದೂವರೆ ತಿಂಗಳಿಂದ ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧದಿಂದಾಗಿ ಹೊರ್ಮುಜ್ ಜಲಸಂಧಿ ಬಂದ್ ಆಗಿದೆ. ಅದರಿಂದಾಗಿ ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಪರಿಣಾಮ ಹೋಟೆಲ್, ದಿನಸಿ ಉದ್ಯಮದ ಮೇಲೆ ದುಷ್ಪರಿಣಾಮವಾಗಿದ್ದು, ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಿದೆ. ಇದೆಲ್ಲದರ ಮಧ್ಯೆಯೇ ‘ಎಲ್ ನಿನೊ’ ಮತ್ತು ಹವಾಮಾನ ಇಲಾಖೆ ಮುನ್ಸೂಚನಾ ವರದಿ ಭಾರತದ ಮೇಲೆ ಮತ್ತೊಂದು ಕರಾಳ ನೆರಳು ಆವರಿಸುವ ಭಯ ಹುಟ್ಟಿಸಿದೆ.

ನೈಋತ್ಯ ಮುಂಗಾರು ಮಾರುತಗಳ ಆಗಮನ ಈ ಬಾರಿ ವಾಡಿಕೆಗಿಂತ ಬಹಳ ಕಡಿಮೆ ಇರಲಿದೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿನ ಮುಂಗಾರು ಮಳೆ ಪ್ರಮಾಣ ದೀರ್ಘಾವಧಿಯ ಸರಾಸರಿಯ ಶೇ.92ರಷ್ಟಿರಲಿದೆ ಎಂದು ಹವಾಮಾನ ಇಲಾಖೆ ಲೆಕ್ಕಹಾಕಿದೆ. ಇದರಿಂದ ಭಾರತದ ಕೃಷಿ ಕ್ಷೇತ್ರದಲ್ಲಿ ಬಿತ್ತನೆ ಪ್ರಮಾಣ ಕಡಿಮೆ ಆಗಲಿದೆ. 40 ಕೋಟಿ ಕೃಷಿಕರ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆಯಲ್ಲಿ ಎಚ್ಚರಿಸಿದೆ.

ಕೆಲವೊಮ್ಮೆ ಎಲ್ ನಿನೊ ಪ್ರಭಾವ ಬದಲಾವಣೆ

ಕೆಲವೊಮ್ಮೆ ಮಾತ್ರ ಎಲ್ ನಿನೊ ಪ್ರಭಾವ ಬದಲಾಗಿರುವುದಿದೆ. 1953 ಮತ್ತು 1994ನೇ ಸಾಲಿನಲ್ಲಿ ಎಲ್‌ನಿನೊ ಆಗಮಿಸಿದ್ದರೂ ಆ ಸಾಲಿನ ಮುಂಗಾರು ಅವಧಿಯಲ್ಲಿ ವಾಡಿಕೆಗಿಂತಲೂ ತುಸು ಹೆಚ್ಚಿನ ಪ್ರಮಾಣದ ಮಳೆ ದಾಖಲಾಗಿದೆ. ಆದರೆ, ಇಂಥ ಉದಾಹರಣೆ ಬಹಳ ಕಡಿಮೆ ಇದೆ. ಹವಾಮಾನ ಶಾಸ್ತ್ರಜ್ಞರ ಪ್ರಕಾರ, ‘ಎಲ್ ನಿನೊ’ ಚಂಡಮಾರುತ ಸೃಷ್ಟಿಯಾದಾಗ ಸಮುದ್ರ ಮೇಲ್ಮೈ ತಾಪಮಾನ ಏರಿಕೆ ಆಗುತ್ತದೆ. ಇದು ಮುಂಗಾರು ಮಳೆಯ ಮಾರುತಗಳ ಆಗಮನದ ಮೇಲೆ ಪರಿಣಾಮ ಬೀರುತ್ತದೆ. ಹೆಚ್ಚಿನಂಶ ‘ಎಲ್ ನಿನೊ’ ಭಾರತದ ಮುಂಗಾರು ಋತುವಿನ ಮೇಲೆ ಹೆಚ್ಚು ಬಾರಿ ನಕಾರಾತ್ಮಕ ಪರಿಣಾಮ ಬೀರಿದೆ ಎಂಬುದು ಗಮನಾರ್ಹ.

‘ಎಲ್ ನಿನೊ’ದಿಂದ ಮುಂಗಾರು ಪ್ರಭಾವಿತ

‘ಎಲ್ ನಿನೊ’ ಚಂಡಮಾರುತದ ಪ್ರಭಾವ ಭಾರತದಲ್ಲಿ ಮಾನ್ಸೂನ್ ಮೇಲೆ ನಕಾರಾತ್ಮಕವಾಗಿರುತ್ತದೆ ಎಂಬುದನ್ನು ದೀರ್ಘಕಾಲದಿಂದಲೂ ಗಮನಿಸಿಕೊಂಡು ಬರಲಾಗಿದೆ. 1951ರಿಂದ 2025 ರವರೆಗಿನ ಅಂಕಿ-ಅಂಶ ಪ್ರಕಾರ, ‘ಎಲ್ ನಿನೊ’ ಅವತರಿಸಿದ ವರ್ಷಗಳಲ್ಲಿ ಭಾರತದಲ್ಲಿನ ನೈಋತ್ಯ ಮಾನ್ಸೂನ್ (ಜೂನ್-ಸೆಪ್ಟೆಂಬರ್) ಅವಧಿಯಲ್ಲಿ ಮಳೆ ಪ್ರಮಾಣ ವಾಡಿಕೆಗಿಂತ ಕಡಿಮೆ ಆಗಿರುವುದು ದಾಖಲಾಗಿದೆ. ನಿರ್ದಿಷ್ಟವಾಗಿ, 1965 ಮತ್ತು 1972 ಹಾಗೂ 1987 ಮತ್ತು 2002 ಹಾಗೂ 2015ನೇ ಸಾಲಿನಲ್ಲಿ ಎಲ್‌ನಿನೊ ಕಾರಣದಿಂದಾಗಿ ಮುಂಗಾರು ಮಾರುತಗಳು ದುರ್ಬಲಗೊಂಡಿರುವುದು, ಮಳೆ ಕಡಿಮೆ ಆಗಿರುವುದು ದಾಖಲಾಗಿದೆ. ಇತ್ತೀಚೆಗೆ 2023ನೇ ಸಾಲಿನಲ್ಲಿ ‘ಎಲ್ ನಿನೊ’ ಆಗಮಿಸಿದಾಗ ಮುಂಗಾರು ಮಳೆ ಪ್ರಮಾಣ ಶೇ.5.3ರಷ್ಟು ಇಳಿಕೆಯಾಗಿತ್ತು ಎಂಬುದು ಉಲ್ಲೇಖಾರ್ಹ.

ತಜ್ಞರ ಅನುಭವದ ಮಾತು

ಕಳೆದೆರಡು ವರ್ಷಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿತ್ತು. ‘ಎಲ್ ನಿನೊ’ ಚಂಡಮಾರುತ ಬಲಗೊಂಡರೆ, ಜುಲೈ-ಸೆಪ್ಟೆಂಬರ್ ಅವಧಿಯಲ್ಲಿ ಮಳೆ ಮತ್ತಷ್ಟು ದುರ್ಬಲಗೊಳ್ಳಬಹುದು, ವಾಡಿಕೆಗಿಂತ ಕಡಿಮೆ ಪ್ರಮಾಣದ ಮಳೆಯಾಗಬಹುದು. ಎಲ್ ನಿನೊ ಜಾಗತಿಕ ಸಾಗರ ಸ್ಥಿತಿಯಾಗಿದೆ. ಎಲ್‌ನಿನೊ ಅವತರಿದಾಗಲೆಲ್ಲಾ ಭಾರತದಲ್ಲಿ ಕಡಿಮೆ ಮಳೆಯಾಗುತ್ತದೆ ಎಂದೇ ನಂಬಲಾಗಿದೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ.

ಮುಂಬೈ ಹಳಿಗಳ ಮೇಲೆ ಕ್ಲೋಸ್ಡ್‌ಡೋರ್ ರೈಲು

ಮುಂಬೈ: ಮುಂಬೈನ ರೈಲು ಹಳಿಗಳ ಮೇಲೆ ಪ್ರಸ್ತುತ ನಿತ್ಯವೂ ‘ಲೋಕಲ್ ಟ್ರೇನ್’ ಸಂಚಾರ ಲಕ್ಷಾಂತರ ಜನರ ಪ್ರಯಾಣಕ್ಕೆ ಒದಗುತ್ತಿದೆ. ಲೋಕಲ್ ಟ್ರೇನ್ ಇಲ್ಲದ ಮುಂಬೈ ನಗರವನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಅಷ್ಟರ ಮಟ್ಟಿಗೆ ‘ಲೋಕಲ್ ಟ್ರೇನ್’ ಮುಂಬೈ ಮಹಾನಗರದ ಜೀವನಾಡಿಯಾಗಿದೆ.

ಆದರೆ, ಲೋಕಲ್ ಟ್ರೇನ್‌ನ ಒಂದು ದೊಡ್ಡ ಸಮಸ್ಯೆ ಎಂದರೆ ಅದರ ‘ವಿಶಾಲವಾದ ತೆರೆದ ಬಾಗಿಲು’. ಈ ಬಾಗಿಲುಗಳಲ್ಲಿ ನೇತಾಡಿಕೊಂಡು ಹೋಗುವವರು ಹಲವು ಬಾರಿ ಕೈಹಿಡಿತ ಜಾರಿ ಕೆಳಕ್ಕೆ ಬಿದ್ದು ಸಾವಿಗೀಡಾಗಿರುವುದೂ ಇದೆ. 2025ರ ಜೂನ್‌ನಲ್ಲಿ ಮುಂಬ್ರಾ ರೈಲು ಅವಘಡದಲ್ಲಿ ಕಿಕ್ಕಿರಿದು ತುಂಬಿದ್ದ ರೈಲಿನ ತೆರೆದ ಬಾಗಿಲಿನಿಂದ ಆಯತಪ್ಪಿ ಬಿದ್ದ ಪ್ರಯಾಣಿಕರು ಪ್ರಾಣ ಕಳೆದುಕೊಂಡರು. ಹಾಗಾಗಿಯೇ ರೈಲ್ವೆ ಇಲಾಖೆ ಮುಂಬೈನ ರೈಲುಗಳ ಬೋಗಿಗಳಿಗೆ ಜಾರುವ ಬಾಗಿಲು ಅಳವಡಿಸಿ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಲು ಮುಂದಾಯಿತು.

ಅದರ ಮುಂದಿನ ಭಾಗವಾಗಿ ಭಾರತೀಯ ರೈಲ್ವೆ ತನ್ನ ಇತಿಹಾಸದಲ್ಲೇ ಮೊದಲ ಬಾರಿಗೆ ಹವಾನಿಯಂತ್ರಣವಿಲ್ಲದ ಸಾಮಾನ್ಯ ಭೋಗಿಗಳಿಗೂ ಸ್ವಯಂಚಾಲಿತವಾಗಿ ಮುಚ್ಚುವ-ತೆರೆದುಕೊಳ್ಳುವ ಬಾಗಿಲುಗಳು ಇರುವ ಬೋಗಿಗಳನ್ನು ಸಿದ್ಧಪಡಿಸಿದೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಸಂಕಲ್ಪ, ಎಂಜಿನಿಯರ್‌ಗಳ ಚಿಂತನೆಯ ಫಲವಾಗಿ ಸ್ವಯಂಚಾಲಿತ ಬಾಗಿಲುಗಳಿರುವ, ಗುಲಾಬಿ ಬಣ್ಣದ 12 ಸಾಮಾನ್ಯ ಬೋಗಿಗಳ ಮೊದಲ ಮಾದರಿ ರೈಲು ಚೆನ್ನೈನ ಇಂಟಿಗ್ರಲ್ ಕೋಚ್ ಫ್ಯಾಕ್ಟರಿ ಸಿದ್ಧವಾಗಿದೆ.

ವೈಶಿಷ್ಟ್ಯ: ಈ ರೈಲಿನ ವೈಶಿಷ್ಟ್ಯವೆಂದರೆ ಮೆಟ್ರೊ ಮಾದರಿಯಲ್ಲಿರುವ ‘ಪ್ರಯಾಣಿಕರ ಜೀವ ರಕ್ಷಕ ಬಾಗಿಲು’. ಈ ಬಾಗಿಲುಗಳು ಸ್ವಯಂಚಾಲಿತ. ತಾವಾಗಿಯೇ ಮುಚ್ಚಿ-ತೆರೆದುಕೊಳ್ಳುತ್ತವೆ. ಬಾಗಿಲು ಪೂರ್ಣ ಮುಚ್ಚಿಕೊಳ್ಳದೇ ಇದ್ದರೆ ರೈಲು ಚಲಿಸುವುದಿಲ್ಲ. ಅಂತಹ ಸುರಕ್ಷತಾ ವ್ಯವಸ್ಥೆಯನ್ನು ಈ ರೈಲು ಬೋಗಿಗಳಿಗೆ ಅಳವಡಿಸಲಾಗಿದೆ. ಪ್ರಯಾಣಿಕರು ಒಂದು ಬೋಗಿಯಿಂದ ಮತ್ತೊಂದು ಬೋಗಿಗೆ ಓಡಾಡಬಹುದು. ಆಧುನಿಕ ಸೌಲಭ್ಯಗಳಿವೆ. ಮಹಿಳೆಯರ ಸುರಕ್ಷತೆಗಾಗಿ ವಿಶೇಷ ಬೋಗಿಗಳ ವ್ಯವಸ್ಥೆ ಮಾಡಲಾಗಿದೆ. ಗಾಳಿಯ ಮುಕ್ತ ಸಂಚಾರಕ್ಕಾಗಿ ವಿಶೇಷ ವೆಂಟಿಲೇಶನ್ ವ್ಯವಸ್ಥೆಯಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಡಾ. ಬಿ.ಆರ್.ಅಂಬೇಡ್ಕರ್ 135ನೇ ಜನ್ಮ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಬಾಬಾ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಸಂಸತ್ ಭವನದ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಅಂಬೇಡ್ಕರ್‌ಗೆ ನಮನ ಕಾರ್ಯಕ್ರಮ ಬಳಿಕ ಪ್ರಧಾನಿ ಮೋದಿ ಅವರ ಹಾಸ್ಯ ಚಟಾಕಿಗೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತಿತರರ ನಗು.

ಮುಖಭಂಗ ತಪ್ಪಿಸಿಕೊಳ್ಳಲು 2ನೇ ಶಾಂತಿಸಭೆ: ಪಾಕ್ ಯತ್ನ

ಇಸ್ಲಾಮಾಬಾದ್: ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧ ಶುರುವಾಗಿ 46 ದಿನಗಳೇ ಕಳೆದರೂ ಅಂತ್ಯಗೊಂಡಿಲ್ಲ. ಬದಲಾಗಿ, ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ದಿನೇ ದಿನೇ ಬಿಗಡಾಯಿಸುತ್ತಿದೆ. ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಅಮೆರಿಕ-ಇರಾನ್ ನಡುವೆ ಇಸ್ಲಾಮಾಬಾದ್‌ನಲ್ಲಿ ಏ.11ರಂದು ಏರ್ಪಡಿಸಲಾಗಿದ್ದ ಶಾಂತಿಸಭೆ ಸತತ 21 ಗಂಟೆಗಳ ಚರ್ಚೆಯ ಬಳಿಕವೂ ವಿಫಲವಾಗಿದೆ. ಇರಾನ್ ಸಂಸತ್‌ನ ಸ್ಪೀಕರ್ ಮೊಹಮ್ಮದ್ ಬಘರ್ ಗಾಲಿಬಾಫ್ ನೇತೃತ್ವದ ನಿಯೋಗ ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ಶ್ವೇತಭವನದ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಳಿಯ ಜೇರೆಡ್ ಕುಶ್ನರ್ ಮಾತುಕತೆ ನಡೆಸಿದ್ದರು.

ಇದರಿಂದಾದ ಮುಖಭಂಗವನ್ನು ತಪ್ಪಿಸಿಕೊಳ್ಳುವ ಸಲುವಾಗಿ ಪಾಕಿಸ್ತಾನ ಅಮೆರಿಕ- ಇರಾನ್ ನಡುವೆ 2ನೇ ಸುತ್ತಿನ ಮಾತುಕತೆಯ ಪ್ರಸ್ತಾಪ ಇಟ್ಟಿದೆ. ಇಸ್ಲಾಮಾಬಾದ್‌ನಲ್ಲೇ 2ನೇ ಸಂಧಾನ ಸಭೆ ನಡೆಸುವಂತೆ ಪಾಕ್ ಸರಕಾರ ಮನವಿ ಮಾಡಿದೆ. ಇದನ್ನು ಪಾಕ್‌ನ ಉನ್ನತ ಅಧಿಕಾರಿಗಳು ಮಂಗಳವಾರ ಖಚಿತಪಡಿಸಿದ್ದಾರೆ. ಆದರೆ, ಅಮೆರಿಕದ ಬೇಡಿಕೆಗಳನ್ನು ಒಪ್ಪಲು ಇರಾನ್ ಸಿದ್ಧವಿದ್ದರಷ್ಟೇ ಮಾತುಕತೆಗೆ ಬರುತ್ತೇವೆ ಎಂದು ಟ್ರಂಪ್ ಷರತ್ತು ವಿಧಿಸಿದ್ದಾರೆ. ಈ ಮಧ್ಯೆ, ಟ್ರಂಪ್ ಘೋಷಿಸಿದ 2 ವಾರಗಳ ಕದನ ವಿರಾಮ ಮುಂದಿನ ವಾರ(ಏ.21ಕ್ಕೆ) ಕೊನೆಗೊಳ್ಳಲಿದೆ. ಅಷ್ಟರೊಳಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಿದೆ. ಇದು ಉತ್ಸಾಹದಿಂದ ಮಧ್ಯಸ್ಥಿಕೆ ಪಾತ್ರ ವಹಿಸಿದ್ದ ಪಾಕ್‌ಗೆ ಹೆಚ್ಚು ಒತ್ತಡವನ್ನುಂಟು ಮಾಡಿದೆ.

ಇಸ್ಲಾಮಾಬಾದ್‌ನ ಹೋಟೆಲ್ ಸೆರಾನಾ ಅಂಗಳದಲ್ಲಿ ಏ.11ರ ಮೊದಲ ಶಾಂತಿಸಭೆ ವೇಳೆ ಅಳವಡಿಸಿದ್ದ ಸ್ವಾಗತ ಫಲಕ.

ಇಸ್ರೇಲ್-ಲೆಬನಾನ್ ಇಂದು ಮಾತುಕತೆ

ಇನ್ನೊಂದೆಡೆ, ಇಸ್ರೇಲ್-ಲೆಬನಾನ್ ಏ.15ರಂದು ಅಮೆರಿಕದಲ್ಲಿ ನೇರ ಮಾತುಕತೆ ನಡೆಸಲು ಮುಂದಾಗಿವೆ. ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆಂದು ಹೇಳಲಾಗಿದೆ. ಆದರೆ, ಈ ಸಂಧಾನ ಸಭೆ ಆರಂಭಕ್ಕೆ 1 ದಿನವಷ್ಟೇ ಬಾಕಿ ಇರುವಾಗಲೂ ಲೆಬನಾನ್ ಮೇಲೆ ಇಸ್ರೇಲ್ ಬಾಂಬ್ ದಾಳಿ ನಡೆಸಿದೆ. ಪೂರ್ವ ಲೆಬನಾನ್ ಮಶ್‌ಘರಾ ಮತ್ತು ಸಹ್ಮಾರ್ ಪಟ್ಟಣಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್‌ನಿಂದ ವೈಮಾನಿಕ ದಾಳಿ ನಡೆದಿದೆ. ಇದು ಹೆಜ್ಬೊಲ್ಲಾ ಉಗ್ರ ಸಂಘಟನೆಯನ್ನು ಕೆರಳಿಸಿದೆ. ಹಾಗಾಗಿ, ಅಮೆರಿಕದಲ್ಲಿ ಇಸ್ರೇಲ್-ಲೆಬನಾನ್ ಏನಾದರೂ ಮಾತುಕತೆ ನಡೆಸಲಿ, ಯಾವುದೇ ಒಪ್ಪಂದ ಮಾಡಿಕೊಳ್ಳಲಿ, ಅದಕ್ಕೂ ನಮಗೂ ಸಂಬಂಧವಿಲ್ಲ ಎಂದು ಹೆಜ್ಬೊಲ್ಲಾ ಮುಖಂಡರು ಕಟುವಾಗಿ ಪ್ರತಿಕ್ರಿಯಿಸಿದ್ದಾರೆ.

ಪ್ರಯಾಣ ಸಮಯ 2.5 ಗಂಟೆ ಕಡಿಮೆ

ದೆಹಲಿ-ಡೆಹ್ರಾಡೂನ್ 213 ಕಿ.ಮೀ. ಎಕ್ಸ್‌ಪ್ರೆಸ್‌ವೇ ಲೋಕಾರ್ಪಣೆ

ಸಹರಾನ್‌ಪುರ: ರಾಷ್ಟ್ರ ರಾಜಧಾನಿ ದೆಹಲಿ ಮತ್ತು ಉತ್ತರಾಖಂಡವನ್ನು ತ್ವರಿತಗತಿಯಲ್ಲಿ ಸಂಪರ್ಕಗೊಳಿಸುವ ‘ದೆಹಲಿ-ಡೆಹ್ರಾಡೂನ್ ಎಕ್ಸ್‌ಪ್ರೆಸ್ ವೇ’ ರಾಷ್ಟ್ರೀಯ ಹೆದ್ದಾರಿ ನೂತನ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಲೋಕಾರ್ಪಣೆ ಮಾಡಿದರು.

ಇದಕ್ಕೂ ಮುನ್ನ ಸಹರಾನ್‌ಪುರದ ಎತ್ತರದ ಪ್ರದೇಶದ ವನ್ಯಜೀವಿ ಮಾರ್ಗವನ್ನು ವೀಕ್ಷಿಸಿದರು. ಬಳಿಕ ‘ಜೈ ಮಾದಾತ್ ಕಾಳಿ ದೇವಾಲಯ’ಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ನಂತರ ಸಹರಾನ್‌ಪುರದ ಪ್ರಮುಖ ರಸ್ತೆಯಲ್ಲಿ ರೋಡ್ ಷೋ ನಡೆಸಿದರು. ನಂತರ ಡೆಹ್ರಾಡೂನ್‌ನಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು.

12,000 ಕೋಟಿ ರು.ಗಳಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಿಸಲಾದ ‘ಎಕ್ಸ್‌ಪ್ರೆಸ್ ವೇ’ ದೆಹಲಿ, ಉತ್ತರ ಪ್ರದೇಶ ಮತ್ತು ಉತ್ತರಾಖಂಡ್ ರಾಜ್ಯಗಳಲ್ಲಿ ವ್ಯಾಪಿಸಿದೆ. 213 ಕಿ.ಮೀ. ಉದ್ದದ ಈ ಎಕ್ಸ್‌ಪ್ರೆಸ್ ವೇಯನ್ನು ದೆಹಲಿ-ಡೆಹ್ರಾಡೂನ್ ಆರ್ಥಿಕ ಕಾರಿಡಾರ್ ಎಂದೂ ಕರೆಯಲಾಗುತ್ತದೆ. 6 ಪಥಗಳಿರುವ ಈ ಎಕ್ಸ್‌ಪ್ರೆಸ್ ವೇಯು ‘ಪ್ರವೇಶ-ನಿಯಂತ್ರಿತ’ ಹೆದ್ದಾರಿಯಾಗಿದೆ. ದೆಹಲಿ ಮತ್ತು ಡೆಹ್ರಾಡೂನ್ ನಗರಗಳ ನಡುವಿನ ಪ್ರಯಾಣದ ಸಮಯದಲ್ಲಿ ಎರಡೂವರೆ ಗಂಟೆಗಳಷ್ಟು ಕಡಿಮೆ ಮಾಡಲಿದೆ.

ಈ ಎಕ್ಸ್‌ಪ್ರೆಸ್ ವೇ, 10 ಇಂಟರ್‌ಚೇಂಜ್‌ಗಳು, 3 ರೈಲ್ವೆ ಓವರ್‌ಬ್ರಿಡ್ಜ್‌ಗಳು, 4 ಪ್ರಮುಖ ಸೇತುವೆಗಳನ್ನು ಹೊಂದಿದೆ. ರಸ್ತೆ ಸುರಕ್ಷತೆ ಮತ್ತು ಕ್ಷಮತೆ ಸುಧಾರಣೆ ಗುರಿ ಹೊಂದಿದೆ. ಸುಧಾರಿತ ಸಂಚಾರ ನಿರ್ವಹಣಾ ವ್ಯವಸ್ಥೆಯೂ ಇದರಲ್ಲಿದೆ. 4 ಟೋಲ್ ಪ್ಲಾಜಾಗಳೂ ಇವೆ.

ಮುಂಬೈ ರಸಸಂಜೆ ಕಾರ್ಯಕ್ರಮದಲ್ಲಿ ಆಘಾತಕಾರಿ ಘಟನೆ
ಹಲವರು ಅಸ್ವಸ್ತ-ಆಸ್ಪತ್ರೆಗೆ ದಾಖಲು, ಐವರ ಬಂಧನ

ಮಿತಿಮೀರಿದ ಮಾದಕ ದ್ರವ್ಯ 2 ಎಂಬಿಎ ವಿದ್ಯಾರ್ಥಿ ಸಾವು

ಮುಂಬೈ: ಮಹಾರಾಷ್ಟ್ರದ ಮುಂಬೈ ಮಹಾನಗರದಲ್ಲಿನ ಗೋರೆಗಾಂವ್‌ನಲ್ಲಿರುವ ‘ನೆಸ್ಕೊ ಕೇಂದ್ರ’ದಲ್ಲಿ

ಶನಿವಾರ ರಾತ್ರಿ ನಡೆದಿದ್ದ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಇಬ್ಬರು ಎಂಬಿಎ ವಿದ್ಯಾರ್ಥಿಗಳು ಅತಿಯಾದ ಮಾದಕ ದ್ರವ್ಯ ಸೇವನೆಯಿಂದ ಸಾವನ್ನಪ್ಪಿದ್ದಾರೆ.

24 ಮತ್ತು 25 ವರ್ಷದ ಇಬ್ಬರು ಯುವತಿಯರು ಮತ್ತು 28 ವರ್ಷದ ಒಬ್ಬ ಯುವಕ ಅಧಿಕ ಪ್ರಮಾಣದಲ್ಲಿ ‘ಎಂಡಿಎಂಎ’ ಮಾತ್ರೆಗಳನ್ನು ಸೇವಿಸಿದ್ದರು. ಹಾಗಾಗಿ ಸಂಗೀತ ಕಾರ್ಯಕ್ರಮದಲ್ಲಿ ಕುಸಿದು ಬಿದ್ದರು. ಆಸ್ಪತ್ರೆಗೆ ಕರೆದೊಯ್ದಾಗ ಚಿಕಿತ್ಸೆಗೆ ಸ್ಪಂದಿಸಲಾಗದೇ ಯುವಕ-ಯುವತಿ ಸಾವಿಗೀಡಾದರು. ಮತ್ತೊಬ್ಬ ಯುವತಿಯ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು, ದೇಹಸ್ಥಿತಿ ಗಂಭೀರವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಇಬ್ಬರು ಎಂಬಿಎ ವಿದ್ಯಾರ್ಥಿಗಳ ಹಠಾತ್ ಸಾವಿಗೆ ಮಿತಿಮೀರಿದ ಎಂಡಿಎಂಎ ಸೇವನೆಯೇ ಕಾರಣ ಎಂದು ವೈದ್ಯರು ದೃಢಪಡಿಸಿದ್ದಾರೆಂದು ವರದಿಯಾಗಿದೆ. ನೆಸ್ಕೊ ಕೇಂದ್ರದಲ್ಲಿ ಏ.11ರ ರಾತ್ರಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮ ಪ್ರವೇಶಕ್ಕೆ ಟಿಕೆಟ್ ಬೆಲೆ 2000 ರು.ಗಳಷ್ಟಿತ್ತು. ಹಾಗಿದ್ದೂ 4,000ಕ್ಕೂ ಅಧಿಕ ಜನರು ಭಾಗವಹಿಸಿದ್ದರು. ಅವರಲ್ಲಿ ಹಲವರು ಮಾದಕ ದ್ರವ್ಯ ಸೇವಿಸಿ ಭ್ರಮಾಲೋಕದಲ್ಲಿ ತೇಲಾಡುತ್ತಿದ್ದರು.

ಹಲವರು ಬಳಿ ನಿಷೇಧಿತ ಎಂಡಿಎಂಎ ಮಾತ್ರೆಗಳಿದ್ದವು. ಅವುಗಳನ್ನು ವನರಾಯ್ ಠಾಣೆ ಪೊಲೀಸರು ವಶಪಡಿಸಿಕೊಂಡು ಹಲವರನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ ವಿದ್ಯಾರ್ಥಿಗಳಿಗೆ ಎಂಡಿಎಂಎ ಮಾತ್ರೆ ಪೂರೈಸಿದ ಎಂಬಿಎ ವಿದ್ಯಾರ್ಥಿ ಮತ್ತು ಸಂಗೀತ ಕಾರ್ಯಕ್ರಮ ಆಯೋಜಕರೂ ಸೇರಿದ್ದಾರೆ.

ಕಲ್ಲಿದ್ದಲು-ಅಕ್ರಮ ಹಣ ಸಾಗಣೆ ಆರೋಪ

ಐ ಪ್ಯಾಕ್ ಸಹ ಸಂಸ್ಥಾಪಕ ವಿನೇಶ್ ಚಾಂಡೇಲ್ ಸೆರೆ

ಕೋಲ್ಕತ್ತ: ಕಲ್ಲಿದ್ದಲು ಕಳ್ಳಸಾಗಣೆ ಸಂಬಂಧಿಸಿದ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ ಮಾಡಲಾಗಿದೆ ಎಂಬ ಆರೋಪದಡಿ ಚುನಾವಣಾ ತಜ್ಞ ಮತ್ತು ‘ಭಾರತೀಯ ರಾಜಕೀಯ ಕ್ರಿಯಾ ಸಮಿತಿ’(ಐ-ಪ್ಯಾಕ್) ಸಹ ಸಂಸ್ಥಾಪಕ ವಿನೇಶ್ ಚಾಂಡೆಲ್‌ರನ್ನು ಜಾರಿ ನಿರ್ದೇಶನಾಲಯ ಮಂಗಳವಾರ ದೆಹಲಿಯಲ್ಲಿ ಬಂಧಿಸಿದೆ.

ಚುನಾವಣಾ ರಾಜಕೀಯ ತಜ್ಞ ಪ್ರಶಾಂತ್ ಕಿಶೋರ್ ಜತೆಗೂಡಿ ವಿನೇಶ್ ಚಾಂಡೆಲ್ ರಾಜಕೀಯ ಸಲಹಾ ಸೇವಾ ಸಂಸ್ಥೆ ‘ಐ-ಪ್ಯಾಕ್’ ಸ್ಥಾಪಿಸಿದ್ದಾರೆ. ಚಾಂಡೆಲ್ ಪಶ್ಚಿಮ ಬಂಗಾಳದಲ್ಲಿ ವಿಶೇಷವಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಪಕ್ಷದ(ಟಿಎಂಸಿ) ಪರ ಚುನಾವಣಾ ತಂತ್ರ ಹೆಣೆಯುವುದರಲ್ಲಿ ಮತ್ತು ಪ್ರಚಾರ ಕಾರ್ಯ ಯೋಜಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈಗ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿಯೇ ವಿನೇಶ್‌ರನ್ನು ಬಂಧಿಸಿರುವುದು ರಾಜ್ಯ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಟಿಎಂಸಿ ಕಿಡಿ: ಚುನಾವಣೆಗೆ 10 ದಿನ ಇರುವಾಗ ಟಿಎಂಸಿ ಪಕ್ಷದ ಚುನಾವಣಾ ಸಲಹಾಕಾರ ವಿನೇಶ್ ಚಾಂಡೆಲ್‌ರ ಬಂಧನ ಆತಂಕಕಾರಿ. ಇದು ಪ್ರಜಾಪ್ರಭುತ್ವ ಕ್ರಮವಲ್ಲ, ಬೆದರಿಕೆ ಎಂದು ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಕಿಡಿಕಾರಿದ್ದಾರೆ.

ಹಿನ್ನೆಲೆ: ಕಲ್ಲಿದ್ದಲು ಕಳ್ಳಸಾಗಣೆ ಪ್ರಕರಣದ ತನಿಖೆ ಹಲವು ತಿಂಗಳಿಂದ ನಡೆದಿದೆ. ಅಕ್ರಮ ಗಣಿಗಾರಿಕೆಯಲ್ಲಿನ ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿ ಜಾರಿ ನಿರ್ದೇಶನಾಲಯ ಕೋಲ್ಕತ್ತದಲ್ಲಿನ ‘ಐ-ಪ್ಯಾಕ್’ ಕಚೇರಿ ಮತ್ತು ವಿನೇಶ್ ಚಾಂಡೇಲ್ ನಿವಾಸದ ಮೇಲೆ ದಾಳಿ ಮಾಡಿ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿತ್ತು. ಆಗಲೇ ಮುಖ್ಯಮಂತ್ರಿ, ಮಮತಾ ಬ್ಯಾನರ್ಜಿ, ನಿವೇಶ್ ನಿವಾಸಕ್ಕೆ ಧಾವಿಸಿ ‘ಇ.ಡಿ’ ಶೋಧ ಕಾರ್ಯಕ್ಕೆ ಅಡ್ಡಿಪಡಿಸಿದ್ದರು. ಅಲ್ಲದೇ, ತಿಳಿಹಸಿರು ಬಣ್ಣದ ಕಡತವೊಂದನ್ನು ಕೊಂಡೊಯ್ದಿದ್ದರು ಎಂದು ಆರೋಪಿಸಲಾಗಿದೆ. ಈ ವಿಷಯ ಸದ್ಯ ಸುಪ್ರೀಂ ಕೋರ್ಟ್ ವಿಚಾರಣೆಯಲ್ಲಿದೆ.

ಇದೇ ಪ್ರಕರಣದಲ್ಲಿ ದೆಹಲಿ, ಬೆಂಗಳೂರಿನಲ್ಲಿ ರಿಷಿರಾಜ್ ಸಿಂಗ್ ಎಂಬವರ ನಿವಾಸ ಮತ್ತು ಮುಂಬೈ ಮತ್ತಿತರ ನಗರಗಳಲ್ಲಿಯೂ ದಾಳಿ ನಡೆದಿತ್ತು. ನಂತರ ಪ್ರತೀಕ್ ರಾಜ್ ಹಾಗೂ ರಿಷಿರಾಜ್ ಸಿಂಗ್ ಮತ್ತು ಐ-ಪ್ಯಾಕ್‌ನ ಕೆಲವು ಅಧಿಕಾರಿಗಳಿಗೆ ದೆಹಲಿಯಲ್ಲಿ ಇ.ಡಿ. ಕಚೇರಿಗೆ ಏ.17ರಂದು ವಿಚಾರಣೆಗೆ ಬರುವಂತೆ ಇ.ಡಿ ನೋಟಿಸ್ ನೀಡಿತ್ತು. ವಿಚಾರಣೆ ಮೇ ತಿಂಗಳಿಗೆ ಮುಂದೂಡುವಂತೆ ಇಬ್ಬರೂ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಮಾಚಾರ ಸಣ್ಣದಲ್ಲ

ಅಬ್ದುಲ್ ಕಲಾಂ ಕಾಲೇಜು ಸಾಧನೆ

ಬಳ್ಳಾರಿ: ನಗರದ ಹೊರವಲಯದ ಅಲ್ಲೀಪುರದಲ್ಲಿರುವ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು 2025-26ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99 ರಷ್ಟು ಅತ್ಯುತ್ತಮ ಗುಣಾತ್ಮಕ ಫಲಿತಾಂಶ ದಾಖಲಿಸುವ ಮೂಲಕ ಗಮನಾರ್ಹ ಸಾಧನೆ ಮಾಡಿದೆ. ಕಾಲೇಜಿನ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿಂದ ಒಟ್ಟು 108 ವಿದ್ಯಾರ್ಥಿನಿಯರು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. ಇವರಲ್ಲಿ 107 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ಉತ್ತೀರ್ಣರಾದವರಲ್ಲಿ 57 ವಿದ್ಯಾರ್ಥಿನಿಯರು ಅತ್ಯುತ್ತಮ ದರ್ಜೆ,47 ವಿದ್ಯಾರ್ಥಿನಿಯರು ಉತ್ತಮ ದರ್ಜೆ ಹಾಗೂ ಇಬ್ಬರು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ.

ವಾರಸುದಾರರ ಪತ್ತೆಗೆ ಮನವಿ

ಬಳ್ಳಾರಿ: ನಗರದ ಕೌಲ್ ಬಜಾರ್‌ಪೊಲೀಸ್ ಠಾಣೆಯ ವ್ಯಾಪ್ತಿಯ ಬಿಎಂಸಿಆರ್‌ಸಿ ಆಸ್ಪತ್ರೆಯ ಸ್ತ್ರೀ ರೋಗ ಮತ್ತು ಪ್ರಸೂತಿ ವಿಭಾಗದ ವಾರ್ಡ್ ಹತ್ತಿರ ಸುಮಾರು 45 ವರ್ಷದ ಅನಾಮಧೇಯ ವ್ಯಕ್ತಿಯು ಮಲಗಿದ್ದು, ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಈ ಕುರಿತು ಪ್ರಕರಣ ದಾಖಲಾಗಿದ್ದು, ಮೃತನ ವಾರಸುದಾರರ ಬಗ್ಗೆ ಮಾಹಿತಿ ಇರುವುದಿಲ್ಲ. ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ. ಚಹರೆ ಗುರುತು: ಎತ್ತರ 5.8 ಅಡಿ, ಕೋಲುಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ ಹೊಂದಿದ್ದು, ಕಪ್ಪು-ಬಿಳಿ ಕೂದಲು, ಕುರುಚಲು ಗಡ್ಡ ಬಿಟ್ಟಿರುತ್ತಾನೆ. ಹಸಿರು ಬಣ್ಣದ ತುಂಬು ತೋಳಿನ ಅಂಗಿ, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ಇದ್ದಲ್ಲಿ ಕೌಲ್ ಬಜಾರ್ ಪೊಲೀಸ್ ಠಾಣೆಯ ಪಿಐ ಮೊ.9480803047, ಪಿಎಸ್‌ಐ ಮೊ.9480803084, ದೂ.08392-240731 ಅಥವಾ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ.08392-258100 ಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಹನೀಯರ ಆದರ್ಶ ಅಳವಡಿಸಿಕೊಳ್ಳಿ

ಮುದಗಲ್: ಮಹನೀಯರ, ಸಮಾಜ ಸುಧಾರಕರ ಮತ್ತು ಜ್ಞಾನಿಗಳ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ವ್ಯಕ್ತಿತ್ವ ವಿಕಸನಕ್ಕೆ ಅತ್ಯಗತ್ಯ ಎಂದು ಮುದಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ ಗೌಡರ ಹೇಳಿದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪಟ್ಟಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ಹಾಗೂ ಡಾ. ಜಗಜೀವನ ರಾಮ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮೊದಲು ಡಾ. ಬಿ.ಆರ್. ಅಂಬೇಡ್ಕರ್‌ಹಾಗೂ ಡಾ. ಜಗಜೀವನ ರಾಮ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಇದೇ ವೇಳೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಧ್ಯಕ್ಷ ಶರಣಪ್ಪ ಕಟ್ಟಿಮನಿ, ಪಶು ವೈದ್ಯಾಧಿಕಾರಿ ಶರಣಪ್ಪ ನಾಯಕ, ಗ್ರಂಥಾಲಯ ಸಹಾಯಕ ಗ್ಯಾನಪ್ಪ ಧಪೇದರ್,ಜೇಸ್ಕಾಂ ಇಲಾಖೆ ಶಾಖಾಧಿಕಾರಿ ಬೆನ್ನಪ್ಪ,ಸಾರಿಗೆ ಇಲಾಖೆ ಸಿಬ್ಬಂದಿ ಚಂದ್ರಶೇಖರಗೌಡ ಲೆಕ್ಕಿಹಾಳ, ಪ್ರಾಚಾರ್ಯ ಡಾ. ಸಿದ್ದರಾಮ ಪಾಟೀಲ್, ಅವರು ಸಂವಿಧಾನ ಶಿಲ್ಪಿ ಡಾ : ಬಿ, ಆರ್,ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಹೂ ಮಾಲೆ ಹಾಕಿ ಪೂಜೆ ಸಲ್ಲಿಸುವ ಮೂಲಕ ಜಯಂತಿ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಪ್ರವೀಣಕುಮಾರ ಬೋಗಾರ, ಡಿಎಸ್ ಎಸ್ ಮುದಗಲ್ ಘಟಕ ಅಧ್ಯಕ್ಷ ಬಸವರಾಜ ಬಂಕದಮನಿ, ಬಿಜೆಪಿ ನಗರ ಘಟಕ ಅಧ್ಯಕ್ಷ ಕರಿಯಪ್ಪ ಯಾದವ, ತಾ, ಪಂ, ಕೆಡಿಪಿ ಸದಸ್ಯ ಪರಮೇಶ ಕನ್ನಾಪುರುಹಟ್ಟಿ ಸೇರಿದಂತೆ ಮುಂತಾದವರು ಇದ್ದರು.

ವ್ಯಕ್ತಿ ಕಾಣೆ: ಪತ್ತೆಗೆ ಮನವಿ

ಬಳ್ಳಾರಿ: ನಗರದ ಬ್ರೂಸ್ಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಎಂ.ಸಂಜಯ್ ನಾಯ್ಕ್ ಎನ್ನುವ 39 ವರ್ಷದ ವ್ಯಕ್ತಿ ಮಾ.8 ರಂದು ಹೊರ ಹೋಗಿ ಬರುವುದಾಗಿ ಹೇಳಿ ಮರಳಿ ಮನೆಗೆ ಬಾರದೇ ಕಾಣೆಯಾಗಿರುವ ಕುರಿತು ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಠಾಣಾಧಿಕಾರಿ ಮನವಿ ಮಾಡಿದ್ದಾರೆ. ವ್ಯಕ್ತಿಯ ಚಹರೆ: ಎತ್ತರ 5 ಅಡಿ, ದುಂಡು ಮುಖ, ಸಾಧಾರಣ ಮೈಕಟ್ಟು, ಕಪ್ಪು ಮತ್ತು ಬಿಳಿ ಕೂದಲು ಹೊಂದಿದ್ದು, ಎಡತೊಡೆಯ ಮೇಲೆ ಕಪ್ಪು ಮಚ್ಚೆ ಇರುತ್ತದೆ. ಕಾಣೆಯಾದ ಸಂದರ್ಭದಲ್ಲಿ ಗುಲಾಬಿ ಬಣ್ಣದ ಟೀ-ಶರ್ಟ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಕನ್ನಡ, ತೆಲುಗು, ಹಿಂದಿ ಹಾಗೂ ಭೋಜ್ಪುರಿ ಭಾಷೆ ಮಾತನಾಡುತ್ತಾನೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ.08392-258100 ಕರೆ ಮಾಡಿ ಮಾಹಿತಿ ನೀಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಡಾ.ಜಿ.ಪರಮೇಶ್ವರ,} ಗೃಹ ಸಚಿವ

ಸಂಪುಟ ಪುನಾರಚನೆಯ ಸುಳಿವು ಇದೆ. ಮೂರ್ನಾಲ್ಕು ಬಾರಿ ಶಾಸಕರಾದವರು ಸಚಿವ ಸ್ಥಾನ ಕೇಳೋದು ಅವರ ಹಕ್ಕು ಅದರಲ್ಲಿ ತಪ್ಪೇನಿಲ್ಲ. ಆದರೆ ಸಿಎಂ ಬದಲಾವಣೆ ವಿಚಾರ ಆಗಲಿ ಅಥವಾ ಸಂಪುಟ ಪುನಾರಚನೆ ಆಗಲಿ ಎಲ್ಲವೂ ಹೈಕಮಾಂಡ್ ನಿರ್ಧಾರ ಮಾಡುತ್ತದೆ.

ಬಳ್ಳಾರಿಯಲ್ಲಿ ಜಿಲ್ಲಾಡಳಿತದಿಂದ ಡಾ.ಅಂಬೇಡ್ಕರ್ ಜಯಂತಿ ಸಮಾರಂಭ | ಶಾಸಕ ನಾರಾ ಭರತ್ ರೆಡ್ಡಿ ಹೇಳಿಕೆ

ಹತ್ತು ಕೋಟಿ ವೆಚ್ಚದಲ್ಲಿ ಅಂಬೇಡ್ಕರ್ ಲೈಬ್ರರಿ

ವಿಶ್ವವಾಣಿ ಸುದ್ದಿಮನೆ ಬಳ್ಳಾರಿ:

ಅಂಬೇಡ್ಕರ್‌ಅವರ ಆಶಯಗಳನ್ನು ಉಳಿಸಲು ಪ್ರತಿಯೊಂದು ಮನೆಯಲ್ಲೂ ಒಬ್ಬರು ಐಎಎಸ್, ಐಪಿಎಸ್, ಇಂಜಿನಿಯರ್,ಡಾಕ್ಟರ್,ಒಟ್ಟಿನಲ್ಲಿ ಉನ್ನತ ವ್ಯಾಸಂಗ ಪಡೆದ ವಿದ್ಯಾವಂತರು ಇರಬೇಕು. ಇದೇ ಉದ್ದೇಶದಿಂದ ಬಳ್ಳಾರಿ ನಗರದಲ್ಲಿ ಅಂಬೇಡ್ಕರ್‌ಅವರ ಹೆಸರಿನಲ್ಲಿ 10 ಕೋಟಿ ರು. ವೆಚ್ಚದಲ್ಲಿ ಸುಸಜ್ಜಿತ ಗ್ರಂಥಾಲಯ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಮಂಗಳವಾರ ಏರ್ಪಡಿಸಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಅವರ 135ನೇ ಜನ್ಮದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಮೈಸೂರು ಭಾಗದ ದಲಿತರು ಶಿಕ್ಷಣದಲ್ಲಿ ಮುಂದಿರುವುದರಿಂದ ತಮ್ಮ ಹಕ್ಕುಗಳಿಗಾಗಿ ಸಮರ್ಥವಾಗಿ ಹೋರಾಡುತ್ತಿದ್ದಾರೆ, ಆದರೆ ನಮ್ಮ ಭಾಗದಲ್ಲಿ ಶಿಕ್ಷಣದ ಕೊರತೆ ಇರುವುದರಿಂದ ಜನರು ಇನ್ನೂ ಮುಗ್ಧರಾಗಿದ್ದಾರೆ. ಹಾಗಾಗಿ ಈ ಗ್ರಂಥಾಲಯದ ಮೂಲಕ ಬಳ್ಳಾರಿಯ ಮಕ್ಕಳು ಓದಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಾಗಿ, ಇಂಜಿನಿಯರ್,ಡಾಕ್ಟರ್ ಗಳಾಗಿ ಹೊರಹೊಮ್ಮಬೇಕು. ಈ ಯೋಜನೆಯ ಕುರಿತು ಜಿಲ್ಲಾಧಿಕಾರಿಯವರೊಂದಿಗೆ ಈಗಾಗಲೇ ಮೌಖಿಕವಾಗಿ ಚರ್ಚಿಸಲಾಗಿದೆ ಎಂದು ತಿಳಿಸಿದರು.

ನಗರದ ಡಾ.ರಾಜ್ ಕುಮಾರ್‌ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಸಮಾರಂಭವನ್ನು ಶಾಸಕ ನಾರಾ ಭರತ್ ರೆಡ್ಡಿ ಅವರು ಉದ್ಘಾಟಿಸಿದರು.

ಅಸ್ಪೃಶ್ಯತೆ ಕೇವಲ ದೈಹಿಕವಾಗಿ ನಿರ್ಮೂಲನೆಯಾದರೆ ಸಾಲದು. ಅದು ಇಂದಿಗೂ ಜನರ ಮನಸ್ಸಿನಲ್ಲಿ ಬೇರೂರಿದೆ ಎಂದು ವಿಷಾದ ವ್ಯಕ್ತಪಡಿಸಿದ ಶಾಸಕರು, ಅಂಬೇಡ್ಕರ್‌ಅವರು ಮೀಸಲಾತಿಯನ್ನು ನೀಡಿದ್ದು ಕೇವಲ ಮೀಸಲು ಕ್ಷೇತ್ರಗಳಿಗೆ ಸೀಮಿತವಾಗಲು ಅಲ್ಲ; ಬದಲಾಗಿ ದಲಿತರು ಸಾಮಾನ್ಯ ಕ್ಷೇತ್ರಗಳಲ್ಲೂ ಸ್ಪರ್ಧಿಸಿ ಮುಂಚೂಣಿಗೆ ಬರಬೇಕು ಎಂಬುದು ಅವರ ಆಶಯವಾಗಿತ್ತು ಎಂದು ತಿಳಿಸಿದರು.

ಅಂಬೇಡ್ಕರ್‌ಅವರು ನೀಡಿದ ಸಂವಿಧಾನವೇ ನಮಗೆ ದೊಡ್ಡ ಆಯುಧವಾಗಿದ್ದು, ಅದನ್ನು ಗೌರವಿಸಿ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯೋಣ. ದಲಿತರಿಗೆ ಮೀಸಲಾತಿ ಎಂಬುದು ಸಂವಿಧಾನಬದ್ಧ ಹಕ್ಕು. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ದಲಿತರಿಗೆ ಎಂದಿಗೂ ಅನ್ಯಾಯ ಮಾಡುವುದಿಲ್ಲ ಎಂದು ಅಭಿಮತ ವ್ಯಕ್ತಪಡಿಸಿದರು.

ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ಮಾತನಾಡಿ, ಹಿಂದೂಗಳಿಗೆ ಭಗವದ್ಗೀತೆ, ಮುಸ್ಲಿಮರಿಗೆ ಕುರಾನ್, ಕ್ರೈಸ್ತರಿಗೆ ಬೈಬಲ್ ಇರುವಂತೆ, ಭಾರತೀಯರೆಲ್ಲರೂ ಒಂದೇ ಸೂರಿನಡಿ ಸಾಗಲು 'ಸಂವಿಧಾನ''ವೇ ಪರಮ ಶ್ರೇಷ್ಠ ಗ್ರಂಥವಾಗಿದೆ ಎಂದು ಅಭಿಪ್ರಾಯಪಟ್ಟರು.

ಅಂಬೇಡ್ಕರ್‌ಅವರು ಎಲ್ಲ ಜಾತಿ, ಧರ್ಮದ 18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ಸಮಾನ ಮತದಾನದ ಹಕ್ಕನ್ನು ತಂದುಕೊಟ್ಟವರು. ಅಂಬೇಡ್ಕರ್ ಅವರು ಬರೆದ 'ದ ಪ್ರಾಬ್ಲಮ್ ಆಫ್ ದಿ ರೂಪಿ'' ಪ್ರಬಂಧದ ಆಧಾರದ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯಾಯಿತು. ಅವರ ಆರ್ಥಿಕ ಚಿಂತನೆಗಳ ಫಲವಾಗಿಯೇ ಇಂದು ಬ್ಯಾಂಕುಗಳು ಸಾಮಾನ್ಯ ಜನರ ಮನೆಬಾಗಿಲಿಗೆ ತಲುಪಿವೆ ಮತ್ತು ರಾಷ್ಟ್ರೀಕರಣಗೊಂಡಿವೆ ಎಂದು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅವರ ಕೊಡುಗೆಯನ್ನು ಶ್ಲಾಘಿಸಿದರು.

ಮಹಿಳೆಯರಿಗೆ ಸಮಾನ ಹಕ್ಕು ಮತ್ತು ಆಸ್ತಿಯಲ್ಲಿ ಪಾಲು ನೀಡುವ 'ಹಿಂದೂ ಕೋಡ್ ಬಿಲ್'' ಅನ್ನು ಸಂಸತ್ತಿನಲ್ಲಿ ಮಂಡಿಸಿದರು. ಮಹಿಳೆಯರಿಗೆ ಸಮಾನತೆ ಸಿಗಬೇಕೆಂಬ ಉದ್ದೇಶದಿಂದ ಅವರು ತಮ್ಮ ಮಂತ್ರಿ ಪದವಿಗೇ ರಾಜೀನಾಮೆ ನೀಡಿದ ಘಟನೆಯನ್ನು ಮೆಲುಕು ಹಾಕಿದ ಅವರು, ಮಹಿಳೆಯರ ಉದ್ಧಾರಕ್ಕಾಗಿ ಅಂಬೇಡ್ಕರ್‌ಮತ್ತು ಸಾವಿತ್ರಿಬಾಯಿ ಫುಲೆ ಅವರ ಕೊಡುಗೆಗಳನ್ನು ಸ್ಮರಿಸಿದರು.

ಮಹಾನಗರ ಪಾಲಿಕೆಯ ಮಹಾಪೌರ ಪಿ.ಗಾದೆಪ್ಪ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್ ಮಾತನಾಡಿದರು.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಪ್ರೊ.ಎನ್.ಚಿನ್ನಸ್ವಾಮಿ ಸೋಸಲೆ ಅವರು ಡಾ.ಬಿ.ಆರ್.ಅಂಬೇಡ್ಕರ್‌ಅವರ ಜೀವನಗಾಥೆ, ವಿಚಾರಧಾರೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಲ್ಲಾ ಡಾ.ಬಿ.ಆರ್.ಅಂಬೇಡ್ಕರ್‌ಸಂಘದ ಅಧ್ಯಕ್ಷ ಎಚ್ .ತಿಪ್ಪೇಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್,ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ. ಎನ್. ಬಸವರಾಜ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್ ಮಂಜುನಾಥ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ ಸೇರಿದಂತೆ ಇತರರಿದ್ದರು.

ಅದ್ದೂರಿ ಸ್ತಬ್ಧಚಿತ್ರ ಮೆರವಣಿಗೆ

ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಮೆರವಣಿಗೆಯು ನಗರದಲ್ಲಿ ಅದ್ದೂರಿಯಾಗಿ ನಡೆಯಿತು. ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಗೆ ಮೆರಗು ನೀಡಿದವು.

ಇಲ್ಲಿ ಅಂಬೇಡ್ಕರ್ ಜನಿಸಿದ್ದೇ ನಮ್ಮ ಪುಣ್ಯ

ಹರಪನಹಳ್ಳಿ: ಜಯಂತಿ ದಿನ ಮಾತ್ರ ಡಾ.ಬಿ.ಆರ್. ಅಂಬೇಡ್ಕರ ರವರನ್ನು ನೆನಪು ಮಾಡಿಕೊಳ್ಳದೆ, ಅವರ ಆದರ್ಶ,ಸಿದ್ಧಾಂತಗಳಲ್ಲಿ ಕೆಲವನ್ನಾದರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಅವರು ನಗರದ ನಟರಾಜ ಕಲಾಭವನದಲ್ಲಿ ತಾಲೂಕು ಆಡಳಿತ, ತಾ.ಪಂ, ನಗರಸಭೆ, ಸಮಾಜ ಕಲ್ಯಾಣ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ರವರ 135ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕಿನ ಪ್ರತಿ ಹಳ್ಳಿಗಳಲ್ಲಿ ಪ್ರತ್ಯೇಕವಾಗಿ ಜಯಂತಿ ಆಚರಣೆ ಮಾಡುವುದಕ್ಕಿಂತ ಎಲ್ಲಾ ಸಂಘ ಸಂಸ್ಥೆಗಳು ಕುಳಿತು ಚರ್ಚಿಸಿ ತಾಲೂಕು ಕೇಂದ್ರದಲ್ಲಿ ಎಲ್ಲರೂ ಸೇರಿ ಇನ್ನೂ ಅದ್ದೂರಿಯಾಗಿ ಅಂಬೇಡ್ಕರ ಜಯಂತಿ ಆಚರಿಸಬಹುದಲ್ಲ ಎಂದು ಸಲಹೆ ನೀಡಿದರು.

ಆ ರೀತಿ ಆಚರಿಸಿ ರಾಜ್ಯಕ್ಕೆ ಮಾದರಿಯಾಗಬಹುದು, ಮುಂದಿನ ವರ್ಷ ಎಲ್ಲರೂ ಸೇರಿ ತಾಲೂಕು ಕೇಂದ್ರದಲ್ಲಿ ಅಂಬೇಡ್ಕರ ಜಯಂತಿ ಆಚರಿಸಿದರೆ, ನನಗೆ ಒಂದು ತಿಂಗಳು ಮುಂಚೆ ತಿಳಿಸಿದರೆ ನಾನು ಎಲ್ಲಾ ರೀತಿಯ ಸಹಕಾರ ಕೊಡುತ್ತೇನೆ ಇದು ನನ್ನಮ ಸಲಹೆ ಅಷ್ಟೆ ಎಂದು ನುಡಿದರು.

ಕಂದಾಯ ಉಪವಿಭಾಗಾಧಿಕಾರಿ ಟಿ.ಸುರೇಶಕುಮಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಬಾಬು ಜಗಜೀವನ ರಾಂ ಅವರು ಹಸಿರು ಕ್ರಾಂತಿ ಮಾಡಿ, ಅಸ್ಪೃಶ್ಯತೆ ಹೋಗಲಾಡಿಸಿ, ಸಮಾನತೆ ತರಲು ಹೋರಾಟ ನಡೆಸಿದರು, ಡಾ. ಅಂಬೇಡ್ಕರ ರವರು ಬಹುಮುಖ ಪ್ರತಿಭೆಯಾಗಿದ್ದು, ಅವರು ಈ ನೆಲದಲ್ಲಿ ಜನಿಸಿದ್ದು ನಮ್ಮ ಪುಣ್ಯ ಎಂದ ಅವರು ನನ್ನ ಹೋರಾಟ ಮುಂದುವರೆಸಿ ಹಿಂದಕ್ಕೆ ಮಾತ್ರ ಕೊಂಡೊಯ್ಯಬೇಡಿ ಎಂದು ಹೇಳಿದ್ದಾರೆ ಎಂದರು.

ಹರಪನಹಳ್ಳಿ ನಗರದ ನಟರಾಜ ಕಲಾಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ ರವರ ಜಯಂತ್ಯುತ್ಸವವನ್ನು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಉದ್ಘಾಟಿಸಿದರು.

ಮುಂದಿನ ವರ್ಷ ಎಲ್ಲರೂ ಸೇರಿ ತಾಲೂಕು ಕೇಂದ್ರದಲ್ಲಿ ಅಂಬೇಡ್ಕರ ಜಯಂತಿ ಆಚರಿಸಿದರೆ, ನನಗೆ ಒಂದು ತಿಂಗಳು ಮುಂಚೆ ತಿಳಿಸಿದರೆ ನಾನು ಎಲ್ಲಾ ರೀತಿಯ ಸಹಕಾರ ಕೊಡುತ್ತೇನೆ ಇದು ನನ್ನ ಸಲಹೆ ಅಷ್ಟೆ.

-ಎಂ.ಪಿ.ಲತಾ ಮಲ್ಲಿಕಾರ್ಜುನ, ಶಾಸಕಿ

ಡಾ.ಅಂಬೇಡ್ಕರ ಆಶಯದಂತೆ ನಡೆದುಕೊಂಡು ಜಾತ್ಯಾತೀತ , ಸಮಾನತೆಯ ರಾಷ್ಟ್ರ ಕಟ್ಟೋಣ ಎಂದು ತಿಳಿಸಿದರು.

ಕೊಟ್ಟೂರಿನ ಪ್ರಾಧ್ಯಾಪಕ ಡಾ.ಸತೀಶ ಪಾಟೀಲ್ ಹಾಗೂ ನಂದಿಬೇವೂರು ಶಿಕ್ಷಕ ಬಿ.ವಸಂತ ಅಂಬೇಡ್ಕರ ಕುರಿತು ಉಪನ್ಯಾಸ ನೀಡಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಆರ್.ಗಂಗಪ್ಪ ಪ್ರಸ್ತಾವಿಕವಾಗಿ ಮಾತನಾಡಿದರು.

ಇದಕ್ಕೂ ಪೂರ್ವದಲ್ಲಿ ಡಾ.ಬಿ.ಆರ್. ಅಂಬೇಡ್ಕರ ವೃತ್ತದಿಂದ ಕಾರ್ಯಕ್ರಮ ನಡೆಯುವ ನಟರಾಜ ಕಲಾಭವನಕ್ಕೆ ಅಂಬೇಡ್ಕರ ಭಾವಚಿತ್ರ ವನ್ನು ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಕುಬೇರಗೌಡ, ಡಿವೈಎಸ್ಪಿ ಸಂತೋಷ ಚವ್ಹಾಣ, ತಹಶೀಲ್ದಾರ್ ಬಿ.ವಿ.ಗಿರೀಶಬಾಬು, ತಾ.ಪಂ ಇಒ ಚಂದ್ರಶೇಖರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎಸ್. ಆರ್.ಗಂಗಪ್ಪ, ಬಿಇಒ ಎಚ್.ಲೇಪಾಕ್ಷಪ್ಪ, ನಗರಸಭೆ ಪೌರಾಯುಕ್ತೆ ರೇಣುಕಾ ಎಸ್ .ದೇಸಾಯಿ, ಲಾಟಿದಾದಾಪೀರ, ಭೀಮಪ್ಪ, ಅಬ್ದುಲ್ ರಹಿಮಾನ್, ಮೈದೂರು ರಾಮಣ್ಣ, ಹುಲ್ಲಿಕಟ್ಟಿ ಚಂದ್ರಪ್ಪ, ಗುಂಡಗತ್ತಿ ಕೊಟ್ರಪ್ಪ, ಮೈಲಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಟಾನ ಸಮಿತಿ ಅಧ್ಯಕ್ಷ ಉದಯಶಂಕರ, ಸುಭಾಷ್, ಎಲ್. ಮಂಜ್ಯಾನಾಯ್ಕ, ಯಾಸ್ಮೀನ್, ಎನ್ .ಜಿ.ಬಸವರಾಜ, ಮತ್ತು ಇತರರು ಇದ್ದರು.

ಅಂಬೇಡ್ಕರ್ ಹೋರಾಟದ ಬದುಕು ಮಾದರಿ

ರಾಯಚೂರು: ಜಗತ್ತಿನ ಶ್ರೇಷ್ಠ ಜ್ಞಾನಿಯಾಗಿದ್ದ ಅಂಬೇಡ್ಕರ್‌ಅವರು ತಮ್ಮ ಪ್ರತಿಭೆಯನ್ನು ಮನುಕುಲದ ಉದ್ಧಾರಕ್ಕಾಗಿ ಮುಡಿಪಾಗಿಟ್ಟರು. ಅವರ ಆದರ್ಶಗಳನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಡಾ.ಶಿವರಾಜ ಪಾಟೀಲ್ ಅವರು ಹೇಳಿದರು.

ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಹಭಾಗಿತ್ವದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್‌ಅವರ 135 ನೇ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಗತ್ತಿನಲ್ಲಿ ಶಾಂತಿಯುತ, ಸಮೃದ್ಧಿಯಾಗಿ ಯಾವುದಾದರೂ ದೇಶ ಇದ್ದಾರೆ. ಅದು ಭಾರತ ದೇಶವಾಗಿದೆ. ಇದಕ್ಕೆ ಮೂಲ ಕಾರಣ ಡಾ.ಬಿ.ಆರ್.ಅಂಬೇಡ್ಕರ್‌ಅವರ ಭಾರತ ಸಂವಿಧಾನವಾಗಿದೆ. ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಓದಬೇಕು. ವಿದ್ಯಾರ್ಥಿಗಳಿಗೆ ಡಾ.ಬಿ.ಆರ್.ಅಂಬೇಡ್ಕರ್‌ಅವರು ಪ್ರೇರಣೆಯಾಗಬೇಕು ಎಂದರು.

ಪ್ರಭಾರಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್‌ಕಾಂದೂ ಅವರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ವ್ಯಕ್ತಿತ್ವ ಬಹಳ ದೊಡ್ಡದಾಗಿತ್ತು. ಸಂವಿಧಾನ, ಕಾನೂನು, ಆರ್ಥಿಕ ವಿಷಯಗಳಲ್ಲಿ ತಜ್ಞರಾಗಿ ಮಾತ್ರವಲ್ಲದೇ ಪ್ರಪಂಚದ ಎಲ್ಲಾ ವಿಷಯಗಳಲ್ಲಿ ಪರಿಣಿತರಾಗಿದ್ದರು. ಪ್ರತಿಯೊಬ್ಬರೂ ಅವರ ತೋರಿಸಿದ ಮಾರ್ಗದಲ್ಲಿ ನಡೆಯಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದ ಉಪನ್ಯಾಸಕರಾಗಿ ಹಿರಿಯ ವಿದ್ವಾಂಸ ಡಾ.ಬಿ.ಎಂ.ಪುಟ್ಟಯ್ಯ ಅವರು ಮಾತನಾಡಿದರು. ದ್ವಿತೀಯ ಪಿಯುಸಿಯಲ್ಲಿ ಅತಿಹೆಚ್ಚು ಅಂಕಗಳನ್ನು ಗಳಿಸಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಾದ ಸ್ನೇಹ, ಸಂಗೀತಾ ಹಾಗೂ ಗೀತಾ ಅವರಿಗೆ ಈ ಸಂದರ್ಭದಲ್ಲಿ ವಿವಿಧ ಗಣ್ಯರು ಸನ್ಮಾನಿಸಿ, ಗೌರವಿಸಿದರು.

ಕಾರ್ಯಕ್ರಮದಲ್ಲಿ ಬೀದರ್‌ಬುದ್ಧ ವಿಹಾರನ ಬಂತೇಜಿ ಯಾಕತ್ಪೂರ್,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ, ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಾಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ಸಹಾಯಕ ಆಯುಕ್ತ ಡಾ. ಹಂಪಣ್ಣ ಸಜ್ಜನ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ, ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ್ ,ರಾಯಚೂರು ತಹಸೀಲ್ದಾರ್ ಸುರೇಶ್ ವರ್ಮ,ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪ್ರವೀಣ್ ಕುಮಾರ್,ಆದಿಜಾಂಭವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಾಜೇಂದ್ರ ಜಲ್ದಾರ್‌ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜದ ಮುಖಂಡರು ಭಾಗವಹಿಸಿದ್ದರು.

ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ಅವರ 135 ನೇ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಡಾ.ಶಿವರಾಜ ಪಾಟೀಲ್ ಅವರು ಮಾತನಾಡಿದರು.



ಹರಪನಹಳ್ಳಿ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ(ಟಿಎಪಿಸಿಎಂಎಸ್)ಆಡಳಿತ ಮಂಡಳಿಗೆ ನೂತನವಾಗಿ ಆಯ್ಕೆಯಾದ ನಿರ್ದೇಶಕರು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರನ್ನು ಸನ್ಮಾನಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ, ಚಿಗಟೇರಿ ಬ್ಲಾಕ್ ಅಧ್ಯಕ್ಷ ಕುಬೇರಗೌಡ, ವಕೀಲರ ಸಂಘದ ಅಧ್ಯಕ್ಷ ಟಿ.ವೆಂಕಟೇಶ, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಲಾಟಿ ದಾದಪೀರ, ಟಿಎಪಿಸಿಎಂಎಸ್ ನಿರ್ದೇಶಕರಾದ ತೆಲಿಗಿ ಉಮಾಕಾಂತ, ಮುಜುಬರ್‌ರೆಹಮಾನ್, ಚಿಕ್ಕೇರಿ ಬಸಪ್ಪ, ದಂಡಿನ ಹರೀಶ, ನೀಲಗುಂದ ವಾಗೀಶ, ಎಚ್.ತಿಮ್ಮನಾಯ್ಕ್ ಸೇರಿರಿದಂತೆ ಇತರರು ಇದ್ದರು.

ಸಂವಿಧಾನದ ಆಶಯಕ್ಕೆ ಧಕ್ಕೆ ತರುವ ಕೆಲಸ ಆಗಬಾರದು

ಮಸ್ಕಿ: ಡಾ. ಅಂಬೇಡ್ಕರ್ ಅವರು ಸಮ ಸಮಾಜ ನಿರ್ಮಾಣಕ್ಕೆ ಸಾಕಷ್ಟು ಪ್ರಯತ್ನ ಪಟ್ಟಿದ್ದರು ಎಂದು ಖಾದಿ ಗ್ರಾಮದ್ಯೋಗ ನಿಗಮ ಮಂಡಳಿ ಅಧ್ಯಕ್ಷ, ಶಾಸಕ ಬಸನಗೌಡ ತುರ್ವಿಹಾಳ ಹೇಳಿದರು.

ಇಲ್ಲಿಯ ಭ್ರಮರಾಂಬ ಕಲ್ಯಾಣ ಮಂಟಪ ಬಳಿ ತಾಲೂಕಾಡಳಿತ ವತಿಯಿಂದ ಹಮ್ಮಿಕೊಂಡಿದ್ದ ಡಾ. ಅಂಬೇಡ್ಕರ್,ಬಾಬು ಜಗ ಜೀವನ್ ರಾಮ್ ಅವರ ಜ ಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅಂಬೇಡ್ಕರ್‌ಅವರು ಶೋಷಿತ ಸಮುದಾಯಗಳ ಧ್ವನಿಯಾಗಿದ್ದರು. ಸಂವಿಧಾನದ ಆಶಯಗಳಿಗೆ ಧಕ್ಕೆ ತರುವ ಕೆಲಸ ಯಾರೂ ಮಾಡಬಾರದು ಎಂದರು. ಟಿಪಿಯುಸಿ ರಾಜ್ಯಾಧ್ಯಕ್ಷ ಮಾನಸಯ್ಯ ಅವರು ಮಾತನಾಡಿ, ಅಂಬೇಡ್ಕರ ರಚಿಸಿದ ಸಂವಿಧಾನ ಬದಲಾಯಿಸಲು ಹುನ್ನಾರ ನಡೆದಿದೆ. ಶೋಷಿತ ಸಮುದಾಯಗಳ ಜನರು ಎಚ್ಚರದಿಂದರಬೇಕು ಎಂದರು. ಕೆಲ ಸಮುದಾಯಗಳ ಜನರ ಮನೆಗಳಲ್ಲಿ ಅಂಬೇಡ್ಕರ್,ಬುದ್ಧನ ಭಾವ ಚಿತ್ರಗಳು ಕಂಡು ಬರುವುದಿಲ್ಲ ಅಸ್ಪೃಶತೆ ಇನ್ನು ಜೀವಂತವಿದೆ ಎಂದು ಕಳವಳ ವ್ಯಕ್ತ ಪಡಿಸಿದರು. ತಹಸಿಲ್ದಾರ್ ಮಂಜುನಾಥ ಭೋಗಾವತಿ, ತಾಪಂ. ಅಧಿಕಾರಿ ಅಮರೇಶ ಯಾದವ್ , ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಸಿಪಿಐ ರಾಮಣ್ಣ ಜಲಗೇರಿ, ಎಪಿಎಂಸಿ ಅಧ್ಯಕ್ಷ ಸಿದ್ದನ ಗೌಡ ಮಾಟೂರು, ಎಂಜಿನಿಯರ್ ದಾವೂದ್, ರಾಮ ಸ್ವಾಮಿ ಇದ್ದರು.

ಮಸ್ಕಿಯ ಭ್ರಮರಾಂಬ ಕಲ್ಯಾಣ ಮಂಟಪ ಬಳಿ ನಡೆದ ಅಂಬೇಡ್ಕರ್‌ಜಯಂತಿಗೆ ಶಾಸಕ ಬಸನಗೌಡ ತುರ್ವಿಹಾಳ ಚಾಲನೆ ನೀಡಿದರು.

ಕೊಪ್ಪಳದ ಸಾಹಿತ್ಯಭವನದಲ್ಲಿ ಜಿಲ್ಲಾಡಳಿತದಿಂದ ಅಂಬೇಡ್ಕರ್ ಜಯಂತಿ | ಸಂಸದ ರಾಜಶೇಖರ ಹಿಟ್ನಾಳ ಅಭಿಮತ

ದೇಶದ ಸರ್ವರಿಗೂ ಸಮಾನ ಶಕ್ತಿ ತುಂಬಿದ ಅಂಬೇಡ್ಕರ್ ಸಂವಿಧಾನ

ವಿಶ್ವವಾಣಿ ಸುದ್ದಿಮನೆ ಕೊಪ್ಪಳ:

ದೇಶದ ಎಲ್ಲರಿಗೂ ಸಮಾನ ಅವಕಾಶ ಸಿಗುವಂತೆ ಸಂವಿಧಾನದ ಮೂಲಕ ಅವಕಾಶ ಕಲ್ಪಿಸಿಕೊಟ್ಟ ಡಾ.ಬಿ.ಆರ್. ಅಂಬೇಡ್ಕರ್ ಅವರು ಎಲ್ಲರಿಗೂ ಶಕ್ತಿ ಆಗಿದ್ದಾರೆ ಎಂದು ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಹೇಳಿದರು.

ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್‌ಅವರ 135ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಮಂಗಳವಾರ ಮಾತನಾಡಿದರು.

ಅಸಮಾನತೆಯಿಂದ ಕೂಡಿದ್ದ ಭಾರತದಲ್ಲಿ ಸಮಾನತೆ ತರಲು ಹಾಗೂ ಮೇಲು-ಕೀಳು, ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ಹೋಗಲಾಡಿಸಲು ಶಿಕ್ಷಣ, ಸಂಘಟನೆ, ಹೋರಾಟದ ಮೂಲಕ ಸಮ ಸಮಾಜ ನಿರ್ಮಿಸಲು ಡಾ. ಬಿ.ಆರ್. ಅಂಬೇಡ್ಕರ್‌ಹಲವಾರು ಹೋರಾಟ, ಚಳುವಳಿ ಮಾಡಿದರು. ಹಿಂದುಳಿದವರು, ಮಹಿಳೆಯರು ಹಾಗೂ ಅಲ್ಪಸಂಖ್ಯಾತರಿಗೆ ಬದುಕು ಕಟ್ಟಿಕೊಳ್ಳಲು ಅಂಬೇಡ್ಕರ್‌ರಚಿಸಿದ ಸಂವಿಧಾನ ನಮ್ಮೆಲ್ಲರಿಗೂ ಶಕ್ತಿಯಾಗಿದೆ. ಅವರ ಚಿಂತನೆ ಎಲ್ಲ ವರ್ಗದವರಿಗೂ ರಾಜಕೀಯ, ಸಾಮಾಜಿಕ, ಆರ್ಥಿಕ ಸಮಾನತೆ ನೀಡಿದ್ದಾರೆ. ಇದನ್ನು ನಾವುಗಳು ಸಂವಿಧಾನದ ಪೀಠಿಕೆ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಕಾಣಬಹುದು. ಇಂತಹ ಸಂವಿಧಾನದ ಪೀಠಿಕೆ ಪ್ರಸ್ತಾವನೆಯ ಸ್ಮಾರಕವನ್ನು ಕೊಪ್ಪಳದ ಜಿಲ್ಲಾಡಳಿತ ಭವನದ ಆವರಣದಲ್ಲಿ ಅನಾವರಣ ಮಾಡಲಾಗಿದ್ದು, ಸಂತೋಷದ ವಿಚಾರ ಎಂದರು.

ಕೊಪ್ಪಳದ ಸಾಹಿತ ಭವನದಲ್ಲಿ ಆಯೋಜಿಸಿದ್ದ ಅಂಬೇಡ್ಕರ್‌ಜಯಂತಿ ಕಾರ್ಯಕ್ರಮವನ್ನು ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಉದ್ಘಾಟಿಸಿದರು.

ಅಂಬೇಡ್ಕರ್‌ತಮ್ಮ ಜ್ಞಾನದ ಮೂಲಕ ಹಲವಾರು ಪದವಿ ಪಡೆದು, ಕಾನೂನು ಮತ್ತು ಆರ್ಥಿಕ ತಜ್ಞರಾಗಿ, ದೇಶದ ಸಂವಿಧಾನ ಕರಡು ರಚನಾ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡಿ, ದೇಶಕ್ಕೆ ಸಂವಿಧಾನ ನೀಡಿದ್ದಾರೆ. ಇದರ ಫಲವಾಗಿ ಎಲ್ಲರಿಗೂ ಸಾಮಾಜಿಕ ಶಿಕ್ಷಣ, ನ್ಯಾಯ ಮತ್ತು ಸಮಾಜಿಕ ಸ್ವಾತಂತ್ರ್ಯತೆ ಸಿಕ್ಕಿದೆ ಎಂದು ಹೇಳಿದರು.

ಎಂಎಲ್ಸಿ ಹೇಮಲತಾ ನಾಯಕ, ಜಿಲ್ಲಾಧಿಕಾರಿ ಡಾ. ಸುರೇಶ್ ಬಿ. ಇಟ್ನಾಳ ಮಾತನಾಡಿದರು.

ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲೂಕು ರಾಮಸಾಗರದ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕ ಸುಗ್ಗೇನಹಳ್ಳಿ ರಮೇಶ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಎಸ್ಪಿ ಡಾ. ರಾಮ್ ಎಲ್. ಅರಸಿದ್ದಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ನಿರ್ಮಲಾ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಟಿ.ಕೃಷ್ಣಮೂರ್ತಿ,ಡಾ. ಬಿ.ಆರ್‌ಅಂಬೇಡ್ಕರ್‌ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಪುಷ್ಪಲತಾ, ಡಿಡಿಪಿಯು ಜಗದೀಶ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ನಾಗಮಣಿ ಹೊಸಮನಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಮಂಜುನಾಥ ಗೊಂಡಬಾಳ, ಸಮಾಜದ ಮುಖಂಡರಾದ ಗೂಳಪ್ಪ ಹಲಗೇರಿ, ಗಾಳೆಪ್ಪ ಪೂಜಾರ, ಮುತ್ತುರಾಜ ಕುಷ್ಟಗಿ, ಯಲ್ಲಪ್ಪ ಬಳಗಾನೂರ, ಸಿದ್ರಾಮ ಹೊಸಮನಿ, ಚನ್ನಬಸಪ್ಪ ಹೊಳೆಯಪ್ಪನವರ, ಗವಿಸಿದ್ದಪ್ಪ ಗಿಣಿಗೇರಿ, ಸಿದ್ದು ಮ್ಯಾಗೇರಿ ಇದ್ದರು.

ಡಾ. ಬಿ.ಆರ್. ಅಂಬೇಡ್ಕರ್‌ಅವರು ಮಹಿಳೆಯರಿಗೆ ಸಮಾನತೆ, ವಾರಸುದಾರಿಕೆ ಹಕ್ಕು ನೀಡಿದ್ದಾರೆ. ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರು ನಾರಿ ಶಕ್ತಿ ಬಿಲ್ ಜಾರಿಗೆ ತರುವ ಮೂಲಕ ಮಹಿಳೆಯರಿಗೆ ರಾಜಕೀಯದಲ್ಲಿ ಶೇ. 30ರಷ್ಟು ಮೀಸಲಾತಿ ಜಾರಿಗೆ ತಂದಿದ್ದಾರೆ. ನಾವೆಲ್ಲರೂ ಅಂಬೇಡ್ಕರ್‌ರವರ ಚಿಂತನೆ-ವಿಚಾರ ಅರಿತುಕೊಳ್ಳಬೇಕು.

- ಹೇಮಲತಾ ನಾಯಕ, ಎಂಎಲ್ಸಿ

ಸಂವಿಧಾನ ಪೀಠಿಕೆಯ ವಾಚನ: ಅಂಬೇಡ್ಕರ್‌ಜಯಂತಿ ಕಾರ್ಯಕ್ರಮದಲ್ಲಿ ಸಂವಿಧಾನ ಪೀಠಿಕೆ ವಾಚನ ಮಾಡಲಾಯಿತು. ಕೊಪ್ಪಳ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೋಗಲದ ಸಂವಿಧಾನ ಪೀಠಿಕೆಯನ್ನು ಎಲ್ಲರಿಗೂ ಬೋಧಿಸಿದರು. ಕಾರ್ಯಕ್ರಮದಲ್ಲಿ ಮಂಜುನಾಥ ಅಳ್ಳಳ್ಳಿ ಮತ್ತು ಸಂಗಡಿಗರು ಹಾಡಿದ ಡಾ.ಬಿ.ಆರ್.ಅಂಬೇಡ್ಕರ್‌ರವರ ಕುರಿತಾದ ಕ್ರಾಂತಿ ಗೀತೆಗಳು ಎಲ್ಲರ ಗಮನ ಸೆಳೆದವು.

ಜಿಲ್ಲಾಧಿಕಾರಿಗಳಿಗೆ ಸನ್ಮಾನ: ಡಾ. ಬಿ.ಆರ್ ಅಂಬೇಡ್ಕರ ಜನ್ಮದಿನದ ನಿಮಿತ್ತ ಕೊಪ್ಪಳ ಜಿಲ್ಲಾಡಳಿತ ಭವನದ ಆವರಣದಲ್ಲಿ ಸಂವಿಧಾನದ ಪ್ರಸ್ತಾವನೆಯ ಶಿಲಾ ಸ್ಮಾರಕ ನಿರ್ಮಿಸಿದ ಪ್ರಯುಕ್ತ ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಅವರಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದ ಹಿನ್ನೆಲೆ ಬೆಳಗ್ಗೆ ಡಾ. ಬಿ.ಆರ್ ಅಂಬೇಡ್ಕರ್‌ಅವರ ಭಾವಚಿತ್ರದ ಮೆರವಣಿ ಕೊಪ್ಪಳದ ಡಾ. ಬಿ.ಆರ್. ಅಂಬೇಡ್ಕರ್‌ಸರ್ಕಲ್ನಿಂದ ಸಾಹಿತ್ಯ ಭವನದ ವರೆಗೆ ನಡೆಯಿತು. ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು ಭಾಗವಹಿಸಿ, ಸಾರ್ವಜನಿಕರ ಗಮನ ಸೆಳೆದವು.

ಅಂಬೇಡ್ಕರ ಪುತ್ಥಳಿಗೆ ಪುಷ್ಪ ನಮನ: ಅಂಬೇಡ್ಕರ ಜಯಂತ್ಯುತ್ಸವ ನಿಮಿತ್ತ ಮಾನವತಾವಾದಿ ಅಂಬೇಡ್ಕರ್ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಸಂಸದ ರಾಜಶೇಖರ ಹಿಟ್ನಾಳ, ಶಾಸಕಿ ಹೇಮಲತಾ ನಾಯಕ, ಜಿಲ್ಲಾಧಿಕಾರಿ ಡಾ.ಸುರೇಶ ಬಿ ಇಟ್ನಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ ಎಲ್ ಅರಸಿದ್ಧಿ, ಜಿಪಂ ಸಿಇಒ ವರ್ಣಿತ್ ನೇಗಿ, ಶಿವಶಾಂತವೀರ ನಗರದ ನಿಜಶರಣ ಅಂಬಿಗರ ಚೌಡಯ್ಯ ಉದ್ಯಾನದಲ್ಲಿನ ಡಾ.ಬಿ.ಆರ್. ಅಂಬೇಡ್ಕರ್‌ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಪಂಚರಾಜ್ಯ ಪವರ್ ವಾರ್

ಮೆಲುಕು

ರದ್ದಾಯಿತು ಚುನಾವಣೆ

ಇದು 2016ರ ಕಥೆ. ಮತದಾರರ ಮೇಲೆ ಪ್ರಭಾವ ಬೀರಲು ಹಣಬಲವನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗಿದೆ ಎಂಬ ಆರೋಪದ ಮೇಲೆ, ಭಾರತದ ಚುನಾವಣಾ ಇತಿಹಾಸದಲ್ಲಿ ಮೊದಲ ಬಾರಿಗೆ ತಮಿಳುನಾಡಿನ 'ಅರವಕುರಿಚಿ' ಮತ್ತು 'ತಂಜಾವೂರು' ಕ್ಷೇತ್ರಗಳಲ್ಲಿ ಚುನಾವಣೆಯನ್ನು ರದ್ದುಮಾಡಲಾದ ಪ್ರಸಂಗವಿದು. 2016ರ ಮೇ 16ರಂದು ನಿಗದಿಯಾಗಿದ್ದ ಚುನಾವಣೆಯನ್ನು ಮತದಾನದ ಮುನ್ನಾದಿನ ರದ್ದುಗೊಳಿಸಿ, ಮೊದಲಿಗೆ ಮೇ 23ಕ್ಕೆ, ನಂತರ ಜೂನ್ 13ಕ್ಕೆ ಮುಂದೂಡಲಾಯಿತು ಮತ್ತು ಕೊನೆಗೆ ರದ್ದುಗೊಳಿಸಲಾಯಿತು.



ಕೊನೆಗೂ ಈ ಎರಡೂ ಸ್ಥಾನಗಳಲ್ಲಿ ಮತದಾನವನ್ನು ನಡೆಸಿದ್ದು 2016ರ ನವೆಂಬರ್ 19ರಂದು. ಈ ಎರಡೂ ಕ್ಷೇತ್ರಗಳಲ್ಲಿ ಚುನಾವಣಾ ಪ್ರಕ್ರಿಯೆಯು ಗಂಭೀರವೆನಿಸುವಷ್ಟರ ಮಟ್ಟಿಗೆ ಹಾಳಾಗಿದೆ ಎಂಬ 'ಗಟ್ಟಿ-ಗ್ರಹಿಕೆ' ಹೊಮ್ಮಿದ ನಂತರ ಚುನಾವಣಾ ಆಯೋಗವು ಮೇ ತಿಂಗಳ ಮತದಾನವನ್ನು ರದ್ದುಗೊಳಿಸಿತು ಎಂಬುದು ಗಮನಾರ್ಹ. 'ಡಿಎಂಕೆ' ಮತ್ತು 'ಎಐಎಡಿಎಂಕೆ' ಎರಡೂ ಪಕ್ಷಗಳ ಅಭ್ಯರ್ಥಿಗಳು ಮತದಾರರಿಗೆ ಹಂಚಲೆಂದು ಇರಿಸಿಕೊಂಡಿದ್ದರು ಎನ್ನಲಾದ ಭಾರಿ ಮೊತ್ತದ ನಗದು ಹಾಗೂ ದೊಡ್ಡ ಪ್ರಮಾಣದ ಉಡುಗೊರೆಗಳನ್ನು ವಶಪಡಿಸಿಕೊಂಡ ಚುನಾವಣಾ ಅಧಿಕಾರಿಗಳು, ತರುವಾಯದಲ್ಲಿ ನೀಡಿದ ವರದಿಗಳನ್ನು ಆಧರಿಸಿ ಈ ತೀರ್ಮಾನವನ್ನು ಕೈಗೊಳ್ಳಲಾಯಿತು. ಹಣಬಲದ ಬಳಕೆಯಾಗಿದೆ ಎಂಬ ಆರೋಪದ ಮೇರೆಗೆ ಆರ್.ಕೆ.ನಗರ ವಿಧಾನಸಭಾ ಕ್ಷೇತ್ರ ಮತ್ತು ವೆಲ್ಲೂರು ಲೋಕಸಭಾ ಕ್ಷೇತ್ರಕ್ಕೆ ಹಮ್ಮಿಕೊಳ್ಳಲಾಗಿದ್ದ ಉಪಚುನಾವಣೆಗಳನ್ನು ಕೂಡ ಕ್ರಮವಾಗಿ 2017 ಮತ್ತು 2019ರಲ್ಲಿ ರದ್ದುಗೊಳಿಸಲಾಗಿತ್ತು ಎಂಬುದಿಲ್ಲಿ ಉಲ್ಲೇಖನೀಯ.

ಚುನಾವಣಾ ಚುರುಮುರಿ

ಕಮಲಕ್ಕೆ ಬೆಳಕಾದ ದಿಲೀಪ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಸಾಂಸ್ಥಿಕ ನೆಲೆಯ ವಿಸ್ತರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದರು ದಿಲೀಪ್ ಘೋಷ್. ರಾಜ್ಯ ಬಿಜೆಪಿಯ ಮಾಜಿ ಅಧ್ಯಕ್ಷರೂ ಆಗಿರುವ ಇವರು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ 'ಖರಗ್‌ಪುರ್ ಸದರ್' ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಈ ಹಿಂದೆ ಆರೆಸ್ಸೆಸ್ ಪ್ರಚಾರಕರಾಗಿ

ಕಾರ್ಯನಿರ್ವಹಿಸಿದ ಅನುಭವವಿರುವ ಘೋಷ್, 2015 ಮತ್ತು 2021ರ ನಡುವೆ ಬಿಜೆಪಿಯ ಬೆಳವಣಿಗೆಗೆ ಮಹತ್ತರ ಕೊಡುಗೆ ನೀಡಿದರು; 2019ರಲ್ಲಿ ಪಕ್ಷ 18 ಲೋಕಸಭಾ ಸ್ಥಾನಗಳನ್ನು ಗೆಲ್ಲುವುದಕ್ಕೆ ಇದು ಕಾರಣವಾಯಿತು. ಈ ಚುನಾವಣೆಯಲ್ಲಿ ಘೋಷ್ ಮೇದಿನಿಪುರ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾದರು. ಆದರೆ, 2024ರ ಲೋಕಸಭಾ ಚುನಾವಣೆಯಲ್ಲಿ ಇವರ ಕ್ಷೇತ್ರ ಮೇದಿನಿಪುರದಿಂದ 'ಬರ್ಧಮಾನ್-ದುರ್ಗಾ ಪುರ'ಕ್ಕೆ ಬದಲಾದಾಗ ಸೋಲು ಒದಗಿತು. ಸುಕಾಂತ ಮಜುಂದಾರ್ ಅವರು ರಾಜ್ಯ ಬಿಜೆಪಿ ಅಧ್ಯಕ್ಷರಾಗಿದ್ದ ಕಾಲದಲ್ಲಿ, ಸಂಘಟನೆ ವಿಷಯದಲ್ಲಿ ಹೊಮ್ಮಿದ ನಿರ್ಣಯಗಳ ಕುರಿತಾದ ತಮ್ಮ ಭಿನ್ನಾಭಿಪ್ರಾಯಗಳನ್ನು ಸಾರ್ವಜನಿಕವಾಗಿಯೇ ವ್ಯಕ್ತಪಡಿಸಿದ ದಿಲೀಪ್, ಪಕ್ಷದ ರಾಜ್ಯ ಘಟಕದ ಆಂತರಿಕ ಸಮಸ್ಯೆಗಳನ್ನೂ ಎತ್ತಿತೋರಿಸಿದರು. ಸಿಎಂ ಮಮತಾರ ಆಹ್ವಾನದ ಮೇರೆಗೆ, ಘೋಷ್ ತಮ್ಮ ಪತ್ನಿಯೊಂದಿಗೆ 'ದಿಘಾ'ದಲ್ಲಿ ಜಗನ್ನಾಥ ದೇಗುಲದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಾಗ, ಪಕ್ಷದಲ್ಲಿ ತಾಂಡವವಾಡುತ್ತಿದ್ದ ಅಸಹನೆ ಹೆಚ್ಚು ಗೋಚರಿಸಿತು. ಆದರೆ, 2025ರಲ್ಲಿ ಸಮಿಕ್ ಭಟ್ಟಾಚಾರ್ಯ ಅವರನ್ನು ರಾಜ್ಯ ಬಿಜೆಪಿಯ ಅಧ್ಯಕ್ಷರನ್ನಾಗಿ ನೇಮಿಸಿದ ನಂತರ ಚಕ್ರ ತಿರುಗಿತು, ಬದಲಾವಣೆ ಸನ್ನಿಹಿತವಾಯಿತು; ಕಳೆದ ಕೆಲ ವರ್ಷಗಳಿಂದ ಪಕ್ಷದಿಂದ ದೂರವಿದ್ದ ಘೋಷ್ ಅವರಂಥ ನಾಯಕರಿಗೆ ಮತ್ತೊಮ್ಮೆ ಪ್ರಾಮುಖ್ಯ ದಕ್ಕುವಂತಾಯಿತು. ಅದಕ್ಕೆ ಸಾಕ್ಷಿ ಎಂಬಂತೆ, ರಾಜ್ಯ ವಿಧಾನಸಭಾ ಚುನಾವಣೆಯನ್ನು ಈ ಬಾರಿ ಸವಾಲಾಗಿ ಪರಿಗಣಿಸಿರುವ ಬಿಜೆಪಿ, ದಿಲೀಪ್ ಘೋಷ್ ಅವರ ಸಂಘಟನಾ ಚಾತುರ್ಯ, ಅನುಭವ ಮತ್ತು ಬೇರುಮಟ್ಟದ ಸಂಪರ್ಕಕ್ಕೆ ಮತ್ತೆ ಮಣೆಹಾಕಲು ನಿರ್ಧರಿಸಿತು. ಇದು ರಾಜ್ಯ ಬಿಜೆಪಿಯ ಪಾಲಿಗೆ ಸಕಾರಾತ್ಮಕ ಬೆಳವಣಿಗೆಯಾಗಿದೆ ಎನ್ನುತ್ತಾರೆ ಬಲ್ಲವರು.

ಆಸ್ತಿ-ಪಾಸ್ತಿ ಸುತ್ತಮುತ್ತ

ಪಶ್ಚಿಮ ಬಂಗಾಳದ ಶಿಕ್ಷಣ ಸಚಿವ ಹಾಗೂ ಈ ಬಾರಿಯ ವಿಧಾನಸಭಾ ಚುನಾವಣೆಗೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ವತಿಯಿಂದ ಸ್ಪರ್ಧಿಸಿರುವ ಬ್ರಾತ್ಯ ಬಸು ಅವರು ಚುನಾವಣಾ ಅಫಿಡವಿಟ್‌ನಲ್ಲಿ ಒಟ್ಟು 4.41 ಕೋಟಿ ರುಪಾಯಿ ಮೌಲ್ಯದ ಆಸ್ತಿಯನ್ನು ಘೋಷಿಸಿಕೊಂಡಿದ್ದಾರೆ. 2021ರ ಚುನಾವಣಾ

ಸಂದರ್ಭದಲ್ಲಿ ಇದು 3.08 ಕೋಟಿ ರು.ನಷ್ಟು ಇತ್ತಂತೆ. 2020-21ರಲ್ಲಿ 4.91 ಲಕ್ಷ ರು,ನಷ್ಟಿದ್ದ ಬ್ರಾತ್ಯ ಬಸು ಅವರ ಆದಾಯವು, 2024-25ರ ವೇಳೆಗೆ 25.63 ಲಕ್ಷ ರು. ಮಟ್ಟವನ್ನು ಮುಟ್ಟುವ ಮಟ್ಟಿಗೆ ಸ್ಥಿರವಾಗಿ ಏರಿತು. ಬ್ಯಾಂಕ್‌ನ ನಿಶ್ಚಿತ ಠೇವಣಿಗಳಲ್ಲಿನ ಹೂಡಿಕೆಗಳು ಮತ್ತು ಖಾತೆಯಲ್ಲಿನ ಉಳಿಕೆ ಮೊತ್ತಗಳು ಸೇರಿದಂತೆ 3.16 ಕೋಟಿ ರು. ಮೌಲ್ಯದ ಚರಾಸ್ತಿಗಳು ಹಾಗೂ 'ಲೇಕ್ ಟೌನ್'ನಲ್ಲಿರುವ 1.25 ಕೋಟಿ ರು. ಮೌಲ್ಯದ, 2,500 ಚದರಡಿ ವಿಸ್ತೀರ್ಣದ ಒಂದು ಫ್ಲ್ಯಾಟ್ ರೂಪದಲ್ಲಿನ ಸ್ಥಿರಾಸ್ತಿಯನ್ನು ಬಸು ಹೊಂದಿದ್ದಾರಂತೆ. ಬ್ರಾತ್ಯ ಬಸು ಮತ್ತು ಅವರ ಪತ್ನಿ ಯಾವುದೇ ಸಾಲವನ್ನಾಗಲೀ, ಬಾಧ್ಯತೆಗಳನ್ನಾಗಲೀ, ಸ್ವಂತ ಕಾರನ್ನಾಗಲೀ ಹೊಂದಿಲ್ಲವಂತೆ ಹಾಗೂ ಅವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ಬಾಕಿ ಉಳಿದಿಲ್ಲವಂತೆ. ಹೀಗೆ ನ್ನುತ್ತದೆ ಅವರು ಸಲ್ಲಿಸಿರುವ ಚುನಾವಣಾ ಅಫಿಡವಿಟ್ಟು. ನಂಬೋಕ್ಕೆ ಕಷ್ಟ ಆಗ್ತಾ ಇದೆಯಾ?!!

ಬಂಗಾಳಿಗರ ಮೌನದೊಳಗೊಂದು ಸಂದೇಶವಿದೆಯೇ?

ಗ್ರೌಂಡ್ ರಿಪೋರ್ಟ್

ರಾಘವಶರ್ಮ ನಿಡ್ಲೆ

ಉತ್ತರ 24 ಪರಗಣ ಜಿಲ್ಲೆ (ಪ. ಬಂಗಾಳ): ಉತ್ತರ ಪ್ರದೇಶ, ಬಿಹಾರ, ಪಂಜಾಬ್, ಹರಿಯಾಣ ಅಥವಾ ಉತ್ತರ ಭಾರತದ ಯಾವುದೇ ರಾಜ್ಯವಿರಲಿ, ಚುನಾವಣೆ ಬಗ್ಗೆ ನೀವು ಕೇಳುವುದೇ ಬೇಡ, ಅವರೇ ಬಂದು ನಿಮ್ಮಲ್ಲಿ ಮಾತನಾಡುತ್ತಾರೆ, ತಮ್ಮದೇ ವಿಶ್ಲೇಷಣೆಗಳನ್ನು ಮುಂದಿಡುತ್ತಾರೆ. ಆದರೆ, ಪಶ್ಚಿಮ ಬಂಗಾಳ ಹಾಗಿಲ್ಲ. ಮುಖ್ಯವಾಗಿ ಇಲ್ಲಿನ ಗ್ರಾಮೀಣ ಭಾಗಗಳಲ್ಲಿ ಚುನಾವಣೆ, ರಾಜಕೀಯದ ಬಗ್ಗೆ ಜನ ಮಾತನಾಡುವುದು ಕಡಿಮೆ. ಯಾರಾದರೂ ಮಾತನಾಡಬೇಕು ಎಂಬ ಆಶಯ ವ್ಯಕ್ತಪಡಿಸಿದರೂ, ಪಕ್ಕದಲ್ಲಿರುವ ವ್ಯಕ್ತಿ ಕಣ್ಸನ್ನೆ ಮೂಲಕ ಆತನ ಬಾಯಿ ಮುಚ್ಚಿಸುತ್ತಾನೆ. ಇಂಥದ್ದೇ ಅನುಭವ ಕೊಲ್ಕತ್ತಾದಿಂದ ಸುಮಾರು 30 ಕಿ.ಮೀ. ದೂರದಲ್ಲಿರುವ ಉತ್ತರ 24 ಪರಗಣ ಜಿಲ್ಲೆಯ ಬ್ಯಾರಕ್‌ಪುರ ವಿಧಾನಸಭಾ ಕ್ಷೇತ್ರದಲ್ಲೂ ನನಗಾಯಿತು.

ಉತ್ತರ 24 ಪರಗಣ ಜಿಲ್ಲೆಯ ಕರ್ಧಾ ವಿಧಾನಸಭೆಯಲ್ಲಿ ಮಾತಿಗೆ ಸಿಕ್ಕ ಸುನೀತ್ ಘೋಷ್, ರತನ್ ಖೋಷೋ.

ಸ್ವಾತಂತ್ರ್ಯ ಸೇನಾನಿ, ಬಂಗಾಳ ಸ್ಥಳೀಯ ಪದಾತಿದಳದ 34ನೇ ರೆಜಿಮೆಂಟ್‌ನ ಸಿಪಾಯಿಯಾಗಿದ್ದ ಮಂಗಲ್ ಪಾಂಡೆ ಮುಂಚೂಣಿಯಲ್ಲಿ ನಿಂತು ಬ್ರಿಟಿಷ್ ವಿರೋಧಿ ದಂಗೆ ಆರಂಭಿಸಿದ ಪ್ರಮುಖ ಸ್ಥಳ ಎಂದು ಗುರುತಿಸಿಕೊಂಡಿರುವ ಬ್ಯಾರಕ್‌ಪುರದ ದೌಲ್ಪಾರಾ ಎಂಬ ಗ್ರಾಮದ ಒಳಹೊಕ್ಕು ಚಹಾ ಅಂಗಡಿಯೊಂದರಲ್ಲಿ ಕುಳಿತಿದ್ದ ಮೂವರೊಂದಿಗೆ ಮಾತಿಗಿಳಿದೆ. ಚುನಾವಣೆ ವರದಿಗಾಗಿ ಕರ್ನಾಟಕದಿಂದ ಬಂದಿದ್ದೇನೆ ಎಂದರೂ ಅನುಮಾನದಿಂದ ನೋಡಿದರು. ಪೂರ್ತಿ ವಿವರಣೆ ನೀಡಿದ ಮೇಲೆ ನಿಧಾನವಾಗಿ ಮಾತನಾಡಲಾರಂಭಿಸಿದರು. ಅಂಗಡಿ ಮುಂದೆ ಟಿಎಂಸಿ ಬಾವುಟ ಹಾರುತ್ತಿತ್ತು. ಪಕ್ಕದ ಶೀಟ್ ಹಾಕಿದ್ದ ಕೊಠಡಿಯಲ್ಲೂ ಟಿಎಂಸಿ ಬಾವುಟಗಳು ರಾರಾಜಿಸುತ್ತಿದ್ದವು. ಮೂವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಮೇಲೆ, ''ನಮಗೆ ಈ ಬಾರಿ ಬದಲಾವಣೆ ಬೇಕು'' ಎಂದ ಒಬ್ಬಾತ, ''ನಮ್ಮ ಗ್ರಾಮದ ಪರಿಸ್ಥಿತಿ ನೋಡಿ. ಯುವಕರಿಗೆ ಕೆಲಸವಿಲ್ಲ, ಬಡತನದಿಂದ ಜನ ನರಳುತ್ತಿದ್ದಾರೆ. ಕಂಪನಿ, ಕಾರ್ಖಾನೆಗಳಿಲ್ಲ. ಈ ಬಗ್ಗೆ ಉಲ್ಟಾ ಮಾತನಾಡುವ ಹಾಗಿಲ್ಲ. ಹಲ್ಲೆ ಮಾಡಿ ಬಾಯಿ ಮುಚ್ಚಿಸುತ್ತಾರೆ'' ಎಂದು ಆಕ್ರೋಶ ಹೊರಹಾಕಿದ. ''ಹಲ್ಲೆ ಮಾಡುವುದು ಯಾರು?'' ಎಂದಿದ್ದಕ್ಕೆ, ''ಯಾರ ಕೈಯಲ್ಲಿ ಅಧಿಕಾರ ಇದೆಯೋ ಅವರು ಮಾಡುತ್ತಾರೆ'' ಎಂದು ಉತ್ತರಿಸಿದ.

ಟೀ ಅಂಗಡಿ ಮಾಲೀಕ 2019ರ ಘಟನೆಯೊಂದನ್ನು ನೆನಪಿಸಿಕೊಂಡು, ''ಆ ಲೋಕಸಭೆ ಚುನಾವಣೆಯಲ್ಲಿ ನಾನು ಬಿಜೆಪಿಯನ್ನು ಬೆಂಬಲಿಸಿ ಮತಹಾಕಿದೆ ಎನ್ನುವುದು ಗೊತ್ತಾಗಿ, ಟಿಎಂಸಿ ಗೆದ್ದ ನಂತರ, ನನ್ನ ಅಂಗಡಿಯನ್ನೇ ಒಡೆದು ಹಾಕಿದ್ದರು. ಅಂಗಡಿ ಮತ್ತೆ ಕಟ್ಟಿಕೊಂಡೆ. ನಾವು ರಾಜಕೀಯ ಪಕ್ಷಗಳೊಂದಿಗೆ ಯಾವತ್ತೂ ಜೋಡಿಸಿಕೊಂಡಿಲ್ಲ. ಆದರೆ, ಬಹಿರಂಗವಾಗಿ ಏನೂ ಮಾತನಾಡುವ ಹಾಗಿಲ್ಲ. ಜೀವನ ನಡೆಯಬೇಕಲ್ಲವೇ? ಹಾಗಾಗಿ ಸುಮ್ಮನಿದ್ದೇವೆ'' ಎಂದ.

''ನೀವು ಬದಲಾವಣೆಗೆ ಮತ ಹಾಕುವ ಮನಸ್ಸು ಮಾಡಿದಂತಿದೆ, ಹಾಗಾದರೆ ಅಂಗಡಿ ಮುಂದೆ ಟಿಎಂಸಿ ಬಾವುಟ ಏಕೆ?'' ಎಂದು ನಾನು ಕೇಳಿದ್ದಕ್ಕೆ, ''ಟಿಎಂಸಿ ಬಾವುಟ ಹಾಕಿದ್ದಕ್ಕೆ ಇಲ್ಲಿದ್ದೇನೆ. ಬಿಜೆಪಿ ಬಾವುಟ ಹಾಕಿದ್ದರೆ, ಅಂಗಡಿ ಸಾಮಾನುಗಳನ್ನು ನನ್ನ ಹಿಂದೆ ಇರುವ ಕೆರೆಗೆ ಎಸೆಯುತ್ತಿದ್ದರು'' ಎಂದು ಅಲ್ಲಿನ ಸ್ಥಿತಿಯ ಬಗ್ಗೆ ವಿವರಿಸಿದ. ಪತ್ರಿಕೆಯ ವರದಿಯಲ್ಲಿ ತಾವು ಹೇಳಿದ ವಿಚಾರ ಬಂದರೆ ಸಾಕು. ಹೆಸರು, ಫೋಟೋ ಪ್ರಕಟವಾಗುವುದು ಬೇಡ ಎಂಬ ಕಾರಣಕ್ಕಾಗಿ ಮೂವರೂ ತಮ್ಮ ಹೆಸರನ್ನು ನನ್ನ ಬಳಿ ಹೇಳಲೇ ಇಲ್ಲ!

ಕ್ರಾಂತಿಕಾರಿ ನಾಯಕರು, ಸುಪ್ರಸಿದ್ಧ ಕವಿಗಳು, ಜನನಾಯಕರಿಗೆ ಸಾಕ್ಷಿಯಾಗಿ, ದೇಶಕ್ಕೆ ದಿಶೆ ತೋರಿಸಿದ ಬಂಗಾಳದಲ್ಲಿ ಚುನಾವಣೆ, ರಾಜಕೀಯದ ಬಗ್ಗೆ ನಿಲುವುಗಳನ್ನು ವ್ಯಕ್ತಪಡಿಸಲು ಹಿಂಜರಿಯುವುದಕ್ಕೆ ಈ ಭಯವೂ ಒಂದು ಕಾರಣ.

ಬ್ಯಾರಕ್‌ಪುರದ ಮತ್ತೊಂದು ಹೋಟೆಲ್‌ಗೆ ತೆರಳಿ ಶಿಕ್ಷಿತರಂತೆ ಮತ್ತು ಉತ್ತಮ ನೌಕರಿಯಲ್ಲಿದ್ದವರಂತೆ ಕಂಡ ನಾಲ್ವರ ಜತೆ ಮಾತನಾಡಲು ಯತ್ನಿಸಿದೆ. ಆದರೆ, ''ಜನರಿಗಾಗಿ ಒಳ್ಳೆ ಕೆಲಸ ಮಾಡಿದವರು ಚುನಾವಣೆ ಗೆಲ್ಲುತ್ತಾರೆ. ಮೇ 4ಕ್ಕೆ ಫಲಿತಾಂಶ ನಿಮಗೇ ಗೊತ್ತಾಗುತ್ತದೆ'' ಎಂದು ಮುಖ ತಗ್ಗಿಸಿ ತಿಂಡಿ ತಿನ್ನುವುದರತ್ತ ಅವರು ಗಮನಹರಿಸಿದರು.

ವಿಶ್ವವಾಣಿ ಬಂಗಾಳ ಚುನಾವಣಾ ಯಾತ್ರೆ

ಹೋಟೆಲ್ ಹೊರನಿಂತು ಸಿಗರೇಟು ಸೇದುತ್ತಿದ್ದ ಅವರದೇ ತಂಡದ ಮತ್ತೊಬ್ಬ ವ್ಯಕ್ತಿ ನನ್ನೊಂದಿಗೆ ಮಾತನಾಡಲು ಇಳಿಯುತ್ತಿದ್ದಂತೆ, ಒಳಗಿನಿಂದ ಬಂದ ವ್ಯಕ್ತಿ ಏನೋ ಕಣ್ಸನ್ನೆ ಮಾಡಿ, ಬೈಕ್ ಹತ್ತಿದ. ಸಿಗರೇಟ್ ಸೇದುತ್ತಿದ್ದ ವ್ಯಕ್ತಿ ಅದನ್ನು ಅಲ್ಲೇ ಎಸೆದು, ಒಳ ಹೋಗಿ ಕುಳಿತ. ಇಲ್ಲಿದ್ದು ಪ್ರಯೋಜನವಿಲ್ಲ ಎಂದು ನಾನು ಕಾರಿನತ್ತ ಹೆಜ್ಜೆ ಹಾಕಿದಾಗ, ಅಂಗಡಿ ಮಾಲೀಕ ಸಯಾನ್ ದಾಸ್ ಮೆಲುದನಿಯಲ್ಲಿ ಮಾತನಾಡಿ, ''ಸಾಬ್ ಬಿಜೆಪಿ ಅಧಿಕಾರಕ್ಕೆ ಬಂದೇ ಬಿಡುತ್ತದೆ ಎನ್ನಲಾರೆ. ಆದರೆ ಫೈಟ್ ಜೋರಿದೆ. ನಾನು ಬದಲಾವಣೆ ಜತೆ ಹೋಗುತ್ತಿದ್ದೇನೆ'' ಎಂದು ತಿಳಿಸಿದ.

ಅಲ್ಲಿಂದ ಉತ್ತರ 24 ಪರಗಣದ ಕರ್ಧಾ ವಿಧಾನಸಭೆ ಕ್ಷೇತ್ರದಲ್ಲಿ ಪ್ರಯಾಣಿಸುತ್ತಿದ್ದಾಗ ಲಾಟರಿ ಟಿಕೆಟ್ ಮಾರುತ್ತಿದ್ದವನ ಅಂಗಡಿಯಲ್ಲಿ ನಿಂತೆ. ಅಲ್ಲಿದ್ದ ಮಧ್ಯ ವಯಸ್ಸು ದಾಟಿದ ಸುನೀತ್ ಘೋಷ್ ಮತ್ತು ರತನ್ ಖೋಷೋ, ಚುನಾವಣೆ ಬಗ್ಗೆ ಮಾತನಾಡುತ್ತೇವೆ, ಬನ್ನಿ ಎಂದು ಮುಕ್ತ ಮನಸ್ಸಿನಿಂದ ಸ್ವಾಗತಿಸಿದರು. ''ರಾಜ್ಯದಲ್ಲಿ 34 ವರ್ಷ ಆಡಳಿತ ನಡೆಸಲು ಎಡಪಕ್ಷಗಳಿಗೆ ಬಿಟ್ಟಿದ್ದೇವೆ ಎಂದರೆ, ಅದರ ಅರ್ಧ ಅವಧಿಯಷ್ಟೇ ಅಧಿಕಾರ ನಡೆಸಿರುವ ಮಮತಾ ದೀದಿಗೆ ಮತ್ತೆ ಅವಕಾಶ ಕೊಡುವುದಿಲ್ಲವೇ? ದೀದಿ ಮತ್ತೆ ಸಿಎಂ ಆಗುತ್ತಾರೆ. ಬಿಜೆಪಿ ಧೂಳೀಪಟವಾಗಲಿದೆ. ಬಂಗಾಳದಲ್ಲಿ ದಿಲ್ಲಿಯವರದ್ದು ಏನೂ ನಡೆಯುವುದಿಲ್ಲ'' ಎಂದು ಒಂದೇ ವೇಗದಲ್ಲಿ ಹೇಳಿದ. ''ನಮ್ಮ ವಿಧಾನಸಭೆ ಕ್ಷೇತ್ರದಲ್ಲಿ ಟಿಎಂಸಿಯಿಂದ ಯಾವುದೇ ರಾಜಕೀಯ ಹಿಂಸಾಚಾರ ನಡೆದಿಲ್ಲ. ಮಮತಾ ಬ್ಯಾನರ್ಜಿಯವರು ಬಿಜೆಪಿ - ಕಾಂಗ್ರೆಸ್ - ಸಿಪಿಎಂಗಳನ್ನು ಬೆಂಬಲಿಸುವವರಿಗೂ ಒಳ್ಳೆಯದಾಗಲಿ ಎಂದು ಯೋಜನೆಗಳನ್ನು ಜಾರಿಮಾಡಿದ್ದಾರೆ. ಅವರು ಬಿಜೆಪಿಯಂತೆ ತಮ್ಮ ಬೆಂಬಲಿಗರಿಗೆ ಮಾತ್ರ ಅನುಕೂಲ ಮಾಡುವುದಿಲ್ಲ'' ಎನ್ನುವುದು ರತನ್ ಖೋಷೋ ವಾದವಾಗಿತ್ತು. ''2011ರಿಂದ ಮೂರೂ ವಿಧಾನಸಭೆ ಚುನಾವಣೆಗಳಲ್ಲಿ ಟಿಎಂಸಿಯನ್ನೇ ಬೆಂಬಲಿಸಿದ್ದೆವು'' ಎಂದೂ ಅವರು ಒಪ್ಪಿಕೊಂಡರು.

ವಿಶೇಷ ಎಂದರೆ ಈ ಕರ್ಧಾ ವಿಧಾನಸಭೆಯಿಂದ ಕೊಲ್ಕತ್ತಾದ ಸುಪ್ರಸಿದ್ಧ 'ಟೆಲಿಗ್ರಾಫ್' ಪತ್ರಿಕೆಯ ಹಿರಿಯ ಪತ್ರಕರ್ತ ದೇವದೀಪ್ ಪುರೋಹಿತ್‌ರನ್ನು ಟಿಎಂಸಿ ತನ್ನ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ. 2021ರಲ್ಲಿ ಇಲ್ಲಿಂದ ಕಾಜಲ್ ಸಿಂಘಾ ಅವರು ಶಾಸಕರಾಗಿ ಆಯ್ಕೆಯಾಗಿದ್ದರೂ, ಕೊರೊನಾದಿಂದ ಮೃತಪಟ್ಟರು. ನಂತರದ ಉಪಚುನಾವಣೆಯಲ್ಲಿ ಟಿಎಂಸಿಯ ಶೋಭಂದೇವ್ ಚಟರ್ಜಿ ಶಾಸಕರಾಗಿ ಆಯ್ಕೆಗೊಂಡರು.

ಕೊಲ್ಕತ್ತಾ ನಿವಾಸಿಯಾಗಿರುವ ಶೃತಿ ಭಟ್ಟಾಚಾರ್ಯ ಅವರು ಮಣಿಪಾಲದ ಮಾಹೆಯಲ್ಲಿ 'ಕ್ಲಿನಿಕಲ್ ಸೈಕಾಲಜಿ' ವಿಷಯದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿರುವ ಮಗಳೊಂದಿಗೆ 1 ತಿಂಗಳ ಕಾಲ ಇದ್ದು ಏ.13ರಂದಷ್ಟೇ ನಗರಕ್ಕೆ ವಾಪಸಾಗಿದ್ದಾರೆ. ''ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುತ್ತಿರಬೇಕು. ಒಬ್ಬರಿಗೇ ನಿರಂತರ ಆಡಳಿತ ನಡೆಸಲು ಬಿಡುವುದು ಒಳ್ಳೆಯ ಲಕ್ಷಣವಲ್ಲ. ಹೀಗಾಗಿ, ನನ್ನದು ಪರಿವರ್ತನೆಗೆ ಮತ'' ಎಂದು 'ವಿಶ್ವವಾಣಿ' ಜತೆ ಅವರು ಅನಿಸಿಕೆ ಹಂಚಿಕೊಂಡರು.

ಟಿಎಂಸಿಯನ್ನು ಈ ಬಾರಿ ಸೋಲಿಸಲೇಬೇಕು ಎಂದು ಹೊಸ ರಣನೀತಿಗಳೊಂದಿಗೆ ಕಣದಲ್ಲಿರುವ ಬಿಜೆಪಿ, ಅನೇಕ ಕಡೆ ಸಿಪಿಎಂ ಮತ್ತು ಕಾಂಗ್ರೆಸ್ ಬೆಂಬಲಿಗರನ್ನೂ ಸಂಪರ್ಕಿಸುತ್ತಿದ್ದು, 'ನಿಮಗೆ ದೀದಿ ಸೋಲಬೇಕು.

ಆದರೆ ನಿಮ್ಮಿಂದ ಅದು ಸಾಧ್ಯವಿಲ್ಲ. ಹಾಗಾಗಿ, ಈ ಒಂದು ಬಾರಿ ನಮ್ಮ ಅಭ್ಯರ್ಥಿಗೆ ಮತ ನೀಡಲು ಬೆಂಬಲಿಗರಿಗೆ-ಕಾರ್ಯಕರ್ತರಿಗೆ ಸಂದೇಶ ನೀಡಿ' ಎಂದು ಮನವಿ ಮಾಡುತ್ತಿದೆ. ಕೆಲವರು ಇದನ್ನು ಒಪ್ಪುತ್ತಿದ್ದರೆ, ಸೈದ್ಧಾಂತಿಕ ಬದ್ಧತೆಯ ಕೆಲವರು 'ಇದಂತೂ ಸುತರಾಂ ಸಾಧ್ಯವಿಲ್ಲ' ಎಂದು ತಿರಸ್ಕರಿಸುತ್ತಿದ್ದಾರಂತೆ.

ಬಂಗಾಳಿ ಹಿಂದೂಗಳ ನಿಲುವು ಬದಲು?

ಬಾಂಗ್ಲಾದಲ್ಲಿ ಹಿಂದೂಗಳ ಹತ್ಯೆ ಘಟನೆಗಳು ಬಂಗಾಳದ ಬಹುಪಾಲು ಹಿಂದುಗಳನ್ನು ವಿಚಲಿತಗೊಳಿಸಿವೆ. ಇದು ಚುನಾವಣೆ ಮೇಲೂ ಪರಿಣಾಮ ಬೀರಿದೆ. ಬಾಂಗ್ಲಾದೇಶದಿಂದ ಬಂಗಾಳಿ ಮಾತನಾಡುವ ಹಿಂದೂ-ಮುಸಲ್ಮಾನರು ಇಲ್ಲಿಗೆ ಅಕ್ರಮ ವಲಸೆ ಬಂದು ನೆಲೆಸಿದರೂ, ಸ್ಥಳೀಯ ಬಂಗಾಳಿಗರು ಅವರನ್ನು ವಿರೋಧಿಸಲಿಲ್ಲ. ಏಕೆಂದರೆ, 'ಅವರು ಎಷ್ಟಾದರೂ ಬಂಗಾಳಿಗರು.. ನಮ್ಮವರು' ಎಂಬ ಭಾವನೆ ಬೇರೂರಿತ್ತು. ಆದರೆ, ಬಾಂಗ್ಲಾದೇಶದಲ್ಲಿ ಹಿಂದೂಗಳನ್ನು ಹತ್ಯೆ ಮಾಡಿ ಸಂಭ್ರಮಪಟ್ಟ ಬಾಂಗ್ಲಾ ಮುಸ್ಲಿಮರ ಬಗ್ಗೆ ಪಶ್ಚಿಮ ಬಂಗಾಳದ ಹಿಂದೂಗಳಿಗೆ ಮುನಿಸು ಹೆಚ್ಚಾಗಿದೆ. 'ನಾವು ಮೊದಲು ಬಂಗಾಳಿಗಳು, ನಂತರ ಹಿಂದೂಗಳು' ಎನ್ನುತ್ತಿದ್ದ ಇಲ್ಲಿನ ಬಂಗಾಳಿ ಹಿಂದೂಗಳು, ಬಾಂಗ್ಲಾದೇಶದ ಮುಸ್ಲಿಮರು ಮೊದಲು ಧರ್ಮಕ್ಕೆ ಆದ್ಯತೆ ನೀಡಿದರು. ಬಂಗಾಳಿ ಹಿಂದೂಗಳನ್ನು ನಮ್ಮವರು ಎಂದು ಪರಿಗಣಿಸಲೇ ಇಲ್ಲ ಎಂಬ ಬಗ್ಗೆ ಬೇಸರಗೊಂಡಿದ್ದು, ಈ ಬಗ್ಗೆ ಭಾರಿ ಚರ್ಚೆಗಳಾಗಿವೆ. ಮಮತಾ ಬ್ಯಾನರ್ಜಿ ಕೂಡ ಈ ಬಗ್ಗೆ ಮೌನವಾಗಿದ್ದರು. ಇವೆಲ್ಲವೂ ರಾಜಕೀಯವಾಗಿ ನಮಗೆ ಪ್ಲಸ್ ಪಾಯಿಂಟ್ ಎಂದು ಕೊಲ್ಕತ್ತಾದಲ್ಲಿ ಕಳೆದ ಹಲವು ದಿನಗಳಿಂದ ಬೀಡು ಬಿಟ್ಟಿರುವ ಬಿಜೆಪಿ ರಣನೀತಿಕಾರರೊಬ್ಬರು ಮಾಹಿತಿ ಹಂಚಿಕೊಂಡರು.

ಆಂತರಿಕ ಸಮೀಕ್ಷೆಯ ಬೂಸ್ಟ್

ಬಿಜೆಪಿಯ ಇತ್ತೀಚಿನ ಆಂತರಿಕ ಸಮೀಕ್ಷೆ ಪ್ರಕಾರ ಪಕ್ಷವು 115ರಿಂದ 125 ಸೀಟುಗಳನ್ನು ಗೆಲ್ಲುವ ನಿರೀಕ್ಷೆಯಿದೆ. ಬಂಗಾಳ ಪ್ರಚಾರ ಆರಂಭದ ವೇಳೆ 100ರ ಆಸುಪಾಸಿನಲ್ಲಿದ್ದ ಈ ಸಂಖ್ಯೆ 120ಕ್ಕೆ ಏರಿರುವುದರಿಂದ ಮುಂದಿನ ದಿನಗಳಲ್ಲಿ ಪಕ್ಷ ಹಾಗೂ ಸಂಘಟನೆ ಸಂಪೂರ್ಣ ಶ್ರಮ ಹಾಕಿ ಪ್ರಚಾರ ನಡೆಸಬೇಕು ಎಂದು ಕಾರ್ಯಕರ್ತ ವರ್ಗಕ್ಕೆ ಸೂಚನೆ ನೀಡಲಾಗಿದೆ. ಗೃಹ ಸಚಿವ ಅಮಿತ್ ಶಾ ಕೂಡ ಬಂಗಾಳದಲ್ಲಿದ್ದು, ಚುನಾವಣಾ ಉಸ್ತುವಾರಿ, ಕೇಂದ್ರ ಸಚಿವ ಭೂಪೇಂದ್ರ ಯಾದವ್ ಮತ್ತು ಪ್ರಧಾನ ಕಾರ್ಯದರ್ಶಿ ಸುನೀಲ್ ಬನ್ಸಾಲ್ 2021ರ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರವಹಿಸುತ್ತಿದ್ದಾರೆ.

ಅಂಗಡಿ ಮುಂದೆ ಟಿಎಂಸಿ ಬಾವುಟ, ಬೆಂಬಲ ಬಿಜೆಪಿಗೆ..!
ಬ್ಯಾರಕ್‌ಪುರ ವಿಧಾನಸಭೆಯ ದೌಲ್ ಪಾರಾ ಗ್ರಾಮದಲ್ಲಿ ಕಂಡದ್ದು.

ಮಹಿಳೆಯರಿಗೆ ₹ 2,000, ವರ್ಷಕ್ಕೆ 3 ಉಚಿತ ಸಿಲಿಂಡರ್

ತ.ನಾಡು: ಬಿಜೆಪಿ ಪ್ರಣಾಳಿಕೆ ಬಿಡುಗಡೆ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದು, ಮಹಿಳೆಯರು, ರೈತರು ಹಾಗೂ ಯುವ ಜನರನ್ನು ಗುರಿಯಾಗಿಸಿಕೊಂಡು ಹಲವು ಮಹತ್ವದ ಆಶ್ವಾಸನೆಗಳನ್ನು ಇದರಲ್ಲಿ ನೀಡಲಾಗಿದೆ. ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು, ''ತಮಿಳು ಹೊಸ ವರ್ಷದ ಈ ಶುಭ ಸಂದರ್ಭದಲ್ಲಿ ನಾವು ಈ ಪ್ರಣಾಳಿಕೆ ಯನ್ನು ಬಿಡುಗಡೆ ಮಾಡುತ್ತಿದ್ದೇವೆ. ತಮಿಳುನಾಡು ಪ್ರಪಂಚದ ನಾಗರಿಕತೆಯ ತೊಟ್ಟಿಲು. ಈಗಿನ ಡಿಎಂಕೆ ಸರಕಾರವು ರೈತರು ಮತ್ತು ಮಹಿಳೆಯರನ್ನು ನಿರ್ಲಕ್ಷಿಸಿದೆ. ಆದರೆ ಬಿಜೆಪಿಯ ಪ್ರಣಾಳಿಕೆಯು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ತಮಿಳುನಾಡಿನ ಅಭಿವೃದ್ಧಿ ಹಾಗೂ ಸಾಂಸ್ಕೃತಿಕ ಪರಂಪರೆಯ ರಕ್ಷಣೆ ನಮ್ಮ ಗುರಿ'' ಎಂದರು.

ತಮಿಳುನಾಡಿನಲ್ಲಿ ಬಿಜೆಪಿ ಮತ್ತು ಎಐಎಡಿಎಂಕೆ ಪಕ್ಷಗಳು ಎನ್‌ಡಿಎ ಮೈತ್ರಿಕೂಟದ ಸಹಭಾಗಿಗಳಾಗಿದ್ದು, ಎಐಎಡಿಎಂಕೆ ಈಗಾಗಲೇ ತನ್ನ ಪ್ರಣಾಳಿಕೆಯಲ್ಲಿ ಉಚಿತ ಫ್ರಿಜ್ ಮತ್ತು ಮಹಿಳೆಯರಿಗೆ 2,000 ರುಪಾಯಿ ನೆರವಿನ ಆಶ್ವಾಸನೆ ನೀಡಿದೆ. ಬಿಜೆಪಿಯೂ ಇದೇ ಮೇಲ್ಪಂಕ್ತಿಯನ್ನು ಅನುಸರಿಸಿದ್ದು, ಅದರ ಪ್ರಮುಖಾಂಶಗಳು ಹೀಗಿವೆ:

- ಮನೆಯ ಯಜಮಾನಿಗೆ ಪ್ರತಿ ತಿಂಗಳು 2,000 ರು. ನಗದು ನೆರವು.
- ಪ್ರತಿ ಮನೆಗೆ ವರ್ಷಕ್ಕೆ 3 ಎಲ್‌ಪಿಜಿ ಸಿಲಿಂಡರ್‌ಗಳ ಉಚಿತ ನೀಡಿಕೆ.
- ರೈತರಿಗೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಹಲವು ಪೂರಕ ಯೋಜನೆಗಳು.
- ಯುವಕರಿಗೆ ಉದ್ಯೋಗಾವಕಾಶ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಒತ್ತು.
- ಅರ್ಹ ಮಹಿಳೆಯರು ಇ-ಸ್ಕೂಟರ್ ಖರೀದಿಸಲು 25,000 ರು. ಸಬ್ಸಿಡಿ.
- ಜೀವನವೆಚ್ಚ ಮತ್ತು ತೆರಿಗೆ ಏರಿಕೆಯನ್ನು ಸರಿದೂಗಿಸಲು ಪ್ರತಿ ಕುಟುಂಬಕ್ಕೆ 10,000 ರು. ನಗದು ನೆರವು.
- ಮೊದಲ ಬಾರಿಗೆ ಮನೆ ಖರೀದಿಸುವ ಮಹಿಳೆಯರಿಗೆ ಮುದ್ರಾಂಕ ಶುಲ್ಕದಲ್ಲಿ ಶೇ.3ರಷ್ಟು ರಿಯಾಯಿತಿ.
- ಜಲ್ಲಿಕಟ್ಟು ಹೋರಿಗಳನ್ನು ಸಾಕುವವರಿಗೆ ಮಾಸಿಕ 2,000 ರು. ನೆರವು ಮತ್ತು ಪಂದ್ಯದ ವೇಳೆ ಸಾವು ಸಂಭವಿಸಿದರೆ 10 ಲಕ್ಷ ರು. ಪರಿಹಾರ ಧನ.
- ಶೂನ್ಯ ಎಫ್‌ಐಆರ್ ಅನುಷ್ಠಾನ ಮತ್ತು ಗಂಭೀರ ಅಪರಾಧಗಳ ವಿಚಾರಣೆಗೆ 'ಫಾಸ್ಟ್ ಟ್ರ್ಯಾಕ್' ನ್ಯಾಯಾಲಯಗಳ ಸ್ಥಾಪನೆ.

ಎಐ ಚಿತ್ರ ಬಳಸಿ ಮತಯಾಚನೆ

ಕುಂಭಕೋಣಂ: ಯಾವುದೇ ಚುನಾವಣಾ ಪ್ರಚಾರಕಾರ್ಯದಲ್ಲಿ ಆಯಾ ಪಕ್ಷದ ನಾಯಕರು ಊರೂರು ಸುತ್ತಬೇಕಾಗಿ ಬರುತ್ತದೆ. ಕೆಲವೊಮ್ಮೆ 'ತಾರಾ ಪ್ರಚಾರಕರು' ಕ್ಷೇತ್ರದ ಎಲ್ಲೆಡೆ ಪ್ರಚಾರಕ್ಕೆ ಲಭ್ಯವಾಗುವುದು ಕಷ್ಟವೇ. ಇಂಥ ವೇಳೆ ಅವರ ಚಿತ್ರ/ಕಟೌಟುಗಳನ್ನು ಮುಂದುಮಾಡಿಕೊಂಡು ಪ್ರಚಾರಕಾರ್ಯವನ್ನು ನಿರ್ವಹಿಸುವುದಿದೆ.

ಕಾಲ ಬದಲಾದಂತೆ ತಂತ್ರಜ್ಞಾನದ ವ್ಯಾಪ್ತಿಯೂ ವಿಸ್ತರಿಸುತ್ತಿದೆ. 'ಹೊಲೊಗ್ರಾಫಿಕ್ ಕೃತಕ ಬುದ್ಧಿಮತ್ತೆ (ಎಐ) ಚಿತ್ರದ ಬಳಕೆ ಈ ಪೈಕಿ ಒಂದು. ತಮಿಳುನಾಡಿನ ಕುಂಭಕೋಣಂ ಕ್ಷೇತ್ರದಲ್ಲಿ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ಅಭ್ಯರ್ಥಿ ವಿನೋದ್ ರವಿ ಅವರು, ತಮ್ಮ ನಾಯಕ ವಿಜಯ್ ಅವರ ಹೊಲೊಗ್ರಾಫಿಕ್ ಎಐ ಚಿತ್ರವನ್ನು ಪ್ರಚಾರಕಾರ್ಯದಲ್ಲಿ ಬಳಸಿಕೊಳ್ಳುವ ಮೂಲಕ ವಿಜಯ್‌ರ ಅನುಪಸ್ಥಿತಿಯನ್ನು ತಂತ್ರಜ್ಞಾನದ ಮೂಲಕ ತುಂಬಿಸಿಕೊಂಡಿದ್ದಾರೆ. ವಿಜಯ್ ಅವರೇ ನೇರವಾಗಿ ಬಂದು ಭಾಷಣ ಮಾಡಿದಂಥ ಭಾಸವನ್ನು ಮೂಡಿಸುವ ಈ ತಂತ್ರಜ್ಞಾನ ಜನರನ್ನು ಸೆಳೆಯುತ್ತಿದೆ. ಪ್ರಚಾರ ವಾಹನದ ಮೇಲೆ ಅಳವಡಿಸಲಾದ ಈ ವ್ಯವಸ್ಥೆಯು persistence of vision ಸಜ್ಜಿಕೆಯನ್ನು ಆಧರಿಸಿ ಕಾರ್ಯನಿರ್ವಹಿಸುತ್ತದೆ. ಈ ಹೊಲೊಗ್ರಾಫಿಕ್ ಪ್ರೊಜೆಕ್ಷನ್ ತಂತ್ರಜ್ಞಾನದ ಬಳಕೆಗೆ ದಿನಕ್ಕೆ 50,000 ರುಪಾಯಿ ವೆಚ್ಚವಾಗುತ್ತದೆ ಎನ್ನಲಾಗಿದೆ.

ಮೇಕೆದಾಟು ಹುಯಿಲು

ತಂಜಾವೂರು: ಡಿಎಂಕೆ ಪಕ್ಷವು ತಮಿಳುನಾಡಿನ ಜನರ ಹಿತವನ್ನು ಕಾಯುವಲ್ಲಿ ಇಬ್ಬಗೆ ನೀತಿಯನ್ನು ಪ್ರದರ್ಶಿಸುತ್ತಿದೆ ಎಂದು ಎಐಎಡಿಎಂಕೆ ಪಕ್ಷದ ನಾಯಕ ಪಳನಿಸ್ವಾಮಿ ಆರೋಪಿಸಿದ್ದಾರೆ. ಇಲ್ಲಿ ಚುನಾವಣಾ ಪ್ರಚಾರಕಾರ್ಯದಲ್ಲಿ ತೊಡಗಿದ್ದ ಅವರು, ''ತಮಿಳು ಜನರ ಕೃಷಿಗೆ ಮಾರಕವಾದ ಮೇಕೆದಾಟು ಯೋಜನೆ ಜಾರಿಗೆ ಮುಂದಾಗಿರುವ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜತೆ ಡಿಎಂಕೆ ಜಂಟಿ ಪ್ರಚಾರ ನಡೆಸಿದೆ. ಕೇಂದ್ರದ ಜತೆ ಉದ್ದೇಶಪೂರ್ವಕವಾಗಿ ಸಂಘರ್ಷಕ್ಕಿಳಿದಿರುವ ಡಿಎಂಕೆ, ರಾಜ್ಯಕ್ಕೆ ಅನುದಾನ ತರುವಲ್ಲಿ ವಿಫಲವಾಗಿದೆ. ಆದರೆ ಚುನಾಯಿತ ಸರಕಾರ ಜನಹಿತಕ್ಕಾಗಿ ನುಡಿಯಬೇಕು'' ಎಂದರು.

ಕೋಟ್ ಆಫ್ ದ ಡೇ

ಮುಕ್ತ ಹಾಗೂ ನ್ಯಾಯಸಮ್ಮತ ಮತದಾನ ನಡೆಯದಂತೆ ಟಿಎಂಸಿ ಬೆಂಬಲಿಗರು ಬಿಜೆಪಿಯ ಕಾರ್ಯಕರ್ತರನ್ನು ಭಯಭೀತಗೊಳಿಸಲು ಯತ್ನಿಸುತ್ತಿದ್ದಾರೆ.

ಪ್ರಿಯಾಂಕ ತಿಬ್ರೆವಾಲ್, ಬಿಜೆಪಿ ಅಭ್ಯರ್ಥಿ

ಧಕ್ಕೆಯಾದರೆ ಆಂದೋಲನ: ಸ್ಟಾಲಿನ್

ಚೆನ್ನೈ: ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯಿಂದ

(ಡಿಲಿಮಿಟೇಶನ್) ರಾಜ್ಯಗಳ ಹಿತಾಸಕ್ತಿಗೆ ಧಕ್ಕೆಯಾದರೆ ಅಥವಾ ದಕ್ಷಿಣ ಭಾರತದ ರಾಜ್ಯಗಳ ಪ್ರಾತಿನಿಧ್ಯದ ಮೇಲೆ ವ್ಯತಿರಿಕ್ತ ಪರಿಣಾಮವಾದರೆ ಬೃಹತ್ ಆಂದೋಲನ ನಡೆಸಲಾಗುವುದು ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಈ ಸಂಬಂಧವಾಗಿ 'ಎಕ್ಸ್' (ಟ್ವಿಟರ್) ಮಾಧ್ಯಮದಲ್ಲಿ ಅವರು ಹಂಚಿಕೊಂಡಿರುವ ವಿಡಿಯೋ ಸಂದೇಶದಲ್ಲಿ, ''ಕ್ಷೇತ್ರಗಳ ಮರುವಿಂಗಡಣೆ ಕುರಿತಾದ ಸಾಂವಿಧಾನಿಕ ತಿದ್ದುಪಡಿ ಮೂಲಕ ಕೇಂದ್ರ ಸರಕಾರವು ಬುಲ್ಡೋಜರ್ ಮಾಡಲು ಉದ್ದೇಶಿಸಿದೆ. ಇದರ ವಿರುದ್ಧ ನಾವು ಶುರುವಿನಿಂದಲೂ ನಿರಂತರವಾಗಿ ಎಚ್ಚರಿಕೆ ನೀಡುತ್ತಲೇ ಬಂದಿದ್ದೇವೆ, ಜನರಲ್ಲಿ ಜಾಗೃತಿಯನ್ನೂ ಮೂಡಿಸಿದ್ದೇವೆ'' ಎಂದಿದ್ದಾರೆ.

''ಪ್ರಧಾನಿಯವರನ್ನು ಖುದ್ದಾಗಿ ಭೇಟಿಮಾಡಿ ಈ ಸಂಬಂಧದ ಕಳವಳಗಳನ್ನು ಮಂಡಿಸಲು ವಿವಿಧ ಪಕ್ಷಗಳ ಸಂಸದರಿಗೆ ಅವಕಾಶ ನೀಡುವಂತೆ ಹಿಂದೆ ನಾವು ಕೋರಿದ್ದುಂಟು; ಆದರೆ ಅದನ್ನು ನಿರಾಕರಿಸಲಾಯಿತು. ಡಿಲಿಮಿಟೇಶನ್ ಅನ್ನು ಜಾರಿಗೆ ತರುವ ಈ ಆತುರದ ಪ್ರಯತ್ನವು ಪ್ರಜಾಪ್ರಭುತ್ವದ ಮೇಲಿನ ಬಿಜೆಪಿ ಸರಕಾರದ ಸ್ಪಷ್ಟ ದಾಳಿಯಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ, ಇದು ರಾಜ್ಯಗಳ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ. ಈ ಡಿಲಿಮಿಟೇಶನ್ ಪ್ರಕ್ರಿಯೆಯನ್ನು ಕೈಗೊಳ್ಳುವ ಬಗೆ ಹೇಗೆ ಎಂಬುದನ್ನು ನಮಗೆ ತಿಳಿಸಿಲ್ಲ'' ಎಂದು ಕೂಡ ಸ್ಟಾಲಿನ್ ಆರೋಪಿಸಿದ್ದಾರೆ. ಜತೆಗೆ, ''ತಮಿಳುನಾಡಿನಲ್ಲಿ ಮಾತ್ರವಲ್ಲದೆ ಭಾರತದ ಯಾವೆಲ್ಲ ರಾಜ್ಯಗಳಲ್ಲಿ ಈ ಪ್ರಕ್ರಿಯೆ ಪರಿಣಾಮ ಬೀರುವುದೋ, ಅಲ್ಲಿನ ಮುಖ್ಯಮಂತ್ರಿಗಳು ಮತ್ತು ಪ್ರಮುಖ ರಾಜಕೀಯ ಪಕ್ಷಗಳ ನಾಯಕರನ್ನು ಕಲೆಹಾಕಿ, ಚೆನ್ನೈಯಲ್ಲಿ ಜಂಟಿ ಕ್ರಿಯಾಸಮಿತಿಯ ಸಭೆಯನ್ನು ನಡೆಸಲಿದ್ದೇವೆ'' ಎಂದು ಸ್ಟಾಲಿನ್ ತಿಳಿಸಿದ್ದಾರೆ.

ಅಧಿಕಾರಕ್ಕೆ ಬಂದರೆ ಬೆಳೆಸಾಲ ಮನ್ನಾ: ವಿಜಯ್

ತಿರುಪ್ಪೂರ್: ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ತಮ್ಮ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷವು ಜಯಗಳಿಸಿ ಅಧಿಕಾರಕ್ಕೆ ಬಂದರೆ, ಐದು ಎಕರೆಗಿಂತ ಕಡಿಮೆ ಜಮೀನನ್ನು ಹೊಂದಿರುವ ಸಣ್ಣ ರೈತರ ಬೆಳೆ ಸಾಲವನ್ನು ಸಂಪೂರ್ಣವಾಗಿ ಮತ್ತು 5 ಎಕರೆಗಿಂತ ಹೆಚ್ಚು ಜಮೀನು ಹೊಂದಿರುವವರ ಬೆಳೆ ಸಾಲವನ್ನು ಶೇ.50ರಷ್ಟು ಮನ್ನಾ ಮಾಡಲಾಗುವುದು ಎಂದು ಪಕ್ಷದ ಮುಖ್ಯಸ್ಥ ವಿಜಯ್ ಭರವಸೆ ನೀಡಿದ್ದಾರೆ. ಮಾತ್ರವಲ್ಲದೆ, ಭತ್ತಕ್ಕೆ ಪ್ರತಿ ಕ್ವಿಂಟಲ್‌ಗೆ 3,500 ರು. ಮತ್ತು ಕಬ್ಬಿಗೆ ಪ್ರತಿ ಟನ್‌ಗೆ 4,500 ರು. ನೀಡುವ ಆಶ್ವಾಸನೆಯೂ ಅವರಿಂದ ಹೊಮ್ಮಿದೆ. ಇಲ್ಲಿ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳನ್ನು (ಎಂಎಸ್‌ಎಂಇ) ಮುಚ್ಚಲಾಗಿದೆ ಎಂಬ ಆರೋಪದ ಕುರಿತಾಗಿ ಡಿಎಂಕೆ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿ, ''ಡಿಎಂಕೆ ಪಕ್ಷದ ಆಡಳಿತಾವಧಿಯಲ್ಲಿ ಅನೇಕ ಎಂಎಸ್‌ಎಂಇಗಳು ಮುಚ್ಚಲ್ಪಟ್ಟಿವೆ'' ಎಂದು ಆರೋಪಿಸಿದರು.

ಮೋದಿ-ದೀದಿ ಇಬ್ಬರೂ ಒಂದೇ: ಅಸಾದುದ್ದೀನ್

ಕೋಲ್ಕತ್ತಾ: ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಪಶ್ಚಿಮ

ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಈ ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳು ಎಂದು ಎಐಎಂಐಎಂ ಪಕ್ಷದ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಆರೋಪಿಸಿದ್ದಾರೆ. ಎನ್‌ಡಿಟಿವಿಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ''ಮಮತಾ ಅವರಿಗೆ ಜನರನ್ನು ಕಂಡರೆ ಪ್ರೀತಿಯಿಲ್ಲ, ಅವರ ಪ್ರೀತಿ ಏನಿದ್ದರೂ ಅವರ ಮತಗಳ ಮೇಲೆ. 1977ರಲ್ಲಿ ಬಿಜೆಪಿಯು ಬಂಗಾಳದಲ್ಲಿ ಕೇವಲ 4 ಶಾಸಕರನ್ನು ಹೊಂದಿತ್ತು; ಅದು ಈ ಪರಿ ಬೆಳೆಯುವುದಕ್ಕೆ ನೆರವಾದವರು, ಮುಸ್ಲಿಮರ ವಿಷಯದಲ್ಲಿ 'ಬಳಸಿ ಬಿಸಾಡುವ' ನೀತಿ ಅನುಸರಿಸಿದವರೂ ಮಮತಾರೇ. ಮುಸ್ಲಿಮರ ಮತಗಳನ್ನು ವಿಭಜಿಸುವ ಮೂಲಕ ಬಿಜೆಪಿಯ 'ಬಿ ಟೀಮ್' ಆಟವಾಡುತ್ತಿದೆ. ಕೆಲವರು 'ನೀವೇಕೆ ಸ್ಪರ್ಧಿಸುತ್ತಿದ್ದೀರಿ?' ಎಂದು ಪ್ರಶ್ನಿಸುತ್ತಿದ್ದಾರೆ. 8 ಲಕ್ಷ ಮುಸ್ಲಿಮರನ್ನು ಪೂರ್ವ ಪಾಕಿಸ್ತಾನಕ್ಕೆ ಗಡಿಪಾರು ಮಾಡಿದಾಗ, ಹೀಗೆ ಪ್ರಶ್ನಿಸುತ್ತಿರುವವರು ಎಲ್ಲಿದ್ದರು? ಮುಸ್ಲಿಮರಿಗಾಗಿ ಮಮತಾ ಏನು ಮಾಡಿದ್ದಾರೆ? ಅವರು ಮುಸ್ಲಿಮರನ್ನು ದನ, ಹಸು, ಎಮ್ಮೆಗಳಂತೆ ನಡೆಸಿಕೊಳ್ಳುತ್ತಿದ್ದಾರೆ ಮತ್ತು ಮತಗಳಿಕೆಯ ನಂತರ ಪಕ್ಕಕ್ಕೆ ನೂಕುತ್ತಿದ್ದಾರೆ, ಅಷ್ಟೇ'' ಎಂದು ಕಿಡಿ ಕಾರಿದರು.

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ



ಏಳು ಸಲ ಸಿಡಿಲು ಹೊಡೆದರೂ ಬದುಕುಳಿದ!

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

ಮಾನ್ಸೂನ್ ಮಳೆಯು ಭಾರತದ ಜೀವನಾಡಿ. ಮಾನ್ಸೂನ್ ಆರಂಭವಾಗುವುದಕ್ಕೆ ಮೊದಲು ಬರುತ್ತವೆ ಕಡು ಬೇಸಗೆಯ ಏಪ್ರಿಲ್, ಮೇ ತಿಂಗಳುಗಳು. ಮಾನ್ಸೂನ್ ಪೂರ್ವ ಮಳೆಯಲ್ಲಿ, ಮಳೆಗಿಂತ ಬಿರುಗಾಳಿ, ಗುಡುಗು, ಸಿಡಿಲುಗಳ ಆರ್ಭಟವೇ ಹೆಚ್ಚು. ಮಾವಿನ ಬೆಳೆಗಾರರು ಈ ಮಾನ್ಸೂನ್ ಪೂರ್ವ ಮಳೆಗೆ ಹಿಡಿಶಾಪವನ್ನು ಹಾಕುವುದುಂಟು. ಏಕೆಂದರೆ ಪ್ರತಿಸಲ ಬಿರುಗಾಳಿಯು ಬೀಸಿದಾಗ ಸಾಕಷ್ಟು ಮಾವಿನಕಾಯಿ ಉದುರಿಬೀಳುತ್ತವೆ ಹಾಗೂ ರೈತರಿಗೆ ಅಪಾರ ನಷ್ಟವನ್ನು ಉಂಟುಮಾಡುತ್ತವೆ. ಅದಕ್ಕಿಂತಲೂ ತೀವ್ರಸ್ವರೂಪದ್ದು, ಉತ್ತರ ಕರ್ನಾಟಕದ ಬಯಲು ಪ್ರದೇಶಗಳಲ್ಲಿ ಕುರಿಗಳಿಗೆ ಹಾಗೂ ಕುರಿಗಾಹಿಗಳಿಗೆ ಹೊಡೆಯುವ ಸಿಡಿಲು! ನೂರಾರು ಕುರಿಗಳು ಹಾಗೂ ಹತ್ತಾರು ಕುರಿಗಾಹಿಗಳ ಸಾಯುವ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದುವುದು ನಿಜಕ್ಕೂ ನೋವಿನ ವಿಷಯವಾಗಿದೆ.

ಸಿಡಿಲು ಹೊಡೆದರೆ ಮನುಷ್ಯನು ಬದುಕಲಾರ ಎನ್ನುವುದು ನಮಗೆ ತಿಳಿದ ವಿಚಾರ. ಆದರೆ ವ್ಯಕ್ತಿಯೊಬ್ಬರು ಒಂದಲ್ಲ ಏಳುಬಾರಿ ಸಿಡಿಲಿನ ಹೊಡೆತಕ್ಕೆ ತುತ್ತಾಗಿ ಬದುಕಿದರು ಎಂದರೆ ನಂಬಲು ಕಷ್ಟವಾಗುತ್ತದೆ. ಅಂಥ ವ್ಯಕ್ತಿಯೊಬ್ಬರು ಇದ್ದದ್ದು ನಿಜ. ಅವರೇ ರಾಯ್ ಕ್ಲೀವ್ ಲ್ಯಾಂಡ್ ಸಲಿವಾನ್ (1912-1983). ಸಲಿವಾನ್ ಅವರ ಈ ಕಥನವು ಕೇವಲ ವಿಚಿತ್ರ ಘಟನೆಯ ಕಥೆಯಲ್ಲ. ಇದು ಪ್ರಕೃತಿ, ವೈದ್ಯವಿಜ್ಞಾನ, ಮಾನವನ ಸಹನಶಕ್ತಿ ಮತ್ತು ಮನಸ್ಸಿನ ಆಘಾತಗಳ ಕಥೆಯೂ ಹೌದು.

ರಾಯ್ ಸಲಿವಾನ್ ಅಮೆರಿಕದ ವರ್ಜೀನಿಯಾ ರಾಜ್ಯದ 'ಶೆನಂಡೋವಾ ರಾಷ್ಟ್ರೀಯ ಉದ್ಯಾನ'ದಲ್ಲಿ 'ಪಾರ್ಕ್ ರೇಂಜರ್' ಆಗಿ ಕೆಲಸ ಮಾಡುತ್ತಿದ್ದರು. ಕಾಡು, ಬೆಟ್ಟ, ಗಾಳಿ, ಮಳೆ, ಹಿಮ, ಮಂಜು ಇವೆಲ್ಲವೂ ಅವರ ಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ಅವರದು ಕಚೇರಿಯಲ್ಲಿ ಕುಳಿತು ಬೆಳಗ್ಗೆ 9ರಿಂದ ಸಂಜೆ 5 ಗಂಟೆಯವರಿಗೆ ದುಡಿಯುವ ಕೆಲಸವಾಗಿರಲಿಲ್ಲ. ಯಾವಾಗಲೂ ಅವರು ಆಕಾಶವನ್ನು ನೋಡುತ್ತಾ, ಅಂದಿನ ಹವಾಮಾನವನ್ನು ಊಹಿಸಬೇಕಾಗಿತ್ತು. ಇವತ್ತು ದಿನಪೂರ್ತಿ ಬಿಸಿಲಿರುತ್ತ ದೆಯೇ? ಮೋಡ ಕವಿದ ವಾತಾವರಣ ಇರುತ್ತದೆಯೇ? ಇಂದು ಮಂಜು ಸುರಿಯಬಹುದೇ? ಮಳೆ ಬರಬಹುದೇ? ಮಳೆಯೊಡನೆ ಬಿರುಗಾಳಿ, ಗುಡುಗು, ಸಿಡಿಲು ಹೊಡೆಯಬಹುದೇ ಹೀಗೆ ಪ್ರಕೃತಿಯ ಸ್ವಭಾವವನ್ನು ಸದಾ ಅಧ್ಯಯನ ಮಾಡುವ ಉದ್ಯೋಗ ಅವರದ್ದು. ಜತೆಗೆ ಅವರೊಬ್ಬರೇ ಇಡೀ ಕಾಡಿನ ತುಂಬಾ ಓಡಾಡುತ್ತಿರಬೇಕಾಗಿತ್ತು. ಅಮೆರಿಕದಲ್ಲಿ ಅನಿರೀಕ್ಷಿತವಾಗಿ ಬಿರುಗಾಳಿ, ಗುಡುಗು, ಸಿಡಿಲ ಸಮೇತ ಮಳೆ ಬರುವುದು ಅಪರೂಪವೇನಲ್ಲ. ಹಾಗಾಗಿ ಸಲಿವಾನ್, ಅನೇಕ ಸಲ ಈ ಅನಿರೀಕ್ಷಿತ ಸನ್ನಿವೇಶಗಳನ್ನು ಎದುರಿಸಬೇಕಾಗಿತ್ತು. ಅವರು ಒಂದಲ್ಲ, ಎರಡಲ್ಲ 7 ಬಾರಿ ಸಿಡಿಲಿನ ಹೊಡೆತಕ್ಕೆ ತುತ್ತಾಗಬೇಕಾಯಿತು.

1 **ಮೊದಲ ಆಘಾತ:** 1942ರಲ್ಲಿ ಮೊದಲ ಬಾರಿಗೆ ಸಿಡಿಲು ಹೊಡೆಯಿತು. ಮಿಲ್ಲಿಫೆರಿಸ್ ಎಂಬ ಸ್ಥಳ. ಕಾಡಿನಲ್ಲಿ ಎಲ್ಲಾದರೂ ಕಾಡ್ಗಿಚ್ಚು ಬಿದ್ದಿದೆಯೇ ಎನ್ನುವುದನ್ನು ನೋಡುವುದಕ್ಕಾಗಿ ಕಟ್ಟಿದ ವೀಕ್ಷಣಾ ಗೋಪುರದ ಮೇಲಿದ್ದರು. ಇದ್ದಕ್ಕಿದ್ದ ಹಾಗೆ ಬಿರುಗಾಳಿ ಆರಂಭವಾಯಿತು. ಆ ಗೋಪುರದ ಸುತ್ತಮುತ್ತಲೇ ಸಿಡಿಲು ಹೊಡೆಯಲಾರಂಬಿಸಿತು. ಆಗ ಅವರಿಗೆ ಇದು ಸುರಕ್ಷಿತವಲ್ಲ ಎಂದು ಅರ್ಥವಾಯಿತು. ಕೂಡಲೇ ಗೋಪುರದಿಂದ ಇಳಿದು, ತಪ್ಪಿಸಿಕೊಂಡು ಹೋಗುವ ಕ್ಷಣದಲ್ಲೇ ಸಿಡಿಲು ಅವರಿಗೆ ಹೊಡೆಯಿತು. ಸಿಡಿಲು ಅವರ ಕಾಲಿಗೆ ಹೊಡೆದು ಗಂಭೀರ ಸ್ವರೂಪದ ಸುಟ್ಟ ಗಾಯವನ್ನು ಮಾಡಿ, ಅವರ ಬೂಟಿನಲ್ಲಿ ರಂಧ್ರವನ್ನು ಕೊರೆದು, ನೆಲಕ್ಕೆ ಇಳಿದಿತ್ತು. ಸಾಮಾನ್ಯ ಮನುಷ್ಯನಿಗೆ ಇಂಥ ಒಂದು ಅನುಭವವಾದರೆ ಸಾಕು, ಮತ್ತೊಂದು ಸಲ ಅವನು ಬಿರುಗಾಳಿಯಲ್ಲಿ ಮನೆಯನ್ನು ಬಿಟ್ಟು ಹೊರಗೆ ಬರುವ ಧೈರ್ಯವನ್ನು ಮಾಡುತ್ತಿರಲಿಲ್ಲ. ಆದರೆ ಸಲಿವಾನ್ ಅವರಿಗೆ ಇದು ಆರಂಭ ಮಾತ್ರವಾಗಿತ್ತು.

2 **ಎರಡನೇ ಆಘಾತ:** ಇಪ್ಪತ್ತೇಳು ವರ್ಷಗಳ ನಂತರ (1969), ಸಲಿವಾನ್ ಅವರು ತಮ್ಮ ಲಾರಿಯನ್ನು ಓಡಿಸಿಕೊಂಡು ಹೋಗುತ್ತಿದ್ದಾಗ ಕಿಟಕಿಯ ಮೂಲಕ ಸಿಡಿಲು ಪ್ರವೇಶಿಸಿತು. ಇದು ಅತ್ಯಂತ ಅಪರೂಪದ ಘಟನೆ, ಏಕೆಂದರೆ ವಾಹನದ ಟೈರ್‌ಗಳು ರಬ್ಬರ್‌ನಿಂದ ಮಾಡಲ್ಪಟ್ಟಿರುವುದರಿಂದ, ಸಾಮಾನ್ಯವಾಗಿ ಸಿಡಿಲು ವಾಹನದೊಳಗೆ ಪ್ರವೇಶಿಸುವುದಿಲ್ಲ. ಆದರೆ ಕಿಟಕಿ ತೆರೆದಿದ್ದರಿಂದ ಸಿಡಿಲು ನೇರವಾಗಿ ಅವರ ಮೇಲೆ ಬಡಿಯಿತು. ಅವರು ಪ್ರಜ್ಞೆ ತಪ್ಪಿದರು, ಹುಬ್ಬುಗಳು ಮತ್ತು ರೆಪ್ಪೆಗೂದಲುಗಳು ಸಂಪೂರ್ಣವಾಗಿ ಸುಟ್ಟುಹೋದವು.

3 **ಮೂರನೇ ಆಘಾತ:** ಮತ್ತೊಂದು ವರ್ಷ ಕಳೆಯುವಷ್ಟರಲ್ಲಿ (1970), ತಮ್ಮ ಮನೆಯ ಮುಂಭಾಗದ ತೋಟದಲ್ಲಿದ್ದಾಗ ಸಿಡಿಲು ಬಡಿದು ಅವರ ಎಡ ಹೆಗಲಿಗೆ ಪೆಟ್ಟಾಯಿತು. ಅಲ್ಲಿಯವರೆಗೂ ಧೈರ್ಯದಿಂದ ಇದ್ದ ಸಲಿವಾನರಿಗೆ ಈಗ ಸಣ್ಣದಾಗಿ ಅಳುಕು ಕಾಣಿಸಲಾರಂಭಿಸಿತು. 'ನಾನು ಓರ್ವ ಶಾಪಗ್ರಸ್ತ ವ್ಯಕ್ತಿಯಾಗಿರಬೇಕು; ಅದಕ್ಕೆ ನನಗೆ ಹೀಗೆ ಪದೇ ಪದೆ ಸಿಡಿಲು ಹೊಡೆಯುತ್ತಿದೆ' ಎಂದು ಭಯಪಡಲಾರಂಭಿಸಿದರು.

4 **ನಾಲ್ಕನೇ ಆಘಾತ:** ಇದು 1972ರಲ್ಲಿ ಆದ ಅತ್ಯಂತ ಪ್ರಸಿದ್ಧವಾದ ಘಟನೆ. ಪಾರ್ಕ್ ಕಚೇರಿಯಲ್ಲಿದ್ದಾಗ ಸಿಡಿಲು ಬಡಿದು ಅವರ ತಲೆಯ ಕೂದಲು ಬೆಂಕಿಗೆ ಆಹುತಿಯಾಯಿತು. ಅವರು ತಮ್ಮ ತಲೆಯನ್ನು ಒದ್ದೆ ಬಟ್ಟೆಯಿಂದ ನಂದಿಸಬೇಕಾಯಿತು. ಅಂದಿನಿಂದ ಸಲಿವಾನ್ ಅವರು ಹೋದಲ್ಲೆಲ್ಲಾ ತಮ್ಮ ಲಾರಿಯಲ್ಲಿ ಒಂದು ಬಕೆಟ್ ನೀರನ್ನು ಇಟ್ಟುಕೊಳ್ಳಲಾರಂಭಿಸಿದರು.

5 **ಐದನೇ ಆಘಾತ:** ಮತ್ತೊಮ್ಮೆ (1973ರಲ್ಲಿ) ಲಾರಿಯಲ್ಲಿ ಹೋಗುತ್ತಿದ್ದಾಗ ಮೋಡವೊಂದು ತನ್ನನ್ನೇ ಹಿಂಬಾಲಿಸುತ್ತಿದೆ ಎಂದು ಅವರಿಗೆ ಅನಿಸಿತು. ಅವರು ವೇಗವಾಗಿ ಲಾರಿ ಓಡಿಸಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ, ಲಾರಿಯಿಂದ ಕೆಳಗಿಳಿದ ತಕ್ಷಣ ಸಿಡಿಲು ಬಡಿಯಿತು. ಮತ್ತೊಮ್ಮೆ ಅವರ ಕೂದಲು ಸುಟ್ಟುಹೋಯಿತು ಮತ್ತು ಹ್ಯಾಟ್ ಹಾರಿಹೋಯಿತು.

6 **ಆರನೇ ಆಘಾತ:** 1976ರಲ್ಲಿ ಒಮ್ಮೆ ನಡೆಯುತ್ತ ಸಾಗುತ್ತಿದ್ದಾಗ ಸಿಡಿಲು ಬಡಿದು ಅವರ ಪಾದದ ಕೀಲು (ಆಂಕಲ್) ಗಾಯಗೊಂಡಿತು. ಈ ಸಮಯದಲ್ಲಿ ಅವರು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದರು. ಆದರೂ ಪ್ರಕೃತಿ ಅವರನ್ನು ಬಿಡಲಿಲ್ಲ.

7 **ಏಳನೇ ಆಘಾತ:** 1977ರಲ್ಲಿ, ಕೊನೆಯ ಬಾರಿ ಕೆರೆಯಲ್ಲಿ ಮೀನು ಹಿಡಿಯುತ್ತಿದ್ದಾಗ ಸಿಡಿಲು ಬಡಿಯಿತು. ಈ ಬಾರಿ ಅವರ ಎದೆ ಮತ್ತು ಹೊಟ್ಟೆಯ ಭಾಗದಲ್ಲಿ ತೀವ್ರವಾದ ಸುಟ್ಟ ಗಾಯಗಳಾದವು. ಸಿಡಿಲಿನ ಹೊಡೆತದ ಕಾರಣ ಅವರು ಮೊದಲ ಬಾರಿಗೆ ಆಸ್ಪತ್ರೆಗೆ ದಾಖಲಾಗಬೇಕಾಯಿತು.

- **ವಿಸ್ಮಯ:** ಸಲಿವಾನ್ ಅವರು ಏಳು ಬಾರಿ ಸಿಡಿಲು ಬಡಿತಕ್ಕೆ ಒಳಗಾಗಿಯೂ ಬದುಕುಳಿದದ್ದು ವಿಜ್ಞಾನಿಗಳಿಗೆ ಒಂದು ದೊಡ್ಡ ವಿಸ್ಮಯಕರ ವಿಚಾರವಾಗಿತ್ತು. ಅವರು ಹೇಗೆ ಬದುಕುಳಿದರು ಮತ್ತು ಅವರ ದೇಹಕ್ಕೆ ವಿದ್ಯುತ್ ಪ್ರತಿರೋಧ ಶಕ್ತಿ ಇತ್ತೇ ಎಂಬ ಪ್ರಶ್ನೆಗಳು ಎದ್ದವು. ಸಲಿವಾನ್ ಅವರು ಬದುಕುಳಿಯಲು ಕೇವಲ ಅವರ ದೈಹಿಕ ರೋಧಕ ಶಕ್ತಿಯು ಕಾರಣವಾಗಿರಲಿಲ್ಲ; ಬದಲಿಗೆ ಕೆಲವು ಭೌತಿಕ ಮತ್ತು ಆಕಸ್ಮಿಕ ಸಾಂದರ್ಭಿಕ ಕಾರಣಗಳೂ ಇದ್ದವು.
- **ಫ್ಲ್ಯಾಶ್ ಓವರ್ ಪರಿಣಾಮ (ಫ್ಲ್ಯಾಶ್ ಓವರ್ ಇಫೆಕ್ಟ್):** ಸಿಡಿಲು ಬಡಿದಾಗ ವಿದ್ಯುತ್ ನೇರವಾಗಿ ದೇಹದ ಒಳಗಿನ ಅಂಗಾಂಗಗಳ ಮೂಲಕ ಹರಿಯುವ ಬದಲು, ಚರ್ಮದ ಮೇಲ್ಮೈಯಲ್ಲಿರುವ ಬೆವರು ಅಥವಾ ಮಳೆನೀರಿನ ಮೂಲಕ ಹರಿದು ಭೂಮಿಗೆ ಸೇರಬಹುದು. ಇದನ್ನು 'ಫ್ಲ್ಯಾಶ್ ಓವರ್' ಎನ್ನಲಾಗುತ್ತದೆ. ಸಲಿವಾನ್ ಅವರ ಸಂದರ್ಭದಲ್ಲಿ ಹಲವು ಬಾರಿ ವಿದ್ಯುತ್ ಅವರ ದೇಹದ ಒಳಗೆ ಹೋಗುವ ಬದಲು ಹೊರಭಾಗದಲ್ಲಿ ಹರಿದುಹೋಗಿತ್ತು. ಹಾಗೆ ಹರಿದುಹೋಗುವಾಗ 'ಲಿಚೆನ್‌ಬರ್ಗ್ ಆಕೃತಿ'ಗಳನ್ನು ಸೃಜಿಸಿತ್ತು.
- **ವಾಹನಗಳ ರಕ್ಷಣೆ:** ಅವರು ಲಾರಿಯೊಳಗೆ ಇದ್ದಾಗ ಸಿಡಿಲು ಬಡಿದಿತ್ತು. ಲಾರಿಯ ಲೋಹದ ಮೈಬದಿಯು 'ಫ್ಯಾರಡೆ ಪಂಜರ'ದಂತೆ (ಫ್ಯಾರಡೇ'ಸ್ ಕೇಜ್- ಲೋಹದ ಪಂಜರದಲ್ಲಿದ್ದಾಗ, ವಿದ್ಯುತ್ತು ಲೋಹದ ತಂತಿಬಲೆಯ ಮೂಲಕ ಹಾದು ನೆಲಕ್ಕೆ ಹೋಗುತ್ತದೆ. ಪಂಜರದ ಒಳಗಿರುವವರಿಗೆ ತೊಂದರೆಯನ್ನು ಉಂಟುಮಾಡುವುದಿಲ್ಲ. ಲೋಹದ ಲಾರಿಮೈ ವಿದ್ಯುತ್ತನ್ನು ಸುರಕ್ಷಿತವಾಗಿ ನೆಲಕ್ಕೆ ಹರಿಯಲು ಅನುವು ಮಾಡಿಕೊಟ್ಟಿತ್ತು) ಕೆಲಸ ಮಾಡಿ, ವಿದ್ಯುತ್ತು ಅವರ ದೇಹದ ಸಂಪರ್ಕಕ್ಕೆ ಬರದಂತೆ, ಹೊರಭಾಗದಿಂದಲೇ ಭೂಮಿಗೆ ವರ್ಗಾಯಿಸಿತ್ತು.
- **ಪ್ರಥಮೋಪಚಾರ:** ಅವರು ಅರಣ್ಯ ರಕ್ಷಕರಾಗಿದ್ದರಿಂದ, ಅವರಿಗೆ ಪ್ರಥಮ ಚಿಕಿತ್ಸೆ ಮತ್ತು ಸುರಕ್ಷತಾ ಕ್ರಮಗಳ ಬಗ್ಗೆ ಅರಿವಿತ್ತು. ಪ್ರತಿ ಬಾರಿ ಸಿಡಿಲು ಬಡಿದಾಗಲೂ ಅವರು ತಕ್ಷಣವೇ ಚೇತರಿಸಿಕೊಳ್ಳುವ ಪ್ರಯತ್ನ ಮಾಡಿದರು.
- **ವಿದ್ಯುತ್ ಪ್ರತಿರೋಧ ಶಕ್ತಿ (ಇಲೆಕ್ಟ್ರಿಕಲ್ ರೆಸಿಸ್ಟನ್ಸ್):** ವೈಜ್ಞಾನಿಕವಾಗಿ ಹೇಳುವುದಾದರೆ, ಸಲಿವಾನ್ ಅವರ ದೇಹಕ್ಕೆ ಯಾವುದೇ ವಿಶೇಷವಾದ 'ನೈಸರ್ಗಿಕ ವಿದ್ಯುತ್ ಪ್ರತಿರೋಧ' ಇರಲಿಲ್ಲ. ಮಾನವ ದೇಹದಲ್ಲಿ ಸಾಮಾನ್ಯವಾಗಿ ಶೇಕಡಾ 70ರಷ್ಟು ನೀರಿರುವುದರಿಂದ, ಅದು ವಿದ್ಯುತ್ ವಾಹಕವೇ ಆಗಿರುತ್ತದೆ.
- **ಕೆಲವು ಪ್ರಮುಖ ಅಂಶಗಳು**

1 ಚರ್ಮದ ಪ್ರತಿರೋಧ: ಪ್ರತಿಯೊಬ್ಬ ಮನುಷ್ಯನ ಚರ್ಮದ ದಪ್ಪ ಮತ್ತು ತೇವಾಂಶಕ್ಕೆ ಅನುಗುಣವಾಗಿ ವಿದ್ಯುತ್ ಪ್ರತಿರೋಧ ವ್ಯತ್ಯಾಸವಾಗುತ್ತದೆ. ಒಣ ಚರ್ಮವು ವಿದ್ಯುತ್‌ಗೆ ಹೆಚ್ಚಿನ ಪ್ರತಿರೋಧ ಒಡ್ಡುತ್ತದೆ.

2 ಅದೃಷ್ಟ ಅಥವಾ ಸಂಭವನೀಯತೆ: ವಿಜ್ಞಾನಿಗಳು ಇದನ್ನು 'ಶುದ್ಧ ಅದೃಷ್ಟ' ಅಥವಾ 'ಸಂಖ್ಯಾಶಾಸ್ತ್ರದ ಅಸಹಜತೆ' (ಸ್ಟಾಟಿಸ್ಟಿಕಲಿ ಅನಾಮಲಿ) ಎಂದು ಕರೆಯುತ್ತಾರೆ. ಸಲಿವಾನ್ ಎತ್ತರದ ಪರ್ವತ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದರಿಂದ ಸಿಡಿಲು ಬಡಿಯುವ ಸಾಧ್ಯತೆ ಹೆಚ್ಚಿತ್ತು. ಸಿಡಿಲಿನ ವಿದ್ಯುತ್, ಅಕಸ್ಮಾತ್ ಅವರ ಹೃದಯ/ಮಿದುಳಿನ ಮೂಲಕ ಹಾದುಹೋಗಿದ್ದರೆ, ಅವರು ಸ್ಥಳದಲ್ಲೇ ಸಾವನ್ನಪ್ಪುತ್ತಿದ್ದರು. ಆದರೆ ಹಾಗೆ ಆಗಲಿಲ್ಲ. ವಿದ್ಯುತ್ತು ಚರ್ಮದ ಮೇಲ್ಮೈಯಲ್ಲಿ ಹಾದುಹೋಗಿತ್ತು. ಹಾಗಾಗಿ ವಿದ್ಯುತ್ತು ಹೃದಯ ಮತ್ತು ಮಿದುಳಿನ ಮೂಲಕ ಹಾದುಹೋಗದೇ ಇದ್ದದ್ದೇ ಅವರ ಬದುಕುಳಿಯಲು ಪ್ರಮುಖ ಕಾರಣ ಎನ್ನುವ ತೀರ್ಮಾನಕ್ಕೆ ಬರಲಾಯಿತು.

3 **ಗಾಯಗಳ ಸಾಕ್ಷಿ:** ಸಲಿವಾನ್ ಅವರ ದೇಹಕ್ಕೆ ವಿದ್ಯುತ್ ಪ್ರತಿರೋಧ ಇರಲಿಲ್ಲ ಎಂಬುದಕ್ಕೆ ಅವರ ದೇಹದ ಮೇಲಿದ್ದ ಸುಟ್ಟ ಗಾಯಗಳೇ ಸಾಕ್ಷಿ. ಅವರ ಕೂದಲು ಸುಟ್ಟುಹೋಗುತ್ತಿದ್ದವು, ಬೂಟುಗಳಲ್ಲಿ ರಂಧ್ರವಾಗುತ್ತಿದ್ದವು ಮತ್ತು ಚರ್ಮದ ಮೇಲೆ ಗಾಯಗಳಾಗುತ್ತಿದ್ದವು. ಪ್ರತಿರೋಧ ಶಕ್ತಿ ಇದ್ದಿದ್ದರೆ ಇಂಥ ಗಾಯಗಳಾಗುತ್ತಿರಲಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಯ್ ಸಲಿವಾನ್ ಅವರ ದೇಹವು 'ಸೂಪರ್ ಹ್ಯೂಮನ್' ಆಗಿರಲಿಲ್ಲ. ಅವರು ಬದುಕುಳಿದದ್ದು ಅವರ ದೇಹದ ಮೇಲ್ಮೈ ಮೂಲಕ ವಿದ್ಯುತ್ ಹರಿದಿದ್ದರಿಂದ (ಫ್ಲ್ಯಾಶ್ ಓವರ್) ಮತ್ತು ಆ ಸಮಯದಲ್ಲಿ ಅವರ ಹೃದಯಕ್ಕೆ ಹೆಚ್ಚಿನ ಹಾನಿಯಾಗದಿದ್ದರಿಂದ ಮಾತ್ರ. ಇದು ವೈದ್ಯಕೀಯ ಇತಿಹಾಸದ ಅತ್ಯಂತ ಅಪರೂಪದ ಅದೃಷ್ಟದ ಪ್ರಕರಣವಾಗಿದೆ.

- **ವೈದ್ಯಕೀಯ ಲೋಕಕ್ಕೆ ರಾಯ್ ನೀಡಿದ ಪಾಠಗಳು**

ರಾಯ್ ಸಲಿವಾನ್ ಅವರ ದೇಹವು ಪದೇ ಪದೆ ವಿದ್ಯುತ್ ಆಘಾತಕ್ಕೆ ಒಳಗಾಗಿದ್ದರೂ ಅದು ಹೇಗೆ ಸಹಿಸಿಕೊಂಡಿತು ಎಂಬುದು ವೈದ್ಯರಿಗೆ ಇಂದಿಗೂ ಅಚ್ಚರಿ.

- **ಸುಟ್ಟ ಗಾಯಗಳ ಮಾದರಿ:** ಸಿಡಿಲು ಬಡಿದಾಗ ದೇಹದ ಮೇಲ್ಮೈಯಲ್ಲಿ 'ಲಿಚ್ಟೆನ್ಬರ್ಗ್ ಫಿಗರ್ಸ್' (Lichtenberg figures) ಎಂಬ ಫೆರ್ನ್ ಗಿಡದ ಎಲೆಯಂಥ ಗುರುತುಗಳು ಮೂಡುತ್ತವೆ. ಸಲಿವಾನ್ ಅವರ ಮೇಲೆ ಈ ಗುರುತುಗಳನ್ನು ಅಧ್ಯಯನ ಮಾಡುವ ಮೂಲಕ ವಿದ್ಯುತ್ ಚರ್ಮದ ಮೇಲೆ ಹೇಗೆ ಚಲಿಸುತ್ತದೆ ಎಂಬುದನ್ನು ವಿಜ್ಞಾನಿಗಳು ಅರ್ಥಮಾಡಿಕೊಂಡರು.
- **ನರಸಂಬಂಧಿ ಅಸ್ವಸ್ಥತೆ:** ಪ್ರತಿ ಬಾರಿ ಸಿಡಿಲು ಬಡಿದಾಗಲೂ ಅವರ ನರಮಂಡಲಕ್ಕೆ ಹಾನಿಯಾಗುತ್ತಿತ್ತು. ಇದು ಅವರಿಗೆ ತಲೆನೋವು, ಆತಂಕ ಮತ್ತು ನಿದ್ರಾಹೀನತೆಯಂಥ ಸಮಸ್ಯೆಗಳನ್ನು ತಂದೊಡ್ಡಿತು.
- **ಹೃದಯದ ಮೇಲೆ ಪರಿಣಾಮ:** ಅತಿ ಹೆಚ್ಚಿನ ವೋಲ್ಟೇಜ್‌ನ ವಿದ್ಯುತ್ ಹರಿದಾಗ ಹೃದಯ ಬಡಿತ ನಿಲ್ಲುವ ಸಾಧ್ಯತೆ ಇರುತ್ತದೆ. ಸಲಿವಾನ್ ಹೇಗೆ ಬದುಕುಳಿದರು ಎಂಬುದು ಅವರ ದೇಹದ ವಿಶಿಷ್ಟ ಪ್ರತಿರೋಧ ಶಕ್ತಿಯನ್ನು ತೋರಿಸುತ್ತದೆ.

- **ಮಾನಸಿಕ ಪರಿಣಾಮ ಮತ್ತು ಸಾಮಾಜಿಕ ಬಹಿಷ್ಕಾರ**

ದೈಹಿಕ ಗಾಯಗಳಿಗಿಂತ ಸಲಿವಾನ್ ಅವರಿಗೆ ಮಾನಸಿಕ ಗಾಯಗಳೇ ಹೆಚ್ಚು ನೋವು ನೀಡಿದವು. ಜನರು ಅವರನ್ನು 'ಜೀವಂತ ಮಿಂಚಿನ ಕಂಬ' ಎಂದು ಕರೆಯಲಾರಂಭಿಸಿದರು. ಅವರ ಜತೆಗಿದ್ದರೆ ತಮಗೂ ಸಿಡಿಲು ಬಡಿಯಬಹುದು ಎಂಬ ಭಯದಿಂದ ಗೆಳೆಯರು ಮತ್ತು ಸಂಬಂಧಿಕರು ಅವರಿಂದ ದೂರವಿರಲು ಪ್ರಾರಂಭಿಸಿದರು. ಒಮ್ಮೆ ಅವರ ಪತ್ನಿ ಬಟ್ಟೆ ಒಣಗಿಸುತ್ತಿದ್ದಾಗ ಅವರಿಗೂ ಸಿಡಿಲು ಬಡಿಯಿತು (ಆಗ ಸಲಿವಾನ್ ಪತ್ನಿಯ ಜತೆಗಿದ್ದರು). ಈ ಘಟನೆಯ ನಂತರ ಸಲಿವಾನ್ ತೀವ್ರ ಖಿನ್ನತೆಗೆ ಒಳಗಾದರು. 'ನಾನು ಪ್ರಕೃತಿಯಿಂದ ಶಾಪಗ್ರಸ್ತನಾಗಿದ್ದೇನೆ' ಎಂಬ ಭಾವನೆ ಅವರನ್ನು ಕಾಡುತ್ತಿತ್ತು.

- **ಆಧುನಿಕ ಪ್ರಸ್ತುತತೆ: ನಾವು ಕಲಿಯಬೇಕಾದ್ದೇನು?**

ರಾಯ್ ಸಲಿವಾನ್ ಅವರ ಕಥೆಯು ಇಂದಿಗೂ ನಮಗೆ ಸಿಡಿಲಿನ ಸುರಕ್ಷತೆಯ ಬಗ್ಗೆ ಕೆಲವು ಪ್ರಮುಖ ಪಾಠಗಳನ್ನು ನೀಡುತ್ತದೆ. ಅವೆಂದರೆ:

- **ಸಿಡಿಲು ಎಲ್ಲಿ ಬೇಕಾದರೂ ಬರಬಹುದು:** ಲಾರಿಯೊಳಗೆ ಅಥವಾ ಮನೆಯ ಮುಂದೆ ಇದ್ದಾಗಲೂ ಎಚ್ಚರಿಕೆ ಅಗತ್ಯ.
- **ಎತ್ತರದ ಪ್ರದೇಶಗಳು ಅಪಾಯಕಾರಿ:** ಸಲಿವಾನ್ ಅವರು ಪರ್ವತ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರಿಗೆ ಅಪಾಯ ಹೆಚ್ಚಾಗಿತ್ತು.
- **ಮಾನಸಿಕ ಆರೋಗ್ಯ:** ಇಂಥ ಆಘಾತಕಾರಿ ಘಟನೆಗಳ ನಂತರ ವ್ಯಕ್ತಿಗೆ ದೈಹಿಕ ಚಿಕಿತ್ಸೆಯ ಜತೆಗೆ ಮಾನಸಿಕ ಸಾಂತ್ವನವೂ ಅಷ್ಟೇ ಮುಖ್ಯ.

- **ಸಮಾರೋಪ**

ರಾಯ್ ಸಲಿವಾನ್ ಅವರ ಜೀವನವು ಅದೃಷ್ಟ ಮತ್ತು ದುರದೃಷ್ಟದ ವಿಚಿತ್ರ ಸಂಗಮವಾಗಿತ್ತು. ಏಳು ಬಾರಿ ಸಾವಿನ ದವಡೆಯಿಂದ ಬದುಕುಳಿದ ಅವರು, ಅಂತಿಮವಾಗಿ 1983ರಲ್ಲಿ ತಮ್ಮ 71ನೇ ವಯಸ್ಸಿನಲ್ಲಿ ವೈಯಕ್ತಿಕ ಕಾರಣಗಳಿಂದಾಗಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಅವರ ಬದುಕು ನಮಗೆ ಒಂದು ಸಂಗತಿಯನ್ನು ಸ್ಪಷ್ಟಪಡಿಸುತ್ತದೆ- ಮನುಷ್ಯ ತಂತ್ರಜ್ಞಾನವನ್ನು ಎಷ್ಟೇ ಬೆಳೆಸಿದರೂ, ಪ್ರಕೃತಿಯ ರಹಸ್ಯಗಳು ಮತ್ತು ಅದರ ಶಕ್ತಿ ನಮಗೆ ಎಟುಕದಂತಿವೆ. ರಾಯ್ ಸಲಿವಾನ್ ಅವರ ಹೆಸರು ವೈದ್ಯಕೀಯ ಇತಿಹಾಸದ ಪುಟಗಳಲ್ಲಿ 'ಎಂದಿಗೂ ಅಳಿಯದ ಅಚ್ಚರಿ'ಯಾಗಿ ಉಳಿದಿದೆ. ಅವರ ದೇಹದ ಮೇಲಿನ ಗಾಯಗಳು ಕಾಲಾನಂತರದಲ್ಲಿ ಮಾಸಿಹೋಗಿರಬಹುದು, ಆದರೆ ಅವರು ನೀಡಿದ ವೈಜ್ಞಾನಿಕ ಮಾಹಿತಿಗಳು ಇಂದಿಗೂ ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯಮೂಲ್ಯವಾಗಿವೆ.

ಹೋಲಿಸಿಕೊಂಡು ನಾವು ದುಃಖಿಗಳು

- ಡಾ. ಎನ್. ಜಯರಾಮ ಶೆಟ್ಟಿ

ನಮ್ಮ ಪರಿಸ್ಥಿತಿ ಏನೇ ಇರಲಿ ಅದನ್ನು ಇರುವ ಹದದಲ್ಲೇ, ಲಯದಲ್ಲೇ ಸ್ವೀಕರಿಸುವುದು ಸುಖ-ಸಮಾಧಾನದ ರಹದಾರಿಯೆಂದು ನಾವು ತಿಳಿಯಬೇಕು. ಇಲ್ಲದಕ್ಕೆ, ದಕ್ಕದಕ್ಕೆ ಹಪಹಪಿಸುವುದೊ, ಮರುಗುವುದೊ ನಮ್ಮ ಸಹಜ ಗುಣ. ಅಂಥ ಯೋಚನೆ ಮನದಾಳಕ್ಕೆ ಇಳಿದಾಗ ಬದುಕು ಇನ್ನಷ್ಟು ಅಸಹನೀಯವಾಗುತ್ತದೆ. ಪಾಲಿಗೆ ಬಂದದ್ದು ಪಂಚಾ ಮೃತವೆಂದು ತೃಪ್ತರಾಗಿ ಬದುಕಿದಾಗ ಮನಸ್ಸೂ ಪ್ರಸ ನ್ನವಾಗುವುದು, ಸಂಬಂಧಗಳು ಕುದುರುವುವು. ಹೋಲಿಕೆಗಿಂತ ಹೇಯಕೃತ್ಯ ಬೇರೊಂದಿಲ್ಲವಂತೆ. ನನಗೆ ಇಷ್ಟಾದರೂ ಸಿಕ್ಕಿತಲ್ಲ ಎಂದು ನೆಮ್ಮದಿ ಪಡು ವುದು ಒಂದಾದರೆ, 'ಅವರಿಗೂ ಅಷ್ಟೇ ಸಿಕ್ಕಿತಲ್ಲ' ಎಂ ದು ಅಸೂಯೆಗೆ ಪ್ರಚೋದಿಸುವ ನಮ್ಮ ಒಳಮನಸ್ಸು ಉಳಿದೆಲ್ಲ ಗದ್ದಲ, ಗೊಂದಲಕ್ಕೆ ಕಾರಣವಾಗುತ್ತದೆ.

ಗುಣಮಣಿಯಾಗಿರುವ ಝೆನ್ ಗುರುಗಳು ಅವರು. ಪ್ರಸನ್ನತೆ, ಶಾಂತಚಿತ್ತತೆ ಅವರ ಗುರುತು ಎನ್ನುವಂತಿತ್ತು. ಊರಿನವರು ಅವರನ್ನು ನೋಡಿಯೇ ಖುಷಿಗೊಳ್ಳುತ್ತಿದ್ದರು, ಅವರ ಮಾತು ಕೇಳುವುದಂತೂ ಪರಮಾನಂದಕರ ಸಂಗತಿಯಾಗಿತ್ತು. ದಿನನಿತ್ಯ ಬರುತ್ತಿದ್ದ ಒಬ್ಬ ಮಹಿಳೆಯಂತೂ ಸದಾ ದೂರುವವಳೊ, ದೂಷಿಸುವವಳೊ, ದುಃಖಿಯೊ ಆಗಿ ಕಾಣಿಸಿಕೊಳ್ಳುವುದನ್ನು ಗುರುಗಳು ಗಮನಿಸಿದ್ದರು. ಒಂದು ದಿನ ಗುರುಗಳಿಗೆ ಆಕೆ ಕೇಳಿದ್ದಳು, ''ಗುರು ಗಳೇ, ನೀವು ಅದೃಷ್ಟವಂತರು, ಯಾವಾಗಲೂ ನಸುನ ಗುತ್ತ, ಎಲ್ಲರಿಗೂ ಬೇಕಾಗಿ, ಹಕ್ಕಿಯಂತೆ ಹಗುರಾಗಿ ಓಡಾಡುತ್ತೀರಿ. ಆ ಭಾಗ್ಯ ನನಗೇಕಿಲ್ಲ?''.



ಗುರುಗಳು ಆಶ್ರಮದ ಹಿಂದಿರುವ ತೋಟಕ್ಕೆ ಆಕೆಯನ್ನು ಕರೆದುಕೊಂಡು ಹೋಗಿ ದೈತ್ಯಗಾತ್ರದ ಮರದ ಕೆಳಗೆ ನಿಲ್ಲುತ್ತಾರೆ. ಮರದ ಪಕ್ಕದಲ್ಲೇ ನಳನಳಿಸಿ ಬೆಳೆದಿರುವ ಹೂವಿನ ಗಿಡವನ್ನು ತೋರಿಸಿ ಆಕೆಗೆ ಕೇಳುತ್ತಾರೆ- ''ಹೇಳಬಲ್ಲೆಯಾ, ಲಕ್ಷೋಪಲಕ್ಷ ಹಸಿರೆಲೆ ಹೊಂದಿರುವ ಈ ಬೃಹತ್ ಮರ ಚೆಂದವೊ, ಮೂರಡಿ ಎತ್ತರದ ನಾಲ್ಕಾರು ಹೂವುಗಳನ್ನು ಹೊಂದಿರುವ ಗಿಡ ಚಂದವೊ?''. ಮಹಿಳೆ ಉತ್ತರಿಸದೆ ಮಿಕಮಿಕ ನೋಡ ಲಾರಂಭಿಸಿದಾದ ಝೆನ್ ಗುರುಗಳೇ ಹೇಳುತ್ತಾರೆ: ಇಲ್ಲಿ ಮರ ಬೇರೆಯೇ, ಗಿಡ ಬೇರೆಯೇ. ಹೀಗೆ ವಿಭಿನ್ನವಾಗಿರುವುದೇ ಭಗವಂತನ ಸೃಷ್ಟಿಯ ಚೆಂದ ಮತ್ತು ವೈಭವ. ಈ ಜಗದಲ್ಲಿ ಕೋಟ್ಯಂತರ ಮಂದಿ ಯಿದ್ದಾರೆ. ಯಾವ ಇಬ್ಬರನ್ನು ಹೋಲಿಸಿನೋಡು. ಅಲ್ಲಿ ಸಾಮ್ಯತೆ ಇರುವುದಿಲ್ಲ, ಕೊಂಚವಾದರೂ ಭಿನ್ನತೆ ಇರುತ್ತದೆ. ಆದರೂ ಪ್ರಪಂಚ ಒತ್ತಟ್ಟಿಕೆಯಲ್ಲಿ ಇದೆಯೆ ನ್ನುವುದು ಸಂತಸಕರ ಸಂಗತಿ. ಮರ ಮರವೇ, ಗಿಡ ಗಿಡವೇ ಎನ್ನುವ ಉತ್ತರವನ್ನು ಎತ್ತರದಲ್ಲಿ ನಿಂತು ನಾವು ಹೇಳಬೇಕು. ಭಿನ್ನತೆಯ ಬಗ್ಗೆ ನಾವು ಖಿನ್ನತೆ ತೋರಿಸ ಬಾರದು. ನಾನು ನಾನೇ, ನೀನು ನೀನೇ; ನಾನು, ನಾವಾಗಬಹುದಾದ ಸಾಧ್ಯತೆಯಿರುವಾಗ ಚಿಂತಿಸು ವುದಾದರೂ ಏಕೆ, ಹೋಲಿಸಿಕೊಳ್ಳುವುದಾರರೂ ಬೇಕೆ?..

ಹನನಿಗವನಗಳು

- ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ನಿಜ, ಜೇನ ಸವಿ
ನಿನ್ನ ಅಧರ
ಕೆಂದಾವರೆ ಮೊಗ
ಬಲು ಸುಂದರ
ಆದರೆ, ನಾ ಬಡವ
ತುಂಬಲಾರೆ ನಿನ್ನ
ವೃಕೋದರ...

★★★

ನಂ ಪಾತಜ್ಜಿ ಇವತ್ತು
ಏಕಾದಶಿ ಉಪವಾಸ
ಬಲು ಕಟ್ಟುನಿಟ್ಟು
ಇಡೀದಿನ ತಿನ್ನೋದು
ಬರೀ ಒಂದು ಕೇಜಿ
ಉಪ್ಪಿಟ್ಟು....

★★★

ವೇದಾಂತಿ ಹೇಳಿದರು
ಜೀವನ ರಸಮಯವಾಗಿರಲಿ
ನಿಜ, ಅದಕ್ಕೇ ಈಗ
ಸದಾ ಗುಟಕಾ
ಮುರಲಿಯ ಬಾಯಲಿ.

ಪದಬಂಧ

- ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಪತಿ ಮಾಡಿದ ನಕಲು (2)
2. ವರ್ತನೆಯಲ್ಲಿ ಏನೋ ಬದಲಾವಣೆ (5)
4. ತುಂಡರಿಸುವ ಸಾಧನವಿದು (3)
5. ಮಯೂರ ವರ್ಮನಿಂದ ಆರಂಭವಾದ ರಾಜವಂಶ (3)
6. ತರುಣ ಅಥವಾ ಯುವಕ (4)
8. ಪುಟ್ಟ ಕಂದನಿಗೆ ಇನ್ನೊಂದು ಹೆಸರು (3)
9. ತಮ್ಮ ಬಾರಿಸಿದ್ದು ಒಂದು ಬಗೆಯ ಚರ್ಮವಾದ್ಯ (3)
13. ಕೊನೆಗೆ ಮತ್ತೊಂದು ಕೈಕಟ್ಟಿ ಕೊಂಡಿರುವ ಚಂದ್ರ (4)
14. ಅವನಿಯನ್ನು ಮುಟ್ಟಿದಂತೆ ಕಾಣುವ ಆಕಾಶಭಾಗ, ಕ್ಷಿತಿಜ (3)
16. ಹಸುವಿನೊಂದಿಗೆ ಬಂದಿರುವ ಸಮರ (3)
17. ಆಶ್ರಯವನ್ನು ಬೇಡುತ್ತ ಬಂದವನು (5)
18. ದೇಹಕ್ಕೆ ತಗುಲಿದ ಕಾಯಿಲೆ (2)

ಮೇಲಿಂದ ಕೆಳಕ್ಕೆ

1. ಈ ಸೂರ್ಯನ ಕೊನೆಗೆ ಇನ್ನೊಂದು ಕೈಯಿದೆ (4)
2. ನಮ್ಮ ಸುತ್ತಲಿನ ಮಂದಿ (4)
3. ನೆನಪಾದಾಗ ಹೇಳಿದ ಕಾರಣ (2)
4. ಬಳಿ ಬಂದಾಗ ಲಪಟಾಯಿಸು (4)
7. ಜನಸಂದಣಿಯಿಂದ ಉಂಟಾದ ಗದ್ದಲ (3)
8. ಹರನಿಂದ ತೊಡಗಿದ ಆಶೀರ್ವದಿಸು (3)
10. ಮಾರನೆಯ ದಿವಸ (4)
11. ನವರತ್ನಗಳಲ್ಲಿ ಒಂದು (4)
12. ರಂಗನ ಒಳಮನಸ್ಸು (4)
15. ಬಂಧನವೂ ಆಗಬಲ್ಲ ಹಗ್ಗ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ಪ್ರತಿ 2.ಪರಿವರ್ತನೆ 4.ಕತ್ತರಿ 5.ಕದಂಬ 6.ಜವ್ವನಿಗ 8.ಹಸುಳೆ 9.ತಮಟೆ 13.ಸುಧಾಕರ 14.ದಿಗಂತ 16.ಕದನ 17.ಶರಣಾಗತ 18.ರೋಗ

ಮೇಲಿಂದ ಕೆಳಕ್ಕೆ
1.ಪ್ರಭಾಕರ 2.ಪರಿಜನ 3.ನೆಪ 4.ಕಬಳಿಸು 7.ಗಲಾಟೆ 8.ಹರಸು 10.ಮರುದಿನ 11.ಮರಕತ 12.ಅಂತರಂಗ 15.ಪಾಶ

ರಾಮಚರಿತ ಮಾನಸ: ಹನುಮಂತ-ಲಂಕಿಣಿಯ ಪ್ರಸಂಗ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ರಾಮಕಾರ್ಯಕ್ಕಾಗಿ ಸಮುದ್ರವನ್ನು ಲಂಘಿಸಿದ ಹನುಮಂತನು, ಸೂರ್ಯನು ಅಸ್ತಮಿಸುವ ವೇಳೆಗೆ ಲಂಕೆಯ ತೀರವನ್ನು ತಲುಪಿದನು. ಲಂಕೆಯ ವೈಭವವನ್ನು ಕಂಡ ಹನುಮಂತನಿಗೆ ಆಶ್ಚರ್ಯವಾಯಿತು. ಚಿನ್ನದ ಗೋಡೆಗಳು, ರತ್ನಖಚಿತ ಮಹಲುಗಳು ಹೀಗೆ ವೈಭವದಿಂದ ಕೂಡಿದ ಲಂಕೆಯು ರಾಕ್ಷಸರ ಕಾವಲಿನಿಂದಾಗಿ ಅಷ್ಟೇ ಭದ್ರವಾಗಿತ್ತು. ಇದನ್ನೆಲ್ಲಾ ನೋಡಿ ರಾತ್ರಿಯ ಸಮಯದಲ್ಲಿ ಸೂಕ್ಷ್ಮ ರೂಪವನ್ನು ಧರಿಸಿ ಲಂಕೆಯನ್ನು ಪ್ರವೇಶಿಸಲು ಹನುಮಂತನು ನಿರ್ಧರಿಸಿದನು. ಸಣ್ಣ ಸೊಳ್ಳೆಯ ಗಾತ್ರವನ್ನು ಧರಿಸಿ ಅವನು ದ್ವಾರದ ಮೂಲಕ ಒಳಗೆ ಹೋಗಲು ಪ್ರಯತ್ನಿಸಿದಾಗ, ಲಂಕೆಯ ರಕ್ಷಕಿಯಾದ 'ಲಂಕಿಣಿ' ಅವನನ್ನು ತಡೆದಳು.

ಅವಳು ವಿಕಟವಾಗಿ ನಗುತ್ತಾ, ''ಎಲೈ ಪ್ರಾಣಿಯೇ, ನೀನು ಯಾರು? ನನ್ನನ್ನು ವಂಚಿಸಿ ಲಂಕೆಯೊಳಗೆ ಹೋಗಲು ಪ್ರಯತ್ನಿಸುತ್ತಿರುವೆ! ಇಲ್ಲಿನ ದ್ವಾರಪಾಲಕಿ ನಾನು ಎಂಬುದು ನಿನಗೆ ತಿಳಿಯಲಿಲ್ಲವೇ? ನನ್ನನ್ನು ಮೀರಿ ಇಲ್ಲಿ ಯಾರಿಗೂ ಪ್ರವೇಶವಿಲ್ಲ. ನೀನು ಕಳ್ಳನಂತೆ ಹೊಂಚು ಹಾಕುತ್ತಿರುವೆ, ಈಗಲೇ ನಿನ್ನನ್ನು ಸಂಹರಿಸಿ ಭಕ್ಷಿಸುತ್ತೇನೆ'' ಎಂದು ಗರ್ಜಿಸಿದಳು. ಅವಳ ಮಾತುಗಳಲ್ಲಿ ಅಧರ್ಮದ ಲಂಕೆಯನ್ನು ಕಾಯುವ ಅಹಂಕಾರವಿತ್ತು. ತಾನು ಬಲಿಷ್ಠೆ ಎಂಬ ಮದವಿತ್ತು. ಹನುಮಂತ ಶಾಂತನಾಗಿದ್ದರೂ ತನ್ನ ಕಾರ್ಯಕ್ಕೆ ಅಡ್ಡಿಯಾದವರನ್ನು ಸುಮ್ಮನೆ ಬಿಡುವವನಲ್ಲ. ಅವಳು ಒಬ್ಬ ಸ್ತ್ರೀ ಎಂಬ ಕಾರಣಕ್ಕೆ ಹನುಮಂತನು ತನ್ನ ಸಂಪೂರ್ಣ ಬಲವನ್ನು ಬಳಸಲಿಲ್ಲ. ಕೇವಲ ತನ್ನ ಎಡಗೈ ಮುಷ್ಟಿಯಿಂದ ಅವಳಿಗೆ ಒಂದು ಸಣ್ಣ ಏಟನ್ನು ನೀಡಿದನು. ಆ ವಜ್ರಸಮಾನವಾದ ಏಟಿನ ತೀವ್ರತೆಗೆ ಲಂಕಿಣಿಯು ರಕ್ತವನ್ನು ಕಾರುತ್ತಾ ಮೂರ್ಛೆ ಹೋಗಿ ಕೆಳಗೆ ಬಿದ್ದಳು. ಕ್ಷಣಾರ್ಧದಲ್ಲಿ ಅವಳ ಅಹಂಕಾರವೆಲ್ಲ ಮಣ್ಣು ಪಾಲಾಯಿತು.

ಸ್ವಲ್ಪ ಸಮಯದ ನಂತರ ಪ್ರಜ್ಞೆ ಮರಳಿದಾಗ ಅವಳ ಅಂತರಂಗದಲ್ಲಿ ಮಹತ್ತರವಾದ ಬದಲಾವಣೆಯಾಗಿತ್ತು. ಹನುಮಂತನ ದೈವಿಕ ಸ್ಪರ್ಶದಿಂದ ಅವಳೊಳಗಿನ ತಾಮಸ ಗುಣಗಳು ಅಳಿದುಹೋಗಿದ್ದವು. ಅವಳಿಗೆ ಸತ್ಯದ ದರ್ಶನವಾಯಿತು. ಅವಳು ವಿನಯದಿಂದ ಕೈಮುಗಿದು ಹನುಮಂತನಿಗೆ ಹೇಳಿದಳು:

ತಾತ ಸ್ವರ್ಗ ಅಪಬರ್ಗ ಸುಖ ಧರಿಯ ತುಲಾ ಏಕ ಅಂಗ ।
ತುಲ ನ ತಾಹಿ ಸಕಲ ಮಿಲಿ ಜೋ ಸುಖ ಲವ ಸತಸಂಗ ॥

- **ಭಾವಾರ್ಥ:** ಎಲೈ ಮಹಾನುಭಾವನೇ ಕೇಳು, ಸ್ವರ್ಗದ ಸುಖ ಮತ್ತು ಮೋಕ್ಷದ ಸುಖಗಳನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಟ್ಟು, ಇನ್ನೊಂದು ತಟ್ಟೆಯಲ್ಲಿ ಕೇವಲ ಒಂದು ಕ್ಷಣದ 'ಸತ್ಸಂಗ'ದಿಂದ (ಸಜ್ಜನರ ಸಹವಾಸ) ಸಿಗುವ ಸುಖವನ್ನು ಇಟ್ಟರೆ, ಆ ಸತ್ಸಂಗದ ಸುಖವೇ ಮಿಗಿಲಾದದ್ದು. ಮಿಕ್ಕೆಲ್ಲ ಸುಖಗಳೂ ಇದಕ್ಕೆ ಸಾಟಿಯಲ್ಲ.

ಲಂಕಿಣಿಯು ಮುಂದುವರಿದು ಹೇಳಿದಳು, ''ಬ್ರಹ್ಮದೇವನು ಈ ಹಿಂದೆ ಲಂಕೆಯನ್ನು ತೊರೆಯುವಾಗ ನನಗೆ ಒಂದು ಗುಟ್ಟನ್ನು



ಹೇಳಿದ್ದನು- 'ಯಾವಾಗ ಒಬ್ಬ ವಾನರನ ಏಟಿನಿಂದ ನೀನು ನೆಲಕ್ಕೆ ಬೀಳುತ್ತೀಯೋ, ಆಗ ರಾಕ್ಷಸ ಕುಲದ ನಾಶ ಹತ್ತಿರವಿದೆಯೆಂದು ತಿಳಿ' ಎಂದು. ಇಂದು ನಿನ್ನ ದರ್ಶನದಿಂದ ನನ್ನ ಪಾಪಗಳೆಲ್ಲ ಪರಿಹಾರವಾಗಿವೆ. ಸಜ್ಜನರಾದ ನಿಮ್ಮಂಥವರ ಭೇಟಿಯಾದ ಮೇಲೆ ನನಗೆ ಸಾವಿನ ಭಯವಿಲ್ಲ. ಅಧರ್ಮದ ಈ ಲಂಕೆಯಲ್ಲಿ ನಿನಗೆ ರಾಮಕಾರ್ಯ ಮಾಡಲು ಯಾವುದೇ ಅಡೆತಡೆಯಾಗದಂತೆ ನಾನು ಹರಸುತ್ತೇನೆ. ನೀನು ಸಂತೋಷದಿಂದ ಒಳಹೋಗಿ ಸೀತಾದೇವಿಯನ್ನು ಹುಡುಕು''.

ಹೀಗೆ, ಅಲ್ಲಿಯವರೆಗೆ ಅಧರ್ಮವನ್ನು ರಕ್ಷಿಸುತ್ತಿದ್ದ ಲಂಕಿಣಿಯು ಹನುಮಂತನೆಂಬ ಸಜ್ಜನನ ಸಂಪರ್ಕಕ್ಕೆ ಬಂದ ತಕ್ಷಣ ಜ್ಞಾನಿಯಾಗಿ ಬದಲಾದಳು. ಹನುಮಂತನು ಅವಳನ್ನು ಕೊಲ್ಲಲಿಲ್ಲ, ಬದಲಾಗಿ ದಂಡನೆಯ ಮೂಲಕ ಅವಳ ಕಣ್ಣು ತೆರೆಸಿ ಸನ್ಮಾರ್ಗಕ್ಕೆ ತಂದನು. ಇದುವೇ ಸತ್ಸಂಗದ ಶಕ್ತಿ. ಒಬ್ಬ ಸಜ್ಜನನ ಭೇಟಿ ಎಂಥ ಕ್ರೂರ ಮನಸ್ಸನ್ನೂ ಕ್ಷಣಾರ್ಧದಲ್ಲಿ ಪರಿವರ್ತಿಸಬಲ್ಲದು ಎಂಬುದಕ್ಕೆ ಈ ಪ್ರಸಂಗವೇ ಸಾಕ್ಷಿ.

ಪ್ರತಿಯೊಂದು ತಪ್ಪಿಗೂ ಶಿಕ್ಷೆಯೇ ಪರಿಹಾರವಾಗಬಾರದು. ಕೆಲವೊಮ್ಮೆ ಮಾತಿನಿಂದಲೂ ಅನೇಕರ ಮನಸ್ಥಿತಿಯನ್ನು ಬದಲಾಯಿಸಬಹುದು. ಜನ್ಮದತ್ತ ಸಂಸ್ಕಾರ, ಬೆಳೆದು ಬಂದ ವಾತಾವರಣದ ಪ್ರಭಾವ ಮುಂತಾದ ಕಾರಣಗಳಿಂದಾಗಿ ಕೆಲವರಿಗೆ ಬದುಕಿನಲ್ಲಿ ಸಕಾರಾತ್ಮಕ ಮತ್ತು ಆರೋಗ್ಯಕರ ದೃಷ್ಟಿಕೋನಗಳೇ ಇರುವುದಿಲ್ಲ. ಅಂಥವರು ಉತ್ತಮ ವಿಚಾರಗಳನ್ನು ಕೇಳಿದಾಗ, ಸುಸಂಸ್ಕೃತ ನಡವಳಿಕೆಗಳನ್ನು ನೋಡಿದಾಗ ತಿದ್ದಿಕೊಂಡಿರುವ ಅನೇಕ ಉದಾಹರಣೆಗಳಿವೆ. ನಮ್ಮ ಹಿರಿಯರು ಸಾಮ, ದಾನ, ಭೇದ, ದಂಡ ಎಂಬ ನಾಲ್ಕು ರೀತಿಯ ಪರಿಹಾರಗಳನ್ನು ಸೂಚಿಸಿರುವುದು ಈ ಕಾರಣದಿಂದಲೇ. ಉಗುರಿನಿಂದ ಹೋಗುವುದಕ್ಕೆ ಕೊಡಲಿ ಬಳಸಬಾರದು; ಮಾತುಗಳಿಗೆ ಅವಕಾಶವಿದ್ದಾಗ ಶಿಕ್ಷೆ ಸಲ್ಲದು ಎಂಬುದನ್ನು ಮರೆಯದಿರೋಣ...

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಮುಜರ್ಬಾನಿಗೆ ಪಿಸಿಬಿ ಎರಡು ವರ್ಷ ನಿಷೇಧ

ಇಸ್ಲಾಮಾಬಾದ್: ಪಾಕಿಸ್ತಾನ್ ಸೂಪರ್ ಲೀಗ್‌ನಲ್ಲಿ ಇಸ್ಲಾಮಾಬಾದ್ ಯುನೈಟೆಡ್ ಜೊತೆಗಿನ ಒಪ್ಪಂದವನ್ನು ಮುರಿದು ಐಪಿಎಲ್‌ನಲ್ಲಿ ಕೆಕೆಆರ್ ಜತೆ ಒಪ್ಪಂದಕ್ಕೆ ಸಹಿ ಹಾಕಿದ್ದಕ್ಕಾಗಿ ಜಿಂಬಾಬ್ವೆ ಬೌಲರ್ ಬ್ಲೆಸಿಂಗ್ ಮುಜರ್ಬಾನಿ ಅವರನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) 2 ವರ್ಷಗಳ ಕಾಲ ನಿಷೇಧಿಸಿದೆ. ಪೂರ್ವಾನುಮತಿಯ ಹೊರತಾಗಿಯೂ ಮುಜರ್ಬಾನಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಪಿಸಿಬಿ ಹೇಳಿಕೆ ನೀಡಿದೆ. 2026ರ ಟಿ20 ವಿಶ್ವಕಪ್‌ನಲ್ಲಿ ಜಿಂಬಾಬ್ವೆ ಪರ ಅತ್ಯುತ್ತಮ ಪ್ರದರ್ಶನ ನೀಡಿದ್ದ ಮುಜರ್ಬಾನಿ 13 ವಿಕೆಟ್‌ಗಳನ್ನು ಪಡೆದು ಟೂರ್ನಿಯಲ್ಲಿ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಆಗಿ ಹೊರಹೊಮ್ಮಿದ್ದರು. ಆದರೆ ವಿಶ್ವಕಪ್ ಟೂರ್ನಿಗೂ ಮೊದಲು ನಡೆದಿದ್ದ ಐಪಿಎಲ್ ಹರಾಜಿ ನಲ್ಲಿ ಮಾರಾಟವಾಗದೇ ಉಳಿದ ಇವರಿಗೆ ಪಾಕಿಸ್ತಾನ್ ಸೂಪರ್ ಲೀಗ್‌ನಿಂದ ಆಫರ್ ಬಂದಿತ್ತು. ಇಸ್ಲಾಮಾ ಬಾದ್ ಯುನೈಟೆಡ್ ತಂಡವು ಬದಲಿ ಆಟಗಾರನಾಗಿ ಅವರನ್ನು ತಂಡಕ್ಕೆ ಸೇರಿಸಿಕೊಂಡಿತು. ನಂತರ ಕೋಲ್ಕತ್ತಾ ತಂಡವು ಬ್ಲೆಸಿಂಗ್ ಮುಜರ್ಬಾನಿ ಅವರಿಗೆ ಆಫರ್ ನೀಡಿದ ಬೆನ್ನಲ್ಲೇ ಅವರು, ಪಿಎಸ್‌ಎಲ್ ಒಪ್ಪಂದವನ್ನು ಮುರಿದು ಐಪಿಎಲ್‌ನಲ್ಲಿ ಆಡಲು ನಿರ್ಧರಿಸಿದರು. ಪ್ರಸ್ತುತ ನಡೆಯುತ್ತಿರುವ ಐಪಿಎಲ್‌ನಲ್ಲಿ ಕೋಲ್ಕತ್ತಾ ಪರ 2 ಪಂದ್ಯಗಳನ್ನು ಮುಜರ್ಬಾನಿ ಆಡಿದ್ದು, 4 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಸಂಜುಗೆ ತಿಂಗಳ ಆಟಗಾರ ಪ್ರಶಸ್ತಿ

ದೆಹಲಿ: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಗಮನಾರ್ಹ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದ ಭಾರತ ತಂಡದ ವಿಕೆಟ್ ಕೀಪರ್, ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ ಅವರು ಐಸಿಸಿ ಪುರುಷರ ತಿಂಗಳ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆರಂಭದಲ್ಲಿ ಈ ಪ್ರಶಸ್ತಿ ರೇಸ್‌ನಲ್ಲಿ ಟೀಮ್ ಇಂಡಿಯಾ ವೇಗಿ ಜಸ್ಪ್ರೀತ್ ಬುಮ್ರಾ ಕೂಡ ಇದ್ದರು, ಆದರೆ ಅವರನ್ನು ಕೇರಳ ಮೂಲಕ ಆಟಗಾರ ಹಿಂದಿಕ್ಕಿದ್ದಾರೆ. ಟಿ20 ವಿಶ್ವಕಪ್ ಸೂಪರ್-8ರ ಕೊನೆಯ ಪಂದ್ಯ, ಸೆಮಿ ಫೈನಲ್ ಹಾಗೂ ಫೈನಲ್ ಪಂದ್ಯಗಳಲ್ಲಿ ಕ್ರಮವಾಗಿ ಮ್ಯಾಚ್ ವಿನ್ನಿಂಗ್ ಪ್ರದರ್ಶನಗಳ ಮೂಲಕ ಭಾರತ ಮೂರನೇ ಟಿ20 ವಿಶ್ವಕಪ್ ಗೆಲುವಿನಲ್ಲಿ ಸಂಜು ಸ್ಯಾಮ್ಸನ್ ಮಹತ್ವದ ಪಾತ್ರ ವಹಿಸಿದ್ದರು. 'ಐಸಿಸಿ ತಿಂಗಳ ಆಟಗಾರ ಪ್ರಶಸ್ತಿಯನ್ನು ಗೆಲ್ಲುವುದು ನಿಜಕ್ಕೂ ಅದ್ಭುತ ಅನುಭವ, ಅದರಲ್ಲಿಯೂ ನನ್ನ ಕ್ರಿಕೆಟ್ ವೃತ್ತಿ ಜೀವನದ ಮರೆಯಲಾಗದ ಅತ್ಯಂತ ಸ್ಮರಣೀಯ ಹಂತದಲ್ಲಿ ಇದು ಮೂಡಿ ಬಂದಿರುವುದು ತುಂಬಾ ವಿಶೇಷವಾಗಿದೆ. ಪುರುಷರ ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ಭಾಗವಾಗುವ ಮೂಲಕ ನನ್ನ ಕನಸು ನನಸಾಗಿದೆ' ಎಂದು ಸಂಜು ಸ್ಯಾಮ್ಸನ್ ಸಂತಸ ವ್ಯಕ್ತಪಡಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ತವರಲ್ಲಿ ಮತ್ತೊಂದು ಗೆಲುವಿನ ನಿರೀಕ್ಷೆಯಲ್ಲಿ ಪಾಟೀದಾರ್ ಪಡೆ | ಪಂತ್ ಬಳಗಕ್ಕೆ ಸೋಲು ತಪ್ಪಿಸುವಾಸೆ

ಚಿನ್ನಸ್ವಾಮಿಯಲ್ಲಿಂದು ಆರ್‌ಸಿಬಿ-ಲಖನೌ ಕದನ

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಇಂದು ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಆರ್‌ಸಿಬಿ ತಂಡವು ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಲೀಗ್‌ನಲ್ಲಿ ಇದುವರೆಗೆ 4 ಪಂದ್ಯಗಳ ನ್ನಾಡಿರುವ ಆರ್‌ಸಿಬಿ ಮೂರು ಪಂದ್ಯಗಳಲ್ಲಿ ಗೆದ್ದು, ಒಂದು ಪಂದ್ಯವನ್ನು ಸೋತಿದೆ. ಈ ಮೂಲಕ 6 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಹೀಗಾಗಿ ಮುಂದಿನ ಪಂದ್ಯದಲ್ಲಿ ಗೆದ್ದು ಪಾಯಿಂಟ್ ಪಟ್ಟಿಯಲ್ಲಿ ಇನ್ನೂ ಮೇಲೇರುವ ಉತ್ಸಾಹ ರಜತ್ ಪಾಟೀದಾರ್ ಪಡೆಯಲ್ಲಿದೆ.

ಈ ಆವೃತ್ತಿಯ ತನ್ನ ಮೊದಲ ಪಂದ್ಯದಲ್ಲಿ ಆರ್‌ಸಿಬಿ ತಂಡವು ಸನ್ ರೈಸರ್ಸ್ ಹೈದರಾಬಾದ್ ತಂಡವನ್ನು 6 ವಿಕೆಟ್‌ಗಳಿಂದ ತನ್ನ ತವರು ನೆಲದಲ್ಲಿ ಸೋಲಿಸಿ ಶುಭಾರಂಭ ಮಾಡಿತ್ತು. 2ನೇ ಪಂದ್ಯದಲ್ಲಿ ಚೆನ್ನೈಯನ್ನು 43 ರನ್‌ಗಳಿಂದ ಸದೆ ಬಡಿದಿತ್ತು, ಆದರೆ ಗುವಾಹಟಿಯಲ್ಲಿ ನಡೆದ 3ನೇ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಸೋಲನ್ನನುಭವಿಸಿತ್ತು. ಮುಂಬೈಯಲ್ಲಿ ನಡೆದ ತನ್ನ 4ನೇ ಪಂದ್ಯದಲ್ಲಿ ಅತಿಥೇಯರನ್ನು 18 ರನ್‌ಗಳಿಂದ ಮಣಿಸಿತ್ತು.

ಇಂದಿನ ಪಂದ್ಯ

ಆರ್‌ಸಿಬಿ VS ಲಖನೌ

ತಾಣ	: ಚಿನ್ನಸ್ವಾಮಿ ಸ್ಟೇಡಿಯಂ
ಸಮಯ	: ರಾ. 7 ಗಂಟೆ
ನೇರ ಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಸ್ಟ್ರೀಮಿಂಗ್	: ಜಿಯೋ ಹಾಟ್‌ಸ್ಟಾರ್

ಈಗಾಗಲೇ 4 ಪಂದ್ಯಗಳನ್ನು ಆಡಿರುವ ರಿಷಬ್ ಪಂತ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡವು 2 ಪಂದ್ಯಗಳಲ್ಲಿ ಗೆದ್ದು, 2 ಪಂದ್ಯಗಳಲ್ಲಿ ಸೋಲನುಭವಿಸಿ 4 ಅಂಕಗಳನ್ನಷ್ಟೇ ಸಂಪಾದಿಸಿದೆ. ತನ್ನ ಮೊದಲ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಸೋತಿದ್ದ ಲಖನೌ ತಂಡವು, 2ನೇ ಪಂದ್ಯ ದಲ್ಲಿ ಹೈದರಾಬಾದ್ ವಿರುದ್ಧ 5 ವಿಕೆಟ್‌ಗಳಿಂದ ಗೆಲುವನ್ನು ಸಾಧಿಸಿತ್ತು. 3ನೇ ಪಂದ್ಯದಲ್ಲಿ ಕೋಲ್ಕತ್ತಾ ವಿರುದ್ಧ 3 ವಿಕೆಟ್‌ಗಳಿಂದ ಗೆಲುವನ್ನು ಪಡೆದ ಲಖನೌ, ನಾಲ್ಕನೇ ಪಂದ್ಯದಲ್ಲಿ ಗುಜರಾತ್ ವಿರುದ್ಧ ಸೋಲನ್ನನುಭವಿಸಿತ್ತು.

ಅಭ್ಯಾಸ ನಿರತ ಆರ್‌ಸಿಬಿ ತಂಡದ ಕೊಹ್ಲಿ ಮತ್ತು ಲಖನೌ ತಂಡದ ಪಂತ್. ▶▶ ಚಿತ್ರ: ಸುಧಾಕರ್ ದೇವರಾಜ್

ಪಿಚ್ ರಿಪೋರ್ಟ್: ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ಸಾಂಪ್ರದಾಯಿಕವಾಗಿ ಬ್ಯಾಟ್ಸ್‌ಮನ್‌ಗಳಿಗೆ ಅನುಕೂಲಕರ. ಹಾಗಾಗಿ ಬ್ಯಾಟರ್‌ಗಳಿಗೆ ಮೊದಲ ಎಸೆತದಿಂದಲೇ ಮುಕ್ತವಾಗಿ ಆಡಲು ಅವಕಾಶ ಸಿಗುತ್ತದೆ. ಬೌಂಡರಿಗಳು ಸಣ್ಣ ದಾಗಿರುವ ಕಾರಣ ಸ್ಕೋರಿಂಗ್ ಅವಕಾಶ ಗಳನ್ನು ಮತ್ತಷ್ಟು ಹೆಚ್ಚಿಸು ತ್ತದೆ. ಬೌಲರ್‌ಗಳಿಗೆ ಈ ಪಿಚ್ ಸವಾಲಿ ನಿಂದ ಕೂಡಿರಲಿದೆ. ರನ್‌ಗಳನ್ನು ನಿಯಂತ್ರಿಸಲು ಶಿಸ್ತುಬದ್ಧ ಲೈನ್ ಮತ್ತು ಲೆಂಥ್ ಜತೆಗೆ ಸ್ಮಾರ್ಟ್ ಬೌಲಿಂಗ್ ನಡೆಸಬೇಕಿದೆ.

ಮುಖಾಮುಖಿ: ಉಭಯ ತಂಡಗಳು ಈವರೆಗೆ ಐಪಿಎಲ್‌ನಲ್ಲಿ ಆರು ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ಆರ್‌ಸಿಬಿ 4 ಪಂದ್ಯಗಳನ್ನು ಗೆದ್ದರೆ, ಲಖನೌ 2 ಪಂದ್ಯಗಳನ್ನು ಮಾತ್ರ ಜಯಿಸಿದೆ.

ಸಂಭಾವ್ಯ ತಂಡಗಳು

ಆರ್‌ಸಿಬಿ	ಲಖನೌ
» ಪಾಟಿದಾರ್ ನಾಯಕ	» ಪಂತ್ ನಾಯಕ
» ಕೊಹ್ಲಿ	» ಮಾರ್ಷ್
» ಫಿಲ್ ಸಾಲ್ಟ್	» ಮಾರ್ಕ್ರಮ್
» ಕೃನಾಲ್ ಪಾಂಡ್ಯ	» ಪೂರನ್
» ಟಿಮ್ ಡೇವಿಡ್	» ಸಮದ್
» ಜಿತೇಶ್ ಶರ್ಮಾ	» ಮುಕುಲ್
» ಶೆಫರ್ಡ್	» ಜಾರ್ಜ್ ಲಿಂಡೆ
» ಮಂಗೇಶ್	» ಶಮಿ
» ಭುವನೇಶ್ವರ್	» ಅವೇಶ್‌ಖಾನ್
» ಡಫಿ	» ದಿಗ್ವೇಶ್ ಸಿಂಗ್
» ಸುಯಶ್	» ಪ್ರಿನ್ಸ್ ಯಾದವ್

ಮತ್ತೆ ಮಿಂಚಿದ ಸಂಜು ಸ್ಯಾಮ್ಸನ್ | ಬ್ರೆವಿಸ್ ಭರ್ಜರಿ ಬ್ಯಾಟಿಂಗ್

ಸಂಜು ಸ್ಯಾಮ್ಸನ್ ಉತ್ತಮ ಇನ್ನಿಂಗ್ಸ್.

ಡೆವಾಲ್ಡ್ ಬ್ರೆವಿಸ್ ಆಕರ್ಷಕ ಬ್ಯಾಟಿಂಗ್.

ಕೋಲ್ಕತ್ತಾಗೆ 193 ರನ್ ಗುರಿ

ಚೆನ್ನೈ: ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಈ ಐಪಿಎಲ್ ಆವೃತ್ತಿಯ 22ನೇ ಪಂದ್ಯದಲ್ಲಿ ಅತಿಥೇಯ ಚೆನ್ನೈ ಸೂಪರ್ ಕಿಂಗ್ಸ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್ 192 ರನ್‌ಗಳಿಸಿ, ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ 193 ರನ್‌ಗಳ ಗುರಿಯನ್ನು ನೀಡಿದೆ. ಟಾಸ್ ಸೋತು ಬ್ಯಾಟಿಂಗ್ ಮಾಡಿದ ಚೆನ್ನೈ ತಂಡ ಸಂಜು ಸ್ಯಾಮ್ಸನ್ (48), ಆಯುಷ್ ಮ್ಹಾತ್ರೆ (32) ಹಾಗೂ ಡೆವಾಲ್ಡ್ ಬ್ರೆವಿಸ್ (41) ಅವರ ಉತ್ತಮ ಬ್ಯಾಟಿಂಗ್ ನೆರವಿನಿಂದ ಸವಾಲಿನ ಮೊತ್ತ ಪೇರಿಸಲು ಸಾಧ್ಯವಾಯಿತು.

ಒಂದು ಹಂತದಲ್ಲಿ ಚೆನ್ನೈ ತಂಡವು 225ರ ಗಡಿ ದಾಟಬಹುದು ಎಂದು ನಿರೀಕ್ಷಿಸಲಾಗುತ್ತು. ಆದರೆ ಕೊನೆಯ ನಾಲ್ಕು ಓವರ್‌ಗಳಲ್ಲಿ ಅದ್ಭುತ ಕಮ್‌ಬ್ಯಾಕ್ ಮಾಡಿದ ಕೊಲ್ಕತ್ತಾ ಬೌಲರ್‌ಗಳು ಚೆನ್ನೈ ತಂಡವನ್ನು 200ರೊಳಗೆ ನಿಯಂತ್ರಿಸುವಲ್ಲಿ ಯಶಸ್ವಿಯಾದರು.

ಆಯುಷ್ ಮ್ಹಾತ್ರೆ ಬಿರುಸಿನ ಬ್ಯಾಟಿಂಗ್.

ಮೊದಲು ಬ್ಯಾಟಿಂಗ್‌ಗೆ ಇಳಿದ ಚೆನ್ನೈ ತಂಡದ ನಾಯಕ ಪರ ರುತುರಾಜ್ ಗಾಯಕ್ವಾಡ್ ಮತ್ತೊಮ್ಮೆ ವಿಫಲರಾದರು. ಮೂರನೇ ಓವರ್‌ನಲ್ಲಿ ಗಾಯಕ್ವಾಡ್ ಕೇವಲ 7 ರನ್ ಗಳಿಸಿ ವಿಕೆಟ್ ಕಳೆದುಕೊಂಡರು. ಆದರೆ ಸಂಜು ಸ್ಯಾಮ್ಸನ್ 48 ರನ್‌ಗಳ ಉತ್ತಮ ಇನ್ನಿಂಗ್ಸ್ ಆಡಿದರು. ಯುವ ಆಟಗಾರ ಆಯುಷ್ ಮ್ಹಾತ್ರೆ ಅಬ್ಬರ ಬ್ಯಾಟಿಂಗ್ ಪ್ರದರ್ಶಿಸಿ ಕೇವಲ 17 ಎಸೆತಗಳಲ್ಲಿ 38 ರನ್ ಗಳಿಸಿದರು. ಅದರ ನಂತರ ಡೆವಾಲ್ಡ್ ಬ್ರೆವಿಸ್ ಮತ್ತು ಸರ್ಫರಾಜ್ ನಡುವೆ ಅದ್ಭುತ ಅರ್ಧಶತಕದ ಜತೆಯಾಟ ಮೂಡಿ ಬಂದಿತು. ಆದರೆ 17ನೇ ಓವರ್‌ನಲ್ಲಿ ಸರ್ಫರಾಜ್ 23 ರನ್‌ಗಳಿಗೆ ಔಟಾದ ನಂತರ ಸಿಎಸ್‌ಕೆ ರನ್ ಗತಿಗೆ ಕಡಿವಾಣ ಬಿದ್ದಿತು.

ಸರ್ಫರಾಜ್ ಬೆನ್ನಲ್ಲೇ ಬ್ರೆವಿಸ್ 41 ರನ್‌ಗಳ ಇನ್ನಿಂಗ್ಸ್ ಆಡಿ ಔಟ್ ಆದರು. ದುಬೆ ರನ್ ಗಳಿಸಲು ಪರದಾಡಿ 12 ಎಸೆತಗಳಲ್ಲಿ ಅಜೇಯ 13 ರನ್ ಗಳಿಸಿದರೆ, ಓವರ್ಟನ್ ಅಜೇಯ 7 ರನ್ ಗಳಿಸಿದರು.

ವಿಸ್ಡನ್ ಪ್ರಶಸ್ತಿ: ಭಾರತೀಯರ ಮೇಲುಗೈ

ಲಂಡನ್: ವಿಸ್ಡನ್ ಅಲ್ಮನಾಕ್-2026 ಪ್ರಶಸ್ತಿ ಪಟ್ಟಿಯಲ್ಲಿ ಭಾರತೀಯ ಕ್ರಿಕೆಟಿಗರು ಪ್ರಾಬಲ್ಯ ಸಾಧಿಸಿದ್ದಾರೆ. ಒಟ್ಟು 9 ಪ್ರಶಸ್ತಿಗಳ ಪೈಕಿ ಏಳನ್ನು ಟೀಮ್ ಇಂಡಿಯಾ ಆಟಗಾರರೇ ಪಡೆದುಕೊಂಡಿದ್ದಾರೆ.

ಸ್ಫೋಟಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು 'ವಿಸ್ಡನ್ ಅಲ್ಮನಾಕ್ ವರ್ಷದ ಟಿ20 ಆಟಗಾರ' ಹಾಗೂ ದೀಪ್ತಿ ಶರ್ಮಾ 'ವಿಸ್ಡನ್ ಅಲ್ಮನಾಕ್ ವರ್ಷದ ಮಹಿಳಾ ಕ್ರಿಕೆಟ್ ಆಟಗಾರ್ತಿ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. 2025ರಲ್ಲಿ ಅಭಿಷೇಕ್ ಶರ್ಮಾ ಅವರು ಅವರು 21 ಪಂದ್ಯಗಳಲ್ಲಿ 193ರ ಸ್ಟ್ರೈಕ್‌ರೇಟ್‌ನಲ್ಲಿ 859 ರನ್ ಗಳಿಸಿದ್ದರು, ಅದರಲ್ಲಿ 5 ಅರ್ಧಶತಕಗಳೂ ಸೇರಿದ್ದವು. ದೀಪ್ತಿ ಶರ್ಮಾ ಅವರು 2025ರ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಮೂರು ಅರ್ಧಶತಕ ಸಹಿತ 215 ರನ್ ಬಾರಿಸಿದ್ದರಲ್ಲದೆ, 22 ವಿಕೆಟ್ ಕೂಡ ಪಡೆದಿದ್ದರು. ಅವರ ಆಲ್‌ರೌಂಡರ್ ಆಟದ ನೆರವಿನಿಂದ ಭಾರತವು ಚೊಚ್ಚಲ ವಿಶ್ವಕಪ್ ಗೆದ್ದಿತ್ತು. ಶುಭಮನ್ ಗಿಲ್, ಮೊಹಮ್ಮದ್ ಸಿರಾಜ್, ರಿಷಭ್ ಪಂತ್ ಮತ್ತು ರವೀಂದ್ರ ಜಡೇಜ ಅವರು 'ವಿಸ್ಡನ್ 5 ಕ್ರಿಕೆಟರ್ಸ್ ಆಫ್ ದಿ ಈಯರ್' ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. ಇವರೆಲ್ಲಾ ಕಳೆದ ವರ್ಷ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಮಿಂಚಿದ್ದರು. ಈ ಪಟ್ಟಿಯಲ್ಲಿ ಭಾರತೀಯರನ್ನು ಹೊರತುಪಡಿಸಿ, ಕೇವಲ ಇಬ್ಬರು ಆಟಗಾರರು ಮಾತ್ರ ಇದ್ದಾರೆ.

ಜೂನ್‌ನಲ್ಲಿ ಭಾರತ-ಐರ್ಲೆಂಡ್ ಟಿ20 ಸರಣಿ | ವೈಭವ್ ಆಯ್ಕೆ ಸಾಧ್ಯತೆ

ಸೂರ್ಯವಂಶಿ ಚಿತ್ತ ಐರ್ಲೆಂಡ್ ಪ್ರವಾಸದತ್ತ

ಮುಂಬೈ: ತನ್ನ ಸ್ಫೋಟಕ ಬ್ಯಾಟಿಂಗ್ ಮೂಲಕ ಈಗಾಗಲೇ ವಿಶ್ವ ಕ್ರಿಕೆಟ್‌ನಲ್ಲಿ ಗಮನ ಸೆಳೆದಿರುವ 15 ವರ್ಷದ ವೈಭವ್ ಸೂರ್ಯವಂಶಿ ಭಾರತೀಯ ರಾಷ್ಟ್ರೀಯ ಕ್ರಿಕೆಟ್ ತಂಡಕ್ಕೆ ಪದಾರ್ಪಣೆ ಮಾಡಲು ಸಜ್ಜಾಗಿದ್ದಾರೆ. ಈ ವರ್ಷದ ಜೂನ್‌ನಲ್ಲಿ ನಡೆಯಲಿರುವ ಭಾರತದ ಐರ್ಲೆಂಡ್ ಪ್ರವಾಸದ ಆಯ್ಕೆ ವೇಳೆ ತನಗೆ ಸ್ಥಾನ ಸಿಗಬಹುದು ಎಂಬ ಆತ್ಮವಿಶ್ವಾಸವೂ ವೈಭವ್‌ಗಿದೆ.

ಈಗಾಗಲೇ ಅಂಡರ್-19 ವಿಶ್ವಕಪ್‌ನಲ್ಲಿ ಭಾರತದ ಪರ ಮಿಂಚಿರುವ ಮತ್ತು ದೇಶೀಯ ಕ್ರಿಕೆಟ್‌ನಲ್ಲಿ ಬಿಹಾರವನ್ನು ಪ್ರತಿನಿಧಿಸಿರುವ ಸೂರ್ಯವಂಶಿ, ಈ ಆವೃತ್ತಿಯ ಐಪಿಎಲ್‌ನ 3 ಪಂದ್ಯಗಳಲ್ಲಿ ಮಿಂಚಿದ್ದಾರೆ. ಆಡಿರುವ 5 ಇನ್ನಿಂಗ್ಸ್‌ಗಳಲ್ಲಿ ಒಟ್ಟು 200 ರನ್ ಗಳಿಸಿದ್ದಾರೆ. ರಾಜಸ್ಥಾನ್ ರಾಯಲ್ಸ್ ಅನ್ನು ಅವರು ಪ್ರತಿನಿಧಿಸುತ್ತಿದ್ದು, 2 ಅರ್ಧಶತಕಗಳನ್ನು ಈಗಾಗಲೇ ಬಾರಿಸಿದ್ದಾರೆ. ಅನುಭವಿ ಬೌಲರ್‌ಗಳ ದಾಳಿಯೆದುರು ಲೀಲಾಜಾಲವಾಗಿ ಸಿಕ್ಸರ್, ಬಾಂಡರಿ ಬಾರಿಸಿ ತಮ್ಮ ಸಾಮರ್ಥ್ಯ ಮೆರೆದಿದ್ದಾರೆ.

ಕಳೆದ ವರ್ಷ ಐಪಿಎಲ್‌ಗೆ ಪದಾರ್ಪಣೆ ಮಾಡಿದ ಸೂರ್ಯವಂಶಿ, ಲೀಗ್ ವೃತ್ತಿಜೀವನದ ಮೊದಲ ಎಸೆತದಲ್ಲೇ ಸಿಕ್ಸರ್ ಬಾರಿಸುವ ಮೂಲಕ ಉತ್ತಮ ಪ್ರದರ್ಶನ ನೀಡಿದ್ದರಲ್ಲದೆ, 35 ಎಸೆತಗಳಲ್ಲಿ ಶತಕ ಗಳಿಸಿದ್ದರು. ಇದು ಟೂರ್ನಿಯ ಇತಿಹಾಸದಲ್ಲಿ ಭಾರತೀಯನೊಬ್ಬ ಗಳಿಸಿದ ಅತ್ಯಂತ ವೇಗದ ಶತಕವಾಗಿತ್ತು.

ಐರ್ಲೆಂಡ್ ಪ್ರವಾಸಕ್ಕೆ ಭಾರತ ಪರ ವೈಭವ್ ಸೂರ್ಯವಂಶಿ ಪದಾರ್ಪಣೆ ಮಾಡಿದರೆ, ಅವರು ಭಾರತಕ್ಕಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯ ಆಡಿದ ಅತ್ಯಂತ ಕಿರಿಯ ಆಟಗಾರ ಎನಿಸಲಿದ್ದಾರೆ. ಪ್ರಸ್ತುತ ಆ ದಾಖಲೆ ಶಫಾಲಿ ವರ್ಮಾ ಹೆಸರಿನಲ್ಲಿದ್ದು, ಅವರು 15 ವರ್ಷ(7 ತಿಂಗಳು ಮತ್ತು 27 ದಿನ)ದಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಕ್ರಿಕೆಟ್ ದಿಗ್ಗಜ ತೆಂಡೂಲ್ಕರ್ 1986ರಲ್ಲಿ 16 ವರ್ಷ, 205 ದಿನಗಳಾಗಿದ್ದಾಗ ಪಾಕಿಸ್ತಾನ ವಿರುದ್ಧದ ಸರಣಿಗೆ ಭಾರತ ತಂಡಕ್ಕೆ ಆಯ್ಕೆ ಆಗಿದ್ದರು.

ಡ್ರ್ಯಾಗನ್‌ನಲ್ಲಿ ಆಲಿಯಾ ಭಟ್

ಬಾಲಿವುಡ್ ನಟಿ ಆಲಿಯಾ ಭಟ್ ವಿವಾಹ ಬಳಿಕವೂ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಹಾಗಂತ ಆಲಿಯಾ ಭಟ್ ಬಾಲಿವುಡ್‌ಗೆ ಮಾತ್ರ ಸೀಮಿತವಾಗಿಲ್ಲ. ಹಾಲಿವುಡ್, ಟಾಲಿವುಡ್‌ಗಳಲ್ಲಿಯೂ ಮಿಂಚುತ್ತಿದ್ದಾರೆ. ಟಾಲಿವುಡ್‌ನಲ್ಲಿ ಆರ್‌ಆರ್‌ಆರ್ ಚಿತ್ರದಲ್ಲಿ ಸೀತಾ ಪಾತ್ರದಲ್ಲಿ ಮುದ್ದಾಗಿ ಕಂಗೊಳಿಸಿದ ಆಲಿಯಾ, ಈಗ ಪ್ರಶಾಂತ್ ನೀಲ್ ಅಭಿನಯದ ಡ್ರ್ಯಾಗನ್ ಸಿನಿಮಾದಲ್ಲಿಯೂ ನಟಿಸುತ್ತಿದ್ದಾರೆ. ಆಲಿಯಾ ಜತೆ ಈಗಾಗಲೇ ಚಿತ್ರ ತಂಡ ಮಾತುಕತೆ ಮುಗಿಸಿದ್ದು, ಪಾತ್ರ ಹಾಗೂ ಕಥೆ ವಿವರಿಸಿದ್ದಾರೆ. ಕಥೆ ಕೇಳಿ ಮೆಚ್ಚಿರುವ ಆಲಿಯಾ, ಸಿನಿಮಾದಲ್ಲಿ ನಟಿಸಲು ಒಪ್ಪಿಗೆ ಸೂಚಿಸಿದ್ದಾರೆ.

ಡ್ರ್ಯಾಗನ್‌ನಲ್ಲಿ ಕಾಂತಾರದ ಕನಕಾವತಿ ನಾಯಕಿಯಾಗಿ ನಟಿಸಲಿದ್ದು, ರುಕ್ಮಿಣಿ ವಸಂತ್ ಈ ಚಿತ್ರದಲ್ಲಿ ಕಾಂತಾರ ಕ್ಕಿಂತಲೂ ವಿಭಿನ್ನ ಲುಕ್‌ನಲ್ಲಿ ಕಾಣಲಿದ್ದಾರೆ. ಡ್ರ್ಯಾಗನ್ ಪೊಲಿಟಿಕಲ್ ಡ್ರಾಮಾ ಜತೆಗೆ ಸಾಹಸ ಪ್ರಧಾನ ಕಥೆಯಾಗಿದ್ದು, ಜೂನಿಯರ್ ಎನ್‌ಟಿಆರ್ ಆ್ಯಕ್ಷನ್ ಲುಕ್‌ನಲ್ಲಿ ಮಿಂಚಲಿದ್ದಾರೆ. ಡ್ರ್ಯಾಗನ್ ಚಿತ್ರಕ್ಕಾಗಿ ತಾರಕ್ ಭರ್ಜರಿ ಕಸರತ್ತು ನಡೆಸಿದ್ದು, ಸಿಕ್ಸ್ ಪ್ಯಾಕ್ ಅವತಾರ ತಾಳಿದ್ದಾರೆ. ಈಗಾಗಲೇ ಸಿನಿಮಾದ ಚಿತ್ರೀಕರಣ ಭರದಿಂದ ಸಾಗಿದ್ದು, ಹೈದರಾಬಾದ್‌ನಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಶೂಟಿಂಗ್ ನಡೆಸುತ್ತಿದ್ದಾರೆ. ಕರ್ನಾಟಕದ ಭಟ್ಕಳದಲ್ಲಿಯೂ ಡ್ರ್ಯಾಗನ್ ಸಿನಿಮಾದ ಕೆಲವು ಸನ್ನಿವೇಶಗಳನ್ನು ಸೆರೆಹಿಡಿಯಲಾಗಿದೆ.

ಟಾಕ್ಸಿಕ್ ಮೆಚ್ಚಿದ ತಾರಾ ಸುತಾರಿಯಾ

ಕೆಜಿಎಫ್ ಬಳಿಕ ಯಶ್, ಟಾಕ್ಸಿಕ್ ಚಿತ್ರದ ಮೂಲಕ ಅಬ್ಬರಿಸಲು ಸಿದ್ಧವಾಗಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಟಾಕ್ಸಿಕ್ ಯುಗಾದಿ ಹಬ್ಬದಂದೇ ತೆರೆಗೆ ಬರಬೇಕಿತ್ತು. ಆದರೆ ಕಾರಣಾಂತರಗಳಿಂದ ಬಿಡುಗಡೆಯ ದಿನಾಂಕವನ್ನು ಮುಂದೂಡಲಾಯಿತು. ಈ ಹಿಂದೆಯೇ ಬಿಡುಗಡೆಯಾದ ಟಾಕ್ಸಿಕ್ ಚಿತ್ರದ ಟೀಸರ್ ಮಿಲಿಯನ್ ಗಟ್ಟಲೆ ವೀಕ್ಷಣೆ ಕಂಡು ದಾಖಲೆ ಮೇಲೆ ದಾಖಲೆ ಬರೆಯಿತು. ಅದರ ಜತೆಗೆ ತಬಾಹಿ...ಹಾಡು ಕೂಡ ಸಿನಿಪ್ರಿಯರನ್ನು ಮನಸೂರೆಗೊಂಡಿತು. ಅಂತೆಯೇ ಟಾಕ್ಸಿಕ್ ತಾರಾಗಣದ ಮೂಲಕವೂ ಗಮನಸೆಳೆಯುತ್ತಿದೆ. ಯಶ್ ಗೆ ಜತೆಯಾಗಿ ಕಿಯಾರಾ ಅಡ್ವಾಣಿ ಬಣ್ಣಹಚ್ಚಿದ್ದಾರೆ. ಉಳಿದಂತೆ ತಾರಾ ಸುತಾರಿಯಾ, ನಯನಾ ತಾರಾ, ಹುಮಾ ಖುರೇಷಿ, ರುಕ್ಮಿಣಿ ವಸಂತ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಈ ಹಿಂದೆ ಕಿಯಾರಾ, ಟಾಕ್ಸಿಕ್ ಚಿತ್ರದ ಬಗ್ಗೆ ಮೆಚ್ಚಿ ಮಾತಾನಾಡಿದ್ದರು. ಸಿನಿಮಾದಲ್ಲಿ ನಟಿಸಿದ್ದು ಸಂತಸ ತಂದಿದೆ ಎಂದು ಹೇಳಿದ್ದರು. ಈಗ ತಾರಾ ಸುತಾರಿಯಾ ಕೂಡ ಟಾಕ್ಸಿಕ್ ಚಿತ್ರವನ್ನು ಮೆಚ್ಚಿಕೊಂಡಾಡಿದ್ದಾರೆ. ತಾರಾ ಈ ಚಿತ್ರದಲ್ಲಿ ರಬೆಕಾ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ರಬೆಕಾ ಪಾತ್ರವನ್ನು ಚಿತ್ರತಂಡ ಈ ಹಿಂದೆಯೇ ಪರಿಚಯಿಸಿತ್ತು. ಇದರಲ್ಲಿ ತಾರಾ ಗನ್ ಹಿಡಿದು ಮಿಂಚಿದ್ದರು. ಇದನ್ನು ಗಮನಿಸಿದರೆ ತಾರಾ ಸ್ಟೈ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂಬುದು ತಿಳಿಯುತ್ತದೆ. ಸ್ಟುಡೆಂಟ್ ಆಫ್ ದಿ ಇಯರ್ ಸಿನಿಮಾ ನನ್ನನ್ನು ನಟಿಯಾಗಿ ಪರಿಚಯಿಸಿತು. ಈಗ ಟಾಕ್ಸಿಕ್ ಚಿತ್ರದಲ್ಲಿ ನಟಿಸಿದ್ದು ಈ ಚಿತ್ರ ನನ್ನನ್ನು ದೊಡ್ಡ ಮಟ್ಟಕ್ಕೆ ಕೊಂಡೊಯ್ಯಲಿದೆ. ಯಾಕೆಂದರೆ ನಾನು ನಿರ್ವಹಿಸಿರುವ ಪಾತ್ರ ಬಹಳ ಪವರ್ ಫುಲ್ ಆಗಿದೆ. ನಿಜವಾಗಿಯೂ ಈ ಸಿನಿಮಾದಲ್ಲಿ ನಟಿಸಿದ್ದ ಹೆಮ್ಮೆ ತಂದಿದೆ ಎಂದು ತಾರಾ ಸುತಾರಿಯಾ ಸಂತಸ ವ್ಯಕ್ತಪಡಿಸಿದ್ದಾರೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ಈ ಚಿತ್ರದ ನಿರ್ದೇಶನದ ಸಾರಥ್ಯ ವಹಿಸಿಕೊಂಡಿದ್ದಾರೆ. ಕೆವಿಎನ್ ಪ್ರೊಡಕ್ಷನ್ ನಲ್ಲಿ ಈ ಚಿತ್ರ ಅದ್ದೂರಿಯಾಗಿ ನಿರ್ಮಾಣವಾಗಿದ್ದು ಯಶ್ ಕೂಡ ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ. ಟಾಕ್ಸಿಕ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿದ್ದು ಜೂನ್ 4 ರಂದು ವಿಶ್ವಾದ್ಯಂತ ತೆರೆಗೆ ಬರಲಿದೆ.

ತೆರೆಗೆ ಬರಲಿದೆ ಆಪರೇಷನ್ ಸಿಂಧೂರ್

ದಿ ಕಾಶ್ಮೀರ್ ಫೈಲ್ಸ್ ಹಾಗೂ ದಿ ಬೆಂಗಾಲ್ ಫೈಲ್ಸ್ ಸಿನಿಮಾಗಳನ್ನು ನಿರ್ದೇಶಿಸಿ ಗಮನ ಸೆಳೆದ ನಿರ್ದೇಶಕ ವಿವೇಕ್ ಅಗ್ನಿ ಹೋತ್ರಿ ಈಗ ಪಹಲ್ಗಾಮ್ ಘಟನೆ ಕುರಿತ ಕಥೆಯನ್ನು ತೆರೆಗೆ ತರಲು ಸಿದ್ಧತೆ ನಡೆಸಿದ್ದಾರೆ. ಆಪರೇಷನ್ ಸಿಂಧೂರ್ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ಈ ಹಿಂದೆ ಸೆಟ್ಟೇರಿದ್ದ ಈ ಚಿತ್ರದಲ್ಲಿ ಯಾರು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ ಎಂಬ ಕುತೂಹಲವಿತ್ತು. ಆ ಕುತೂಹಲಕ್ಕೆ ಚಿತ್ರತಂಡ ತೆರೆ ಎಳೆದಿದೆ.



ಆಪರೇಷನ್ ಸಿಂಧೂರ್ ಸಿನಿಮಾದಲ್ಲಿ ವರುಣ್ ಧವನ್ ನಾಯಕನಾಗಿ ಅಭಿನಯಿಸಲಿದ್ದಾರೆ. ಇತ್ತೀಚೆಗೆ ತೆರೆಗೆ ಬಂದ ಬಾರ್ಡರ್ 2 ಚಿತ್ರದಲ್ಲಿ ವರುಣ್ ಅದ್ಭುತವಾಗಿ ನಟಿಸಿದ್ದರು. ದೇಶ ಪ್ರೇಮ ಸಾರುವ ಈ ಸಿನಿಮಾದಲ್ಲಿ ವರುಣ್ ಭಾರತೀಯ ಸೈನ್ಯಾಧಿಕಾರಿಯ ಪಾತ್ರದಲ್ಲಿ ಅದ್ಭುತವಾಗಿ ನಟಿಸಿದ್ದರು. ಹಾಗಾಗಿ ಈ ಚಿತ್ರದಲ್ಲೂ ವರುಣ್ ನಟಿಸಲು ಸಂತಸದಿಂದ ಸಮ್ಮತಿಸಿದ್ದಾರೆ. ಪಹಲ್ಗಾಮ್ ಘಟನೆಗೆ ಕಾರಣವಾದ ಪಾಪಿ ಉಗ್ರರ ವಿರುದ್ಧ ಭಾರತ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಆರಂಭಿಸಿ ಉಗ್ರರನ್ನು, ಉಗ್ರ ನೆಲೆಗಳನ್ನು ಧ್ವಂಸ ಗೊಳಿಸಿತು. ಆ ಕಾರ್ಯಾಚರಣೆ ಎಷ್ಟು ರೋಚಕವಾಗಿತ್ತು ಎಂಬುದನ್ನು ಈ ಚಿತ್ರ ದಲ್ಲಿ ಕಟ್ಟಿಕೊಡಲಾಗುತ್ತಿದೆ. ಆಪರೇಷನ್ ಸಿಂಧೂರ್ ಸಿನಿಮಾವನ್ನು ವಿವೇಕ್ ಅಗ್ನಿ ಹೋತ್ರಿ, ಭೂಷಣ್ ಕುಮಾರ್ ಒಟ್ಟಾಗಿ ನಿರ್ಮಾಣ ಮಾಡು ತ್ತಿದ್ದಾರೆ. ಆಪರೇಷನ್ ಸಿಂಧೂರ್ ಪ್ಯಾನ್ ಇಂಡಿಯಾ ಚಿತ್ರವಾಗಿ ನಿರ್ಮಾಣವಾಗಲಿದೆ.

ಜೆರಾಕ್ಸ್ ಟ್ರೇಲರ್ ರಿಲೀಸ್

ಜೀ5ನ ಬಹುನಿರೀಕ್ಷಿತ ವೆಬ್ ಸರಣಿ ಜೆರಾಕ್ಸ್‌ನ ಟ್ರೇಲರ್ ಇಂದು ಬಿಡುಗಡೆಯಾಗಿದೆ. ಆರು ಸಂಚಿಕೆಗಳುಳ್ಳ ಈ ಹಾಸ್ಯ ವೆಬ್ ಸರಣಿಯ ಟ್ರೇಲರ್ ರಿಲೀಸ್, ತುಣುಕಿನ ಮೂಲಕ ಎಲ್ಲರ ಮನೆ ಮಾತಾಗಿದೆ. ಖ್ಯಾತ ನಟ, ನಿರ್ಮಾಪಕ ಡಾಲಿ ಧನಂಜಯ, ಡಾಲಿ ಪಿಕ್ಚರ್ಸ್ ಲಾಂಛನದಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಬ್ಲಿಂಕ್ ಖ್ಯಾತಿಯ ನಿರ್ದೇಶಕ ಶ್ರೀನಿಧಿ ಬೆಂಗಳೂರು ನಿರ್ದೇಶನದಲ್ಲಿ ಚಿತ್ರ ಮೂಡಿ ಬರುತ್ತಿದ್ದೆ. ಜೆರಾಕ್ಸ್‌ನಲ್ಲಿ ಟಗರು ಪಲ್ಯ ಖ್ಯಾತಿಯ ನಾಗಭೂಷಣ್, ಹಾಗೂ ಪಾಯಲ್ ಚೆಂಗಪ್ಪ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಮಂಜು ಪಾವಗಡ, ಓಂ ಪ್ರಕಾಶ್ ರಾವ್, ಶ್ರೀವತ್ಸ, ಯಶ್ವಂತ್ ಶೆಟ್ಟಿ, ವಿಜಯ್ ಪ್ರಸಾದ್, ತುಕಾಲಿ ಸಂತು, ಜಗ್ಗಪ್ಪ, ಸಿದ್ದು ಮಂಡ್ಯ, ಸುಧಾಕರ್ ಗೌಡ ಮುಂತಾದವರು ನಟಿಸಿದ್ದಾರೆ.

ಮಳವಳ್ಳಿಯ ರಾಯದುರ್ಗದ ಪ್ರಕಾಶ ಒಬ್ಬ ಸಾಮಾನ್ಯ ಜೆರಾಕ್ಸ್ ಅಂಗಡಿ ಕೆಲಸಗಾರನಾಗಿರುತ್ತಾನೆ. ಅವನ ಜೆರಾಕ್ಸ್ ಯಂತ್ರಕ್ಕೆ ಒಂದು ತಾಯಿತ ಸೇರಿದಾಗ ಅವನ ಜೀವನ ಬದಲಾಗುತ್ತದೆ. ಅವನು ತೆಗೆಯುವ ಜೆರಾಕ್ಸ್ ಕಾಪಿಗಳಿಗೆ ಜೀವ ಬಂದು ಅವನ ಜೀವನ ಉಲ್ಟಾಪಲ್ಟಾವಾಗುತ್ತದೆ. ಇದರಿಂದ ಆಗುವ ಅಚಾನಕ್ ಬದಲಾವಣೆಗಳು, ಊರಿನಲ್ಲಾಗುವ ಆಶ್ಚರ್ಯಕರ ಘಟನೆಗಳು, ಕುತೂಹಲಕಾರಿ ಸನ್ನಿವೇಶಗಳನ್ನು ಕಥೆ ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಜೀ5ನಲ್ಲಿ ಇದೇ ಏ.24ರಿಂದ ಈ ವೆಬ್ ಸರಣಿಯು ಪ್ರಸಾರವಾಗಲಿದೆ. ನನಗೆ ಈ ಕಥೆ ಇಷ್ಟವಾಗಲು ಕಾರಣ ಅದು ಹೇಳುವ ತತ್ವ, ಪ್ರತಿಯೊಂದು ಹಾಸ್ಯ ಸನ್ನಿವೇಶದ ಹಿಂದೆ ಅಡಗಿರುವ ತತ್ವ, ನನ್ನನ್ನು ತನ್ನತ್ತ ಸೆಳೆಯಿತು. ಜೆರಾಕ್ಸ್ ಕಾಪಿಗಳಿಗೆ ಜೀವ ಬಂದಾಗ, ಜನರು ತಮ್ಮ ಪ್ರತಿಬಿಂಬವನ್ನೇ ಸ್ವೀಕರಿಸಲು ಹೇಗೆ ನಿರಾಕರಿಸುತ್ತಾರೆ ಇವೆಲ್ಲವು ನನ್ನನ್ನು ಆಕರ್ಷಿಸಿತು. ಈ ಕಥೆಯು ಒಂಟಿತನ, ಹಾಸ್ಯ, ಪಶ್ಚಾತ್ತಾಪ, ಗೊಂದಲ ಎಲ್ಲವನ್ನೂ ಒಳಗೊಂಡಿದೆ. ಇದು ಕೇವಲ ಹಾಸ್ಯವನ್ನಷ್ಟೇ ಹೇಳದೇ, ಜೀವನದ ಮೌಲ್ಯಗಳನ್ನೂ ಕೂಡ ಹೇಳುತ್ತದೆ ಎಂದು ಡಾಲಿ ಧನಂಜಯ ಪ್ರಶಂಸೆ ವ್ಯಕ್ತಪಡಿಸಿದರು. ನಮ್ಮ ಕಾಪಿ ನಾವು ನೋಡಲು ಬಯ ಸದ, ನಮ್ಮ ಒಂದು ವ್ಯಕ್ತಿತ್ವವನ್ನು ಬಿಂಬಿಸಿದರೆ ಹೇಗೆ ಇರುತ್ತದೆ ಜೆರಾಕ್ಸ್ ಈ ಒಂದು ಭಯದಿಂದ ಹುಟ್ಟಿದ ಕಥೆ ಎಂದರೆ ತಪ್ಪಾಗಲಾರದು. ಮಳವಳ್ಳಿ ಯಲ್ಲಿ ನಡೆಯುವ ಈ ಒಂದು ಆಶ್ಚರ್ಯಕರ ಘಟನೆ ಹೇಗೆ ಹಲವಾರು ಹೊಸ ತಿರುವುಗಳಿಗೆ ಕಾರಣವಾಗುತ್ತದೆ. ಹೇಗೆ ಜನರ ಜೀವನವನ್ನು ಬದಲಾಯಿಸುತ್ತದೆ. ಇವೆಲ್ಲವನ್ನೂ ಕುತೂಹಲಕಾರಿಯಾಗಿ ತೋರಿಸುವ ಪ್ರಯತ್ನ ಜೆರಾಕ್ಸ್ ನಲ್ಲಿದೆ ಎಂದು ನಿರ್ದೇಶಕ ಶ್ರೀನಿಧಿ ತಿಳಿಸಿದರು. ನಾನು ಈ ಸರಣಿಯಲ್ಲಿ ಪ್ರಕಾಶ ಎಂಬ ಒಬ್ಬ ಸಾಮಾನ್ಯ ಜೆರಾಕ್ಸ್ ಅಂಗಡಿ ಕೆಲಸ ಗಾರನ ಪಾತ್ರವನ್ನು ವಹಿಸಿದ್ದೇನೆ. ತನ್ನ ಜೀವನದಲ್ಲಿ ಆಗುವ ಒಂದು ಘಟನೆಯಿಂದ ಹೇಗೆ ಅವನ ಜೀವನ ಸಂಪೂರ್ಣವಾಗಿ ಬದಲಾಗುತ್ತದೆ ಎಂಬುದನ್ನು ಕಥೆಯು ಹೇಳುತ್ತದೆ. ಪ್ರಕಾಶ ಸಾಮಾನ್ಯ ವ್ಯಕ್ತಿ, ಪ್ರಭಾವಿಯಲ್ಲ. ಆದರೆ ಈ ಘಟನೆಯ ನಂತರ ಎಲ್ಲರ ಜೀವನದಲ್ಲಿ ನಡೆಯುವ ಘಟನೆಗಳಿಗೆ ಇವನು ಕಾರಣಕರ್ತನಾಗಿರುತ್ತಾನೆ. ಅವನು ಶಕ್ತಿಶಾಲಿಯೇ ನಲ್ಲ, ಕೆಟ್ಟ ವನೂ ಅಲ್ಲ. ಆದರೆ ಎಲ್ಲದರ ಹಿಂದೆ ಇವನ ಕೈವಾಡವಿರುತ್ತದೆ. ಇದೊಂದು ವಿಭಿನ್ನವಾದ ಪಾತ್ರ. ವಿವಿಧ ಬಣ್ಣಗ ಳುಳ್ಳ ಪಾತ್ರ ಎಂದರೆ ತಪ್ಪಾಗಲಾರದು ಎಂದು ನಾಗಭೂಷಣ್ ಹೇಳಿದರು.